ವಿಶ್ವವಾಣಿ
ವಿಶ್ವಾಸವೇ ವಿಶ್ವ

ಟಿ20 ವಿಶ್ವಕಪ್: ಇಂದಿನಿಂದ ಸೂಪರ್ 8

ಟಿ20 ವಿಶ್ವಕಪ್ ಲೀಗ್ ಹಂತ ಮುಗಿದಿದೆ. ಶನಿವಾರದಿಂದ ಸೂಪರ್-8 ಹಂತ ಆರಂಭ. ಕೊಲಂಬೊದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಪಾಕಿಸ್ತಾನ-ನ್ಯೂಜಿಲೆಂಡ್‌ಗಳು ಮುಖಾಮುಖಿಯಾಗಲಿವೆ. ವಿಶೇಷವೆಂದರೆ ಈ ಹಂತದಲ್ಲಿ ಭಾರತ - ಪಾಕಿಸ್ತಾನಗಳು ಪರಸ್ಪರ ಆಡುವುದಿಲ್ಲ.

ಸೊಂಪಾದ ಪುಟಗಳು

ಮೈ ಡಿಯರ್ ಎಡ್ವಿನಾ ಮೌಂಟ್ ಬ್ಯಾಟನ್!

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

ಬಾಧಿಸುವ ಬಾಯಿಹುಣ್ಣು: ವಿಟಮಿನ್ ಕೊರತೆಯೇ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ. ಸಾಧನಶ್ರೀ 7

ದಾರಿದೀಪೋಕ್ತಿ

ನಾವು ಗೆಲುವಿನಿಂದ ಕಲಿಯುವುದಕ್ಕಿಂತ ಹೆಚ್ಚಾಗಿ ಸೋಲಿನಿಂದ ಕಲಿಯುತ್ತೇವೆ. ಜೀವನದಲ್ಲಿ ನಾವು ಅನುಭವಿಸುವ ಹಿನ್ನಡೆ ಅಥವಾ ಸೋಲು ನಮಗೆ ಅನೇಕ ಪಾಠಗಳನ್ನು ಕಲಿಸಬಲ್ಲುದು. ಸೋತಾಗ ಸೊರಗುವ ಬದಲು, ಅದು ಕಲಿಸಿದ ಪಾಠದಿಂದ ತಿಳಿಯುವುದು ಮುಖ್ಯ.

ವಕ್ರತುಂಡೋಕ್ತಿ

ಕಷ್ಟಪಟ್ಟು ಕೆಲಸ ಮಾಡುವವನಿಗೆ ದೇವರು ಫಲ ನೀಡುತ್ತಾನೋ ಇಲ್ಲವೋ ಗೊತ್ತಿಲ್ಲ, ಆದರೆ ಹಾಗೆ ಕೆಲಸ ಮಾಡುವವನಿಗೆ ಬಾಸ್ ಖಂಡಿತ ವಾಗಿಯೂ ಹೆಚ್ಚಿನ ಕೆಲಸ ನೀಡುತ್ತಾನೆ!

ಎಐ ಶೃಂಗದಲ್ಲಿ ಕೈ ಸಂಪು

ದೆಹಲಿ: ಎಐ ಶೃಂಗಸಭೆ ವೇದಿಕೆ ಮೇಲೆ ಏರಿ ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಸಭಾಂಗಣ ಪ್ರವೇಶಿಸಿದ ಬಳಿಕ ತಮ್ಮ ಶರ್ಟ್ ತೆಗೆದು ಕೇಂದ್ರ ಸರಕಾರ ಮತ್ತು ಅಮೆರಿಕ ವ್ಯಾಪಾರ ಒಪ್ಪಂದ ವಿರುದ್ಧ ಧಿಕ್ಕಾರ ಕೂಗಿದ್ದಾರೆ.

ಸುಂಕ ಹೇರಿದ ಟ್ರಂಪ್‌ಗೆ ಶಾಕ್ ಕೊಟ್ಟ ಅಮೆರಿಕ ಸುಪ್ರೀಂ ಕೋರ್ಟ್
ತುರ್ತು ಕಾಯ್ದೆಯ ದುರ್ಬಳಕೆ: 6-3 ಬಹುಮತದ ತೀರ್ಪು

ಟ್ರಂಪಾಟಕ್ಕೆ ಸುಪ್ರೀಂ ತಡೆ

ವಾಷಿಂಗ್ಟನ್: ಯದ್ವಾತದ್ವಾ ಸುಂಕ ವಿಧಿಸುವ ಮೂಲಕ ಇಡೀ ಜಗತ್ತನ್ನು ತಲ್ಲಣಗೊಳಿಸಿದ್ದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅಮೆರಿಕದ ಸುಪ್ರೀಂ ಕೋರ್ಟ್ ಶಾಕ್ ನೀಡಿದೆ. ಅವರು ವಿಧಿಸಿರುವ ಏಕಪಕ್ಷೀಯ ಸುಂಕ ಆದೇಶ ಅಕ್ರಮ ಎಂದು ಘೋಷಿಸಿರುವ ಸುಪ್ರೀಂ ಕೋರ್ಟ್ ಬಹುತೇಕ ಸುಂಕಗಳನ್ನು ರದ್ದುಗೊಳಿಸಿದೆ. ಆದರೆ ಈ ತೀರ್ಪು ಎಲ್ಲ ಸುಂಕಗಳಿಗೆ ಅನ್ವಯಿಸುವುದಿಲ್ಲ. ಟ್ರಂಪ್ ತುರ್ತು ಕಾನೂನನ್ನು ಬಳಸಿಕೊಂಡು ಜಾರಿಗೆ ತಂದ ಸುಂಕಗಳನ್ನು ಮಾತ್ರ ಅಮಾನ್ಯಗೊಳಿಸುತ್ತದೆ.

ಅಧ್ಯಕ್ಷ ಟ್ರಂಪ್ ಅವರಿಗೆ ಕ್ಯಾಬಿನೆಟ್ ಒಪ್ಪಿಗೆಯಿಲ್ಲದೆ ಸರ್ವಾಧಿಕಾರದಿಂದ ಜಾಗತಿಕ ಸುಂಕಗಳನ್ನು ವಿಧಿಸುವ ಅಧಿಕಾರವಿಲ್ಲ. ಅವರ ಸುಂಕ ನೀತಿ ಕಾನೂನು ಬಾಹಿರ ಎಂದು ಅಮೆರಿಕದ ಸುಪ್ರೀಂ ಕೋರ್ಟ್ 6-3 ಅಂತರದ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ. ಇದೀಗ ಟ್ರಂಪ್ ಅವರ ಮುಂದಿನ ಕಾನೂನು ನಡೆಯ ಬಗ್ಗೆ ಕುತೂಹಲವುಂಟಾಗಿದೆ. ಅಂತಾರಾಷ್ಟ್ರೀಯ ತುರ್ತು ಪರಿಸ್ಥಿತಿಗಾಗಿ ಕಾಯ್ದಿರಿಸಿದ ಕಾನೂನನ್ನು ಬಳಸಿಕೊಂಡು ವ್ಯಾಪಕ ಸುಂಕಗಳನ್ನು ವಿಧಿಸುವಾಗ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿದ್ದಾರೆ ಎಂದು ಕೋರ್ಟ್ ತೀರ್ಪು ನೀಡಿದೆ. ಈ ತೀರ್ಪು

ಅಮೆರಿಕದ ಆರ್ಥಿಕತೆ ಮತ್ತು ವಿಶ್ವ ವ್ಯಾಪಾರ ನೀತಿಯ ಮೇಲೆ ವ್ಯಾಪಕ ಪರಿಣಾಮ ಬೀರುವ ಸಾಧ್ಯತೆಗಳಿವೆ. ಇದರಿಂದಾಗಿ ತೊಂದರೆಗೊಳಗಾಗಿದ್ದ ಭಾರತ ಸೇರಿದಂತೆ ಕೆಲ ದೇಶಗಳು ನಿರಾಳವಾಗಿವೆ.

ಟ್ರಂಪ್ ಅವರ ತುರ್ತು ಅಧಿಕಾರಗಳ ಅಡಿಯಲ್ಲಿ ಸುಂಕಗಳನ್ನು ವಿಧಿಸುವ ಅಧಿಕಾರವಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಟ್ರಂಪ್ ಹಲವಾರು ದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಭಾರೀ ಸುಂಕಗಳನ್ನು ವಿಧಿಸಿದ್ದರು. ಅದರಲ್ಲಿ ಭಾರತವೂ ಸೇರಿತ್ತು. ಇದೀಗ ಭಾರತದ ಮೇಲಿನ ಸುಂಕವನ್ನು ಕಡಿತಗೊಳಿಸಲಾಗಿದೆ. ಏಪ್ರಿಲ್ 2025ರಲ್ಲಿ ಟ್ರಂಪ್ ವ್ಯಾಪಾರ ಕೊರತೆಯನ್ನು ರಾಷ್ಟ್ರೀಯ ತುರ್ತುಸ್ಥಿತಿ ಎಂದು ಘೋಷಿಸಿದ್ದರು. ಬಳಿಕ ಬಹುತೇಕ ಎಲ್ಲಾ ಇತರ ದೇಶಗಳ ಮೇಲೆ ಭಾರೀ ಆಮದು ಸುಂಕಗಳನ್ನು ವಿಧಿಸುವುದಾಗಿ ಘೋಷಿಸಿದ್ದರು.

→ 4

ಭಾರತಕ್ಕೆ ನಿರಾಳ

ರಷ್ಯಾದಿಂದ ತೈಲ ಖರೀದಿ ಮಾಡುತ್ತಿದೆ ಎಂಬ ಒಂದೇ ಕಾರಣಕ್ಕೆ ಭಾರತದ ಮೇಲೆ ಹೆಚ್ಚುವರಿ ಶೇ.25ರಷ್ಟು ಸುಂಕ ವಿಧಿಸುವ ಮೂಲಕ ಟ್ರಂಪ್, ಆಮದು ಸುಂಕವನ್ನು ಶೇ.50ಕ್ಕೆ ಏರಿಸಿದ್ದರು. ಆದರೆ, ಇತ್ತೀಚೆಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಮೂಲಕ ಈ ಸುಂಕವನ್ನು ಶೇ.18ಕ್ಕೆ ಕಡಿತಗೊಳಿಸಿದ್ದರು. ಈ ರೀತಿ ತನಗಿಷ್ಟ ಬಂದಂತೆ ಸುಂಕಗಳನ್ನು ಹಾಕುವ ಅಧಿಕಾರ ಟ್ರಂಪ್‌ಗಿಲ್ಲ ಎಂದು ದೇಶದ ವರಿಷ್ಠ ನ್ಯಾಯಾಲಯ ತನ್ನ ಆದೇಶದಲ್ಲಿ ತಿಳಿಸಿದೆ.

ಏಪ್ರಿಲ್‌ನಿಂದ ವಿದ್ಯುತ್ ದರ ಯೂನಿಟ್‌ಗೆ 15 ಪೈಸೆ ಹೆಚ್ಚಳ

ರಾಜ್ಯಕ್ಕೆ ಕರೆಂಟ್ ಶಾಕ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಈಗಾಗಲೇ ಸರಣಿ ದರ ಏರಿಕೆಯಿಂದ ಕಂಗಾಲಾಗಿರುವ ರಾಜ್ಯದ ಜನರಿಗೆ ಇದೀಗ ವಿದ್ಯುತ್ ದರ ಏರಿಕೆಯ ಶಾಕ್ ನಿಶ್ಚಿತ ಎನ್ನಲಾಗುತ್ತಿದೆ. ಏ.1ರಿಂದ ವಿದ್ಯುತ್ ದರ ಹೆಚ್ಚಾಗಲಿದ್ದು, ಪ್ರತಿ ಯುನಿಟ್‌ಗೆ 12ರಿಂದ 15 ಪೈಸೆ ಹೆಚ್ಚುವರಿ ಶುಲ್ಕ ವಿಧಿಸಲು ಕೆಇಆರ್‌ಸಿ ತೀರ್ಮಾನಿಸಿದೆ. ಈಗಾಗಲೇ 2025-26, 2026-27 ಮತ್ತು 2027-28ನೇ ಆರ್ಥಿಕ ವರ್ಷ ಗಳಿಗೆ ದರ ನಿಗದಿ ಮಾಡಲಾಗಿತ್ತು. ಆದರೆ, ಈಗ ಎದುರಾಗಿರುವ ನಷ್ಟ ವನ್ನು ಸರಿದೂಗಿಸಲು ಹೆಚ್ಚುವರಿ ದರ ಏರಿಕೆಗೆ ಕೆಇಆರ್‌ಸಿ ಚಿಂತನೆ ನಡೆಸಿದೆ. ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದ ನಂತರ 2026ರ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವಿದ್ಯುತ್ ದರ ಪ್ರಕಟವಾಗುವ ಸಾಧ್ಯತೆಯಿದೆ. ಇದು ಜಾರಿಯಾದರೆ ಗ್ರಾಹಕರ ಜೇಬಿಗೆ ಕತ್ತರಿ ಬೀಳುವುದು ಖಚಿತ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಮುಂದೆ ಎಸ್ಕಾಂಗಳು ಸಲ್ಲಿಸಿರುವ ಪ್ರಸ್ತಾವನೆಯ ಪ್ರಕಾರ, ಏ.1, 2026ರಿಂದ ವಿದ್ಯುತ್ ದರದಲ್ಲಿ ಏರಿಕೆ ಆಗುವ ಸಾಧ್ಯತೆ ಇದೆ.

→ 4

● ಸರಾಸರಿ 67ರಿಂದ 99 ಪೈಸೆಗಳವರೆಗೆ ಏರಿಕೆಗೆ ಎಸ್ಕಾಂಗಳ ಪ್ರಸ್ತಾವನೆ

ಸಾರ್ವಜನಿಕರ ಆಕ್ಷೇಪಣೆಗೆ ಆಹ್ವಾನ

ಬೆಸ್ಕಾಂ ಸೇರಿದಂತೆ ರಾಜ್ಯದ ವಿವಿಧ ಎಸ್ಕಾಂಗಳು 2024-25ನೇ ಸಾಲಿನ ತಮ್ಮ ಕಾರ್ಯನಿರ್ವಹಣಾ ವರದಿಯನ್ನು ಮತ್ತು ದರ ಏರಿಕೆಯ ಪ್ರಸ್ತಾವನೆಯನ್ನು ಕೆಇಆರ್‌ಸಿಗೆ ಸಲ್ಲಿಸಿವೆ. ವರದಿ ಸಲ್ಲಿಕೆಯ ಬೆನ್ನಲ್ಲೆ ಆಯೋಗ ಸಾರ್ವಜನಿಕರ ಅಹವಾಲು ಮತ್ತು ಆಕ್ಷೇಪಣೆಗಳನ್ನು ಆಲಿಸಲು ಮುಂದಾಗಿದೆ. ಈಗಾಗಲೇ ಫೆ.16ರಿಂದ ಫೆ.27ರವರೆಗೆ ರಾಜ್ಯದ ನಾನಾ ಭಾಗಗಳಲ್ಲಿ ಕೆಇಆರ್‌ಸಿ ಸಾರ್ವಜನಿಕ ವಿಚಾರಣಾ ಸಭೆಗಳನ್ನು ನಡೆಸಲಿದೆ. ಈ ಸಭೆಗಳಲ್ಲಿ ಗ್ರಾಹಕರು ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದಾಗಿದೆ.

ಪ್ರಸ್ತಾವಿತ ಬೇಡಿಕೆ

» ಬೆಸ್ಕಾಂ	98	ಪೈಸೆ
» ಹೆಸ್ಕಾಂ	96	ಪೈಸೆ
» ಮೆಸ್ಕಾಂ	91	ಪೈಸೆ
» ಜೆಸ್ಕಾಂ	99	ಪೈಸೆ
» ಚೆಸ್ಕಾಂ	97	ಪೈಸೆ

ಶಿವಾಜಿ ಜಯಂತಿ ಮೆರವಣಿಗೆ ವೇಳೆ ಕಲ್ಲು ತೂರಾಟ, ಲಾಠಿ ಪ್ರಹಾರ

ಬಾಗಲಕೋಟೆಯಲ್ಲಿ ಕೋಮುದಳ್ಳುರಿ

ಬಾಗಲಕೋಟೆ: ಶಿವಾಜಿ ಜಯಂತಿ ಮೆರವಣಿಗೆ ವೇಳೆ ಗುರುವಾರ ರಾತ್ರಿ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ ಬಳಿಕ ಬಾಗಲಕೋಟೆ ನಗರದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿದ್ದು ಫೆ. 24ರ ತನಕ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ನಗರದ ಕಿಲ್ಲಾಗಲ್ಲಿಯ ಅಂಬಾಭವಾನಿ ದೇವಸ್ಥಾನ ದಿಂದ ಪ್ರಾರಂಭವಾದ ಶಿವಾಜಿ ಮಹಾರಾಜರ ಭಾವ ಚಿತ್ರ ಮೆರವಣಿಗೆ ಪ್ರಮುಖ ಬೀದಿಗಳ ಮೂಲಕ ಬಸವೇಶ್ವರ ವೃತ್ತ, ವಲ್ಲಭಭಾಯಿ ಚೌಕ್ ಮೂಲಕ ಪಂಕಾ ಮಸೀದಿ ಹತ್ತಿರ ಸಾಗುತ್ತಿದ್ದಾಗ ಕೆಲ ದುಷ್ಕರ್ಮಿಗಳು ಕಲ್ಲುತೂರಾಟ ನಡೆಸಿದ್ದರು.

→ 4

ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲೇ ಸಿಸಿಬಿ ವಶಕ್ಕೆ

ಸ್ನೇಹಮಯಿ ಕೃಷ್ಣ ದಿಢೀರ್ ಬಂಧನ

ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹಂಚಿಕೊಂಡ ಆರೋಪದ ಮೇಲೆ, ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನು ಬೆಂಗಳೂರು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿ ಕಾರ (ಮುಡಾ) ಮಾಜಿ ಆಯುಕ್ತ, ಕೆಎಎಸ್ ಅಧಿಕಾರಿ ಡಿ.ಬಿ.ನಟೇಶ್ ಅವರು ನೀಡಿದ್ದ ದೂರಿನ ಹಿನ್ನೆಲೆಯಲ್ಲಿ ಈ ಬಂಧನ ನಡೆದಿದೆ. ಮುಂಬಡ್ತಿ ಪಡೆಯಲು ಡಿ.ಬಿ.ನಟೇಶ್ ಅವರು ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ

ರಜನೀಶ್ ಅವರಿಗೆ 1.5 ಕೋಟಿ ರೂ. ಲಂಚ ನೀಡಿದ್ದಾರೆಂದು ಆರೋಪಿಸಿ ಸ್ನೇಹಮಯಿ ಕೃಷ್ಣ ತಮ್ಮ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಮಾಹಿತಿ ಹಂಚಿಕೊಂಡಿದ್ದರು. ಸ್ನೇಹಮಯಿ ಅವರ ಆರೋಪವನ್ನು ತಳ್ಳಿಹಾಕಿರುವ ಶಾಲಿನಿ ರಜನೀಶ್, ಇವು ಸುಳ್ಳು ಮತ್ತು ಆಧಾರರಹಿತ ಆರೋಪ ಎಂದು ಹೇಳಿದ್ದರು.

→ 4

ಚಿನ್ನಕದ್ದು ಪ್ರಿಯಕರನ ಸಾಲ ತೀರಿಸಿದ ಮಹಿಳೆ ಸೆರೆ

ಬೆಂಗಳೂರು: ಪ್ರಿಯಕರನ ಸಾಲ ತೀರಿಸಲು ಕೆಲಸ ಮಾಡುತ್ತಿದ್ದ ಮನೆಯಲ್ಲೆ ಕಳ್ಳತನ ಮಾಡಿದ ಮಹಿಳೆಯನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿ 3.50 ಲಕ್ಷ ರು. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ. ಪ್ರಮೀಳಾ(35) ಬಂಧಿತ ಆರೋಪಿ.

ಬೊಮನಹಳ್ಳಿಯ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಸುಧಾಕರ್‌ಎಂಬಾತನ ಪರಿಚಯವಾಗಿ ಸಲುಗೆ ಬೆಳೆದಿತ್ತು. ಬಳಿಕ ಆಕೆ ಅಲ್ಲಿ ಕೆಲಸ ಬಿಟ್ಟು ಖಾಸಗಿ ಅಪಾರ್ಟ್‌ಮೆಂಟ್‌ನಲ್ಲಿ ಮನೆ ಕೆಲಸ ಮಾಡುತ್ತಿದ್ದಳು.ಸುಧಾಕರ್‌ಗೆ ಈಗಾಗಲೇ ಮದುವೆಯಾಗಿ ಇಬ್ಬರು ಮಕ್ಕಳಿದ್ದರೂ ಈಕೆಯೊಂದಿಗೂ ಸಂಬಂಧ ಹೊಂದಿದ್ದ.

ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಪ್ರಮೀಳಾಗೆ ಸುಧಾಕರ್ ಸಾಲ ತೀರಿಸಲು 20 ಸಾವಿರ ಹಣ ಕೇಳಿದ್ದ. ಆಗ ಕೆಲಸ ಮಾಡುತ್ತಿದ್ದ ಮಾಲೀಕರ ಮನೆಯಲ್ಲಿ ಚಿನ್ನಾಭರಣ ಕಳ್ಳತನ ಮಾಡಿ, ಮಾರಾಟ ಮಾಡಿ ಪ್ರಿಯಕರನಿಗೆ ಹಣ ಕೊಟ್ಟಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ. ಒಂದು ತಿಂಗಳ ಬಳಿಕ ಮನೆ ಮಾಲೀಕರಿಗೆ ಚಿನ್ನ ಕಳ್ಳತನದ ವಿಷಯ ಗೊತ್ತಾಗಿತ್ತು. ನಂತರ ಹೆಣ್ಣೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಮನೆ ಕೆಲಸದಾಕೆಯ ವಿಚಾರಣೆ ನಡೆಸಿದಾಗ ಸತ್ಯ ಬಾಯಿಬಿಟ್ಟಿದ್ದಾಳೆ.

ಪೊಲೀಸ್ ಮೇಲೆ ಹಲ್ಲೆ: ಆರೋಪಿಗೆ 7 ವರ್ಷ ಜೈಲು

ಬೆಂಗಳೂರು: ಕರ್ತವ್ಯನಿರತ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆಗೈದ ಅಪರಾಧಿಗೆ 7 ವರ್ಷ ಜೈಲು ಶಿಕ್ಷೆ ಹಾಗೂ 25 ಸಾವಿರ ರು. ದಂಡ ವಿಧಿಸಿ ಬೆಂಗಳೂರಿನ 20ನೇ ಸಿಸಿಎಚ್ ನ್ಯಾಯಾಲಯ ಆದೇಶಿಸಿದೆ. ಗೋವಿಂದಪುರ ಠಾಣೆಯ ಪೊಲೀಸ್ ಸಿಬ್ಬಂದಿಯಾಗಿದ್ದ ಹಂಜಾ ಬಿಳಗಿ ಅವರ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ಮಾಡಿದ್ದ ಮೊಹಮ್ಮದ್ ಸಲೀಂ ಶಿಕ್ಷೆಗೊಳಗಾದವ.

ಪೊಲೀಸರಿಗೆ 2.5 ಲಕ್ಷ ದಂಡ ವಿಧಿಸಿದ ಹೈಕೋರ್ಟ್

ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆದು ನಾಲ್ಕು ದಿನ ಪೊಲೀಸ್ ಠಾಣೆಯಲ್ಲಿ ಅಕ್ರಮವಾಗಿರಿಸಿಕೊಂಡು ಬಳಿಕ ಎಫ್‌ಐಆರ್ ದಾಖಲಿಸಿ ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ಹಾಜರುಪಡಿಸಿದ ಪ್ರಕರಣದಲ್ಲಿ ಎರಡೂವರೆ ಲಕ್ಷ ರು. ಪರಿಹಾರ ಪಾವತಿಸಲು ಸರಕಾರಕ್ಕೆ ಹೈಕೋರ್ಟ್ ಆದೇಶಿಸಿತ್ತು. ಅಕ್ರಮ ಬಂಧನಕ್ಕೆ ಒಳಗಾಗಿದ್ದ ಲಗ್ಗರೆ ನಿವಾಸಿ ರವಿ ಅವರ ಪತ್ನಿ ಎಂ.ವಿ.ವರಲಕ್ಷ್ಮಿ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿ ಪುರಸ್ಕರಿಸಿದ ನ್ಯಾ.ಅನು ಶಿವರಾಮನ್ ಮತ್ತು ನ್ಯಾ.ವಿಜಯಕುಮಾರ್ ಪಾಟೀಲ್ ಅವರಿದ್ದ ಪೀಠ ಆದೇಶ ಹೊರಡಿಸಿದೆ.

ಪ್ರಕರಣದ ವಿವರ: ಅಪರಾಧ ಹಿನ್ನೆಲೆ ಹೊಂದಿದ್ದ ಮೊಹಮ್ಮದ್ ಸಲೀಂ, 2021ರಲ್ಲಿ ಕುಖ್ಯಾತ ಗ್ಯಾಂಗ್‌ಸ್ಟರ್ ರಶೀದ್ ಮಲಬಾರಿಯ ಸಹಚರ ಕರೀಂ ಅಲಿ ಹತ್ಯೆಯಲ್ಲಿ ಭಾಗಿಯಾಗಿದ್ದ. ಬಳಿಕ ಆರೋಪಿಯ ಪತ್ತೆಗಾಗಿ ಗೋವಿಂದಪುರ ಠಾಣೆ ಪೊಲೀಸರು ಹುಡುಕಾಟ ಆರಂಭಿಸಿದ್ದರು. ಜೂನ್ 24ರಂದು ಬೆಳಗ್ಗೆ ರಿಂಗ್ ರೋಡ್‌ನ ಸರ್ವೀಸ್ ರಸ್ತೆ ಮೂಲಕ ಹೆಣ್ಣೂರು ಸಿಗ್ನಲ್ ಕಡೆಯಿಂದ ನಾಗವಾರ ಕಡೆಗೆ ಆರೋಪಿ ಕಾರಿನಲ್ಲಿ ಸಂಚರಿಸುತ್ತಿರುವ ಬಗ್ಗೆ ಗೋವಿಂದಪುರ ಠಾಣೆ ಪೊಲೀಸರಿಗೆ ಮಾಹಿತಿ ಲಭ್ಯವಾಗಿತ್ತು. ಎಚ್‌ಬಿಆರ್ ಲೇಔಟ್‌ನ ಫಾರೆಸ್ಟ್ ಆಫೀಸ್ ಬಳಿಯಿದ್ದ ಪಿಎಸ್‌ಐ ಇಮ್ರಾನ್ ಹಾಗೂ ಕಾನ್‌ಸ್ಟೇಬಲ್ ಹಂಜಾ ಬಿಳಗಿ ಅವರು ಆರೋಪಿಯ ಕಾರನ್ನು ತಡೆದಿದ್ದರು. ಆ ಸಂದರ್ಭದಲ್ಲಿ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಆರೋಪಿ, ಮಾರಕಾಸ್ತ್ರಗಳಿಂದ ಹಂಜಾ ಬಿಳಗಿ ಅವರ ಮೇಲೆ ಮಾರಣಾಂತಿಕವಾಗಿ ದಾಳಿ ಮಾಡಿದ್ದ. ಬಳಿಕ ಆರೋಪಿಯನ್ನು ವಶಕ್ಕೆ ಪಡೆದು, ಹತ್ಯೆ ಯತ್ನ, ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

ಪ್ರಕರಣದ ತನಿಖೆ ಕೈಗೊಂಡ ಅಂದಿನ ಡಿ.ಜೆ. ಹಳ್ಳಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಕಿರಣ್ ಕುಮಾರ್ ಬಿ.ನಾಯ್ಕ ಅವರು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ವಿವರವಾದ ದೋಷಾರೋಪಣಾ ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ ಆರೋಪಿಯನ್ನು ದೋಷಿ ಎಂದು ತೀರ್ಮಾನಿಸಿ, 7 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 25 ಸಾವಿರ ರು. ದಂಡ ವಿಧಿಸಿದೆ.

ನರ್ಸಿಂಗ್ ಕಾಯಿದೆ ಉಲ್ಲಂಘಿಸಿದವರ ವಿರುದ್ಧ ಕ್ರಮಕ್ಕೆ ಆದೇಶ

ಬೆಂಗಳೂರು: ಕರ್ನಾಟಕ ಖಾಸಗಿ ನರ್ಸಿಂಗ್ ನಿಯಂತ್ರಣ ಕಾಯಿದೆ ಉಲ್ಲಂಘಿಸಿದ ಖಾಸಗಿ ವೈದ್ಯಕೀಯ ಸಂಸ್ಥೆ, ಆಸ್ಪತ್ರೆ, ಕ್ಲಿನಿಕ್ ಹಾಗೂ ಪುನರ್ವಸತಿ ಕೇಂದ್ರಗಳಿಗೆ ದಂಡ ವಿಧಿಸಿ, ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್.ಜಿ ಆದೇಶ ಹೊರಡಿಸಿದರು. ಕೆಪಿಎಂಇ ನೋಂದಣಿ ಮತ್ತು ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಸಭೆಯಲ್ಲಿ ಮಾತನಾಡಿ, ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಒಟ್ಟು 65 ಖಾಸಗಿ ವೈದ್ಯಕೀಯ ಸಂಸ್ಥೆಗಳು, ಆಸ್ಪತ್ರೆಗಳು, ಕ್ಲಿನಿಕ್‌ಗಳು ಹಾಗೂ ಪುನರ್ವಸತಿ ಕೇಂದ್ರಗಳಲ್ಲಿ ಕೆಪಿಎಂಇ ಕಾಯ್ದೆ ಅನ್ವಯ ನಿಯಮ ಉಲ್ಲಂಘನೆ ದಾಖಲಾಗಿದೆ. ಒಟ್ಟು 65 ಖಾಸಗಿ ಖಾಸಗಿ ವೈದ್ಯಕೀಯ ಸಂಸ್ಥೆಗಳು, ಆಸ್ಪತ್ರೆಗಳು, ಕ್ಲಿನಿಕ್‌ಗಳು ಹಾಗೂ ಪುನರ್ವಸತಿ ಕೇಂದ್ರಗಳಿಗೆ ಒಟ್ಟು 9.35 ಲಕ್ಷ ರು. ದಂಡ ವಿಧಿಸಲಾಗಿದೆ ಹಾಗೂ 13 ಪ್ರಕರಣಗಳನ್ನು ಮುಕ್ತಾಗೊಳಿಸಲಾಗಿದ್ದು, ಉಳಿದ 15 ಪ್ರಕರಣಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲಾಗುವುದು ಎಂದರು.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೊರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೊರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **10.03.2025** ರಂದು ಕರೆದು ಸಾಲಗಾರ **ಎಸ್ ನಿರ್ಮಲಾ (ಸಹ-ಸಾಲಗಾರರು, ಪತ್ನಿ ಹಾಗೂ ದಿವಂಗತ ಶಿವಸೆಲ್ವಂ ಪಿ ಅವರ ಕಾನೂನುಬದ್ಧ ಉತ್ತರಾಧಿಕಾರಿ), ತಿಶಾಂತನ್ ಪಿ. ಎಸ್ (ಮಗ ಹಾಗೂ ದಿವಂಗತ ಶಿವಸೆಲ್ವಂ ಪಿ ಅವರ ಕಾನೂನುಬದ್ಧ ಉತ್ತರಾಧಿಕಾರಿ), ಆರ್ ಪಳನಿ ಆಚಾರಿ ಅಲಿಯಾಸ್ ಪಳನಿ ಆಚಾರಿ (ತಂದೆ ಹಾಗೂ ದಿವಂಗತ ಶಿವಸೆಲ್ವಂ ಪಿ ಅವರ ಕಾನೂನು ಉತ್ತರಾಧಿಕಾರಿ) ಮತ್ತು ರಂಜಿತಂ (ತಾಯಿ ಹಾಗೂ ದಿವಂಗತ ಶಿವಸೆಲ್ವಂ ಪಿ ಅವರ ಕಾನೂನುಬದ್ಧ ಉತ್ತರಾಧಿಕಾರಿ)** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 33,30,525.04 (ಮೂವತ್ತಮೂರು ಲಕ್ಷದ ಮೂವತ್ತು ಸಾವಿರದ ಐದುನೂರ ಇಪ್ಪತ್ತೈದು ರೂಪಾಯಿಗಳು ಮತ್ತು ನಾಲ್ಕು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAN00530484** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **28.02.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **18.02.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ. ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 33,30,525.04 (ಮೂವತ್ತಮೂರು ಲಕ್ಷದ ಮೂವತ್ತು ಸಾವಿರದ ಐದುನೂರ ಇಪ್ಪತ್ತೈದು ರೂಪಾಯಿಗಳು ಮತ್ತು ನಾಲ್ಕು ಪೈಸೆ ಮಾತ್ರ) 28.02.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಐಟಂ ಸಂ 1:
ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್ ಸೈಟ್ ಸಂ 104, ಕಥಾ ಸೀರಿಯಲ್ ಸಂ 634/1, ಆಸ್ತಿ ಸಂ 75/1, ಬೆಂಗಳೂರು ಜಿಲ್ಲೆಯ ಪ್ರೀತಿ ಎನ್‌ಕ್ಲೇವ್ ಎಸ್. ಬಿಂಗಿಪುರ ಗ್ರಾಮ ಹುಲಿಮಂಗಲ ಗ್ರಾಮ ಪಂಚಾಯತ್, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಪೂರ್ವದಿಂದ ಪಶ್ಚಿಮಕ್ಕೆ 51+53.2/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ ಅಳತೆಯಲ್ಲಿ, ಒಟ್ಟು 1563 ಚದರ ಅಡಿ ಅಳತೆಯಲ್ಲಿ, ಮತ್ತು ನಿರ್ಬಂಧಿತ:
ಪೂರ್ವದಲ್ಲಿ : 30 ಅಡಿ ರಸ್ತೆ — ಪಶ್ಚಿಮದಲ್ಲಿ : ಖಾಸಗಿ ಆಸ್ತಿ
ಉತ್ತರದಲ್ಲಿ : ಸೈಟ್ ಸಂ 105 — ದಕ್ಷಿಣದಲ್ಲಿ : ಸೈಟ್ ಸಂ 103

ಐಟಂ ಸಂ 2:
ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್ ಸೈಟ್ ಸಂ 105, ಕಥಾ ಸೀರಿಯಲ್ ಸಂ 634/1, ಆಸ್ತಿ ಸಂ 75/1, ಬೆಂಗಳೂರು ಜಿಲ್ಲೆಯ ಪ್ರೀತಿ ಎನ್‌ಕ್ಲೇವ್ ಎಸ್. ಬಿಂಗಿಪುರ ಗ್ರಾಮ ಹುಲಿಮಂಗಲ ಗ್ರಾಮ ಪಂಚಾಯತ್, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಪೂರ್ವದಿಂದ ಪಶ್ಚಿಮಕ್ಕೆ 53.2 + 54/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 10 ಅಡಿ ಅಳತೆಯಲ್ಲಿ, ಒಟ್ಟು 536 ಚದರ ಅಡಿ ಅಳತೆಯಲ್ಲಿ, ಮತ್ತು ನಿರ್ಬಂಧಿತ:
ಪೂರ್ವದಲ್ಲಿ : 30 ಅಡಿ ರಸ್ತೆ — ಪಶ್ಚಿಮದಲ್ಲಿ : ಖಾಸಗಿ ಆಸ್ತಿ
ಉತ್ತರದಲ್ಲಿ : ಸೈಟ್ ಸಂ 105 ರ ಉಳಿದ ಭಾಗ — ದಕ್ಷಿಣದಲ್ಲಿ : ಸೈಟ್ ಸಂ 104

ಅಧಿಕಾರವಿರುವ ಅಧಿಕಾರಿ
ದಿನಾಂಕ : 18.02.2026 — **ಸಮ್ಮಾನ್ ಕ್ಯಾಪಿಟಲ್ ಲಿ.**
ಸ್ಥಳ : ಬೆಂಗಳೂರು — **(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)**

ನಮೂನೆ–ಎ
ಸಾರ್ವಜನಿಕ ಪ್ರಕಟಣೆ
(ನಿಯಂತ್ರಣ 14 ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಟ್ಸಿ ಬೋರ್ಡ್ ಆಫ್ ಇಂಡಿಯಾ ಅಡಿಯಲ್ಲಿ (ಸ್ವಯಂ ದಿವಾಳಿತನ ಪ್ರಕ್ರಿಯೆ) ನಿಯಂತ್ರಣಗಳು, 2017)

ಸ್ಟೈಲ್‌ಕ್ಲೇ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ನ ಸ್ಟೇಕ್‌ಹೋಲ್ಡರ್‌ಗಳ ಗಮನಕ್ಕೆ

1.	ಕಾರ್ಪೊರೇಟ್ ವ್ಯಕ್ತಿಯ ಹೆಸರು	ಸ್ಟೈಲ್‌ಕ್ಲೇ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
2.	ಕಾರ್ಪೋರೇಟ್ ವ್ಯಕ್ತಿಯ ಆರಂಭದ ದಿನಾಂಕ	04/01/2023
3.	ಯಾವ ಅಥಾರಿಟಿಯ ಕೆಳಗೆ ಕಾರ್ಪೊರೇಟ್ ವ್ಯಕ್ತಿಯ ನೊಂದಣೆ ಆಗಿರುವುದು	ರಿಜಿಸ್ಟ್ರಾರ್ ಆಫ್ ಕಂಪನೀಸ್, ಬೆಂಗಳೂರು
4.	ಕಾರ್ಪೋರೇಟ್ ಸಾಲಗಾರನ ಕಾರ್ಪೊರೇಟ್ ಗುರುತು ಸಂಖ್ಯೆ/ಸೀಮಿತ ಬಾಧ್ಯತಾ ಗುರುತು ಸಂಖ್ಯೆ	U62099KA2023PTC169911
5.	ಕಾರ್ಪೋರೇಟ್ ವ್ಯಕ್ತಿಯ ನೋಂದಾಯಿತ ಕಛೇರಿ ಮತ್ತು ಮುಖ್ಯ ಕಛೇರಿ (ಯಾವುದಾದರೂ ಇದ್ದಲ್ಲಿ) ಅದರ ವಿಳಾಸ	ವಿವರ್ಕ್ ಪ್ರೆಸ್ಟೀಜ್ ಅಟ್ಲಾಂಟ ಸಾಫ್ಟ್‌ವೇರ್ ಇಂಡಸ್ಟ್ರಿ , ನಂ. 10/12, 80 ಅಡಿ ಮುಖ್ಯ ರಸ್ತೆ, 1ಎ ಬ್ಲಾಕ್, ಕೋರಮಂಗಲ, ಬೆಂಗಳೂರು, ಬೆಂಗಳೂರು, ಕರ್ನಾಟಕ–560034.
6.	ಕಾರ್ಪೋರೇಟ್ ವ್ಯಕ್ತಿಯ ಇನ್‌ಸಾಲ್ವೆನ್ಸಿ ಪ್ರಕ್ರಿಯೆ ಆರಂಭದ ದಿನಾಂಕ	18/02/2026
7.	ಲಿಕ್ವಿಡೇಟರ್ ರವರ ಹೆಸರು, ವಿಳಾಸ, ಇ–ಮೇಲ್ ವಿಳಾಸ ದೂರವಾಣಿ ಸಂಖ್ಯೆ ಮತ್ತು ನೋಂದಣಿ ಸಂಖ್ಯೆ	ಹೆಸರು : ನವೀನ್ ನಾರಂಗ್ ವಿಳಾಸ : ಹೆಚ್–3/63, ಮೊದಲನೇ ಮಹಡಿ, ವಿಕಾಸ್‌ಪುರಿ, ನವದೆಹಲಿ–110018. ಇ–ಮೇಲ್ : nnarang.associates@gmail.com ದೂರವಾಣಿ ಸಂಖ್ಯೆ: +91 98180 05476 ನೋಂ. ಸಂಖ್ಯೆ: IBBI/IPA-002/IP-N00794/2019 -2020/12565 ಎಎಫ್‌ಎ ಮಾನ್ಯತೆ : 31.12.2026 ರವರೆಗೆ
8.	ಕ್ಲೈಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	20/3/2026

ಸ್ಟೈಲ್‌ಕ್ಲೇ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ನ ಸ್ವಯಂ ದಿವಾಳಿತನ ಪ್ರಕ್ರಿಯೆಯು 18ನೇ ಫೆಬ್ರವರಿ 2026 ರಂದು ಆರಂಭವಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.
ಸ್ಟೈಲ್‌ಕ್ಲೇ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ನ ಎಲ್ಲ ಸ್ಟೇಕ್‌ಹೋಲ್ಡರ್‌ಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 20ನೇ ಮಾರ್ಚ್2026 ರಂದು ಅಥವಾ ಅದಕ್ಕೂ ಮೊದಲು ತಮ್ಮ ಹಕ್ಕುಗಳನ್ನು ಪುರಾವೆಗಳೊಂದಿಗೆ ವಸ್ತು ಸಂಖ್ಯೆ 7ರಲ್ಲಿ ನೀಡಿರುವ ಲಿಕ್ವಿಡೇಟರ್‌ರವರ ವಿಳಾಸಕ್ಕೆ ಸಲ್ಲಿಸಲು ಸೂಚಿಸಲಾಗಿದೆ.
ಹಣಕಾಸು ಸಾಲದಾತರರು ತಮ್ಮ ಹಕ್ಕುಗಳನ್ನು ಎಲೆಕ್ಟ್ರಾನಿಕ್ ವಿಧಾನದಿಂದ ಮಾತ್ರ ಪುರಾವೆಯೊಂದಿಗೆ ಸಲ್ಲಿಸಬೇಕು. ಉಳಿದೆಲ್ಲಾ ಸಾಲದಾತರು ತಮ್ಮ ಕ್ಲೈಮುಗಳನ್ನು ಖುದ್ದಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ಮಾದರಿಯಲ್ಲಿ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ.
ಹಕ್ಕಿನ ಸುಳ್ಳು ಅಥವಾ ದಾರಿ ತಪ್ಪಿಸುವ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡ ತೆರಬೇಕಾಗುವುದು

ಸಹಿ/–
ನವೀನ್ ನಾರಂಗ್
ದಿನಾಂಕ: 21.02.2026 — ಲಿಕ್ವಿಡೇಟರ್, ಸ್ಟೈಲ್‌ಕ್ಲೇ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
ಸ್ಥಳ: ನವದೆಹಲಿ — ನೋಂ. ಸಂಖ್ಯೆ: IBBI/IPA-002/IP-N00794/2019 -2020/12565

ಸಾರ್ವಜನಿಕ ಸೂಚನೆ
ಕಂಪನಿಯ ಹೆಸರು ಬದಲಾವಣೆ ಮತ್ತು ಸಂಭಾಷಣೆಯ ಸೂಚನೆ

ಕಂಪನಿಯನ್ನು ಮೂಲತಃ **ಎಡುನೆಟ್ವರ್ಕ್ ಪ್ರೈವೇಟ್ ಲಿಮಿಟೆಡ್** ಎಂಬ ಹೆಸರಿನಲ್ಲಿ ಸಂಯೋಜಿಸಲಾಗಿತ್ತು ಮತ್ತು ನಂತರ **ಅಕ್ಟೋಬರ್ 08, 2025** ರಿಂದ ಜಾರಿಗೆ ಬರುವಂತೆ **ರೆಂಟೊಮೊಜೊ ಪ್ರೈವೇಟ್ ಲಿಮಿಟೆಡ್** ಎಂದು ಮರುನಾಮಕರಣ ಮಾಡಲಾಯಿತು ಮತ್ತು ಹೆಸರು ಬದಲಾವಣೆಯ ಪರಿಣಾಮವಾಗಿ ಕಂಪನಿಗಳ ರಿಜಿಸ್ಟ್ರಾರ್ ಅವರು ಹೊಸ ಸಂಯೋಜನೆ ಪ್ರಮಾಣಪತ್ರವನ್ನು ನೀಡಿದರು ಎಂದು ಎಲ್ಲಾ ಪಾಲುದಾರರು, ಗ್ರಾಹಕರು, ಪಾಲುದಾರರು, ಸಾಲದಾತರು ಮತ್ತು ಸಾರ್ವಜನಿಕರಿಗೆ ತಿಳಿಸುವುದು.

ನಮ್ಮ ನಿರಂತರ ಬೆಳವಣಿಗೆ ಮತ್ತು ವಿಕಾಸದ ಭಾಗವಾಗಿ, ಕಂಪನಿಯನ್ನು ಈಗ ಸಾರ್ವಜನಿಕ ಸೀಮಿತ ಕಂಪನಿಯಾಗಿ ಪರಿವರ್ತಿಸಲಾಗಿದೆ ಮತ್ತು **ಫೆಬ್ರುವರಿ 03, 2026** ರಿಂದ ಜಾರಿಗೆ ಬರುವಂತೆ ಅಧಿಕೃತವಾಗಿ **ರೆಂಟೊಮೊಜೊ ಲಿಮಿಟೆಡ್** ಎಂದು ಕರೆಯಲಾಗುತ್ತದೆ.

ಈ ಬದಲಾವಣೆಯು ನಮ್ಮ ವಿಸ್ತರಿಸುತ್ತಿರುವ ದೃಷ್ಟಿ, ಬೆಳೆಯುತ್ತಿರುವ ಪ್ರಮಾಣ ಮತ್ತು ಬಲವಾದ, ಹೆಚ್ಚು ಪಾರದರ್ಶಕ ಮತ್ತು ಭವಿಷ್ಯಕ್ಕೆ ಸಿದ್ಧವಾಗಿರುವ ಸಂಸ್ಥೆಯನ್ನು ನಿರ್ಮಿಸುವ ದೀರ್ಘಕಾಲೀನ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ಕಂಪನಿಯು ಪ್ರಸ್ತುತ ಎಲ್ಲಾ ಪಾಲುದಾರರು, ಶಾಸನಬದ್ಧ ಅಧಿಕಾರಿಗಳು, ನಿಯಂತ್ರಕ ಸಂಸ್ಥೆಗಳು ಮತ್ತು ಇತರ ಸಂಬಂಧಿತ ಘಟಕಗಳ ದಾಖಲೆಗಳಲ್ಲಿ ತನ್ನ ಪರಿಷ್ಕೃತ ಹೆಸರನ್ನು ನವೀಕರಿಸುವ ಪ್ರಕ್ರಿಯೆಯಲ್ಲಿದೆ.

ನಮ್ಮ ಹಿಂದಿನ ಹೆಸರುಗಳ ಅಡಿಯಲ್ಲಿ ಎಲ್ಲಾ ಅಸ್ತಿತ್ವದಲ್ಲಿರುವ ಒಪ್ಪಂದಗಳು, ಒಪ್ಪಂದಗಳು ಮತ್ತು ಸಂವಹನಗಳು ಮಾನ್ಯ ಮತ್ತು ಜಾರಿಗೊಳಿಸಬಹುದಾದವುಗಳಾಗಿವೆ.

ಕಂಪನಿಯು ಅದೇ ಕಾನೂನು ಘಟಕವಾಗಿ ಮುಂದುವರಿಯುತ್ತದೆ ಮತ್ತು ಸಾರ್ವಜನಿಕ ಸೀಮಿತ ಕಂಪನಿಯಾಗಿ ಪರಿವರ್ತನೆ ಮತ್ತು ಪರಿಣಾಮವಾಗಿ ಹೆಸರಿನಲ್ಲಿನ ಬದಲಾವಣೆಯನ್ನು ಹೊರತುಪಡಿಸಿ, ಅದರ ನಿರ್ವಹಣೆ, ಮಾಲೀಕತ್ವ ಅಥವಾ ವ್ಯವಹಾರ ಕಾರ್ಯಾಚರಣೆಗಳಲ್ಲಿ ಯಾವುದೇ ಬದಲಾವಣೆಗಳಿಲ್ಲ.

ರೆಂಟೊಮೊಜೊ ಲಿಮಿಟೆಡ್
(ಹಿಂದೆ ಎಡುನೆಟ್ವರ್ಕ್ ಪ್ರೈವೇಟ್ ಲಿಮಿಟೆಡ್ ಮತ್ತು ರೆಂಟೊಮೊಜೊ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 10.03.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 1,32,99,767.01 (ರೂಪಾಯಿ ಒಂದು ಕೋಟಿ ಮೂವತ್ತೆರಡು ಲಕ್ಷದ ತೊಂಭತ್ತೊಂಭತ್ತು ಸಾವಿರದ ಏಳೂನೂರ ಅರವತ್ತೇಳೂ ಮತ್ತು ಒಂದು ಪೈಸೆ ಮಾತ್ರ) ಜೊತೆಗೆ ದಿನಾಂಕ: 16.02.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) M/s. ZIVAVENTURES** ಇದನ್ನು ಪ್ರತಿನಿಧಿಸುವ **ಪಾಲುದಾರರು ಶ್ರೀನಿವಾಸ್ ಕೆ ಮತ್ತು ಕೃಷ್ಣಪ್ಪ ಬಿ,** ನಂ.869, 2ನೇ ಮಹಡಿ, 80 ಅಡಿ ರಸ್ತೆ, 8ನೇ ಬ್ಲಾಕ್ ಕೋರಮಂಗಲ, ಬೆಂಗಳೂರು ದಕ್ಷಿಣ, ಬೆಂಗಳೂರು–560095. **(2) ಶ್ರೀ ಕೃಷ್ಣಪ್ಪ ಬಿ (ಸಾಲಗಾರರು)** ಬಿನ್ ಬಿದ್ದಪ್ಪ, **(3) ಶ್ರೀ ಶ್ರೀನಿವಾಸ ಕೃಷ್ಣಪ್ಪ** ಬಿನ್ ಬಿಡ್ಡಪ್ಪ ಕೃಷ್ಣಪ್ಪ, **(4) ಶ್ರೀ.ನರಸಿಂಹ ಕೆ (ಜಾಮೀನುದಾರರು)** ಬಿನ್ ಬಿ ಕೃಷ್ಣಪ್ಪ, **ಇವರೆಲ್ಲರ ವಿಳಾಸ:** ನಂ.30, ಅಯಪ್ಪ ಗಾರ್ಡನ್, 2ನೇ ಕ್ರಾಸ್, ಆಡುಗೋಡಿ, ಬೆಂಗಳೂರು ದಕ್ಷಿಣ, ಬೆಂಗಳೂರು–560030. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 09.03.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. **(₹. ಲಕ್ಷಗಳಲ್ಲಿ)**

ಲಾಟ್ ನಂ	ಸ್ಥಿರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ನಂ.45 ಮತ್ತು 46, ಸುಶೀಲ ರಸ್ತೆ, ಚಿಕ್ಕಮಾವಹಳ್ಳಿ, ವಿಭಾಗ 37, ಹೊಸ ನಂ.53, ಕಾರ್ಪೊರೇಷನ್ ಖಾತಾ ನಂ.45 & 46ರಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30' + 40/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 55 ಅಡಿ, ಒಟ್ಟು ವಿಸ್ತೀರ್ಣ 1900 ಚದರ ಅಡಿ, ಜೊತೆಗೆ ತಳ ಮಹಡಿ, ನೆಲ ಮಹಡಿ & ಮೊದಲನೇ ಮಹಡಿಯನ್ನೊಳಗೊಂಡಿರುವ ಕಮರ್ಷಿಯಲ್ ಕಟ್ಟಡವನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಕ್ರಾಸ್ ರಸ್ತೆ, ಪಶ್ಚಿಮಕ್ಕೆ: ಸುಶೀಲ ರಸ್ತೆ, ಉತ್ತರಕ್ಕೆ: ವೆಂಕಟಸ್ವಾಮಪ್ಪ ರಸ್ತೆ, ದಕ್ಷಿಣಕ್ಕೆ: ಮನೆ ನಂ.47.	₹. 271.00	₹. 27.10	₹. 1.00

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು, ಮೊಬೈಲ್ ಸಂಖ್ಯೆ: **080–25310066, 6381952519** ಮತ್ತು **9483544116** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 17.02.2026 — **ಸಹಿ/– ಅಧಿಕೃತ ಅಧಿಕಾರಿ,**
ಸ್ಥಳ : ಬೆಂಗಳೂರು — **ಕೆನರಾ ಬ್ಯಾಂಕ್**

ಕೆನರಾ ಬ್ಯಾಂಕ್
ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ

ಎಆರ್‌ಎಂ ಶಾಖೆ – II, 2ನೇ ಮಹಡಿ, ಸರ್ಕಲ್ ಆಫೀಸ್, ಸ್ಪೆನ್ಸರ್ ಟವರ್ಸ್, ನಂ.86, ಎಂಜಿ ರಸ್ತೆ, ಬೆಂಗಳೂರು–560001. ದೂರವಾಣಿ: 080–25310181, 25310099, E-mail - cb6298@canarabank.com

ಸ್ಥಿರಾಸ್ತಿಗಳ ಹರಾಜು ಮಾರಾಟ ನೋಟೀಸ್

(ನಿಯಮ 8(6)ರ ಅಡಿಯಲ್ಲಿ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಮಯ 2002
ಪ್ರೊವಿಜನ್ ನಿಯಮ 8(6) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್)ನ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 12.03.2026 ಮಧ್ಯಾಹ್ನ 1.00 ರಿಂದ 3.00)** ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಇ-ಹರಾಜು ಮೂಲಕ ಮಾರಾಟ ಮಾಡಲಾಗುವುದು.
ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 11.03.2026** ಠೇವಣಿ ಮಾಡಬೇಕು. **(ರೂ. ಲಕ್ಷಗಳಲ್ಲಿ)**

ಕ್ರ. ಸಂ.	ಸಾಲಗಾರರ ಮತ್ತು ಜಾಮೀನುದಾರರ ಹೆಸರು/ ಚರ / ಸ್ಥಿರ ಆಸ್ತಿಗಳ ವಿವರಣೆ	ಬಾಕಿ ಇರುವ ಸಾಲದ ಮೊತ್ತ	ಆಸ್ತಿಯ ವಿವರ	ಮೀಸಲು ಬೆಲೆ & ಇಎಂಡಿ ಬೆಲೆ
1.	**ಮೆ॥ ಎಂರ್‍ಯುಡ್ ಅಲ್ಟ್ರಾಲೈಟ್ ಎಎಸಿ ಬ್ಲಾಕ್ಸ್,** ಮಾಲೀಕರು: ಮೊಹಮ್ಮದ್ ಝುಬಿ, ಗುಂಡುಕಲ್ಲು ಹೊಸೂರು, ಮಂಡ್ಯ ರಸ್ತೆ, ನಾಗಮಂಗಲ, ಮಂಡ್ಯ–571432 **ಶ್ರೀ. ಮೊಹಮ್ಮದ್ ಝುಬಿ** ಬಿನ್ ಅಹ್ಮದ್ ಹುಸೇನ್ #35, 6ನೇ ಬ್ಲಾಕ್, ಮಂಡ್ಯ ರಸ್ತೆ, ಹನೀಫ್ ಮೊಹಲ್ಲಾ, ನಾಗಮಂಗಲ, ಮಂಡ್ಯ –571432 **ಶ್ರೀಮತಿ. ಶ್ರಫುನ್ನಿಸಾ** ಕೋಂ ಅಹ್ಮದ್ ಹುಸೇನ್ #36, 6ನೇ ಬ್ಲಾಕ್, ಮಂಡ್ಯ ರಸ್ತೆ, ವೆಂಕಟೇಶ್ವರ ಥಿಯೇಟರ್ ಎದುರು, ನಾಗಮಂಗಲ, ಮಂಡ್ಯ–571432	**ರೂ. 6,96,55,195.34 (ರೂಪಾಯಿ ಆರು ಕೋಟಿ ತೊಂಭತ್ತಾರು ಲಕ್ಷದ ಐವತ್ತೈದು ಸಾವಿರದ ಒಂದುನೂರ ತೊಂಭತ್ತೈದು ಮತ್ತು ಮೂವತ್ತನಾಲ್ಕು ಪೈಸೆ ಮಾತ್ರ) ಜೊತೆಗೆ ದಿನಾಂಕ 01.02.2026** ರಂದು ಇದ್ದಂತೆ ಮುಂದಿನ ಬಡ್ಡಿ ಮತ್ತು ಖರ್ಚುಗಳು.	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಅಸೆಸ್‌ಮೆಂಟ್ ನಂ. 03, ಪಿಐಡಿ ನಂ. 152100501700120049, ಈ ಆಸ್ತಿಯು ಗುಂಡುಕಲ್ಲು ಹೊಸೂರು ಗ್ರಾಮ, ಕಸಬಾ ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲೆಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 105.3084 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ : 76.85532 ಮೀಟರ್. ಚಕ್ಕುಬಂದಿ : ಪೂರ್ವಕ್ಕೆ : ಅನ್ವರ್ ಖಾನ್ ರವರ ಭೂಮಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಉಳಿಕೆ ಭೂಮಿ, ದಕ್ಷಿಣಕ್ಕೆ : ಮೊಹಮ್ಮದ್ ಶಫೀ ರವರ ಭೂಮಿ.	**ಮೀಸಲು ಬೆಲೆ ರೂ. 383.00 ಲಕ್ಷಗಳು** **ಇಎಂಡಿ ರೂ. 38.30 ಲಕ್ಷಗಳು**
			ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ನಂ. 8–3–89, ಅಸೆಸ್‌ಮೆಂಟ್ ನಂ. 253/2664, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 13.41 ಮೀಟರ್, ಉತ್ತರದಿಂದ ದಕ್ಷಿಣಕ್ಕೆ : 64.02 ಮೀಟರ್, ಈ ಆಸ್ತಿಯು ಮಂಡ್ಯ ರಸ್ತೆ, ನಾಗಮಂಗಲ ಟೌನ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿದ್ದು, ವಾಸಯೋಗ್ಯ ನೆಲಮಹಡಿ 108.696510 ಚದರ ಮೀಟರ್ +183.947940 ಚದರ ಮೀಟರ್, ಮತ್ತು ಕಮರ್ಷಿಯಲ್ ಯೂನಿಟ್ 101.078464+44.593440 ಚದರ ಮೀಟರ್ ಮತ್ತು ಮೊದಲನೇ ಮಹಡಿ 19.27737250 ಚದರ ಮೀಟರ್ ಒಳಗೊಂಡಿರುತ್ತದೆ ಚಕ್ಕುಬಂದಿ : ಉತ್ತರಕ್ಕೆ : ಸ್ವತ್ತಿನ ನಂ. 8–524–122, ಪೂರ್ವಕ್ಕೆ : ಸ್ವತ್ತಿನ ನಂ. 8–512–43ಎ, ಪಶ್ಚಿಮಕ್ಕೆ : ಸ್ವತ್ತಿನ ನಂ. 8–508–28 ಮತ್ತು 8–508–30, ದಕ್ಷಿಣಕ್ಕೆ : ಸ್ವತ್ತಿನ ನಂ. 8–3–87	**ಮೀಸಲು ಬೆಲೆ ರೂ. 349.10 ಲಕ್ಷಗಳು** **ಇಎಂಡಿ ರೂ. 34.91 ಲಕ್ಷಗಳು**
2.	**ಮೆ॥ ಓಂ ಶ್ರೀ ಜ್ಞಾನ ಜ್ಯೋತಿ ಎಜುಕೇಶನ್ ಸೊಸೈಟಿ** ಆಲನಹಳ್ಳಿ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ–571114. **ಶ್ರೀ ಶಿವಪ್ಪ ಎ.ಎಸ್ ಬಿನ್ ಲೇಟ್ ಶಿವ ನಂಜಪ್ಪ** ಆಲನಹಳ್ಳಿ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ–571114. **ಶ್ರೀ ರವೀಶ ಎಸ್ ಬಿನ್ ಶಿವಪ್ಪ ಎ ಎಸ್** ಆಲನಹಳ್ಳಿ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ–571114. **ಶ್ರೀಮತಿ. ರಥಮ್ಮ ಕೋಂ ಶಿವಪ್ಪ ಎ ಎಸ್** ಆಲನಹಳ್ಳಿ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ–571114. **ಶ್ರೀ ಸುಂದರೇಶ್ ಬಿನ್ ಶಿವಪ್ಪ ಎ ಎಸ್** ಆಲನಹಳ್ಳಿ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ–571114.	**ರೂ. 2,59,13,265.99 (ರೂಪಾಯಿ ಎರಡು ಕೋಟಿ ಐವತ್ತೊಂಭತ್ತು ಲಕ್ಷದ ಹದಿಮೂರು ಸಾವಿರದ ಇನ್ನೂರ ಅರವತ್ತೈದು ಮತ್ತು ತೊಂಭತ್ತೊಂಭತ್ತು ಪೈಸೆ ಮಾತ್ರ) ಜೊತೆಗೆ ದಿನಾಂಕ 01.02.2026** ರಂದು ಇದ್ದಂತೆ ಮುಂದಿನ ಬಡ್ಡಿ ಮತ್ತು ಖರ್ಚುಗಳು.	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಪಂಚಾಯತ್ ಜಂಜರ್ ನಂ. 437, ಯೂನಿಕ್ ನಂ. 152200100100400473/437, ಆಸ್ತಿಯು ಆಲನಹಳ್ಳಿ ಗ್ರಾಮ, ಹಂಪಾಪುರ ಹೋಬಳಿ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 26+50+6 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 66.5+14+33.4 ಮೀಟರ್‌ಗಳು, ಚಕ್ಕುಬಂದಿ : ಪೂರ್ವಕ್ಕೆ : ಶ್ರೀ. ಎ.ಎಸ್. ಶಿವಪ್ಪ ಮತ್ತು ಶ್ರೀ.ನಾಗಪ್ಪ ರವರುಗಳ ಉಳಿಕೆ ಭೂಮಿ, ಪಶ್ಚಿಮಕ್ಕೆ : ಗ್ರಾಮಠಾಣಾ ಮತ್ತು ಶ್ರೀ.ಸೋಮಣ್ಣ ರವರ ಭೂಮಿ, ಉತ್ತರಕ್ಕೆ : ಸಾರಕ್ಕಿ ಓಣಿ ಮತ್ತು ಶ್ರೀ. ಶಿವಪ್ಪ ರವರ ಆಸ್ತಿ, ದಕ್ಷಿಣಕ್ಕೆ : ಶ್ರೀ. ಕೆಂಪೇಗೌಡ ರವರ ಭೂಮಿ ಮತ್ತು ಮೈಸೂರು ಗಡಿಗೆ ರಸ್ತೆ.	**ಮೀಸಲು ಬೆಲೆ ರೂ. 105.00 ಲಕ್ಷಗಳು** **ಇಎಂಡಿ ರೂ. 10.50 ಲಕ್ಷಗಳು**

ಇತರ ನಿಯಮಗಳು ಮತ್ತು ನಿಬಂಧನೆಗಳು : (ಎ) ವೆಬ್‌ಸೈಟ್ **website https://baanknet.com/** ದಲ್ಲಿ "ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್" (ವಿದ್ಯುನ್ಮಾನ ಹರಾಜು) ಮೂಲಕ ಮಾತ್ರ ಹರಾಜು ಮಾರಾಟ ಬಿಡ್ಡರ್‌ಗಳು ಇ–ಹರಾಜು ಕಲಾಪಗಳಲ್ಲಿ ಭಾಗವಹಿಸುವ ಮುನ್ನ, ಹರಾಜು ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ ಅನ್ನು ನೋಡಲು ಸೂಚಿಸಲಾಗಿದೆ. (ಬಿ) ಆಸ್ತಿಯನ್ನು ಪರಿವೀಕ್ಷಿಸಬಹುದಾದ ದಿನಾಂಕ & ಸಮಯವನ್ನು ಮೇಲೆ ತಿಳಿಸಿದಂತೆ.(ಸಿ) ಆಸ್ತಿಯನ್ನು ಮೀಸಲು ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತದೆ ಮತ್ತು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್‌ದಾರರು ತಮ್ಮ ಕೊಡುಗೆಯನ್ನು ಇನ್ನಷ್ಟು ಸುಧಾರಿಸಬಹುದು.(ಡಿ) ಇಎಂಡಿ 10% ನಷ್ಟು ಮೊತ್ತವನ್ನು **M/s PSB Alliance Private Limited (Baanknet)** ಪೋರ್ಟಲ್‌ನ ಇ–ವ್ಯಾಲೆಟ್‌ನಲ್ಲಿ ನೇರವಾಗಿ ಅಥವಾ ಅದರಲ್ಲಿ ಚಲನ್ ಅನ್ನು ರಚಿಸುವ ಮೂಲಕ ಠೇವಣಿ ಇಡಬೇಕು ಮತ್ತು ಸದರಿ ಚಲನ್‌ನಲ್ಲಿ ಉಲ್ಲೇಖಿಸಿರುವಂತೆ ಖಾತೆ ವಿವರಗಳಲ್ಲಿ ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ಇಎಂಡಿಯನ್ನು ಠೇವಣಿ ಇಡಬೇಕು. (ಇ) ಇಎಂಡಿ ಮೊತ್ತವನ್ನು ಪಾವತಿಸಿದ ನಂತರ, ಉದ್ದೇಶಿತ ಬಿಡ್‌ದಾರರು ಮೇಲೆ ತಿಳಿಸಿದ ಕೆಳಗಿನ ದಾಖಲೆಗಳು/ವಿವರಗಳ ಪ್ರತಿಯನ್ನು **ದಿನಾಂಕ 11.03.2026** ರಂದು ಅಥವಾ ಅದಕ್ಕೂ ಮೊದಲು **ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ, ಬೆಂಗಳೂರು** ಇಲ್ಲಿಗೆ ನೇರವಾಗಿ ಅಥವಾ ಇಮೇಲ್ ಮೂಲಕ ಸಲ್ಲಿಸಬೇಕು. (i) ಇಎಂಡಿ ಮೊತ್ತಕ್ಕೆ ಡಿಮ್ಯಾಂಡ್ ಡ್ರಾಫ್ಟ್/ಪೇ ಆರ್ಡರ್, ಆರ್‌ಟಿಜಿಎಸ್/ಎನ್‌ಇಎಫ್‌ಟಿ ಸ್ವೀಕೃತಿ ರಸೀದಿ ಮೂಲಕ ಪಾವತಿಸಿದ್ದರೆ, ಯುಟಿಆರ್ ಸಂಖ್ಯೆಯೊಂದಿಗೆ ಪಾವತಿಸಬೇಕು. (ii) ಪ್ಯಾನ್ ಕಾರ್ಡ್, ಐಡಿ ಪ್ರೂಫ್ ಮತ್ತು ವಿಳಾಸ ಪ್ರೂಫ್‌ಗಳ ನಕಲು ಪ್ರತಿಗಳು. ಆದಾಗ್ಯೂ, ಯಶಸ್ವಿ ಬಿಡ್ದಾರರು ಬಿಡ್ ಮೊತ್ತದ 25% ಬಾಕಿ ಮೊತ್ತವನ್ನು ಪಾವತಿಸುವ ಸಮಯದಲ್ಲಿ ಈ ಮೂಲ ದಾಖಲೆಗಳನ್ನು ಬ್ಯಾಂಕಿಗೆ ಹಾಜರುಪಡಿಸಬೇಕು. (iii) ಬಿಡ್ ಫಾರ್ಮ್ ಸಲ್ಲಿಸಬೇಕು. ಉದ್ದೇಶಿತ ಬಿಡ್ಡರ್‌ಗಳು ತಮ್ಮ ಹೆಸರುಗಳನ್ನು **https://baanknet.com/** ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅವರ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಉಚಿತವಾಗಿ ಪಡೆಯಬೇಕು. ಸಂಭಾವ್ಯ ಬಿಡ್ಡರ್‌ಗಳು ಸೇವಾ ಪೂರೈಕೆದಾರರಾದ **M/s.PSB Alliance (Baanknet) - e- mail: support.BAANKNET@psballiance.com** ನಿಂದ ಇ–ಹರಾಜಿನ ಕುರಿತು ಆನ್‌ಲೈನ್ ತರಬೇತಿಯನ್ನು ಪಡೆಯಬಹುದು. ವಿಫಲ ಬಿಡ್ಡರ್‌ಗಳು ಠೇವಣಿ ಮಾಡಿದ ಇಎಂಡಿಯನ್ನು ಅವರಿಗೆ ಮರುಪಾವತಿಸಲಾಗುತ್ತದೆ. ಇಎಂಡಿ ಯಾವುದೇ ಬಡ್ಡಿಯನ್ನು ಹೊಂದಿರುವುದಿಲ್ಲ. **(ಎಫ್)** ಮೇಲೆ ತಿಳಿಸಿದಂತೆ ಹರಾಜು ಮೀಸಲು ಬೆಲೆಯಲ್ಲಿ ಪ್ರಾರಂಭವಾಗುತ್ತದೆ. ಬಿಡ್ಡರ್‌ಗಳು ತಮ್ಮ ಕೊಡುಗೆಗಳನ್ನು **ರೂ. 1,00,000/–** ಗಳ ಗುಣಕಗಳಲ್ಲಿ ಸುಧಾರಿಸಬೇಕು. 'ಆನ್‌ಲೈನ್' ಹರಾಜಿನ ಮುಕ್ತಾಯದ ನಂತರ ಅತಿ ಹೆಚ್ಚು ಬಿಡ್ (ಮೀಸಲು ಬೆಲೆಗಿಂತ ಕಡಿಮೆಯಿಲ್ಲದ) ಸಲ್ಲಿಸುವ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ. ಸುರಕ್ಷಿತ ಸಾಲದಾತರಿಂದ ದೃಢೀಕರಣಕ್ಕೆ ಒಳಪಟ್ಟು, ಯಶಸ್ವಿ ಬಿಡ್ಡರ್ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ. **(ಜಿ)** ಯಶಸ್ವಿಯಾದ ಟೆಂಡರುದಾರರು ಆತನ/ಆಕೆಯ ಪರವಾಗಿ ಟೆಂಡರ್ ತೀರ್ಮಾನದ ನಂತರ ಅದೇ ದಿನ ತಕ್ಷಣ ಮಾರಾಟ ಬೆಲೆಯ 25% ಮೊತ್ತವನ್ನು (ಈಗಾಗಲೇ ಪಾವತಿ ಮಾಡಿರುವ ಇಎಂಡಿ ಸೇರಿದಂತೆ) ಪಾವತಿ ಮಾಡಬೇಕು. ಬಾಕಿ ಹಣವನ್ನು ಮಾರಾಟ ದೃಢೀಕರಣವಾದ ದಿನಾಂಕದಿಂದ 15 ದಿನಗಳ ಒಳಗೆ ಪಾವತಿ ಮಾಡಬೇಕು. ಯಶಸ್ವಿಯಾದ ಟೆಂಡರುದಾರರು ಮೇಲೆ ತಿಳಿಸಿರುವಂತೆ ಮಾರಾಟ ಬೆಲೆ ಪಾವತಿಸಲು ವಿಫಲವಾದರೆ ಅವರು ಪಾವತಿ ಮಾಡಿರುವ ಠೇವಣಿ ಹಣವನ್ನು ಅಧಿಕೃತ ಅಧಿಕಾರಿ ಇವರಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಮೊತ್ತವನ್ನು ಕೆನರಾ ಬ್ಯಾಂಕ್, ಎಆರ್‌ಎಂ II ಶಾಖೆಯ ಅಧಿಕೃತ ಅಧಿಕಾರಿಯ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಠೇವಣಿ ಇಡಬೇಕು ಅಥವಾ RTGS / NEFT / ನಿಧಿ ವರ್ಗಾವಣೆಯ ಮೂಲಕ **ಕೆನರಾ ಬ್ಯಾಂಕ್, ಎಆರ್‌ಎಂ II ಶಾಖೆ, ಖಾತೆ ಸಂಖ್ಯೆ 209272434, ಐಎಫ್‌ಎಸ್‌ಸಿ ಕೋಡ್: CNRB0006298** ರ ಖಾತೆಗೆ ಜಮಾ ಮಾಡಬೇಕು. **(ಹೆಚ್) ರೂ.50 ಲಕ್ಷಗಳು (ಐವತ್ತು ಲಕ್ಷ ರೂಪಾಯಿಗಳು)** ಮತ್ತು ಅದಕ್ಕಿಂತ ಹೆಚ್ಚಿನ ಮಾರಾಟದ ಆದಾಯಕ್ಕಾಗಿ, ಯಶಸ್ವಿ ಬಿಡ್‌ದಾರರು ಮಾರಾಟದ ಆದಾಯದ ಮೇಲೆ ದರದಲ್ಲಿ 1% ಟಿಡಿಎಸ್ ಅನ್ನು ಕಡಿತಗೊಳಿಸಬೇಕು ಮತ್ತು ಟಿಡಿಎಸ್ ಪ್ರಮಾಣಪತ್ರದ ಮೂಲ ರಸೀದಿಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು. (ಐ) ಎಲ್ಲಾ ಕನ್ವೇಯನ್ಸ್, ಸ್ಟಾಂಪ್ ಡ್ಯೂಟಿ ಮತ್ತು ರಿಜಿಸ್ಟ್ರೇಷನ್ ಚಾರ್ಜ್‌ಗಳು ಎಲ್ಲಾ ಟ್ಯಾಕ್ಸ್‌ಗಳು, ಕಾನೂನು, ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ ಇತ್ಯಾದಿಯಂತಹ ಎಲ್ಲಾ ಇತರೆ ಬಾಕಿ ಖರ್ಚುಗಳನ್ನು ಯಶಸ್ವಿ ಬಿಡ್ದುದಾರರೇ ಭರಿಸಬೇಕು. **(ಜೆ)** ಯಾವುದೇ ಕಾರಣವನ್ನು ನೀಡದೆ ಇ-ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ/ರದ್ದು ಮಾಡುವ ಅಥವಾ ಬದಲಾಯಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿಕೊಂಡಿದ್ದಾರೆ. **(ಕೆ)** ಒಂದು ವೇಳೆ ಬಿಡ್ದುದಾರರು ಇಂಟರ್‌ನೆಟ್ ಸಂಪರ್ಕವನ್ನು ಹೊಂದಿರದವರು ಇ-ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವವರು, ಅವರು ಸಂಬಂಧಪಟ್ಟ ಸರ್ಕಲ್ ಆಫೀಸ್ ಅಥವಾ **ಕೆನರಾ ಬ್ಯಾಂಕ್ ಎಆರ್‌ಎಂ–II ಶಾಖೆಯನ್ನು** ಸಂಪರ್ಕಿಸಬಹುದು, ಅವರು ಸುಗಮಗೊಳಿಸುವ ಕೇಂದ್ರವಾಗಿ ಅಗತ್ಯ ವ್ಯವಸ್ಥೆಗಳನ್ನು ಮಾಡುತ್ತಾರೆ. **(ಎಲ್)** ಬಿಡ್ದುದಾರರು ಆಸ್ತಿಯ ಶೀರ್ಷಿಕೆ, ವ್ಯಾಪ್ತಿ, ಪ್ರದೇಶದ ಬಾಕಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸೂಕ್ತ ಭೌತಿಕ ಪರಿಶೀಲನೆಯನ್ನು ಮಾಡುವುದು. ಬಿಡ್ ಸಲ್ಲಿಸಿದ ನಂತರದ ಯಾವುದೇ ಕ್ಲೈಮ್ ಅನ್ನು ಬ್ಯಾಂಕ್ ಪರಿಗಣಿಸುವುದಿಲ್ಲ. (ಎಂ) ಮಾರಾಟ ದೃಢೀಕರಣದ ನಂತರ, ಈಗಾಗಲೇ ಪಾವತಿಸಲಾದ ಮೊತ್ತದ ಮರುಪಾವತಿಗಾಗಿ ಬಿಡ್ದಾರರು ಸಲ್ಲಿಸುವ ವಿನಂತಿಯನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಬ್ಯಾಂಕ್ ಸರ್ಫೇಸಿ ಕಾಯ್ದೆಯ ಪ್ರಕಾರ ಮುಂದುವರಿಯುತ್ತದೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಮುಖ್ಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ–II (9113092975, 8921102717,7561062889, 9201460154, 9483544116, 8709675503 ಮತ್ತು 080–25310181) ಇ–ಮೇಲ್ ಐಡಿ–cb6298@canarabank.com ಅಥವಾ ಸೇವಾ ಪೂರೈಕೆದಾರರು M/s PSB Alliance Private Limited (Baanknet-ಇ–ಮೇಲ್: support.BAANKNET@psballiance.com

ವಿಶೇಷ ಸೂಚನೆ / ಎಚ್ಚರಿಕೆ:
ಕೊನೆಯ ನಿಮಿಷಗಳು/ಸೆಕೆಂಡುಗಳಲ್ಲಿ ಬಿಡ್ಡಿಂಗ್ ಅನ್ನು ತಮ್ಮ ಸ್ವಂತ ಆಸಕ್ತಿಯಿಂದ ಬಿಡ್‌ದಾರರು ತಪ್ಪಿಸಬೇಕು. ಅಂತಹ ಸಂದರ್ಭಗಳಲ್ಲಿ ಯಾವುದೇ ತೊಂದರೆ ಅಥವಾ ವೈಫಲ್ಯ (ಇಂಟರ್ನೆಟ್ ವೈಫಲ್ಯ, ವಿದ್ಯುಚ್ಛಕ್ತಿ ವೈಫಲ್ಯ, ಇತ್ಯಾದಿ) ಉಂಟಾದಲ್ಲಿ ಗುತ್ತಿಗೆದಾರರು ಅಥವಾ ಮಾರಾಟಗಾರರ ಭಾಗವಾಗಿ ಕೆನರಾ ಬ್ಯಾಂಕ್ ಅಥವಾ ಸೇವಾ ಪೂರೈಕೆದಾರರು ಜವಾಬ್ದಾರರಾಗಿರುವುದಿಲ್ಲ. ಅಂತಹ ಅನಿಶ್ಚಿತ ಪರಿಸ್ಥಿತಿಯನ್ನು ತಡೆಗಟ್ಟಲು, ವಿದ್ಯುತ್ ಸರಬರಾಜು ಮತ್ತು ಅಗತ್ಯವಿರುವ ಎಲ್ಲ ಅಗತ್ಯವಾದ ವ್ಯವಸ್ಥೆಗಳನ್ನು / ಪರ್ಯಾಯಗಳನ್ನು ಮಾಡಲು ಬಿಡ್‌ದಾರರನ್ನು ಕೋರಲಾಗುತ್ತದೆ. ಆದ್ದರಿಂದ ಅವರು ಇಂತಹ ಪರಿಸ್ಥಿತಿಯನ್ನು ತಪ್ಪಿಸಲು ಸಮರ್ಥರಾಗಿದ್ದಾರೆ ಮತ್ತು ಯಶಸ್ವಿಯಾಗಿ ಹರಾಜಿನಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

ದಿನಾಂಕ : 19.02.2026 — **ಸಹಿ/– ಅಧಿಕೃತ ಅಧಿಕಾರಿ**
ಸ್ಥಳ : ಬೆಂಗಳೂರು — **ಕೆನರಾ ಬ್ಯಾಂಕ್**

ಜೆಎಂ ಫೈನಾನ್ಶಿಯಲ್ ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್
JM Financial

ಕಾರ್ಪೊರೇಟ್ ಗುರುತಿನ ಸಂಖ್ಯೆ: U67190MH2007PLC174287
ನೋಂದಣಿ. ಕಚೇರಿ: 7ನೇ ಮಹಡಿ, ಸಿನರ್ಜಿ, ಅಪ್ಪಾಸಾಹೇಬ್ ಮರಾಠೆ ಮಾರ್ಗ, ಪ್ರಭಾದೇವಿ, ಮುಂಬೈ – 400 025.
ಅಧಿಕೃತ ಅಧಿಕಾರಿ : ಆರ್ ಮುಕುಂಥನ್, ಇ–ಮೇ; : r.mukunthan@jmfl.com
ದೂರವಾಣಿ: 90000 01027, ವೆಬ್‌ಸೈಟ್: www.jmfinancialarc.com

ಸ್ವಾಧೀನತೆ ಸೂಚನೆ
[ನಿಯಮ 8(1) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ಅ ಅಡಿ]
(ಸ್ಥಿರ ಆಸ್ತಿಗಳಿಗೆ)

ಏನೆಂದರೆ, ಕೆಳಸಹಿದಾರರು ಜೆ ಎಂ ಫೈನಾನ್ಶಿಯಲ್ ಅಸೆಟ್ ರಿಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಆಕ್ಟಿಂಗ್ ಇನ್ ಕೆಪಾಸಿಟಿ ಆಸ್ ಟ್ರಸ್ಟೀ ಆಫ್ ರೀಟೈಲ್ ಜೂನ್ 2022 ಟ್ರಸ್ಟ್ (ಇನ್ನು ಮುಂದೆ **"ಜೆಎಂಎಫ್‌ಎಆರ್‌ಸಿ"** ಎಂದು ಕರೆಯಲಾಗುತ್ತದೆ) **ವೆಂಕಟೇಶ್ ಬಾಬು ಕೆ ಆರ್** (ಇನ್ನು ಮುಂದೆ **"ಸಾಲಗಾರ"** ಎಂದು ಕರೆಯಲಾಗುತ್ತದೆ) ರವರಿಗೆ ಸಂಬಂಧಿಸಿದ ಹಣಕಾಸಿನ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡಿದೆ, ಜೊತೆಗೆ ಅದಕ್ಕಾಗಿ ರಚಿಸಲಾದ ಆಧಾರವಾಗಿರುವ ಭದ್ರತಾ ಹಿತಾಸಕ್ತಿಯೊಂದಿಗೆ ಸೆಕ್ಯುರಿಟೈಸೇಶನ್ ಮತ್ತು ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 (2002 ರ 54) (ಇನ್ನು ಮುಂದೆ **"ಹೇಳಲಾದ ಕಾಯ್ದೆ"** ಎಂದು ಕರೆಯಲಾಗುತ್ತದೆ) ಅಡಿಯಲ್ಲಿ ಪೂನಾವಾಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ (ಹಿಂದೆ ಮ್ಯಾಗ್ಮಾ ಫಿನ್‌ಕಾರ್ಪ್ ಲಿಮಿಟೆಡ್) ನಿಂದ ಎಲ್ಲಾ ಹಕ್ಕುಗಳು, ಟೈಟಲ್ ಮತ್ತು ಬಡ್ಡಿಯೊಂದಿಗೆ ನಿಯಮಗಳು, 2002 (ಇನ್ನು ಮುಂದೆ **"ಹೇಳಲಾದ ನಿಯಮಗಳು"** ಎಂದು ಉಲ್ಲೇಖಿಸಲಾಗುವುದು), **30.06.2022** ದಿನಾಂಕದ ನಿಯೋಜನೆ ಒಪ್ಪಂದದ ಮೂಲಕ ಮತ್ತು **24.09.2025** ದಿನಾಂಕದ ತಗಾದೆ ಸೂಚನೆಯನ್ನು ಹೊರಡಿಸಿ, ಸಾಲಗಾರರಾದ **ವಸುವಂಬಾ ಕೆ ಆರ್, ಅಮರನಾಥ್ ಕೆ ಆರ್** (ಇನ್ನು ಮುಂದೆ **"ಸಹ–ಸಾಲಗಾರರು"** ಎಂದು ಉಲ್ಲೇಖಿಸಲಾಗಿದೆ) ಅವರ ಸಾಲದ ಖಾತೆ ಸಂಖ್ಯೆ: **HL0113/HBAH00002941** ಮೂಲಕ ಮತ್ತು **22.09.2025** ರಂದು ಪಾವತಿಸಬೇಕಾದ **ರೂ.18,85,238/– (ಹದಿನೆಂಟು ಲಕ್ಷ ಎಂಬತ್ತೈದು ಸಾವಿರದ ಇನ್ನೂರ ಮೂವತ್ತೆಂಟು ರೂಪಾಯಿಗಳು ಮಾತ್ರ)** ನಲ್ಲಿ ಉಲ್ಲೇಖಿಸಿರುವ ಮೊತ್ತವನ್ನು ಸದರಿ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳಲ್ಲಿ ಪಾವತಿ ದಿನಾಂಕದವರೆಗೆ ಬಾಕಿ ಇರುವ ವೆಚ್ಚಗಳು, ವೆಚ್ಚಗಳು, ಶುಲ್ಕಗಳು ಇತ್ಯಾದಿಗಳನ್ನು ಮರುಪಾವತಿಸಲು ಸೂಚನೆ ನೀಡಲಾಗಿದೆ.

ಸಾಲಗಾರರು/ಸಹ–ಸಾಲಗಾರರು ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದು, ಕೆಳಗೆ ಸಹಿ ಮಾಡಿರುವವರು ಜೆಎಂಎಫ್‌ಎಆರ್‌ಸಿ ಇದರ ಅಧಿಕೃತ ಅಧಿಕಾರಿಯಾಗಿದ್ದು, ಸರ್ಫೇಸಿ ಕಾಯ್ದೆಯ ಸೆಕ್ಷನ್ 13 (4) ರ ಅಡಿಯಲ್ಲಿ ಸದರಿ ನಿಯಮಗಳ **ನಿಯಮ 8**ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿದ ಆಸ್ತಿಯನ್ನು (ಇನ್ನು ಮುಂದೆ **"ಹೇಳಲಾದ ಆಸ್ತಿ"** ಎಂದು ಉಲ್ಲೇಖಿಸಲಾಗುತ್ತದೆ) **19ನೇ ಫೆಬ್ರವರಿ, 2026** ರಂದು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಸಾಲಗಾರರು/ಸಹ–ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ಸಾಲಗಾರರು/ಸಹ–ಸಾಲಗಾರರು ಮತ್ತು ಸಾರ್ವಜನಿಕರು ಯಾರೂ ಈ ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಈ ಆಸ್ತಿಯೊಂದಿಗಿನ ವ್ಯವಹಾರ ನಡೆಸಿದಲ್ಲಿ **22.09.2025** ರವರೆಗೆ ಜೆಎಂಎಫ್‌ಎಆರ್‌ಸಿ ಗೆ ಪಾವತಿಸಬೇಕಾದ ಮೊತ್ತ **ರೂ.18,85,238/– (ಹದಿನೆಂಟು ಲಕ್ಷ ಎಂಭತ್ತೈದು ಸಾವಿರದ ಇನ್ನೂರ ಮೂವತ್ತೆಂಟು ರೂಪಾಯಿಗಳು ಮಾತ್ರ)** ಹಾಗೂ **23.09.2025** ರಿಂದ ಮರುಪಾವತಿ ದಿನಾಂಕದವರೆಗೆ ಬಡ್ಡಿ, ವೆಚ್ಚಗಳು ಮತ್ತು ಇತರ ಶುಲ್ಕಗಳನ್ನು ಪಾವತಿಸುವುದಕ್ಕೆ ಒಳಪಡುತ್ತದೆ.

ಸಾಲಗಾರರು/ಸಹ–ಸಾಲಗಾರರ ಗಮನಕ್ಕ ತರುವುದೇನೆಂದರೆ,ಸೆಕ್ಷನ್ 13 ರ ಸಬ್–ಸೆಕ್ಷನ್ (8) ರ ಸರ್ಫೇಸಿ ಕಾಯ್ದೆ ಅನ್ವಯ ಬಾಕಿ ಉಳಿದ ಕಾಲಾವಕಾಶದಲ್ಲಿ ನೀವು ಭದ್ರಯಾ ಸ್ವತ್ತುಗಳನ್ನು ಅಂದರೆ ಹೇಳಲಾದ ಆಶ್ತಿಯನ್ನು ಮರು ಪಡೆದುಕೊಳ್ಳಬಹುದಾಗಿದೆ.

ಸಾಲದ ಖಾತಾ ಸಂಖ್ಯೆ	ಷೆಡ್ಯೂಲ್ – ಹೇಳಲಾದ ಆಸ್ತಿ ವಿವರ
HL0113/HBAH00002941	ಅಡಮಾನ ಆಸ್ತಿಯ ಎಲ್ಲ ಭಾಗಗಳು ಸೇರಿದಂತೆ, ಪುರಸಭೆ ಸಂಖ್ಯೆ 20, ಖಾತಾ ಸಂಖ್ಯೆ 106, 1ನೇ ಕ್ರಾಸ್, ವಿಲ್ಸನ್ ಗಾರ್ಡನ್, ಚಿನ್ನಯ್ಯನಪಾಳ್ಯ, ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 62, ಬೆಂಗಳೂರು ಇಲ್ಲಿದ್ದು, ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರಕ್ಕೆ ದಕ್ಷಿಣಕ್ಕೆ 30 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ ಮತ್ತು **ಚಕ್ಕುಬಂದಿ:** ಪೂರ್ವಕ್ಕೆ: ಸೋಮಲಾಲ್‌ರ ಆಸ್ತಿ, ಪಶ್ಚಿಮಕ್ಕೆ: ಆಸ್ತಿಯ ಸರ್ವೆ ನಂ. 17/1, ಉತ್ತರಕ್ಕೆ: ರಸ್ತೆ ಮತ್ತು ರಾಚಯ್ಯನವರ ಖಾಲಿ ಭೂಮಿ ಮತ್ತು ಮುನಿವೆಂಕಲಶಾಮಪ್ಪ ಅವರ ಮನೆ, ದಕ್ಷಿಣಕ್ಕೆ: ಗೋಪಣ್ಣ ಮತ್ತು ಮುನಿನಂಜಪ್ಪ ಅವರ ಆಸ್ತಿ. (ಪ್ರಸ್ತುತ ಖಾತಾ ಎಕ್ಸ್‌ಟ್ರ್ಯಾಕ್ಟ್ ಪ್ರಕಾರ, ಆಸ್ತಿ ಅಳತೆ 28x42 = 1176 ಚದರ ಅಡಿ)

ಸಹಿ/–
ಅಧಿಕೃತ ಅಧಿಕಾರಿ,
ಸ್ಥಳ: ಬೆಂಗಳೂರು — **ಜೆಎಂ ಫೈನಾನ್ಶಿಯಲ್ ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್**
ದಿನಾಂಕ: 21.02.2026 — ಆಕ್ಟಿಂಗ್ ಇನ್ ಕೆಪಾಸಿಟಿ ಆಸ್ ಟ್ರಸ್ಟೀ ಆಫ್ ರೀಟೈಲ್ ಜೂನ್ 2022 ಟ್ರಸ್ಟ್

PUBLIC NOTICE

This is to inform the General Public that **SRI.HILARY INAS CASTELINO** is the owner of immovable property mentioned in the schedule hereunder and he has lost the original Sale Deed dated 9/6/2016 bearing Document No.822/ 2016-17, Book-I, Stored in CD No.99, executed by Sri.Mahaboob Pasha in favour of Sri.Hilary Inas Castelino registered in the office of sub registrar, Jayanagar (B.T.M) Layout Bangalore. In case anybody having any claims or in possession of the said document, shall inform the under singed and handover the same **within SEVEN DAYS** from the date of publication of this notice.

SCHEDULE PROPERTY

All that piece and parcel of the property bearing residential **Site No.1**, Old Katha No.701, New Katha No.1482, formed out of Converted, Sy.Nos. 118/3, 118/6, 118/7 & 119/3 (converted for Residential purpose and approved by the Special Deputy Commissioner, Bangalore District, vide his Order No.BDS.ALN.SR(S)396/2003-04, dated:14-01-2004), having 11-B Katha Sl.No. 15020030 1100101642, situated at DODDATHOGUR village, Begur Hobli, Bangalore South Taluk, measuring: East to West: (33.5+46.5)/2 feet and North to South: 30 Feet, in all measuring: 1200 Sq.ft., and bounded on: **East by:** Rajakaluve, **West by :** 35 feet Road, **North By :** Vacant land, **South by :** Site No.2.

N. JAGADEESH KUMAR, Advocate
No.30/1, 2nd Floor, 7th Cross,
Near NR Colony Bus Stand, Opp. Hotel Dwaraka,
Bangalore-560019, *Cell # 9341261700*

ಮಾನ್ಯ 2 ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್ ನಂ: 475/2025

ಅರ್ಜಿದಾರರು : ಶ್ರೀ ಕೆಂಪಯ್ಯ ಬಿನ್ ಲೇಟ್ ಹೊನ್ನೇಗೌಡ ವಯಸ್ಸು 60 ವರ್ಷ, ವಾಸ: ಗೊಲ್ಲಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ವಿರುದ್ಧ
ಪ್ರತಿ ಅರ್ಜಿದಾರರು : 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು, ಗೊಲ್ಲಹಳ್ಳಿ ಗ್ರಾಮ ನಾರಾಯಣಪುರ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಮತ್ತು ಇತರರು

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆ ಮತ್ತು 3, 5 ರಿಂದ 8ನೇ ಪ್ರತಿ ಅರ್ಜಿದಾರರದ ತಂದೆ ಹಾಗು 4ನೇ ಪ್ರತಿ ಅರ್ಜಿದಾರರ ಮಾವನವರಾದ ಶ್ರೀ. ಹೊನ್ನೇಗೌಡ ಬಿನ್ ಲೇಟ್ ಕೆಂಪೇಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಗೊಲ್ಲಹಳ್ಳಿ ಗ್ರಾಮದಲ್ಲಿ ದಿನಾಂಕ 18.03.1990 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 09/01/2026ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2026 ರ ಫೆಬ್ರವರಿ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ 2ನೇ ಅಪರ ನ್ಯಾಯಧೀಶರು
ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ., ವಕೀಲರು
ಕನಕಪುರ ಟೌನ್, ಕನಕಪುರ
ದಿನಾಂಕ: 17/02/26

ಮಾನ್ಯ ಗೌರವಾನಿತ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಸಿ.ಮಿಸ್ ನಂ: 64/2026

ಅರ್ಜಿದಾರರು : 1. ಶ್ರೀ ಸಿದ್ದರಾಜು ಬಿನ್ ಲೇಟ್, ನಿಂಗರಾಜು ವಯಸ್ಸು 56 ವರ್ಷ ವಾಸ: # 15, ಆನಮಾನಹಳ್ಳಿ ಗ್ರಾಮ, ಕಲ್ಲಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಮರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.
ವಿರುದ್ಧ
ಎದುರುದಾರರು : 1. ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಕನಕಪುರ ತಾಲ್ಲೂಕು, ಕನಕಪುರ, 2. ವೃತ್ತ ನಿರೀಕ್ಷಕರು, ಬರಡನಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 3 ನೇ ಅರ್ಜಿದಾರರ ಅಜ್ಜ (ತಾತ) ಮತ್ತು 4ನೇ ಅರ್ಜಿದಾರರ ತಂದೆಯವರಾದ ಶ್ರೀ. ಸಿದ್ದೇಗೌಡ ಬಿನ್ ಲೇಟ್, ಸಿದ್ದೇಗೌಡ ರವರು ಇದೇ ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಕಲ್ಲಹಳ್ಳಿ ಪೋ॥ ಆನಮಾನಹಳ್ಳಿ ಗ್ರಾಮದಲ್ಲಿ ದಿನಾಂಕ: 10/05/1960 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕ ದಂದು ಅಂದರೆ ದಿನಾಂಕ: 07/03/2025ರ ಬೆಳಿಗ್ಗೆ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ: 19/02/2026 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದಂತೆ
ಶಿರಸ್ತೇದಾರರು
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು,
ಶ್ರೀ.ಗೋಪಾಲಕೃಷ್ಣ, ಆರ್., ವಕೀಲರು.
ಸ್ಥಳ : ಕನಕಪುರ
ದಿನಾಂಕ: 19/02/2026.

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಸಿ.ಮಿಸ್. ನಂ: 659/2025

ಅರ್ಜಿದಾರರು : 1. ಶ್ರೀಮತಿ. ಬಸಮ್ಮ, ಕೋಂ ಲೇಟ್ ಈರೇಗೌಡ, ವಯಸ್ಸು 82 ವರ್ಷ, ವಾಸ: ಮಲ್ಲಿಗೆ ಮೆಟ್ಟಿಲು ಗ್ರಾಮ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.
ವಿರುದ್ಧ
ಎದುರುದಾರರು: 1. ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ 2. ವೃತ್ತ ನಿರೀಕ್ಷಕರು, ಮಲ್ಲಿಗೆಮಟ್ಟಿಲು ವೃತ್ತ ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು.

ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಮಾವ ಮತ್ತು 2 ರಿಂದ 6ನೇ ಅರ್ಜಿದಾರರ ಅಜ್ಜ (ತಾತ) ಮತ್ತು 7 ರಿಂದ 9ನೇ ಆರ್ಜಿದಾರರ ತಂದೆಯವರಾದ ಶ್ರೀ ಲಿಂಗೇಗೌಡ ಬಿನ್ ಲೇಟ್. ಬೊಮ್ಮಲಿಂಗೇಗೌಡ ರವರು ಇದೇ ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಮಲ್ಲಿಗೆಮಟ್ಟಿಲು ಗ್ರಾಮದಲ್ಲಿ ದಿನಾಂಕ: 01/10/1960 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕದ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 02/04/2026 ರ ಬೆಳಿಗ್ಗೆ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ: 17/2/2026 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಕೆ.ಎಸ್.ಸ್ವಾಮಿ ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 04/02/2026

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಸಿ.ಮಿಸ್. ನಂ: 658/2025

ಅರ್ಜಿದಾರರು : 1. ಶ್ರೀಮತಿ. ಬಸಮ್ಮ, ಕೋಂ ಲೇಟ್ ಈರೇಗೌಡ, ವಯಸ್ಸು 82 ವರ್ಷ, ವಾಸ: ಮಲ್ಲಿಗೆ ಮೆಟ್ಟಿಲು ಗ್ರಾಮ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.
ವಿರುದ್ಧ
ಎದುರುದಾರರು: 1. ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ 2. ವೃತ್ತ ನಿರೀಕ್ಷಕರು, ಮಲ್ಲಿಗೆಮಟ್ಟಿಲು ವೃತ್ತ ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು.

ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಅತ್ತೆ ಮತ್ತು 2 ರಿಂದ 6ನೇ ಅರ್ಜಿದಾರರ ಅಜ್ಜಿ ಮತ್ತು 7 ರಿಂದ 9ನೇ ಆರ್ಜಿದಾರರ ತಾಯಿಯವರಾದ ಶ್ರೀಮತಿ ಚೌಡಮ್ಮ ಕೋಂ ಲೇಟ್ ಲಿಂಗೇಗೌಡ ರವರು ಇದೇ ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಮಲ್ಲಿಗೆಮಟ್ಟಿಲು ಗ್ರಾಮದಲ್ಲಿ ದಿನಾಂಕ: 20/07/1990 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕದ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 02/04/2026 ರ ಬೆಳಿಗ್ಗೆ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ: 17/2/2026 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಕೆ.ಎಸ್.ಸ್ವಾಮಿ ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 04/02/2026

ಸಮಾಚಾರ ಸಣ್ಣದಲ್ಲ

ಇಂದು, ನಾಳೆ ಸಿಎಂ ಕಪ್ ಬ್ಯಾಡ್ಮಿಂಟನ್

ಬೆಂಗಳೂರು: ನಗರದ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್‌ಯಲ್ಲಿ ಫೆ.21 ಮತ್ತು 22ರಂದು ಸಿಎಂ ಕಪ್ ಬ್ಯಾಡ್ಮಿಂಟನ್ ಪಂದ್ಯಾವಳಿ ಆಯೋಜಿಸಲಾಗಿದೆ. ಪಂದ್ಯಾವಳಿಯಲ್ಲಿ ಎಂಟು ತಂಡಗಳು ಭಾಗವಹಿಸಲಿದ್ದು, ಜನಪ್ರತಿನಿಧಿಗಳು, ಐಎಎಸ್-ಐಪಿಎಸ್ ಅಧಿಕಾರಿಗಳು, ಸಚಿವಾಲಯದ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ವೈದ್ಯರು, ಸ್ಯಾಂಡಲ್‌ವುಡ್ ತಾರೆಯರು ಒಳಗೊಂಡ ಐಪಿಲ್ ಶೈಲಿಯ ಬ್ಯಾಡ್ಮಿಂಟನ್ ಇದಾಗಿದೆ. ಲೀಡರ್ಸ್ ಪ್ಲೇ, ಫ್ರೆಂಡ್‌ಶಿಪ್ ವಿನ್ ಎಂಬ ಘೋಷ ವಾಕ್ಯದೊಂದಿಗೆ ಆರಂಭಗೊಂಡಿರುವ ಮೊದಲ ಆವೃತ್ತಿಯ ಟೂರ್ನಿಯ ಲಾಂಛನವನ್ನು ಈಗಾಗಲೇ ಸಿಎಂ ಸಿದ್ದರಾಮಯ್ಯನವರು ಅನಾವರಣಗೊಳಿಸಿದ್ದಾರೆ. ಟೂರ್ನಿಯಲ್ಲಿ 1 ಎಲೈಟ್ ಬ್ಯಾಡ್ಮಿಂಟನ್ ಕ್ಲಬ್, ಇನ್‌ಸ್ಪೈರ್ ಚಾಲೆಂಜರ್ಸ್, ದಿ ಕೆಫೆ ದಿವ್ಯಂ, ಎಟಿಐಎಸ್ ಅಟ್ಯಾಕರ್ಸ್, ಪ್ರೋ ವಿನ್ ಪ್ಯಾಂಥರ್ಸ್, ಎಸ್ಥೆಟಿಕ್ ಅಟ್ಯಾಕರ್ಸ್, ಟೆಲಿಕಾಂ ಸ್ಕೈ, ಸ್ಟೈಕರ್ಸ್. ಕೆಜಿಎಫ್ ಸ್ಮಾಷರ್ಸ್ ತಂಡಗಳ ನಡುವೆ ಸ್ಪರ್ಧೆ ನಡೆಯಲಿದೆ ಎಂದು 9 ಗ್ರೀಮ್ಸ್ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ನಾಳೆಯಿಂದ ಕೆನರಾ ಉತ್ಸವ ಆರಂಭ

ಬೆಂಗಳೂರು: ಕೆನರಾ ಬ್ಯಾಂಕ್ ವತಿಯಿಂದ ಫೆ.22 ಮತ್ತು 23ರಂದು ನಗರದ ಜಯಮಹಲ್ ರಸ್ತೆಯಲ್ಲಿರುವ ಜಯಮಹಲ್ ಕನ್ವೆನ್ಷನ್ ಹಾಲ್‌ನಲ್ಲಿ ಬೆ.10 ರಿಂದ ರಾತ್ರಿ 8 ವರೆಗೆ ಕೆನರಾ ಉತ್ಸವ 2026 ಆಯೋಜಿಸಲಾಗಿದೆ. ಉತ್ಸವದಲ್ಲಿ ಮಹಿಳೆಯರು ಮತ್ತು ಸ್ಥಳೀಯ ಕುಶಲಕರ್ಮಿಗಳನ್ನು ಸಬಲೀಕರಣಗೊಳಿಸುವುದರ ಜತೆಗೆ ಉದ್ಯಮಶೀಲತೆ ಮತ್ತು ಕಲೆ ಆಚರಿಸುವ ಎರಡು ದಿನಗಳ ಪ್ರದರ್ಶನವಾಗಿದೆ. ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಮತ್ತು ಸಮುದಾಯ ಅಭಿವೃದ್ಧಿಯ ಭಾಗವಾಗಿ, ಕೆನರಾ ಬ್ಯಾಂಕ್ ಮಹಿಳಾ ಉದ್ಯಮಿಗಳು ಮತ್ತು ಕೌಶಲ್ಯಪೂರ್ಣ ಕುಶಲಕರ್ಮಿಗಳಿಗೆ ತಮ್ಮ ಕೌಶಲ್ಯಗಳನ್ನು ಪ್ರದರ್ಶಿಸಲು ಮತ್ತು ಅವರ ಕೈಯಿಂದ ತಯಾರಿಸಿದ ಉತ್ಪನ್ನಗಳನ್ನು ಪ್ರಚಾರ ಮಾಡಲು ಈ ವೇದಿಕೆ ಒದಗಿಸಲಾಗಿದೆ. ಪ್ರದರ್ಶನದಲ್ಲಿ ಸಾವಯವ ಆಹಾರ, ಮಡಿಕೆಗಳು, ಸಿಹಿತಿಂಡಿಗಳು, ಕರಕುಶಲ ಆಭರಣಗಳು, ಮೇಣದಬತ್ತಿಗಳು ಮತ್ತು ಇನ್ನೂ ಅನೇಕ ಕರಕುಶಲ ವಸ್ತುಗಳನ್ನು ಒಳಗೊಂಡಿರುತ್ತದೆ. ಸಂದರ್ಶಕರು ಸಾವಯವ ಆಹಾರ ಉತ್ಪನ್ನಗಳನ್ನು ಆನಂದಿಸಬಹುದು ಮತ್ತು ಮಡಿಕೆಗಳು ಮತ್ತು ಮೆಹೆಂದಿ ಕೌಂಟರ್‌ಗಳಲ್ಲಿ ಪ್ರಾಯೋಗಿಕ ಅನುಭವ ಪಡೆಯಬಹುದು ಎಂದು ಪ್ರಕಟಣೆಗೆ ತಿಳಿಸಿದೆ.

ಉ.ಪಾಲಿಕೆಯಲ್ಲಿ 2.29 ಕೋಟಿ ರು. ತೆರಿಗೆ ಬಾಕಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಬೆಂಗಳೂರು ಉತ್ತರ ಪಾಲಿಕೆಯ ಬ್ಯಾಟರಾಯನಪುರ ವಲಯ-1ರಲ್ಲಿ ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ 50 ಸುಸ್ತಿದಾರರಿಂದ 1.18 ಕೋಟಿ ರು. ಮತ್ತು ಆಸ್ತಿ ತೆರಿಗೆ ಬೇ-ಬಾಕಿ ಪರಿಷ್ಕರಣೆ ಪ್ರಕರಣಗಳಿಂದ 1.11 ಕೋಟಿ ರು. ಸೇರಿ ಒಟ್ಟು 2.29 ಕೋಟಿ ರು. ಬಾಕಿ ಇರುವುದಾಗಿ ತಿಳಿದುಬಂದಿದೆ ಎಂದು ಜಂಟಿ ಆಯುಕ್ತರು ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ವಲಯ-1 ವ್ಯಾಪ್ತಿಗೆ ಒಳಪಡುವ ಏಳು ಕಂದಾಯ ಉಪವಿಭಾಗಗಳಿಂದ ಸಹಾಯಕ ಕಂದಾಯ ಅಧಿಕಾರಿಗಳು ಸಲ್ಲಿಸಿದ ಮಾಹಿತಿ ಕ್ರೋಢೀಕರಿಸಿ, ಅತಿ ಹೆಚ್ಚು ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರ ಪಟ್ಟಿ ಸಿದ್ಧಪಡಿಸಲಾಗಿದೆ. ತೆರಿಗೆ ಸಂಗ್ರಹಣೆಗೆ ವಿಶೇಷ ಒತ್ತು ನೀಡಿ, ಬಾಕಿ ಮೊತ್ತ ತ್ವರಿತಗತಿಯಲ್ಲಿ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು.ನಗರ ಪಾಲಿಕೆಯ ಆದಾಯ ಹೆಚ್ಚಿಸುವುದು ಹಾಗೂ ಸಾರ್ವಜನಿಕ ಸೇವೆಗಳ ಸುಧಾರಣೆಗೆ ಆಸ್ತಿ ತೆರಿಗೆ ಪ್ರಮುಖ ಮೂಲವಾಗಿರುವುದರಿಂದ, ಸುಸ್ತಿದಾರರು ಸ್ವಯಂಪ್ರೇರಿತವಾಗಿ ಬಾಕಿ ತೆರಿಗೆ ಪಾವತಿಸಬೇಕು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.

ತೆರಿಗೆ ಬಾಕಿ: 40 ಸ್ವತ್ತುಗಳ ಹರಾಜು ಪ್ರಕ್ರಿಯೆ ಆರಂಭ

ಬೆಂಗಳೂರು: ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವಲಯ-1 ಹಾಗೂ ವಲಯ 2ರ ವ್ಯಾಪ್ತಿಯಲ್ಲಿ 40 ಆಸ್ತಿಗಳಿಂದ 1.16 ಕೋಟಿ ರು. ಕಂದಾಯ ಬಾಕಿ ಇರುವುದರಿಂದ, ಫೆಬ್ರವರಿ 21ರಂದು ಅಂತಹ ಸ್ವತ್ತುಗಳ ಹರಾಜು ಪ್ರಕ್ರಿಯೆ ನಡೆಸಲಾಗುವುದು ಎಂದು ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು. ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳಿಂದ ಸ್ವೀಕರಿಸ ಲಾಗುವ ಆಸ್ತಿ ತೆರಿಗೆಯನ್ನು ಪಾಲಿಕೆಯಲ್ಲಿ ಸಾರ್ವ ಜನಿಕರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಅಥವಾ ನಿರ್ವಹಿಸಲು ಉಪಯೋಗಿಸಲಾಗುತ್ತದೆ. ಜಿಬಿಎ ಕಾಯಿದೆ 2025ರ ಅಡಿಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಸ್ವತ್ತುಗಳು ಪ್ರತಿಯೊಂದು ಆರ್ಥಿಕ ಸಾಲಿನಲ್ಲಿ ಆಸ್ತಿ ತೆರಿಗೆ ಪಾವತಿ ಮಾಡಬೇಕಾಗಿರುತ್ತದೆ. ಆಸ್ತಿ ತೆರಿಗೆ ಪಾವತಿಸದ ಪ್ರಕರಣಗಳಲ್ಲಿ ಆಸ್ತಿತೆರಿಗೆ ವಸೂಲಿ ಮಾಡುವ ಕಾರ್ಯವಿಧಾನವನ್ನು ಆಸ್ತಿತೆರಿಗೆ ನಿರ್ಧರಣೆ, ವಸೂಲಾತಿ ಮತ್ತು ನಿರ್ವಹಣೆ ನಿಯಮ ಗಳು 2024ರಡಿಯಲ್ಲಿ ಅಧಿಸೂಚಿಸಲಾಗಿರುತ್ತದೆ. ಈ ಕಾಯಿದೆ ಹಾಗೂ ನಿಯಮಗಳಲ್ಲಿ ತಿಳಿಸಿರುವಂತೆ ಆಸ್ತಿತೆರಿಗೆ ಸುಸ್ತಿದಾರರಿಗೆ ಕಾರಣ ಕೇಳಿ ಪತ್ರ, ಆಸ್ತಿತೆರಿಗೆ ಬೇಡಿಕೆ ಪತ್ರ ಜಾರಿ ಮಾಡಲಾಗಿದ್ದು, ಸಾಕಷ್ಟು ಕಾಲಾವಕಾಶವನ್ನು ನೀಡಲಾದ ನಂತರ ದಲ್ಲೂ ಬೇ-ಬಾಕಿ ಉಳಿಸಿಕೊಂಡ ಪ್ರಕರಣಗಳ ಮಾಲೀಕರಿಗೆ ನಿಯತಕಾಲಿಕವಾಗಿ ಮೊಬೈಲ್ ಸಂದೇಶಗಳ ಮೂಲಕ ತಮ್ಮ ಸ್ವತ್ತಿನ ಆಸ್ತಿತೆರಿಗೆಯನ್ನು ಪಾವತಿಸಲು ತಿಳಿಸಲಾಗಿರುತ್ತದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ನೀರಿನ ಕೊರತೆಯಾಗುವುದಿಲ್ಲ ಎಂದರೂ ಕೆಲವೆಡೆ ಈಗಿನಿಂದಲೇ ತಯಾರಿ
ಬೆಂಗಳೂರು ಜಲಮಂಡಳಿಯಿಂದ 10 ಕೋಟಿ ವೆಚ್ಚದಲ್ಲಿ ಯೋಜನೆ ಸಿದ್ಧ

ಬೇಸಿಗೆ ದಾಹ ನೀಗಿಸಲು ಸಜ್ಜು

ಅಪರ್ಣಾ ಎ.ಎಸ್ ಬೆಂಗಳೂರು

ಕಳೆದ ಮಳೆಗಾಲದಲ್ಲಿ ಉತ್ತಮ ಮಳೆಯಾಗಿದ್ದರಿಂದ ಈ ಬಾರಿ ರಾಜಧಾನಿ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಅಭಾವವಿರುವುದಿಲ್ಲ ಎನ್ನುವ ತಜ್ಞರ ಲೆಕ್ಕಾಚಾರದ ಹೊರತಾಗಿಯೂ, ಬೆಂಗಳೂರಿನ 448 ಕಡೆ ಈ ಬಾರಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದೆ ಎಂದು ಜಲಮಂಡಳಿ ಅಂದಾಜಿಸಿದೆ.

ಕಳೆದ ಬಾರಿ ಬೇಸಿಗೆಯಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ರಾಜಧಾನಿಯನ್ನು ಕಾಡಿತ್ತು. ಹಲವು ಭಾಗದಲ್ಲಿ ನೀರಿನ ಟ್ಯಾಂಕರ್ ದರವೂ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದ್ದರಿಂದ ಜಲಮಂಡಳಿ ವಿರುದ್ಧ ಜನಾಕ್ರೋಶ ಹೊರಹಾಕಿದ್ದರು. ಆದ್ದರಿಂದ ಈ ಬಾರಿ ಬೇಸಿಗೆಗೂ ಮೊದಲು ತಯಾರಿ ನಡೆಸಿಕೊಳ್ಳಲು ಡಿಸಿಎಂ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದ್ದರಿಂದ, ಜಲಮಂಡಳಿ ಬೆಂಗ ಳೂರಿನಲ್ಲಿ ಎಲ್ಲೆಲ್ಲಿ ಸಮಸ್ಯೆ ಎದುರಾಗಬಹುದು ಎನ್ನುವ ಬಗ್ಗೆ ಪರಿಶೀಲಿಸಿ 448 ಕಡೆ ನೀರಿನ ಅಭಾವ ಎದುರಾಗಬಹುದು ಎಂದು ಗುರುತಿಸಿದ್ದಾರೆ.

ಕಳೆದ ಬಾರಿ ನೀರಿನ ಸಮಸ್ಯೆ ಎದುರಾದ ಸ್ಥಳಗಳ ಜತೆಗೆ ಹೊಸ ವಲಯಗಳನ್ನು ಗುರುತಿಸಲಾಗಿದ್ದು, ಈ ಭಾಗಗಳಿಗೆ ಸಿಂಟೆಕ್ಸ್ ಟ್ಯಾಂಕ್, ನಿಗಮದ ಟ್ಯಾಂಕರ್, ಖಾಸಗಿ ಟ್ಯಾಂಕರ್ ಸೇರಿದಂತೆ ವಿವಿಧ ರೀತಿಯಲ್ಲಿ ನೀರು ಸರಬರಾಜು ಮಾಡಲು ಜಲಮಂಡಳಿ ಮುಂದಾಗಿದೆ. ತಾತ್ಕಾಲಿಕ ವ್ಯವಸ್ಥೆಯೊಂದಿಗೆ ಅಂತರ್ಜಲ ವೃದ್ಧಿಸಲು ಕೆರೆಗಳ ಭರ್ತಿಗೂ ಕ್ರಮವಹಿಸಲಾಗಿದೆ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

ನಿಗದಿಪಡಿಸಿರುವ 448 ಸ್ಥಳಗಳಲ್ಲಿ 1260 ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಅಳವಡಿಸಲು ಕ್ರಮವಹಿಸಿದ್ದು, ಇದರೊಂದಿಗೆ ನಿಗಮದ 117 ಟ್ಯಾಂಕರ್, 104 ಖಾಸಗಿ ಟ್ಯಾಂಕರ್, ಕಾವೇರಿ ಸಂಪರ್ಕ ಕೇಂದ್ರದ ಮೂಲಕ 21 ಟ್ಯಾಂಕ್ ಹಾಗೂ 14 ಕೆರೆ ತುಂಬಿಸುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಗಳಿಗಾಗಿ ಒಟ್ಟು 10.14 ಕೋಟಿ ರು. ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲು ಜಲಮಂಡಳಿ ತೀರ್ಮಾನಿಸಿದೆ. ಪಶ್ಚಿಮ ವಲಯಕ್ಕೆ 3.5 ಕೋಟಿ ರು. ಅಗತ್ಯವಿದ್ದು, ಪೂರ್ವ ವಲಯಕ್ಕೆ 3.14ಕೋಟಿ, ದಕ್ಷಿಣಕ್ಕೆ 2.15 ಕೋಟಿ ಹಾಗೂ ಉತ್ತರ ವಲಯಕ್ಕೆ ಒಂದುವರೆ ಕೋಟಿ ಮೀಸಲಿಡಲಾಗಿದೆ ಎಂದು ತಿಳಿದು ಬಂದಿದೆ.

730 ಹೆಚ್ಚುವರಿ ಸಿಂಟೆಕ್ಸ್: ನೀರಿನ ಕೊರತೆ ಎದುರಾಗುವ ಸಾಧ್ಯತೆ ಕಡಿಮೆ ಇದ್ದರೂ ಮುಂಜಾಗ್ರತ ಕ್ರಮವಾಗಿ ಈ ಬಾರಿ ಹೆಚ್ಚುವರಿ ಟ್ಯಾಂಕರ್, ಸಿಂಟೆಕ್ಸ್ ಅಳವಡಿಸಲು ತೀರ್ಮಾನಿಸಲಾಗಿದೆ. ಕಳೆದ 530 ಸಿಂಟೆಕ್ಸ್‌ಗಳನ್ನು ಅಳವಡಿಸಿದ್ದ ಜಲಮಂಡಳಿ ಈ ಬಾರಿ 530 ಸ್ಥಳದೊಂದಿಗೆ ಹಚ್ಚುವರಿಯಾಗಿ 730 ಭಾಗದಲ್ಲಿ ಒಟ್ಟು 1260 ಸ್ಥಳದಲ್ಲಿ ಅಳವಡಿಸಲು ತೀರ್ಮಾನಿಸಿದೆ. ಇದರೊಂದಿಗೆ ಜಲ ಮಂಡಳಿಯ ಟ್ಯಾಂಕರ್‌ಗಳನ್ನು 52ರಿಂದ 117ಕ್ಕೆ, ಖಾಸಗಿ ಟ್ಯಾಂಕರ್‌ಗಳನ್ನು 52ರಿಂದ 104ಕ್ಕೆ ಏರಿಸಲು ನಿರ್ಧರಿಸಿದೆ ಎಂದು ಮೂಲ ಗಳು ತಿಳಿಸಿವೆ.

ಮಾಹಿತಿ	ಹಾಲಿ	ಹೆಚ್ಚುವರಿ	ಒಟ್ಟು
ಸಿಂಟೆಕ್ಸ್ ಟ್ಯಾಂಕ್	530	730	1260
ಜಲಮಂಡಳಿ ಟ್ಯಾಂಕರ್‌ಗಳು	52	65	117
ಖಾಸಗಿ ಟ್ಯಾಂಕರ್‌ಗಳು	52	52	104
ಕಾವೇರಿ ಸಂಪರ್ಕ ಕೇಂದ್ರ-ಟ್ಯಾಂಕ್	17	4	21
ಕಾವೇರಿ ಸಂಪರ್ಕ ಕೇಂದ್ರ-ಹೆಚ್ಚುವರಿ ಫಿಲ್ಲಿಂಗ್ ಪಾಯಿಂಟ್	84	7	91
ಆರ್‌ಒ ಪ್ಲಾಂಟ್‌ಗಳ ಭರ್ತಿ ಕೇಂದ್ರ	142	54	196
ಯೋಜಿತ ಕಾಮಗಾರಿ ಸಂಖ್ಯೆ	20	27	47
ಕೆರೆ ಭರ್ತಿ ಕಾಮಗಾರಿ	12	2	14
ಒಟ್ಟು ವೆಚ್ಚ ಲಕ್ಷಗಳಲ್ಲಿ	0	679	1014

448 ಭಾಗದಲ್ಲಿ ಗಂಭೀರ ಸಮಸ್ಯೆ?

ಜಲಮಂಡಳಿ ಸದ್ಯ ಬೆಂಗಳೂರಿನ ವಿವಿಧ ಭಾಗದಲ್ಲಿ 448 ಭಾಗದಲ್ಲಿ ನೀರಿನ ಗಂಭೀರ ಸಮಸ್ಯೆ ಎದುರಾಗಬಹುದು ಎಂದು ಅಂದಾಜಿಸಿದೆ. ಇದರಲ್ಲಿ ಪಶ್ಚಿಮ ಭಾಗದಲ್ಲಿ ಅತಿಹೆಚ್ಚು ಅಂದರೆ 146 ಸ್ಥಳವನ್ನು ಗುರುತಿಸಿದ್ದರೆ, ಪೂರ್ವದಲ್ಲಿ ಕಡಿಮೆ ಅಂದರೆ 59 ಭಾಗವನ್ನು ಗುರುತಿಸಲಾಗಿದೆ. ಇನ್ನುಳಿದಂತೆ ಉತ್ತರದಲ್ಲಿ 122, ದಕ್ಷಿಣದಲ್ಲಿ 121 ಕಡೆಗಳಲ್ಲಿ ನೀರಿನ ಅಭಾವ ಎದುರಾಗಬಹುದು ಎಂದು ಹೇಳಲಾಗುತ್ತಿದೆ. ಈ ಭಾಗಗಳಿಗೆ ಸಿಂಟೆಕ್ಸ್, ಖಾಸಗಿ ಟ್ಯಾಂಕರ್, ನಿಗಮದ ಟ್ಯಾಂಕರ್, ಕಾವೇರಿ ಕನೆಕ್ಟ್, ಕೆರೆ ತುಂಬಿಸುವ ಯೋಜನೆ, ಆರ್‌ಒ ಪ್ಲಾಂಟ್ ಭರ್ತಿ ಸೇರಿದಂತೆ ವಿವಿಧ ರೀತಿಯಲ್ಲಿ ನೀರು ಒದಗಿಸಲು ತೀರ್ಮಾನಿಸಿದ್ದು, ಇದಕ್ಕಾಗಿ 10 ಕೋಟಿ ರು. ವೆಚ್ಚದಲ್ಲಿ ಯೋಜನೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಾಕಲೂರು ಯೋಜನೆ ಪಾದಚಾರಿ ನಡಿಗೆ ನಾಳೆ

ಬೆಂಗಳೂರು: ಬೆಂಗಳೂರು ಉತ್ತರ ನಗರ ಪಾಲಿಕೆಯ ವತಿಯಿಂದ ವಾಕಲೂರು ಯೋಜನೆಯ 10ನೇ ಪಾದಚಾರಿ ನಡಿಗೆಯನ್ನು ಫೆಬ್ರವರಿ 22ರಂದು (ಭಾನುವಾರ) ಬೆಳಗ್ಗೆ 7 ಗಂಟೆಗೆ ಆಯೋಜಿಸಲಾಗಿದೆ.

ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಸ್ಥಳೀಯ ನಿವಾಸಿಗಳು, ಪಾಲಿಕೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಸೇರಿ 6.0 ಕಿ.ಮೀ. ದೂರದ ವಾಕಥಾನ್‌ನಲ್ಲಿ ಭಾಗವಹಿಸಲಿದ್ದಾರೆ. ಈ ವಾಕಲೂರು ಯೋಜನೆಯ ಮುಖ್ಯ ಉದ್ದೇಶವು ನಾಗರಿಕರು ಪಾದಚಾರಿ ಮಾರ್ಗಗಳಲ್ಲಿ ನಡೆದು, ಅಲ್ಲಿ ಕಂಡುಬರುವ ಪ್ರಮುಖ ಅಡೆತಡೆಗಳು, ಅತಿಕ್ರಮಣಗಳು ಹಾಗೂ ಪಾದಚಾರಿಗಳ ಸುರಕ್ಷತೆಗೆ ಧಕ್ಕೆ ಉಂಟುಮಾಡುವ ಸಮಸ್ಯೆಗಳನ್ನು ಗುರುತಿಸುವುದಾಗಿದ್ದು, ಪ್ರಮುಖ ಸ್ಥಳಗಳಲ್ಲಿ ಪಾದಚಾರಿಗಳನ್ನು ತಡೆದು, ಸ್ಥಳದಲ್ಲೇ ಛಾಯಾಚಿತ್ರಗಳನ್ನು ತೆಗೆದು ಸಮಸ್ಯೆಗಳ ದಾಖಲಾತಿ ಮಾಡಲಾಗುತ್ತದೆ. ಈ ಮೂಲಕ ಪಾದಚಾರಿಗಳೇ ತಮ್ಮ ಪ್ರದೇಶದ ಪಾದಚಾರಿ ಮಾರ್ಗಗಳ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಕ್ರಮಗಳಿಗೆ ದಾರಿ ಮಾಡಿಕೊಡುವುದು ಯೋಜನೆಯ ಆಶಯವಾಗಿದೆ. ನ. 1ರಂದು ಆರಂಭಗೊಂಡಿರುವ ವಾಕಲೂರು ಯೋಜನೆಯ 10ನೇ ವಾಕ್ ಕಾರ್ಯಕ್ರಮ ಇದಾಗಿದ್ದು, ಇದುವರೆಗೆ ಒಟ್ಟು 80 ಕಿ.ಮೀ. ದೂರವನ್ನು ಯಶಸ್ವಿಯಾಗಿ ಮುಗಿಸಿದೆ. ಫೆ. 22ರ ವಾಕ್ ಕಾರ್ಯಕ್ರಮವು ಕೊಡಿಗೆಹಳ್ಳಿಯ ರೈಲ್ವೆ ಪ್ಯಾರಲಲ್ ರಸ್ತೆ ಇಂದ ಪ್ರಾರಂಭವಾಗಲಿದೆ.

ಎಲ್ಲಾ ಯೋಜನೆಗಳಿಗೂ ಹಣ ಪೂರೈಕೆ

ಬೆಂಗಳೂರು: ಕೇಂದ್ರದಿಂದ ರಾಷ್ಟ್ರೀಯ ಆರೋಗ್ಯ ಮಿಷನ್ ಅನುದಾನ ಸಮಯಕ್ಕೆ ಬರದಿದ್ದರೂ ರಾಜ್ಯ ಆರೋಗ್ಯ ಇಲಾಖೆ ಎಲ್ಲಾ ಯೋಜನೆಗಳಿಗೆ ಅಗತ್ಯ ಹಣ ನೀಡುತ್ತಿದೆ. ಇಲಾಖೆಗೆ ಯಾವುದೇ ರೀತಿಯ ಪಾರಲಿಸಿಸ್ ಆಗಿಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷ್ಣಾ ಡಗ್ನೋಸ್ಟಿಕ್ಸ್ ಕಂಪನಿಯು ಸರಕಾರಿ ಆಸ್ಪತ್ರೆಗಳಲ್ಲಿ ನಡೆಸುತ್ತಿದ್ದ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನ್ ಸೇವೆಗಳು ಸ್ಥಗಿತಗೊಂಡಿರುವ ವಿಚಾರವನ್ನು ವಿರೋಧ ಪಕ್ಷಗಳು ತಪ್ಪಾಗಿ ಬಿಂಬಿಸುತ್ತಿವೆ. ಕಂಪನಿ ಹಣ ನೀಡಿಲ್ಲ ಎಂದು ಪತ್ರ ಬರೆದಿದ್ದಕ್ಕೆ, ಸರಕಾರಕ್ಕೆ ಹಣಕಾಸಿನ ಕೊರತೆ ಇದೆ, ಇಲಾಖೆ ಸ್ಥಗಿತವಾಗಿದೆ ಎಂಬಂತೆ ಹೇಳಲಾಗುತ್ತಿದೆ. ಜನರಿಗೆ ಸಮಸ್ಯೆ ಆಗಬಾರದು ಎಂಬುದು ನಮ್ಮ ಉದ್ದೇಶ ಎಂದರು.

ನಗರದ ಮಿಲ್ಲರ್ಸ್ ರೋಡ್‌ನ ಸಹೇದ್ ಈದ್ಗಾದಲ್ಲಿ ಮಸ್ಜಿದ್ ಇ ಖಾದ್ರಿಯ ಕುದ್ದೂಸ್‌ನಲ್ಲಿ ಶುಕ್ರವಾರ ವೃತ್ತಿಪರ ಕಲಾವಿದ ಝಾಕಿರ್ ಹುಸೇನ್ ಖಾನ್ ಮಸೀದಿ ಅಲ್ ನಬಿ ವಿಷಯದ ಕುರಿತು ಬಟ್ಟೆ ಮೇಲೆ 17X20 ಮೀಟರ್‌ಗಳ ವಿಶ್ವದ ಅತಿದೊಡ್ಡ ತೈಲ ಚಿತ್ರ ರಚಿಸಿ ಗಿನ್ನೆಸ್ ದಾಖಲೆ ನಿರ್ಮಿಸಿದರು.

ಚಿತ್ರ: ಸುಧಾಕರ್ ದೇವರಾಜ್

ನಾಯಕತ್ವ ಬದಲಾವಣೆ ಚರ್ಚೆ ನಡುವೆ ಮನೆ ರಿಪೇರಿ

ಸಿಎಂ ಅಧಿಕೃತ ನಿವಾಸ ನವೀಕರಣದ ಭಾಗ್ಯ

ವಿಶ್ವವಾಣಿ ವಿಶೇಷ ಬೆಂಗಳೂರು

ಕರ್ನಾಟಕದಲ್ಲಿ ಮುಖ್ಯಮಂತ್ರಿ ಬದಲಾವಣೆ ಚರ್ಚೆ ಕಳೆದ 4 ತಿಂಗಳಿನಿಂದ ನಡೆಯುತ್ತಿ ದ್ದರೆ, ಇನ್ನೊಂದೆಡೆ ತಮ್ಮ ಅಧಿಕೃತ ನಿವಾಸದ ನವೀಕರಣಕ್ಕೆ ಮುಂದಾಗಿರುವ ಸಿಎಂ ಸಿದ್ದರಾಮಯ್ಯ, ತಮ್ಮ ಕುರ್ಚಿಭದ್ರ ಎನ್ನುವ ಸಂದೇಶ ನೀಡಲು ಮುಂದಾದರೇ ಎನ್ನುವ ಚರ್ಚೆ ರಾಜಕೀಯ ವಲಯದಲ್ಲಿ ಶುರುವಾಗಿದೆ. ಮುಖ್ಯಮಂತ್ರಿಗಳ ಅಧಿಕೃತ ನಿವಾಸವಾಗಿ ರುವ ಕಾವೇರಿಯಲ್ಲಿ ಕೆಲ ದಿನ ಗಳಿಂದ ರಿಪೇರಿ ಕಾರ್ಯ ಜೋರಾಗಿ ನಡೆಯುತ್ತಿದ್ದು, ಕಚೇರಿ, ಒಳಾಂಗಣ ಸೇರಿದಂತೆ ಹಲವು ಪ್ರದೇಶಗಳ ಕಾಮಗಾರಿ ಸದ್ದಿಲ್ಲದೇ ನಡೆ ಯುತ್ತಿದೆ. ಸಾಮಾನ್ಯವಾಗಿ ಅಧಿಕೃತ ನಿವಾಸಕ್ಕೆ ಆಗಮಿಸಿ ದಾಗ ಈ ರೀತಿಯ ಕಾರ್ಯಗಳು ನಡೆಯು ತ್ತವೆ. ಆದರೆ ಕಾವೇರಿ ನಿವಾಸಕ್ಕೆ ಆಗಮಿಸಿ ಎರಡುವರೆ ವರ್ಷ ಕಳೆದ ಬಳಿಕ ಈ ನವೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದು ಹಲವು ಕುತೂಹಲಗಳಿಗೆ ಕಾರಣವಾಗಿದೆ.

ಸಿಎಂ ಸಿದ್ದರಾಮಯ್ಯ ಕಾವೇರಿ ನಿವಾಸದಲ್ಲಿರುವ ಕಚೇರಿ, ಹೊರಾಂಗಣ ಸೇರಿದಂತೆ ಹಲವು ಭಾಗದಲ್ಲಿ ಕಾಮಗಾರಿ ನಡೆಸುವಂತೆ ಸೂಚನೆ ನೀಡಿದ್ದು, ಅದಕ್ಕೆ ತಕ್ಕಂತೆ ಕಾಮಗಾರಿಗಳು ನಡೆಯುತ್ತಿವೆ. ಆದರೀಗ 'ಸಿಎಂ ಬದಲಾವಣೆ'ಗೆ ದಿನಕ್ಕೊಂದು ಡೆಡ್‌ಲೈನ್ ಬರುತ್ತಿರುವ ಈ ಸಮಯದಲ್ಲಿ ಈ ರೀತಿಯ ಕಾಮಗಾರಿ ನವೀಕರಣಕ್ಕಿಂತ ಹೆಚ್ಚಾಗಿ, ತಮ್ಮ ಸ್ಥಾನ 'ಭದ್ರ' ಎನ್ನುವ ಸಂದೇಶ ನೀಡಲು ಬಳಸಿಕೊಳ್ಳುತ್ತಿದ್ದಾರೆಯೇ ಎನ್ನುವ ಸಂಶಯ ಶುರುವಾಗಿದೆ.



ಕುರ್ಚಿ ಭದ್ರತೆ ಸಂದೇಶ?

ಕರ್ನಾಟಕದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಸುದ್ದಿಗಳು ಜೋರಾಗಿರುವ ವೇಳೆ ಈ ರೀತಿ ಕಚೇರಿ, ಅಧಿಕೃತ ನಿವಾಸವನ್ನು ನವೀಕರಿಸುವ ಮೂಲಕ ಯಾವುದೇ ಬದಲಾವಣೆ ಇಲ್ಲ ಎನ್ನುವ ಸಂದೇಶ ರವಾನಿಸುವ ಪ್ರಯತ್ನಗಳು ನಡೆದಿವೆ. ಒಂದು ವೇಳೆ ಕುರ್ಚಿ ಬಿಟ್ಟುಕೊಡಬೇಕು ಎನ್ನುವ ಸಣ್ಣ ಸಂದೇಶ ಸಿದ್ದರಾಮಯ್ಯ ಅವರಿಗೆ ದೆಹಲಿಯಿಂದ ಬಂದಿದ್ದರೂ, ನವೀಕರಣ ಮಾಡುವ ಉತ್ಸಾಹ ತೋರುತ್ತಿರಲಿಲ್ಲ. ಆದರೆ ಹೈಕಮಾಂಡ್‌ನಿಂದ ಯಾವುದೇ ಸಂದೇಶ ಬಾರದಿರುವುದರಿಂದ ನವೀಕರಣ ಮಾಡಿಸಲು ಸೂಚನೆ ನೀಡಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿವೆ.

107 ಆಸ್ತಿ ಹರಾಜು ಪ್ರಕ್ರಿಯೆ ಇಂದು

ಬೆಂಗಳೂರು: ಉತ್ತರನಗರ ಪಾಲಿಕೆ ವ್ಯಾಪ್ತಿಯ ವಲಯ-1 2 ರಲ್ಲಿ ಫೆ.21ರಂದು ಒಟ್ಟಾರೆ 107 ಆಸ್ತಿಗಳ ಹರಾಜು ಪ್ರಕ್ರಿಯೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಹೇಳಿದರು.

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ವಲಯ-1 ರಲ್ಲಿ 66 ಆಸ್ತಿಗಳಿಂದ 16530717 ರು. ಹಾಗೂ ವಲಯ-2 ರಲ್ಲಿ 41 ಆಸ್ತಿಗಳಿಂದ 8469037 ರು. ಒಟ್ಟಾರೆಯಾಗಿ ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 107 ಆಸ್ತಿಗಳಿಂದ 24999754 ರು. ಗಳ ಕಂದಾಯ ಬಾಕಿ ಇರುವುದರಿಂದ, ಫೆಬ್ರವರಿ 21 ರಂದು ಹರಾಜು ಪ್ರಕ್ರಿಯೆ ನಡೆಸಲಾಗುವುದು ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಹೇಳಿದರು.

ಸಂಬಂಧಿತ ಕಾಯಿದೆ ಹಾಗೂ ನಿಯಮಗಳಂತೆ, ಆಸ್ತಿ ತೆರಿಗೆ ಸುಸ್ತಿದಾರರಿಗೆ ಕಾರಣ ಕೇಳುವ ನೋಟಿಸ್ ಹಾಗೂ ಬೇಡಿಕೆ ಪತ್ರಗಳನ್ನು ಜಾರಿಗೊಳಿಸಲಾಗಿದೆ. ಸುಸ್ತಿದಾರರ ವಿವರಗಳನ್ನು ಪಾಲಿಕೆಯ ಅಧಿಕೃತ ಜಾಲತಾಣ ಜಠಿಠಿಟಣ://ಚಿಚಿಣಟ.ಜಟಡ.ಜ್ಞ(ಜಠಿಠಿಟಣ://ಚಿಚಿಣಟ.ಜಟಡ.ಜ್ಞ) ನಲ್ಲಿ ವೀಕ್ಷಿಸಬಹುದಾಗಿದೆ ಹಾಗೂ ಆಸ್ತಿ ತೆರಿಗೆ ಪಾವತಿಸಬಹುದು. ಸಾಕಷ್ಟು ಅವಕಾಶಗಳನ್ನು ನೀಡಿದ ಬಳಿಕವೂ ಬಾಕಿ ಉಳಿಸಿಕೊಂಡಿರುವ ಸ್ವತ್ತಿನ ಮಾಲೀಕರಿಗೆ ನಿಯಮಾನುಸಾರ ಮೊಬೈಲ್ ಸಂದೇಶಗಳ ಮೂಲಕ, ಖುದ್ದಾಗಿ ಹಾಗೂ ಸ್ವತ್ತಿನ ಸ್ಥಳದಲ್ಲಿಯೇ ಪಟ್ಟಿ ಅಂಟಿಸುವ ಮೂಲಕ ನೋಟಿಸ್ ಜಾರಿಗೊಳಿಸಲಾಗಿದೆ. ಆಸ್ತಿ ತೆರಿಗೆ ಪಾವತಿಸದ ಸ್ವತ್ತುಗಳನ್ನು ಕಾಯಿದೆ ಮತ್ತು ನಿಯಮಗಳ ಅನ್ವಯ ಹರಾಜು ಪ್ರಕ್ರಿಯೆಗೆ ಒಳಪಡಿಸಲು ತೀರ್ಮಾನಿಸಲಾಗಿದೆ.

ಹರಾಜು ಮಾಡಲು ಉದ್ದೇಶಿಸಿರುವ ಸ್ವತ್ತುಗಳನ್ನು ಫೆ.21 ರಂದು ಮಧ್ಯಾಹ್ನ 3-00 ಗಂಟೆಗೆ ಯಲಹಂಕ ಮಿನಿ ವಿಧಾನಸೌಧದ 3ನೇ ಮಹಡಿಯ ಸಭಾಂಗಣದಲ್ಲಿ ವಲಯ-1 ಮತ್ತು ವಲಯ-2ರ ಜಂಟಿ ಆಯುಕ್ತರುಗಳ ಸಮ್ಮುಖದಲ್ಲಿ ಹರಾಜು ಪ್ರಕ್ರಿಯೆ ನಡೆಸಲಾಗುವುದು. ಸಾರ್ವಜನಿಕರು/ಆಸಕ್ತರು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಹೇಳಿದರು. ಹರಾಜು ಪ್ರಕ್ರಿಯೆಗೆ ಮುನ್ನ ಪಟ್ಟಿಯಲ್ಲಿನ ಸ್ವತ್ತಿನ ಆಸ್ತಿ ತೆರಿಗೆಯನ್ನು ಪಾವತಿಸಿದಲ್ಲಿ ಆ ಸ್ವತ್ತನ್ನು ಹರಾಜಿನಿಂದ ಕೈ ಬಿಡಲಾಗುತ್ತದೆ. ಅಲ್ಲದೇ ಸ್ವತ್ತಿನ ಮಾಲೀಕರು ಹರಾಜು ಪ್ರಕ್ರಿಯೆಗೆ ಮುನ್ನ ತಮ್ಮ ಆಕ್ಷೇಪಣೆಗಳನ್ನು ಆಯುಕ್ತರ ಕಚೇರಿಗೆ ಸಲ್ಲಿಸಲು ಅವಕಾಶವಿರುತ್ತದೆ ಎಂದು ತಿಳಿಸಲಾಗಿದೆ.

ವಸಂತ ನಗರದಲ್ಲಿರುವ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತಿ ಆಚರಿಸಲಾಯಿತು. ಈ ವೇಳೆ ಕೆಕೆಎಂಪಿ ರಾಜ್ಯಾಧ್ಯಕ್ಷ ಎಸ್.ಸುರೇಶ್ ರಾವ್ ಸಾಹೆ, ಟಿ.ಆರ್.ಸುನಿಲ್ ಚವ್ಹಾಣ್, ಟಿ.ಆರ್.ವೆಂಕಟರಾವ್ ಚವ್ಹಾಣ್, ಎಸ್.ಆರ್.ಸಿಂಧ್ಯಾ, ಮರಾಠ ನಿಗಮದ ಅಧ್ಯಕ್ಷ ಮರಿಯೋಜಿರಾವ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಿಗದಿತ ಮೊತ್ತಕ್ಕಿಂತ ಹೆಚ್ಚು ಮೊತ್ತಕ್ಕೆ ಆಯ್ದ ಕಂಪನಿಗಳಿಗೆ ಟೆಂಡರ್

ಕಾರ್ಮಿಕ ಇಲಾಖೆಯಲ್ಲಿ ಕಿಕ್‌ಬ್ಯಾಕ್ ಆರೋಪ

ವಿಶ್ವವಾಣಿ ವಿಶೇಷ ಬೆಂಗಳೂರು

ಒಂದಲ್ಲ ಒಂದು ರೀತಿಯ ಆರೋಪಕ್ಕೆ ಗುರಿಯಾಗಿ ಸದ್ದು ಮಾಡುತ್ತಿರುವ ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕರ ಹಿತಕ್ಕಿಂತ ಕಿಕ್‌ಬ್ಯಾಕ್ ಒಲವು ಹೆಚ್ಚಾಗಿ ದೆಯೇ ಎನ್ನುವ ಗುಸು ಗುಸು ಕೇಳಿ ಬರುತ್ತಿದ್ದು, ಟೆಂಡರ್ ಹಾಗೂ ಉಪ ಕರಣಗಳ ಖರೀದಿ ಸೇರಿದಂತೆ ಹಲವು ಯೋಜನೆಗಳಲ್ಲಿ ಅಕ್ರಮ ವಾಸನೆ ಜೋರಾಗಿರುವ ಆರೋಪ ಕೇಳಿ ಬಂದಿದೆ.

ಕಾರ್ಮಿಕ ಇಲಾಖೆ ಇತ್ತೀಚೆಗೆ ಉಪ ಕರಣಗಳ ಖರೀದಿಗೆ ಒಂದೇ ಕಂಪನಿಗೆ ಟೆಂಡರ್ ನೀಡಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಇಲಾಖೆ ಯಲ್ಲಿ ಎಲ್ಲಾ ಟೆಂಡರ್‌ಗಳನ್ನು ಒಂದೇ ಕಂಪನಿಗೆ ನೀಡುವ ಪ್ರಮೇಯ ಮುಂದುವರಿಯುತ್ತಾ ಬಂದಿದೆ. ಟೆಂಡರ್‌ನಲ್ಲಿ ಕಡಿಮೆ ಕೋಟ್ ಮಾಡಿದ ವರಿಗೆ ಟೆಂಡರ್ ನೀಡು ವುದು ನಿಯಮ. ಆದರೆ ಹೆಚ್ಚು ಹಣ ಕೋಟ್ ಮಾಡಿದ ವರಿಗೆ ಟೆಂಡರ್ ನೀಡುವ ಮೂಲಕ ಸರಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಲಾಗುತ್ತಿದೆ. ಕಾರ್ಮಿಕ ಇಲಾಖೆ ಯಲ್ಲಿ ಸಾಕಷ್ಟು ಟೆಂಡರ್‌ಗಳನ್ನು ಕರೆಯ ಲಾಗಿದ್ದು, ನಿರ್ದಿಷ್ಟ ಕಂಪನಿಗೆ ಟೆಂಡರ್ ನೀಡುತ್ತಿರುವುದು ಸಂಶಯಕ್ಕೆ ಕಾರಣವಾಗಿದೆ.

2024-25 ಹಾಗೂ 2025-26ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆ ವಿವಿಧ ಉಪಕರಣ ಖರೀದಿ, ಕಾರ್ಮಿಕರಿಗೆ ನೀಡುವ ಕಿಟ್ ಖರೀದಿ ಸೇರಿದಂತೆ ವಿವಿಧ ರೀತಿಯ ಟೆಂಡರ್ ಕರೆಯಲಾಗಿದೆ. ಈ ಎಲ್ಲ ಟೆಂಡರ್‌ಗಳನ್ನು ದೆಹಲಿ ಮೂಲಕ ಒಂದೆರೆಡು ಕಂಪನಿ ಗಳಿಗೆ ಸಿಂಹಪಾಲು ಸಿಕ್ಕಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಇದರೊಂದಿಗೆ, ಟೆಂಡರ್ ಕರೆದಿರುವ ಮೊತ್ತಕ್ಕಿಂತ ಹೆಚ್ಚು ಮೊತ್ತಕ್ಕೆ ಬಿಡ್ ಮಾಡಿರುವ ಕಂಪನಿ ಗಳಿಗೆ ಟೆಂಡರ್ ಕೊಟ್ಟಿರುವುದು ಸಹ ಹಲವು ಅನುಮಾನಗಳಿಗೆ ಕಾರಣ ವಾಗಿದೆ.

ಆರೋಪಗಳೇನು?

- ಇಎಸ್‌ಐ ಆಸ್ಪತ್ರೆಗಳಿಗೆ ವೈದ್ಯೋಪಕರಣ ಖರೀದಿಸಲು ನೀಡಿರುವ ಟೆಂಡರ್‌ಗಳಲ್ಲಿ ಭ್ರಷ್ಟಾಚಾರ.
- ಹಲವು ಉಪಕರಣಗಳ ಖರೀದಿ ಟೆಂಡರ್ ತಮಗೆ ಬೇಕಾದವರಿಗೆ ನೀಡಲು ನಿಯಮ ಪಲ್ಲಟ
- ನಿಗದಿತ ದರಕ್ಕಿಂತ ದುಪ್ಪಟ್ಟು ದರ ನೀಡಿ 7 ಸಾವಿರ ಲ್ಯಾಪ್‌ಟಾಪ್ ಖರೀದಿಯಲ್ಲೂ ಅಕ್ರಮ
- ಕಾರ್ಮಿಕರ ಆರೋಗ್ಯಕ್ಕೆ ಮೀಸಲಾಗಿದ್ದ 325 ಕೋಟಿ ರು. ಸೆಸ್ ಹಣ ದುರುಪಯೋಗ

ಕಾರ್ಮಿಕರ ವಿವಾಹ ನೆರವಿನಲ್ಲೂ ಅಕ್ರಮ: ಇದೇ ರೀತಿ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ವಿವಾಹ ನೆರವು ಯೋಜನೆಯಲ್ಲಿ ನೋಂದಾಯಿತ ಕಾರ್ಮಿಕರ ಮಕ್ಕಳ ಮದುವೆ ವೆಚ್ಚ ಭರಿಸಲು ನೀಡುವ ಸಹಾಯಧನ ದುರ್ಬಳಕೆಯಾಗಿರುವುದು ಮಹಾ ಲೆಕ್ಕ ಪರಿಶೋಧಕರ ವರದಿಯಲ್ಲಿ (ಸಿಎಜಿ) ಬೆಳಕಿಗೆ ಬಂದಿದೆ. ನೋಂದಾ ಯಿತ ಕಾರ್ಮಿಕರ ಬದಲು ಕೃಷಿ, ವ್ಯಾಪಾರ ಹಾಗೂ ಖಾಸಗಿ ವಲಯದ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿ ರುವ 18 ಮಂದಿ ಫಲಾನುಭವಿಗಳ ಮಕ್ಕಳ ಮದುವೆಗೆ ತಲಾ 50 ಸಾವಿರ ರು. ಸಹಾಯಧನ ಮಂಜೂರು ಮಾಡ ಲಾಗಿದೆ. ಈ ಮೂಲಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ನಿಯಮ ಉಲ್ಲಂಘಿಸಿರುವುದು ಬಯ ಲಾಗಿದೆ. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ವಿವಾಹ ನೆರವು ಯೋಜನೆಯಲ್ಲಿ ನೋಂದಾಯಿತ ಕಟ್ಟಡ ಅಥವಾ ನಿರ್ಮಾಣ ಕಾರ್ಮಿಕನ ಇಬ್ಬರು ಮಕ್ಕಳಿಗೆ ಸೀಮಿತವಾಗಿ ಮದುವೆ ವೆಚ್ಚ ಭರಿಸಲು 50 ಸಾವಿರ ರು. ಸಹಾಯಧನ ನೀಡುತ್ತಿದೆ. ಈ ಸಂಬಂಧ ರಾಜ್ಯ ಸರಕಾರದ 2018ರ ಆದೇಶದ ಅನ್ವಯ ಈ 50 ಸಾವಿರ ರು. ಪೈಕಿ ಶೇ.50ರಷ್ಟು ಹಣವನ್ನು ವಧುವಿನ ಹೆಸರಿನಲ್ಲಿ ಕನಿಷ್ಠ ಮೂರು ವರ್ಷ ಸ್ಥಿರ ಠೇವಣಿ ಅಥವಾ ಬಾಂಡ್ (ಗೃಹ ಲಕ್ಷ್ಮೀ ಬಾಂಡ್) ರೂಪದಲ್ಲಿ ಇರಿಸಬೇಕು. ಉಳಿದ ಶೇ.50ರಷ್ಟು ಹಣ ಫಲಾನುಭವಿಯ ಹೆಸರಿಗೆ ಆರ್‌ಟಿಜಿಎಸ್ ಮುಖಾಂತರ ಪಾವತಿಸಬೇಕು ಎಂಬ ಷರತ್ತು ವಿಧಿಸಲಾಗಿದೆ.

ಆದರೆ, 2020ರಲ್ಲಿ ಈ ಷರತ್ತನ್ನು ಪರಿಷ್ಕರಣೆಗೆ ಒಳ ಪಡಿಸಿ ಸಂಪೂರ್ಣ ಮೊತ್ತವನ್ನು ವಧುವಿನ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತಿದೆ. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ 2018- 20ನೇ ಸಾಲಿನಲ್ಲಿ ವಿವಾಹ ನೆರವು ಯೋಜನೆಯಡಿ 1,013 ವಿವಾಹ ಬಾಂಡ್ ವಿತರಿಸಿದೆ. ಈ ಪೈಕಿ 624 ಪ್ರಕರಣಗಳಲ್ಲಿ ವಿವಾಹ ಬಾಂಡ್‌ಗಳು ಮೂರು ವರ್ಷಗಳ ಲಾಕ್ ಇನ್ ಅವಧಿ ಯಲ್ಲಿ ಇದ್ದರೂ ಕಾರ್ಮಿಕರ ಕಚೇರಿ ಯಲ್ಲೇ ಇರಿಸಿಕೊಂಡಿರುವುದು ಮಹಾ ಲೆಕ್ಕಪರಿಶೋಧನೆ ವೇಳೆ ಗಮನಕ್ಕೆ ಬಂದಿದೆ.

ಕ್ಯಾನ್ಸರ್ ವಿರುದ್ಧ ಹೋರಾಡಲು ಜಾಗೃತಿ ಅಗತ್ಯ: ಡಾ.ಟಿ.ನವೀನ್

ಬೆಂಗಳೂರು: ಕ್ಯಾನ್ಸರ್ ಚಿಕಿತ್ಸೆಗೆ ಒಳಗಾಗುವ ರೋಗಿಗಳು ದೈಹಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ಭಾರೀ ಒತ್ತಡ ಮತ್ತು ಆತಂಕ ಅನುಭವಿಸುತ್ತಾರೆ. ಇಂತಹ ಸಂದರ್ಭ ದಲ್ಲಿ ರೋಗಿಗಳಿಗೆ ಸಮರ್ಪಕ ವೈದ್ಯಕೀಯ ಚಿಕಿತ್ಸೆ ಜತೆಗೆ ದೃಢವಾದ ಮಾನಸಿಕ ಬೆಂಬಲ ಒದಗಿಸುವುದು ಅತ್ಯಗತ್ಯ ಎಂದು ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ತಿಳಿಸಿದರು.

ಕ್ಯಾನ್ಸರ್ ಜಾಗೃತಿ ದಿನದ ನಿಮಿತ್ತ ಕ್ರೈಸ್ಟ್ ವಿಜ್ಞಾನ ಶಾಲೆ ಶುಕ್ರವಾರ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಚಿಕಿತ್ಸೆಯ ಮೇಲಿನ ನಂಬಿಕೆ ಮತ್ತು ಸಕಾರಾತ್ಮಕ ಮನೋಭಾವವು ರೋಗಿಯ ಗುಣಮುಖತೆಗೆ ಮಹತ್ವದ ಪಾತ್ರ ವಹಿಸುತ್ತದೆ. ವೈದ್ಯರು, ಕುಟುಂಬ ಸದಸ್ಯರು ಮತ್ತು ಸಮುದಾಯದ ಬೆಂಬಲವು ರೋಗಿಯ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ಕಿದ್ವಾಯಿ ಸಂಸ್ಥೆಯಲ್ಲಿ ಪ್ರತಿ ವರ್ಷ ಸುಮಾರು 22 ಸಾವಿರ ಹೊಸ ಕ್ಯಾನ್ಸರ್ ಪ್ರಕರಣಗಳು ದಾಖಲಾಗುತ್ತಿವೆ. ನಾಲ್ಕು ಲಕ್ಷಕ್ಕೂ ಹೆಚ್ಚು ರೋಗಿಗಳು ಫಾಲೋಅಪ್ ಚಿಕಿತ್ಸೆಗೆ ಆಗಮಿಸುತ್ತಿದ್ದಾರೆ. ಪ್ರಾಥಮಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಚಿಕಿತ್ಸೆಯ ಯಶಸ್ಸಿನ ಪ್ರಮಾಣ ಹೆಚ್ಚುತ್ತದೆ. ನಿಯಮಿತ ತಪಾಸಣೆ ಹಾಗೂ ಜಾಗೃತಿಯೇ ಜೀವ ಉಳಿಸುವ ಕೀಲಿಕೈ ಎಂದರು. ಗರ್ಭಕಂಠದ ಕ್ಯಾನ್ಸರ್ ನಿಯಂತ್ರಣಕ್ಕೆ ಎಚ್‌ಪಿವಿ ಲಸಿಕೆ ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ. ಭಾರತದಲ್ಲಿನ ಪ್ರತಿಯೊಬ್ಬ ಹೆಣ್ಣುಮಗುವಿಗೂ ಈ ಲಸಿಕೆ ನೀಡುವುದು ಅಗತ್ಯ. ಎರಡು ಅಥವಾ ಮೂರು ಡೋಸ್‌ಗಳಲ್ಲಿ ನೀಡಲಾಗುವ ಈ ಲಸಿಕೆ ಗರ್ಭಕಂಠ ಕ್ಯಾನ್ಸರ್ ಸಂಭವ ಗಮನಾರ್ಹವಾಗಿ ಕಡಿಮೆ ಮಾಡುತ್ತದೆ ಎಂದರು.

ಅಂತಿಮ ಹಂತದ ಕ್ಯಾನ್ಸರ್ ರೋಗಿಗಳಿಗೆ ಉಪಶಾಮಕ ಆರೈಕೆ ಕೇಂದ್ರಗಳು ಆಶಾಕಿರಣವಾಗಿವೆ. ನೋವು ನಿವಾರಣೆ, ಮಾನಸಿಕ ಬೆಂಬಲ ಮತ್ತು ಗೌರವಯುತ ಬದುಕಿಗೆ ನೆರವಾಗುವುದು ಇದರ ಉದ್ದೇಶವಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕ್ಯಾನ್ಸರ್ ಬಗ್ಗೆ ಇನ್ನಷ್ಟು ಜಾಗೃತಿ ಮೂಡಿಸುವ ಅಗತ್ಯವಿದೆ. ವಿದ್ಯಾರ್ಥಿಗಳು ಹಾಗೂ ಯುವಕರು ಜಾಗೃತಿ ರಾಯಭಾರಿಗಳಾಗಿ ಕಾರ್ಯನಿರ್ವಹಿಸಬೇಕು.

-ಡಾ.ಎಂ.ಕೆ.ಯದುರಾಜ್,
ಕಿದ್ವಾಯಿ ಆಸ್ಪತ್ರೆಯ ಉಪಶಾಮಕ ಆರೈಕೆ ವಿಭಾಗದ ಮುಖ್ಯಸ್ಥ

ಸಮಾಚಾರ ಸಣ್ಣದಲ್ಲ

ರಾಯಣ್ಣ ಪ್ರತಿಮೆಗೆ ಮಸಿ: ತನಿಖೆ ಚುರುಕು

ಬೆಳಗಾವಿ: ನಗರದ ಮಚ್ಚೆಯಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಕಪ್ಪು ಮಸಿ ಬಳೆಯಲಾಗಿದೆ ಎಂದು ಆರೋಪಿಸಿ ಸ್ಥಳೀಯರು ಪ್ರತಿಭಟನೆ ಬೆನ್ನಲ್ಲೇ ಇದು ಕಪ್ಪು ಮಸಿಯಲ್ಲ ಮರದ ದ್ರವರೂಪದ ವಸ್ತು ಸೋರಿಕೆಯಾಗಿರುವ ಕುರಿತು ಪೊಲೀಸರು ತನಿಖೆಗೆ ಮುಂದಾಗಿದ್ದಾರೆ.

ಗುರುವಾರ ತಡರಾತ್ರಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಮೇಲೆ ಕಪ್ಪು ಬಣ್ಣದ ಆಯಿಲ್ ಕಂಡುಬಂದಿದೆ. ಇದನ್ನು ಗಮನಿಸಿದ ಸ್ಥಳೀಯರು ರಾಯಣ್ಣ ಪ್ರತಿಮೆಗೆ ಅವಮಾನ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಘಟನಾ ಸ್ಥಳಕ್ಕೆ ಆಗಮಿಸಿದ್ದರು. ಈ ವೇಳೆ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಮಧ್ಯರಾತ್ರಿ ಸ್ಥಳಕ್ಕೆ ಆಗಮಿಸಿದ ನಗರ ಪೊಲೀಸ್ ಆಯುಕ್ತ ಭೂಷನ ಗುಲಾಬರಾವ ಬೋರಸೆ ಪ್ರತಿಮೆ ವೀಕ್ಷಿಸಿ ನಿಜಕ್ಕೂ ಪ್ರತಿಮೆ ಮೇಲೆ ಬಿದ್ದಿದ್ದು ಕಪ್ಪು ಆಯಿಲ್ ಅಥವಾ ಮರದ ದ್ರವರೂಪದ ವಸ್ತು ಸೋರಿಕೆಯಾಗಿದೆಯಾ ಎಂಬುದನ್ನು ತಿಳಿಯಲು ಎಫ್‌ಎಸ್‌ಎಲ್‌ಗೆ ಕಳುಹಿಸುವ ನಿರ್ಧಾರ ಕೈಗೊಂಡಿದ್ದಾರೆ. ಘಟನೆ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು ಗಲಬೆ ಸೃಷ್ಟಿಸುವ ಉದ್ದೇಶದಿಂದಲೇ ಕಿಡಿಗೇಡಿಗಳು ಕಪ್ಪು ಬಣ್ಣ ಎರಚಿದ್ದಾರೆ ಎಂದು ಉಲ್ಲೇಖ ಮಾಡಲಾಗುದ್ದು ಸಾಕಷ್ಟು ಅನುಮಾನ ಮೂಡಿಸಿದೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಎನ್‌ಎಂಆರ್ ದರ ಶೇ.9ರಿಂದ 7ಕ್ಕೆ ಇಳಿಕೆ | ಮೈಸೂರು ಮುಂಚೂಣಿ, ಚಿಕ್ಕಮಗಳೂರು ಉತ್ತಮ ಸಾಧನೆ

ನವಜಾತ ಶಿಶುಮರಣ ದರ ಇಳಿಕೆ

ವೈಭವ .ಸಿ.ಕೊಳ್ಳಿ ಬೆಂಗಳೂರು

ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ನವಜಾತ ಶಿಶುಮರಣ ಪ್ರಮಾಣ ಕಡಿಮೆಯಾಗುತ್ತಿರುವುದು ಅಂಕಿ-ಅಂಶಗಳಿಂದ ಬಹಿರಂಗವಾಗಿದೆ. ಕಳೆದ ಮೂರು ವರ್ಷದ ಅವಧಿಯಲ್ಲಿ ರಾಜ್ಯದ ಸರಾಸರಿ ನವಜಾತ ಶಿಶು ಮರಣ ಪ್ರಮಾಣವು ಶೇ.9ರಿಂದ 7ಕ್ಕೆ ಇಳಿದಿದೆ. ಆರೋಗ್ಯ ಇಲಾಖೆಯ ಅಂಕಿ-ಅಂಶದ ಪ್ರಕಾರ, 2022-23ರಲ್ಲಿ 8,64,188 ಜೀವಂತ ಜನನಗಳಿಗೆ 7,471 ನವಜಾತ ಮರಣಗಳು (ಶೇ.9) ದಾಖಲಾಗಿದ್ದರೆ, 2024-25ನೇ ಸಾಲಿನಲ್ಲಿ (ಡಿಸೆಂಬರ್‌ವರೆಗೆ) 7,93,818 ಜನನಗಳಿಗೆ 5,826 ಮರಣಗಳು (ಶೇ.7) ಮಾತ್ರ ವರದಿಯಾಗಿವೆ. ರಾಜ್ಯಾದ್ಯಂತ ಶಿಶುಮರಣ ಸಂಖ್ಯೆ ಕ್ಷೀಣಿಸುತ್ತಿದ್ದರೂ, ದಾವಣಗೆರೆ, ಧಾರವಾಡ, ಮೈಸೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ರಾಜ್ಯದ ಸರಾಸರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಶಿಶು ಮರಣ ಸಂಭವಿಸಿರುವುದು ಆರೋಗ್ಯ ಅಧಿಕಾರಿಗಳ ಕಳವಳಕ್ಕೆ ಕಾರಣವಾಗಿದೆ.

ನವಜಾತ ಶಿಶು ಮರಣ ಪ್ರಮಾಣ ಇಳಿಕೆಯಾಗುತ್ತಿರುವುದು ಸಂತೋಷದ ಸಂಗತಿಯೇ ಆದರೂ, ಇನ್ನೂ ಕೆಲವು ಗಂಭೀರ ಸವಾಲುಗಳು ಎದುರಲ್ಲಿವೆ. ವಿಶೇಷವಾಗಿ ಗಡಿಭಾಗ ಹಾಗೂ ದೂರದ ಗ್ರಾಮೀಣ ಪ್ರದೇಶಗಳಲ್ಲಿ ಸಮರ್ಪಕ ಆರೋಗ್ಯ ಸೌಲಭ್ಯಗಳ ಕೊರತೆ ಕಂಡು ಬರುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಾವಸ್ಥೆ,

ಅಗತ್ಯ ವೈದ್ಯಕೀಯ ಸಾಧನಗಳ ಅಭಾವ ಹಾಗೂ ತುರ್ತು ಸೇವೆಗಳ ಲಭ್ಯತೆ ಇಲ್ಲದಿರುವುದು ತಾಯಿ ಮತ್ತು ನವಜಾತ ಶಿಶುಗಳ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುತ್ತಿದೆ ಎನ್ನುವ ಮಾತುಗಳನ್ನು ಅಧಿಕಾರಿಗಳೇ ಹೇಳಿದ್ದಾರೆ.

ಇದಲ್ಲದೆ, ಗರ್ಭಿಣಿಯರು ಮತ್ತು ತಾಯಂದಿರಲ್ಲಿ ಪೌಷ್ಟಿಕಾಹಾರ ಕೊರತೆ ಪ್ರಮುಖ ಸಮಸ್ಯೆಯಾಗಿ ಉಳಿದಿದೆ. ಪೌಷ್ಟಿಕಾಂಶಗಳ ಕೊರತೆಯಿಂದ ಕಡಿಮೆ ತೂಕದ ಶಿಶು ಜನನ, ಅನಾರೋಗ್ಯ ಹಾಗೂ ಗಂಭೀರ ಆರೋಗ್ಯ ಸಮಸ್ಯೆಗಳು ಕಾಡುವ ಸಾಧ್ಯತೆ ಇದೆ. ಈ ಅಂಕಿ-ಅಂಶಗಳು ಒಟ್ಟಾರೆಯಾಗಿ ರಾಜ್ಯದಲ್ಲಿ ನವಜಾತ ಶಿಶು ಮರಣ ದರ ಇಳಿಕೆ ಕಂಡುಬಂದಿರುವುದು ಆರೋಗ್ಯ ಇಲಾಖೆಯ ಸಾಧನೆಯನ್ನು ಪ್ರತಿಬಿಂ ಬಿಸುತ್ತಿದ್ದರೂ, ಕೆಲ ಜಿಲ್ಲೆಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣ ದಾಖಲಾಗುತ್ತಿರುವುದು ಮುಂದಿನ ದಿನಗಳಲ್ಲಿ ಗುರಿನಿರ್ದಿಷ್ಟ ಹಾಗೂ ತೀವ್ರ ಕ್ರಮಗಳ ಅಗತ್ಯವಿರುವುದನ್ನು ಸ್ಪಷ್ಟಪಡಿಸುತ್ತದೆ.

ಇಳಿಕೆಗೆ ಕಾರಣವಾದ ಪ್ರಮುಖ ಕ್ರಮಗಳು

- ಹೆರಿಗೆ ಪೂರ್ವ ಹಾಗೂ ನಂತರದ ಬಾಣಂತಿ ಆರೈಕೆ ಬಲವರ್ಧನೆ
- ವಿಶೇಷ ನವಜಾತ ಶಿಶು ಆರೈಕೆ ಘಟಕಗಳ ವಿಸ್ತರಣೆ
- ಜಿಲ್ಲಾ ಆಸ್ಪತ್ರೆಗಳಲ್ಲಿ ಸೌಲಭ್ಯಗಳ ಹೆಚ್ಚಳ.
- ತುರ್ತು ಚಿಕಿತ್ಸಾ ವ್ಯವಸ್ಥೆ
- ಪೌಷ್ಟಿಕತೆ ಮತ್ತು ಜಾಗೃತಿ

ಹೆಚ್ಚು ನವಜಾತ ಶಿಶು ಮರಣ ದರ ದಾಖಲು ಜಿಲ್ಲೆಗಳು
2024-25(ಡಿಸೆಂಬರ್‌ವರೆಗೆ) ಪ್ರತಿ ಸಾವಿರಕ್ಕೆ
ಮೈಸೂರು (15), ಬಳ್ಳಾರಿ (14)
ಧಾರವಾಡ (13), ಕೊಪ್ಪಳ (12)
ದಾವಣಗೆರೆ (11)

ಕಡಿಮೆ ನವಜಾತ ಶಿಶು ಮರಣ ದರ ದಾಖಲು ಜಿಲ್ಲೆಗಳು
2024-25(ಡಿಸೆಂಬರ್ ವರೆಗೆ) ಪ್ರತಿ ಸಾವಿರಕ್ಕೆ
ಚಿಕ್ಕಮಗಳೂರು (1), ರಾಮನಗರ (1)
ವಿಜಯನಗರ (1), ಬೆಂಗಳೂರು (ಗ್ರಾ) (2)
ಬಾಗಲಕೋಟ (3)

ತಾಯಿಯ ಗರ್ಭದಲ್ಲಿ ಗರ್ಭಾಂಕುರವಾದ ಪ್ರತಿಯೊಂದು ಮಗು ಸುರಕ್ಷಿತವಾಗಿ ಭೂಮಿಗೆ ಜನ್ಮ ತಾಳಿ ಆರೋಗ್ಯಪೂರ್ಣವಾಗಿ ಬದುಕಬೇಕು ಎಂಬುದು ನಮ್ಮ ಪ್ರಮುಖ ಆಶಯ. ನವಜಾತ ಶಿಶು ಮರಣವನ್ನು ಶೂನ್ಯ ಮಟ್ಟಕ್ಕೆ ತರುವುದು ನಮ್ಮ ದೀರ್ಘಕಾಲದ ಗುರಿಯಾಗಿದೆ. ರಾಜ್ಯ ಸರಕಾರ, ಆರೋಗ್ಯ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತವಾಗಿ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರಿಂದ ಇಳಿಕೆ ಕಂಡುಬಂದಿದೆ.
-ಶಶಿಧರ್ ಕೋಸಂಬೆ ಅಧ್ಯಕ್ಷ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ವರ್ಷಗಳು	ಜೀವಂತ ಜನನಗಳು	ನವಜಾತ ಶಿಶು ಮರಣಗಳು	ನವಜಾತ ಶಿಶು ಮರಣದರ
2022-23	8,64,188	7,471	9
2023-24	8,13,327	5,634	7
2024-25	7,93,818	5,826	7

ಸ್ನೇಹಮಯಿ ಕೃಷ್ಣ ದಿಢೀರ್ ಬಂಧನ

← ಮೊದಲ ಪುಟದಿಂದ

ಈ ನಡುವೆ ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಮಾಹಿತಿ ಹಂಚಿಕೊಂಡ ಆರೋಪದಲ್ಲಿ ನಟೇಶ್ ಅವರು ನೀಡಿದ ದೂರಿನ ಅನ್ವಯ ಸ್ನೇಹ ಮಯಿ ಕೃಷ್ಣ ಅವರ ಬಂಧನವಾಗಿದೆ.

ಕೆಎಎಸ್ ಅಧಿಕಾರಿ ದೂರು: ನನ್ನ ಫೋಟೋ, ನಕಲಿ ಆಡಿಯೋ ಹಾಗೂ ದಾಖಲೆ ಸೃಷ್ಟಿಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ತಮ್ಮ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ ಈ ಮೂಲಕ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಸ್ನೇಹಮಯಿ ಕೃಷ್ಣ ವಿರುದ್ಧ ಡಿ.ಬಿ.ನಟೇಶ್ ಅವರು ದೂರು ನೀಡಿದ್ದರು.

ನಟೇಶ್ ಅವರ ದೂರಿನಂತೆ, ಪ್ರಕರಣ ದಾಖಲಿಸಿಕೊಂಡ ಸಿಸಿಬಿ ಸೈಬರ್ ಕ್ರೈಂ ಪೊಲೀಸರು ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಬಳಿ ಸ್ನೇಹಮಯಿ ಕೃಷ್ಣ ಅವರನ್ನು ಬಂಧಿಸಿ, ಹೆಚ್ಚಿನ ವಿಚಾರಣೆಗೊಳಪಡಿಸಿದ್ದಾರೆ. ಅಲ್ಲದೇ, ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ನ್ಯಾಯಾಲಯದಿಂದ ಶೋಧನಾ ವಾರಂಟ್ ಪಡೆದು, ಮೈಸೂರಿನ ಗೌರಿಶಂಕರನ ಗರದಲ್ಲಿರುವ ಸ್ನೇಹಮಯಿ ಕೃಷ್ಣ ಅವರ ನಿವಾಸ ಹಾಗೂ ಕಚೇರಿ ಮೇಲೆ ದಾಳಿ ಮಾಡಿ ಶೋಧ ನಡೆಸಲಾಗುತ್ತಿದೆ. ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಿದ ಧ್ವನಿ ತುಣುಕುಗಳು ಸೇರಿದಂತೆ ಸಾಕ್ಷ್ಯಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಕಲಿ ದಾಖಲೆಗಳು ಮತ್ತು ನಕಲಿ ಧ್ವನಿ ತುಣುಕುಗಳನ್ನು ಬಳಸಿಕೊಂಡು ಸಾಮಾಜಿಕ ಮಾಧ್ಯಮದಲ್ಲಿ ಸುಳ್ಳು ಸುದ್ದಿಗಳನ್ನು ಪ್ರಸಾರ ಮಾಡಿದ ಆರೋಪದ ಮೇಲೆ ಸ್ನೇಹಮಯಿ ಕೃಷ್ಣ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಹಿರಿಯ ಕೆಎಎಸ್ ಅಧಿಕಾರಿ ಡಿ.ಬಿ.ನಟೇಶ್ ನೀಡಿದ ದೂರಿನ ಆಧಾರದ ಮೇಲೆ ಫೆಬ್ರವರಿ 18ರಂದು ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಲಾಗಿದೆ ಎಂದು ಬೆಂಗಳೂರು ನಗರ ಸೈಬರ್ ಅಪರಾಧ ವಿಭಾಗದ ಪ್ರಕಟಣೆ ತಿಳಿಸಿದೆ.ಈ ಬಗ್ಗೆ ಪ್ರತಿಕ್ರಿಯಿಸಿರುವ ಸ್ನೇಹಮಯಿ ಕೃಷ್ಣ ಪುತ್ರ ವಿವೇಕ್, 'ಮುಡಾ ಹಗರಣದಲ್ಲಿ ರಾಜ್ಯದ ಪ್ರಭಾವಿ ನಾಯಕರ ಹೆಸರುಗಳು ಕೇಳಿಬರುತ್ತಿವೆ. ನನ್ನ ತಂದೆ ಯಾವುದೇ ಆಮಿಷಕ್ಕೆ ಬಗ್ಗದೆ ಸತತವಾಗಿ ಹೋರಾಟ ಮಾಡುತ್ತಿದ್ದಾರೆ. ಹೀಗಾಗಿಯೇ ಅವರನ್ನು ಹತ್ತಿಕ್ಕಲು ಸರಕಾರ ಈ ತಂತ್ರ ಹೂಡಿದೆ. ನನ್ನ ತಂದೆಯ ಜೀವಕ್ಕೆ ಏನಾದರೂ ತೊಂದರೆಯಾದರೆ ಅದಕ್ಕೆ ಈ ಸರಕಾರ ಮತ್ತು ಸಿಸಿಬಿ ಅಧಿಕಾರಿಗಳೇ ಜವಾಬ್ದಾರರು'' ಎಂದು ಎಚ್ಚರಿಕೆ ನೀಡಿದ್ದಾರೆ.

ಸಿಎಂ ವಿರುದ್ಧವೂ ಆರೋಪ

ಈ ಹಿಂದೆ ಮುಡಾದಲ್ಲಿ ನಡೆದಿದೆ ಎನ್ನಲಾದ ನಿವೇಶನ ಹಂಚಿಕೆ ಹಗರಣ ಆರೋಪ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ಸ್ನೇಹಮಯಿ ಕೃಷ್ಣ ಲೋಕಾಯುಕ್ತ ಹಾಗೂ ಜಾರಿ ನಿರ್ದೇಶನಾಲಯಕ್ಕೆ ದೂರು ನೀಡಿದ್ದರು. ಸಿದ್ದರಾಮಯ್ಯ ಮತ್ತು ಅವರ ಕುಟುಂಬಸ್ಥರು ಮುಡಾದಿಂದ 14 ನಿವೇಶನಗಳನ್ನು ಅಕ್ರಮವಾಗಿ ವಶಪಡಿಸಿಕೊಂಡಿದ್ದಾರೆ ಎಂದು ಆರೋಪಿಸಿದ್ದರು. ಆ ಬಳಿಕ ಅವರು ರಾಜ್ಯದಲ್ಲಿ ಹೆಚ್ಚು ಮುನ್ನೆಲೆಗೆ ಬಂದರು. ಆದಾಗ್ಯೂ, ಹಗರಣದ ಬಗ್ಗೆ ಲೋಕಾಯುಕ್ತ ತನಿಖೆಯ ಆಧಾರದ ಮೇಲೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಸಿಎಂ ಮತ್ತು ಅವರ ಕುಟುಂಬ ಸದಸ್ಯರನ್ನು ಆರೋಪಗಳಿಂದ ಮುಕ್ತಗೊಳಿಸಿತು.

ನಕಲಿ ಆಡಿಯೋ ಹಾಗೂ ದಾಖಲಾತಿ ಸೃಷ್ಟಿಸಿದ ಆರೋಪ ಪ್ರಕರಣ ಸಂಬಂಧ ನಟೇಶ್ ಅವರು ಫೆ.18ರಂದು ನೀಡಿದ ದೂರಿನ ಅನ್ವಯ ಸ್ನೇಹಮಯಿ ಕೃಷ್ಣ ಅವರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಬಳಿಕ ಕೋರ್ಟ್‌ಗೆ ಹಾಜರುಪಡಿಸಲಾಗುವುದು. ನ್ಯಾಯಾಲಯದ ಅನುಮತಿ ಪಡೆದು ಸರ್ಚ್ ವಾರಂಟ್ ಪಡೆದು ಆರೋಪಿ ನಿವಾಸ ಮೇಲೆ ತಪಾಸಣೆ ಕೈಗೊಳ್ಳಲಾಗಿದೆ.
ರಾಜ ಇಮಾಮ್ ಖಾಸಿಂ, ಡಿಸಿಪಿ, ಸಿಸಿಬಿ

ಬಾಗಲಕೋಟೆಯಲ್ಲಿ ಕೋಮುದಳ್ಳುರಿ

← ಮೊದಲ ಪುಟದಿಂದ

ಇದರ ಬೆನ್ನಲ್ಲೇ ರಾತ್ರಿ, ಹಳೇ ತರಕಾರಿ ಮಾರುಕಟ್ಟೆಯಲ್ಲಿರುವ ಒತ್ತು ಗಾಡಿಗಳಿಗೆ ಬೆಂಕಿ ಹಚ್ಚಿದ ಪ್ರಕರಣವು ಜರುಗಿತು. ಪೊಲೀಸರು ಕಿಡಿಗೇಡಿಗಳ ಯತ್ನ ವಿಫಲ ಗೊಳಿಸಿದರೂ ಕಲ್ಲು ತೂರಾಟ ವಿರೋಧಿಸಿ ಯುವ ಕರು ರಸ್ತೆ ಮಧ್ಯೆ ಕುಳಿತು ಪ್ರತಿಭಟನೆ ನಡೆಸಿದರು. ಕಲ್ಲೆಸದ ವರನ್ನು ಬಂಧಿಸಬೇಕು. ಐಜಿಪಿ ಸ್ಥಳಕ್ಕೆ ಬರಬೇಕು. ಇಲ್ಲದಿದ್ದರೆ ಬಾಗಲಕೋಟೆ ಬಂದ್‌ಗೆ ಕರೆ ನೀಡುತ್ತೇವೆ ಎಂದು ಹಿಂದೂ ಕಾರ್ಯಕರ್ತರು ಆಗ್ರಹಿಸಿದರು. ಪೊಲೀಸರು ಅವರ ಮನವೊಲಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಮರು ಕಳಿಸಿದ ಕಲ್ಲುತೂರಾಟ, ಲಾಠಿಪ್ರಹಾರ: ಶುಕ್ರವಾರ ಕಲ್ಲು ತೂರಾಟ ಖಂಡಿಸಿ ಕೊತ್ತಲೇಶ್ವರ ದೇವಸ್ಥಾನದಲ್ಲಿ ಹಿಂದೂ ಸಂಘಟನೆಗಳ ಕಾರ್ಯಕರ್ತರು ಸಭೆ ನಡೆಸಿ ಕಲ್ಲೆಸೆದ ಇನ್ನಷ್ಟು ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿ ದರು. ಕೆಲವು ಕಾರ್ಯಕರ್ತರು ಅಂಗಡಿ ಮುಂಗಟ್ಟು ಗಳನ್ನು ಬಂದ್ ಮಾಡಿಸಲು ಮುಂದಾದಾಗ ಪೊಲೀಸರು ತಡೆದಿದ್ದಾರೆ. ಪೊಲೀಸರ ಜೊತೆ ವಾಗ್ವಾದ ನಡೆಯುವ ಸಂದರ್ಭದಲ್ಲೇ ಉದ್ರಿಕ್ತರು ಕೆಲ ಮನೆಗಳ ಮೇಲೆ ಕಲ್ಲು ತೂರಾಟ ಮಾಡಿದ್ದಾರೆ.

ಮೀನು ಮಾರುಕಟ್ಟೆ, ತರಕಾರಿ ಮಾರುಕಟ್ಟೆಯಲ್ಲಿ ರುವ ಅಂಗಡಿಗಳ ಮೇಲೆ ಕಲ್ಲು ತೂರಾಟ ನಡೆದಿದೆ. ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ, ಉದ್ರಿಕ್ತ ರನ್ನು ಚದುರಿಸಿದ್ದು ಪರಿಸ್ಥಿತಿ ನಿಯಂತ್ರಿಸಿದ್ದಾರೆ. ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆ ಪೊಲೀಸ್ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿದೆ. ಹಳೆ ಬಾಗಲಕೋಟೆ, ನವನಗರ, ವಿದ್ಯಾಗಿರಿ ಮೂರು ಕಡೆ ಬಿಎನ್‌ಎಸ್ ಕಾಯ್ದೆ 163ರಡಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಎಸ್‌ಪಿ ಮೇಲೆ ಕಲ್ಲು : ಘಟನೆ ಕುರಿತು ಮಾತನಾಡಿರುವ ಬಾಗಲಕೋಟೆ ಎಸ್‌ಪಿ ಸಿದ್ದಾರ್ಥ ಗೋಯೆಲ್, ಶಿವಾಜಿ ಜಯಂತಿ ಮೆರವಣಿಗೆ ವೇಳೆ ಮಸೀದಿ ಕಡೆ ಬಂದಾಗ ಎರಡು ಕಲ್ಲು ಬಿದ್ದಿದೆ. ಅದು ಪೊಲೀಸರಿಗೆ ಮಾತ್ರ ಬಿದ್ದಿದೆ. ಸಾರ್ವಜನಿಕರಿಗೆ ಬಿದ್ದಿಲ್ಲ. ಕಲ್ಲು ತೂರಾಟವಾದ ವೇಳೆ ಶೋಭಾಯಾತ್ರೆ ಬರುತ್ತಿರಲಿಲ್ಲ. ಪೊಲೀಸರ ಮೇಲೆ ಎರಡು ಹಾಗೂ ನನ್ನ ಭುಜಕ್ಕೆ ಒಂದು ಕಲ್ಲು ಬಿದ್ದಿದೆ. ಸದ್ಯ ಪರಿಸ್ಥಿತಿ ತಿಳಿಯಾಗಿದೆ. ಇದು ಪೂರ್ವ ನಿಯೋಜಿತ ಕೃತ್ಯ ಅಲ್ಲ. ಶಾಂತಿ ಕದಡಿದವರು ಯಾರೇ ಇದ್ದರೂ ಕ್ರಮ ಜರುಗಿಸ್ತೇವೆ ಎಂದು ತಿಳಿಸಿದ್ದಾರೆ.

ಕೆಲವು ದೇಶದ್ರೋಹಿಗಳು ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಈಗಾಗಲೇ ಪೊಲೀಸರಿಗೆ ಅವರನ್ನು ಬಂಧಿಸಿದ್ದಾರೆ. ಇಂತಹ ಕೃತ್ಯಗಳು ಟಿಪ್ಪು ಮತ್ತು ಔರಂಗಜೇಬನ ಮನಸ್ಥಿತಿಯನ್ನು ಬಿಂಬಿಸುತ್ತವೆ. ಇಂತಹ ದೇಶದ್ರೋಹಿಗಳನ್ನು ಕ್ಷಮಿಸಬಾರದು. ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು.
- ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಹಿಂದೂ ವಿರೋಧಿ ಕಾಂಗ್ರೆಸ್ ಸರಕಾರದ ಆಡಳಿತದಲ್ಲಿ ಹಿಂದೂ ಧಾರ್ಮಿಕ ಆಚರಣೆಗಳಿಗೆ ನಿಷೇಧ ಹೇರಲಾಗಿದೆಯೇ? ಗಣೇಶ, ನವರಾತ್ರಿ ಮೆರವಣಿಗೆ, ಹನುಮ, ಅಯ್ಯಪ್ಪ ಮಾಲಾಧಾರಿಗಳ ಮೇಲೆ ಕಲ್ಲುತೂರಾಟ, ಓಂ ಶಕ್ತಿ ಪೀಠದ ಪಲ್ಲಕ್ಕಿ ಮೆರವಣಿಗೆ ಮೇಲೂ ಕಲ್ಲೆಸೆತ; ಈಗ ಬಾಗಲಕೋಟೆಯಲ್ಲಿ ಶಿವಾಜಿ ಮೆರವಣಿಗೆಯಲ್ಲೂ ಮತಾಂಧ ಪುಂಡರು ಕಲ್ಲೆಸೆದಿದ್ದಾರೆ. ಸರಕಾರ ತನ್ನ ಅಧೀನದಲ್ಲಿ ಕಲ್ಲೆಸೆಯುವ ಇಲಾಖೆ ತೆರೆದು ಅದರ ಮೂಲಕ ಮತಾಂಧ ಪುಡಾರಿಗಳಿಗೆ ಗೌರವಧನ ನೀಡುತ್ತಿದೆಯೇ?
- ಆರ್.ಅಶೋಕ್, ಪ್ರತಿಪಕ್ಷ ನಾಯಕ

ಶಿವಾಜಿ ಮಹಾರಾಜರ ಭಾವಚಿತ್ರ ಮೆರವಣಿಗೆ ವೇಳೆ ಜರುಗಿದ ದುಷ್ಕೃತ್ಯ ನಡೆಸಿದ ನವನಗರ ನಿವಾಸಿ ತನ್ವೀರ ಶಕೀಲ್ ಹವಲ್ದಾರ ಸೇರಿ 8 ಜನರನ್ನು ಬಂಧಿಸಿ ತನಿಖೆ ನಡೆಸುತ್ತಿದ್ದು ನಗರದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಫೆ.24 ರವರಗೆ 144 ಕಲಂ ನಿಷೇದಾಜ್ಞೆ ಜಾರಿಗೆ ತಂದಿದ್ದು ಪೊಲೀಸ್ ಬೀಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದ್ದು ಸಾರ್ವಜನಿಕರು ಶಾಂತಿಯುತವಾಗಿ ಇರಬೇಕು.
-ಸಿದ್ದಾರ್ಥ ಗೋಯಲ್, ಜಿಲ್ಲಾ ಪೊಲಿಸ್ ವರಿಷ್ಠಾಧಿಕಾರಿ ಬಾಗಲಕೋಟೆ

ರಾಜ್ಯಕ್ಕೆ ಕರೆಂಟ್ ಶಾಕ್

← ಮೊದಲ ಪುಟದಿಂದ

ಪ್ರತಿ ಯುನಿಟ್‌ಗೆ ಸರಾಸರಿ 12 ರಿಂದ 15 ಪೈಸೆ ಏರಿಕೆಯಾಗಬಹುದು. ರಾಜ್ಯದ ಐದು ಎಸ್ಕಾಂಗಳು 2026-27ಕ್ಕೆ ಸರಾಸರಿ 64 ಪೈಸೆಯಷ್ಟು ದರ ಏರಿಸಲು ಪ್ರಸ್ತಾವನೆ ಮುಂದಿಟ್ಟಿವೆ. ಆದರೆ ಕೆಲವು ವರ್ಗಗಳಲ್ಲಿ ಇದು 67ರಿಂದ 99 ಪೈಸೆಗಳವರೆಗೆ ಏರಿಕೆಯಾಗಬಹುದು ಎಂದು ಸೂಚನೆಗಳಿವೆ. ದಿನಬಳಕೆ ವಿದ್ಯುತ್ ಬಳಕೆಯಲ್ಲಿ ಸ್ವಲ್ಪ ಏರಿಕೆಯಾಗಬಹುದು. ಕೈಗಾರಿಕಾ ಮತ್ತು ವಾಣಿಜ್ಯ ವಲಯದಲ್ಲಿ ಬಳಸುವ ವಿದ್ಯುತ್ ದರದಲ್ಲೂ ಹೆಚ್ಚಳ ಸಾಧ್ಯತೆ ಇದೆ. ಕೆಲವು ವರ್ಗಗಳಲ್ಲಿ ಇದು ಇನ್ನೂ ಹೆಚ್ಚಾಗಬಹುದು. ಫಿಕ್ಸೆಡ್ ಚಾರ್ಜ್‌ನಲ್ಲೂ 10 ರಿಂದ 20 ರು.ವರೆಗೆ ಏರಿಕೆ ಸಾಧ್ಯತೆ ಇದೆ.ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಆದಾಯ ಕೊರತೆಯನ್ನು ಎದುರಿಸುತ್ತಿವೆ. ರಾಜ್ಯದ ಎಲ್ಲಾ ಎಸ್ಕಾಂಗಳು ಸೇರಿ ಅಂದಾಜು 4,500 ಕೋಟಿ ರು. ನಷ್ಟದಲ್ಲಿವೆ. ಇದರಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಒಂದರಲ್ಲೆ 2024-25ನೇ ಸಾಲಿನಲ್ಲಿ ಬರೋಬ್ಬರಿ 2,800 ಕೋಟಿಗೂ ಹೆಚ್ಚು ನಷ್ಟ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಕಂಪನಿಗಳು ದರ ಏರಿಕೆಗೆ ಪಟ್ಟು ಹಿಡಿದಿವೆ.

ನೈತಿಕ ಪೊಲೀಸ್‌ಗಿರಿ: ಅನ್ಯಕೋಮಿನ ನಾಲ್ವರ ಸೆರೆ



ಚಿಕ್ಕಮಗಳೂರು: ಸ್ನೇಹಿತೆ ಜತೆಗಿದ್ದ ಅಪ್ರಾಪ್ತನ ಮೇಲೆ ಅನ್ಯಕೋಮಿನ ಯುವಕರು ನೈತಿಕ ಪೊಲೀಸ್‌ಗಿರಿ ನಡೆಸಿರುವ ಪ್ರಕರಣ ಚಿಕ್ಕಮಗಳೂರು ನಗರದ ಸಂತೇ ಮೈದಾನದಲ್ಲಿ ನಡೆದಿದೆ.

ದಲಿತ ಬಾಲಕನ ಜತೆ ಮುಸ್ಲಿಂ ಹುಡುಗಿ ಇದ್ದಿದ್ದಕ್ಕೆ ಅನ್ಯಕೋಮಿನ ಯುವಕರು ಬೆದರಿಕೆ ಹಾಕಿ, ಹಲ್ಲೆ ಮಾಡಿದ್ದಾರೆ. ಈ ವೇಳೆ ಬಾಲಕಿ ಅಲ್ಲಿಂದ ಪರಾರಿಯಾಗಿದ್ದಾಳೆ. ಬಾಲಕ ಹಾಗೂ ಬಾಲಕಿ ಇಬ್ಬರೂ ಪರಿಚಿತರು. ಅಲ್ಲದೇ ಎರಡೂ ಕುಟುಂಬದವರೂ ಪರಿಚಯಸ್ಥರು ಎನ್ನಲಾಗಿದೆ. ನಗರ ಠಾಣೆಯಲ್ಲಿ ಹಲ್ಲೆಗೈದ 8 ಜನರ ಮೇಲೆ ಅಟ್ರಾಸಿಟಿ ಕೇಸ್ ದಾಖಲಾಗಿದೆ. 8 ಜನರಲ್ಲಿ ನಾಲ್ವರನ್ನು ಬಂಧಿಸಲಾಗಿದ್ದು, ಬಂಧಿತರನ್ನು ನಯಾಜ್, ತಬ್ರೀಜ್ ಮತ್ತು ಹನೀಫ್ ಎಂದು ಗುರುತಿಸಲಾಗಿದೆ. ಉಳಿದ ನಾಲ್ವರಿಗಾಗಿ ಶೋಧ ನಡೆಸಲಾಗುತ್ತಿದೆ.ಈ ಬಗ್ಗೆ ಪ್ರತಿಕ್ರಿಯಿಸಿರುವ ಬಾಲಕನ ತಾಯಿ, ಆ ಹುಡುಗಿ ನಮಗೆ ಗೊತ್ತು, ನಮ್ಮ ಮನೆಗೆ ಬರುತ್ತಿದ್ದಳು. ಹುಷಾರಿಲ್ಲ ಎಂದು ಅವಳು ಹೇಳಿದ್ದಕ್ಕೆ ಆಕೆಯನ್ನು ಮನೆಗೆ ಬಿಡಲು ನಮ್ಮ ಮಗ ಹೋಗಿದ್ದ. ಆಗ ರಸ್ತೆ ಮಧ್ಯೆ 30 ಜನ ಅಡ್ಡ ಹಾಕಿ ಪ್ರಶ್ನೆ ಮಾಡಿದ್ದಾರೆ. ರಸ್ತೆಯಲ್ಲಿ ಬೇಡ ಅಂತ ನಾನೇ ಮಾತನಾಡೋದಕ್ಕೆ ಮನೆಗೆ ಕರೆತಂದೆ. ಆಗ ಮನೆ ಬಳಿ 60 ಜನ ಹುಡುಗರು ಬಂದಿದ್ದರು. ಅವರಲ್ಲಿ 2-3 ಜನ ನನ್ನ ಮಗನ ಮೇಲೆ ಹಲ್ಲೆ ಮಾಡಿದ್ದರು. ಹಿಂದೂ ಹುಡುಗ ಮುಸ್ಲಿಂ ಹುಡುಗಿಯನ್ನು ಬೈಕ್‌ನಲ್ಲಿ ಡ್ರಾಪ್ ಮಾಡಿದ್ದೆ ಇಷ್ಟಕ್ಕೆಲ್ಲಾ ಕಾರಣ ಎಂದು ಆರೋಪಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಎಸ್‌ಪಿ, ನೈತಿಕ ಪೊಲೀಸ್‌ಗಿರಿಸಹಿಸಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ನಂದಿನಿ ಉತ್ಪನ್ನ ನಕಲು ತಡೆಗೆ ಕ್ಯೂಆರ್ ಕೋಡ್ ಬಳಕೆ

ಬೆಂಗಳೂರು: ನಕಲಿ ನಂದಿನಿ ಉತ್ಪನ್ನಗಳ ಹಾವಳಿಯನ್ನು ತಡೆಯಲು, ಉತ್ಪನ್ನಗಳ ಶ್ರೇಷ್ಠತೆ ಕಾಪಾಡುವ ಸಲುವಾಗಿ ಕೆಎಂಎಫ್ ಮಹತ್ವದ ಹೆಜ್ಜೆಯಿಟ್ಟಿದೆ.ನಂದಿನಿ ರಾಜ್ಯ ಮಾತ್ರ ಅಲ್ಲದೇ, ವಿದೇಶಗಳಲ್ಲೂ ತನ್ನ ಗುಣಮಟ್ಟದಿಂದ ಜನರ ಮನಗೆದ್ದಿದ್ದು, ಕಳೆದ ಕೆಲ ದಿನಗಳ ಹಿಂದೆ ನಂದಿನಿ ಬ್ರ್ಯಾಂಡ್ ಹೆಸರಲ್ಲಿ ನಕಲಿ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಸದ್ದು ಮಾಡಿದ್ದವು. ಕೊನೆಗೆ ಕೆಎಂಎಫ್ ಅಧಿಕಾರಿಗಳೇ ಪೊಲೀಸರೊಂದಿಗೆ ಇವುಗಳ ಪತ್ತೆ ಕೂಡ ಮಾಡಿದ್ದರು. ಇದರ ಬೆನ್ನಲ್ಲೇ ಮತ್ತಷ್ಟು ಜಾಗೃತಗೊಂಡಿರುವ ಕೆಎಂಎಫ್ ಉತ್ಪನ್ನದ ಮತ್ತಷ್ಟು ಸುರಕ್ಷತೆಗೆ ಹೊಸ ಕ್ರಮಕ್ಕೆ ಮುಂದಾಗಿದೆ.

ಕೆಎಂಎಫ್ ಸದ್ಯ ನಂದಿನಿ ಉತ್ಪನ್ನಗಳ ಪ್ಯಾಕೆಟ್ ಮೇಲೆ ಕ್ಯೂಆರ್ ಕೋಡ್ ಅಳವಡಿಕೆ ಮೂಲಕ ಬ್ರ್ಯಾಂಡ್ ಶ್ರೇಣಿ ಕಾಪಾಡುವ ಜತೆಗೆ ನಕಲಿ ಉತ್ಪನ್ನಗಳ ಹಾವಳಿಗೂ ತಡೆಯೊಡ್ಡಲು ಮುಂದಾಗಿದೆ. ಆರಂಭಿಕವಾಗಿ ತುಪ್ಪದ ಪ್ಯಾಕೆಟ್ ಮತ್ತು ಬಾಟಲ್‌ಗಳ ಮೇಲೆ ಈ ಕೋಡ್ ಅಳವಡಿಕೆ ಮಾಡಲಾಗಿದ್ದು, ತುಪ್ಪದ ಗುಣಮಟ್ಟ ಅಥವಾ ಅಸಲಿತನವನ್ನು ಪರೀಕ್ಷಿಸಲು ನೇರವಾಗಿ ಕೋಡ್‌ನ್ನು ಒಮ್ಮೆ ಸ್ಕ್ಯಾನ್ ಮಾಡಿ, ನಂಬರ್ ಹಾಕಿದರೆ ಒಟಿಪಿ ಬರಲಿದೆ. ಇದನ್ನ ಎಂಟರ್ ಮಾಡಿದ ಕೂಡಲೇ ಆ ತುಪ್ಪದ ಸಂಪೂರ್ಣ ಮಾಹಿತಿ ನಿಮ್ಮ ಫೋನ್‌ನಲ್ಲಿ ದೊರೆಯಲಿದೆ. ಎಲ್ಲಿ ತಯಾರಾಗಿದೆ. ಯಾವಾಗ ತಯಾರಿಕಾ ಜಾಗದಿಂದ ಮಾರುಕಟ್ಟೆಗೆ ಬಂದಿದೆ. ಅದರ ಮಾರ್ಕೆಟ್ ಕೋಡ್ ಏನು? ಈ ಎಲ್ಲಾ ಅಂಶಗಳು ಈ ಕ್ಯೂಆರ್ ಕೋಡ್ ಒಳಗೊಳ್ಳಲಿದೆ. ಈ ಹೊಸ ಕ್ರಮ ತುಪ್ಪದ ಪ್ಯಾಕೆಟ್ ಮೇಲೆ ಮಾತ್ರ ಜಾರಿಗೆ ಬಂದಿದ್ದು, ಹಂತ ಹಂತವಾಗಿ ಇತರ ಉತ್ಪನ್ನಗಳ ಮೇಲೆಯೂ ಹಾಕಲು ಕೆಎಂಎಫ್ ಚಿಂತನೆ ನಡೆಸಿದೆ.

ನಕಲಿ ತುಪ್ಪ ತಡೆಗೆ ಈ ಯೋಜನೆ ಸಹಕಾರಿಯಾಗಲಿದೆ. ಇದನ್ನು ನಕಲು ಮಾಡಲು ಪ್ರಯತ್ನ ಮಾಡಿದರು ಪತ್ತೆ ಹಚ್ಚಲು ಸಹಕಾರಿಯಾಗಲಿದೆ
-ಶಿವಸ್ವಾಮಿ. ವ್ಯವಸ್ಥಾಪಕ ನಿರ್ದೇಶಕ ಕೆಎಂಎಫ್

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810
ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:34/2025-26 ದಿ:16.02.2026
ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಈ ವಿಭಾಗದಡಿಯಲ್ಲಿನ ನಂ.2 ವಿಶೇಷ ಉಪ ವಿಭಾಗ, ಮೈಸೂರು ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ-8443 ಠೇವಣಿ ವಂತಿಕೆ ಅಡಿಯಲ್ಲಿ ಅನುಮೋದನೆಯಾದ "ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ವರುಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತಗಡೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡ ನಿರ್ಮಾಣ ಕಾಮಗಾರಿಗೆ" ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ 1ನೇ ದರ್ಜೆ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ (viz https://kppp.karnataka.gov.in/) ಭಾಗವಹಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗೆ ದಿ:17.02.2026 ರಿಂದ 20.03.2026, ರ ಸಂಜೆ 17:00ರ ವರೆಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ. 555.69 ಲಕ್ಷಗಳು ಹಾಗೂ ಇ.ಎಂ.ಡಿ ರೂ.8.34 ಲಕ್ಷಗಳಾಗಿರುತ್ತದೆ, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಮಿತಿ:11 ತಿಂಗಳು(ಮಳೆಗಾಲ ಸೇರಿದಂತೆ). ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.
DIPR/DDMYS/1701/KSMCA/964/2025-26 ಸಹಿ/- ಕಾರ್ಯಪಾಲಕ ಇಂಜಿನಿಯರ್

ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ
ಕೆ.ಆರ್.ಎಸ್.ರಸ್ತೆ, ಮೇಟಗಳ್ಳಿ ಮೈಸೂರು ಜಿಲ್ಲೆ -571311
ಕಛೇರಿ : 0821-2517555, ಇಮೇಲ್: mysoreds@.com
ಸಂ: ಜಿಆ&ಸಾರೋಆಮೈ/ಹೊ.ಗು/ಟೆಂಡರ್/ಗ್ರೂಪ್ ಡಿ ಹಾಗೂ ನಾನ್ ಕ್ಲಿನಿಕಲ್/03/2025-26 ದಿನಾಂಕ: 18.02.2026
ಟೆಂಡರ್ ಅಧಿಸೂಚನೆ
ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ ಮೈಸೂರು ಇಲ್ಲಿಗೆ 2026-27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇರೆಗೆ **15 ಗ್ರೂಪ್ ಡಿ ನೌಕರರ ಸೇವೆಯನ್ನು ಹಾಗೂ 15 ನಾನ್ ಕ್ಲಿನಿಕಲ್ ಸಿಬ್ಬಂದಿಗಳ** ಸೇವೆಯನ್ನು ಪಡೆಯುವ ಸಲುವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿದೆ.
ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್ ನಿಬಂಧನೆಗೊಳಪಟ್ಟು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿ-ಲಕೋಟೆ ಪದ್ದರಿಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ, ಈ ಟೆಂಡರ್ ಪ್ರಕಟಣೆಯು ಕನಿಷ್ಠ ವೇತನ ಕಾಯ್ದೆಯನ್ವಯ 2025-26ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ಕಾರ್ಮಿಕ ವೇತನ ಮತ್ತು ಪಿ.ಎಫ್., ಇ.ಎಸ್.ಐ. ದರಗಳ ವ್ಯಾಪ್ತಿಗೊಳಪಟ್ಟಿದ್ದು, ಮುಂದೆ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಿರುವ ಪರಿಷ್ಕರಣೆ ವ್ಯಾಪ್ತಿಗೆ ಒಳಪಟ್ಟಿರುತ್ತೆ.
ಟೆಂಡರ್ ಪ್ರಕಟಣೆ ವಿವರಗಳು: 1) ಟೆಂಡರ್ ಪ್ರಕಟಣೆ **ದಿನಾಂಕ 18.02.2026** 2) ಆನ್‌ಲೈನ್‌ನಲ್ಲಿ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ **ದಿನಾಂಕ: 18.02.2026,** https://kppp.karnataka.gov.in 3) ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ **ದಿನಾಂಕ: 04.03.2026 ರ ಸಂಜೆ 4:30 ಗಂಟೆಗೆ** 4) ಪೂರ್ವಭಾವಿ ಸಭೆ **ದಿನಾಂಕ: 23.02.2026** 5) ತಾಂತ್ರಿಕ ಲಕೋಟೆಯನ್ನು ತೆರೆಯುವ **ದಿನಾಂಕ: 05.03.2026** 6) ಹಣಕಾಸಿನ ಲಕೋಟೆಯನ್ನು ತೆರೆಯುವ **ದಿನಾಂಕ : 09.03.2026** 7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ರಜಾ ದಿನಗಳನ್ನು ಹೊರತುಪಡಿಸಿ: **ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಮೈಸೂರು.** 8) ಟೆಂಡರ್ ಮೊತ್ತ **ರೂ. 80,59,842/-** 9) EMD amount 2% of the Tender Amount: **ರೂ. 1,61,197/-(ಒಂದು ಲಕ್ಷದ ಅರವತ್ತೊಂದು ಸಾವಿರದ ನೂರ ತೊಂಭತ್ತೇಳು ಮಾತ್ರ).** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಟೆಂಡರು ಪ್ರಕ್ರಿಯೆ ದಿನಾಂಕಗಳು ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https//kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು.
ಸಹಿ/- **ಜಿಲ್ಲಾ ಶಸ್ತ್ರಚಿಕಿತ್ಸಕರು**
DIPR/MYS/1709/SA/2025-26 ಜಿಲ್ಲಾ ಆಸ್ಪತ್ರೆ ಹಾಗೂ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ

ಸಹಾಯಕ ಕೃಷಿ ನಿರ್ದೇಶಕರ ಕಛೇರಿ
ಪೀಡೆನಾಶಕ ಶೇಷಾಂಶ ವಿಶ್ಲೇಷಣೆ ಪ್ರಯೋಗಾಲಯ, ಕೃಷಿ ಸಂಕೀರ್ಣ, ಬನಶಂಕರಿ, ಬೆಂಗಳೂರು-560070, ಇ-ಮೇಲ್ ಐಡಿ: pralbangaluru@gmail.com, ಟೆಲಿಫೋನ್ ನಂ-080-26715332
No:ADA/PRAL/LAB EQUIP/2025-26 ದಿನಾಂಕ: 19.02.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕೃಷಿ ಇಲಾಖೆಯ ಪೀಡೆನಾಶಕ ಶೇಷಾಂಶ ವಿಶ್ಲೇಷಣಾ ಪ್ರಯೋಗಾಲಯದಲ್ಲಿ ಮಾದರಿಗಳ ವಿಶ್ಲೇಷಣೆಗಾಗಿ ವೈಜ್ಞಾನಿಕ ಉಪಕರಣಗಳನ್ನು ಖರೀದಿಸುವ ಸಂಬಂಧ ವಿವಿಧ ಸಂಸ್ಥೆಗಳಿಂದ ಅಲ್ಪಾವಧಿ ಇ-ಟೆಂಡರ್ ಕರೆಯಲಾಗಿದೆ. ಇಚ್ಚೆಯುಳ್ಳ ಟೆಂಡರ್‌ದಾರರು **ದಿನಾಂಕ:-21-02-2026 ರಿಂದ 02-03-2026** ರವರೆಗೆ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯಿದೆ 1999- **The Karnataka Transparency In Public Procurements Act, 1999- (KTPP Act of 1999)** ಅಡಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಪ್ರಕ್ರಿಯೆಯ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ.
ಬಿಡ್‌ದಾರರು ತಾಂತ್ರಿಕ ಮತ್ತು ವಾಣಿಜ್ಯ ಬಿಡ್‌ಗಳನ್ನು **https://kppp.karnataka.gov.in.** ನಿಂದ ಡೌನೋಡ್ ಮಾಡಬಹುದು ಮತ್ತು ಟೆಂಡರ್ ದಾಖಲಾತಿಯು ಸಹ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಸಹಾಯಕ ಕೃಷಿ ನಿರ್ದೇಶಕರು ಪೀಡೆನಾಶಕ ಶೇಷಾಂಶ ವಿಶ್ಲೇಷಣಾ ಪ್ರಯೋಗಾಲಯ, ಬನಶಂಕರಿ, ಬೆಂಗಳೂರು-560070, ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
ಸಹಿ/-ಸಹಾಯಕ ಕೃಷಿ ನಿರ್ದೇಶಕರು,
ಪೀಡೆನಾಶಕ ಶೇಷಾಂಶ ವಿಶ್ಲೇಷಣಾ ಪ್ರಯೋಗಾಲಯ,
ವಾಸಾಸಂಇ/ವಾ.ಪ್ರ/5770/ಎಸ್‌ಎಸ್‌ಸಿ/2025-26 ಬನಶಂಕರಿ, ಬೆಂಗಳೂರು

ಕರ್ನಾಟಕ ಸರ್ಕಾರ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.
ಸಂ:ಕಾಪಾಇಂ/ಪಂರಾಇಂ/ವಿ/ದಾ/ಸ.ಇಂ/ಟೆಂಡರ್/2025-26/2714
ದಿನಾಂಕ:-19/02/2026
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
("ಕೆಪಿಪಿ-ಪ್ರೊಕ್ಯೂರ್‌ಮೆಂಟ್" ಮೂಲಕ)
ಈ ವಿಭಾಗದ 2024-25ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆ ಮತ್ತು ಮಹಾನಗರ ಪಾಲಿಕೆ ಒಗ್ಗೂಡುಸುವಿಕೆ ಅನುದಾನದಡಿ ಮತ್ತು ಇತರೆ ಲೆಕ್ಕ ಶೀರ್ಷಿಕೆ ಯೋಜನೆಯಡಿಲ್ಲಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯುಮಾವಳಿಯು ಮೇರೆಗೆ ಕೆಪಿಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಏಕ & ದ್ವಿ-ಲಕೋಟೆಯಲ್ಲಿ ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆ-2 & 4 ರಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ:2 ಟೆಂಡರ್‌ಗಿಟ್ಟ ಮೊತ್ತ ರೂ.20.11 ಲಕ್ಷಗಳಿಂದ 368.86 ಲಕ್ಷಗಳವರೆಗೆ ಇರುತ್ತವೆ. ಕಾಮಗಾರಿ ಸ್ವರೂಪ ಕಟ್ಟಡ ನಿರ್ಮಾಣ ಮತ್ತು ಚರಂಡಿ ಹಾಗೂ ರಸ್ತೆ ಕಾಮಗಾರಿಗಳು. ಟೆಂಡರ್ ಫಾರಂಗಳನ್ನು ದಿ: 19/02/2026 ರಿಂದ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 02/03/2026 ಸಂಜೆ 4.00 ಗಂಟೆಯುವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192-250156 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ವಾಸಾಇ/ಡಿವಿಜಿ/764/ ಕೆಎಸ್‌ಎಂಸಿಎ/2025-26
ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ದಾವಣಗೆರೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಮುಖ್ಯ ಪಶುವೈದ್ಯಾಧಿಕಾರಿಗಳ (ಪಶುಸಂಗೋಪನೆ) ಕಚೇರಿ, ಪೊಬ್ಬತಿ ಹೆರಿಗೆ ಆಸ್ಪತ್ರೆ, 1ನೇ ಮಹಡಿ, ಸಜ್ಜನ್ ರಾವ್ ವೃತ್ತ, ವಿ.ವಿ. ಪುರಂ, ಬೆಂಗಳೂರು-04.
ನಂ. ಸಿವಿಓ (ಎಹೆಚ್)ಬೆಂದನಪಾ/ಪಿಆರ್/170/2025-26 ದಿನಾಂಕ : 20.02.2026
ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಆಹ್ವಾನ
ದ್ವಿಲಕೋಟೆ ಪದ್ಧತಿ ಅಲ್ಪಾವಧಿ ಟೆಂಡರ್
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಪಶುವೈದ್ಯಾಧಿಕಾರಿ (ಪಶುಸಂಗೋಪನೆ) ಮುಖ್ಯಸ್ಥರು, ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಸೇವೆಗಳಿಗಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಯ ಮುಖ್ಯ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಜಯನಗರ ವಲಯ (ವಲಯ-1) ರ ಬೀದಿ ನಾಯಿಗಳಿಗೆ ಸಂಯೋಜಿತ ಲಸಿಕೆ (5 in 1) ಪೂರೈಕೆಗಾಗಿ ಅಲ್ಪಾವಧಿಯ ಟೆಂಡರ್. **ಟೆಂಡರ್‌ನ ಅಂದಾಜು ಮೊತ್ತ : ರೂ. 40.927 ಲಕ್ಷಗಳು, ಇಎಂಡಿ ಮೊತ್ತ : ರೂ.81,855.00**

ಟೆಂಡರ್‌ನ ಕಾರ್ಯಸೂಚಿ: (1) ಬಿಡ್ ಪೂರ್ವ ಸಭೆಯು ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ : **24.02.2026 ರಂದು ಮಧ್ಯಾಹ್ನ 12:00 ಗಂಟೆಗೆ,** ಮುಖ್ಯ ಪಶುವೈದ್ಯಾಧಿಕಾರಿ (ಪಶುಸಂಗೋಪನೆ), ಪೊಬ್ಬತಿ ಹೆರಿಗೆ ಆಸ್ಪತ್ರೆ, 1ನೇ ಮಹಡಿ, ಸಜ್ಜನರಾವ್ ವೃತ್ತ, ವಿವಿ ಪುರಂ, ಬೆಂಗಳೂರು-560004 (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **03.03.2026 ರಿಂದ 4.00 ಗಂಟೆಯವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 05.03.2026 ರಂದು ಸಂಜೆ 5.00 ಗಂಟೆಗೆ.** (4) ಹಣಕಾಸು ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಪರಿಶೀಲನೆ ಪೂರ್ಣಗೊಂಡ ನಂತರ.**
ಸಹಿ/- ಮುಖ್ಯ ಪಶುವೈದ್ಯಾಧಿಕಾರಿ (ಪಶುಸಂಗೋಪನೆ) ಮುಖ್ಯ ಪಶುವೈದ್ಯಾಧಿಕಾರಿ, ಬೆಂದನಪಾ

ಸಮಾಚಾರ ಸಣ್ಣದಲ್ಲ

ಸದ್ಯಕ್ಕೆ ಬಸ್ ಪ್ರಯಾಣ ದರ ಏರಿಸುವುದಿಲ್ಲ

ಬೆಂಗಳೂರು: ಸಾರಿಗೆ ಇಲಾಖೆಯ ಬಸ್‌ಗಳ ದರ ಏರಿಸುವ ಪ್ರಸ್ತಾವನೆ ಸರಕಾರದ ಮುಂದೆ ಇಲ್ಲ

ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದ್ದಾರೆ. ಪ್ರಸ್ತುತ ಪ್ರಯಾಣ ದರ ಹೆಚ್ಚಿಸುವ ಪ್ರಶ್ನೆಯೇ ಇಲ್ಲ, ಭವಿಷ್ಯದ ಪರಿಸ್ಥಿತಿ ನೋಡಿ ನಿರ್ಧಾರ ತೆಗೆದುಕೊಳ್ಳಲಾಗುವುದು. ಕಳೆದ ವರ್ಷ ಜನವರಿಯಲ್ಲಿ ಶೇ.15ರಷ್ಟು ಬಸ್ ದರ ಹೆಚ್ಚಿಸಲಾಗಿತ್ತು. ಪ್ರತಿ ವರ್ಷ ಪ್ರಯಾಣ ದರ ಪರಿಷ್ಕರಿಸುವ ಬಗ್ಗೆ ಚರ್ಚೆ ನಡೆಯುತ್ತಿವೆ ಎಂದು ಮಾಹಿತಿ ನೀಡಿದ್ದಾರೆ. ಜಲಮಂಡಳಿ, ವಿದ್ಯುತ್ ದರ ಮತ್ತು ಮೆಟ್ರೋ ಮಾದರಿಯಲ್ಲಿ ಬಸ್ ದರವನ್ನು ನಿಗದಿಪಡಿಸುವ ಬಗ್ಗೆ ಸರಕಾರ ಪರಿಗಣಿಸುತ್ತಿದೆ. ಪ್ರಯಾಣ ದರ ಹೆಚ್ಚಳವನ್ನು ನಿರ್ಧರಿಸಲು ಮತ್ತು ಅವುಗಳ ಶಿಫಾರಸುಗಳ ಪ್ರಕಾರ ದರಗಳನ್ನು ಪರಿಷ್ಕರಿಸಲು ಸಮಿತಿಯನ್ನು ರಚಿಸುವ ಯೋಜನೆ ಇತ್ತು. ಆದರೆ, ಸಮಿತಿ ಇನ್ನೂ ರಚನೆಯಾಗಿಲ್ಲದ ಕಾರಣ, ಪ್ರಸ್ತುತ ದರ ಹೆಚ್ಚಳ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ, ಬಸ್ ದರ ಹೆಚ್ಚಳವು ಪುರುಷ ಪ್ರಯಾಣಿಕರಿಗೆ ಕನಿಷ್ಠ ಮುಂದಿನ ಆರು ತಿಂಗಳವರೆಗೆ ಏರಿಕೆಯಾಗಲ್ಲ. ಸಮಿತಿ ರಚನೆಯಾದ ನಂತರವೇ ಪ್ರಯಾಣ ದರ ಹೆಚ್ಚಳದ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಬೋನಿಗೆ ಬಿದ್ದ ಚಿರತೆ ನಿಟ್ಟುಸಿರುಬಿಟ್ಟ ಜನರು

ಹಾಸನ: ಚನ್ನರಾಯಪಟ್ಟಣದ ಕರಿಮಾರನಹಳ್ಳಿ ಗ್ರಾಮದಲ್ಲಿ ಆತಂಕ ಸೃಷ್ಟಿಸಿದ್ದ ಚಿರತೆ ಅರಣ್ಯ



ಇಲಾಖೆ ಇರಿಸಿದ್ದ ಬೋನಿನಲ್ಲಿ ಸೆರೆಯಾಗಿದೆ. ಕೆಲವು ದಿನಗಳಿಂದ ನಾಯಿ, ಕರುಗಳನ್ನು ಹೊತ್ತೊಯ್ದು ಚಿರತೆ ತಿಂದು ಹಾಕಿತ್ತು. ಅಲ್ಲದೇ ಜಮೀನುಗಳಲ್ಲಿ ಹಗಲಿನ ವೇಳೆ ಕಾಣಿಸಿಕೊಂಡು ರೈತರಲ್ಲಿ ಆತಂಕ ಸೃಷ್ಟಿಸಿತ್ತು. ಚಿರತೆ ಸೆರೆ ಹಿಡಿಯುವಂತೆ ಅರಣ್ಯ ಇಲಾಖೆಗೆ ಗ್ರಾಮಸ್ಥರು ಒತ್ತಾಯಿಸಿದ್ದರು. ಗ್ರಾಮಸ್ಥರ ಮನವಿಗೆ ಸ್ಪಂದಿಸಿ, ಪ್ರಭು ಎಂಬುವವರ ತೋಟದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಬೋನನ್ನು ಇರಿಸಿದ್ದರು. ಅಂದಾಜು ಮೂರೂವರೆ ವರ್ಷದ ಹೆಣ್ಣು ಚಿರತೆ ಸೆರೆಯಾಗಿದೆ. ಚಿರತೆ ಸೆರೆಯಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ಇದೇ ಗ್ರಾಮದಲ್ಲಿ ಇಲ್ಲಿಯವರೆಗೂ ನಾಲ್ಕು ಚಿರತೆಗಳನ್ನು ಸೆರೆ ಹಿಡಿಯಲಾಗಿದೆ.

ಪರೀಕ್ಷೆಯಲ್ಲಿ ಕಾಪಿ ತಡೆದಿದ್ದಕ್ಕೆ ಹಲ್ಲೆ

ಕಲಬುರಗಿ: ಪರೀಕ್ಷೆಯಲ್ಲಿ ನಕಲು ಮಾಡುತ್ತಿದ್ದ ವಿದ್ಯಾರ್ಥಿಯನ್ನು ಪ್ರಶ್ನಿಸಿ ತಡೆಯಲು ಮುಂದಾದ ಪರೀಕ್ಷಾ ಮೇಲ್ವಿಚಾರಕರ ಮೇಲೆ ವಿದ್ಯಾರ್ಥಿಯೊಬ್ಬ ಹಲ್ಲೆ ನಡೆಸಿದ ಘಟನೆ ನಗರದಲ್ಲಿರುವ ಡಾ.ಮಾಲಕರೆಡ್ಡಿ ಹೋಮಿಯೋಪ್ಯಾಥಿಕ್ ಮೆಡಿಕಲ್ ಕಾಲೇಜಿನಲ್ಲಿ ನಡೆದಿದೆ. ಹೋಮಿಯೋಪಥಿಕ್ ಮಟೇರಿಯಾ ಮೆಡಿಕಾ ವಿಷಯದ ಇಂಟರ್ನಲ್ ಪರೀಕ್ಷೆ ವೇಳೆ ಶಹಬಾಜ್ ಎಂಬ ವಿದ್ಯಾರ್ಥಿ ಮೊಬೈಲ್ ಫೋನ್ ಬಳಸಿ ನಕಲು ಮಾಡಲು ಮುಂದಾಗಿದ್ದಾನೆ ಎನ್ನಲಾಗಿದೆ. ಈ ವೇಳೆ ಸಹಾಯಕ ಪ್ರಾಧ್ಯಾಪಕ ಶಿವರಾಜ್ ಕುಮಾರ್ ಅವರು ವಿದ್ಯಾರ್ಥಿಯನ್ನು ಪ್ರಶ್ನಿಸಿ, ಉತ್ತರ ಪತ್ರಿಕೆಯನ್ನು ವಶಪಡಿಸಿಕೊಂಡು ಕೊಠಡಿಯಿಂದ ಹೊರಗೆ ಹೋಗುವಂತೆ ಸೂಚಿಸಿದ್ದರಿಂದ ವಿದ್ಯಾರ್ಥಿ ಕೋಪಗೊಂಡು ಸಹಾಯಕ ಪ್ರಾಧ್ಯಾಪಕರ ಮೇಲೆ ಹಲ್ಲೆ ನಡೆಸಿದ್ದಾನೆ. ಈ ಘಟನೆ ಪರೀಕ್ಷಾ ಹಾಲ್‌ನ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹಲ್ಲೆ ನಡೆಸಿದ ವಿದ್ಯಾರ್ಥಿ ವಿರುದ್ಧ ಕಾಲೇಜು ಆಡಳಿತ ಮಂಡಳಿ ಕ್ರಮಕ್ಕೆ ಮುಂದಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಎಲಚೇನಹಳ್ಳಿ, ಬೆಂಗಳೂರು

ಸಮಸ್ಯೆಯೇನು..?: ಎಲಚೇನಹಳ್ಳಿ ಕೆರೆ (ಅಣ್ಣಯಪ್ಪ ಕೆರೆ) ಉದ್ಯಾನವನದಲ್ಲಿನ ಶೌಚಾಲಯ ವಿಹಾರಿಗಳ ಉಪಯೋಗಕ್ಕೆ ಮುಕ್ತಗೊಳಿಸಿರುವ ಬಗ್ಗೆ.

- **ಪರಿಹಾರ:** ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಎಲಚೇನಹಳ್ಳಿ ವಾರ್ಡ್‌ನಲ್ಲಿರುವ ಎಲಚೇನಹಳ್ಳಿ ಕೆರೆ (ಅಣ್ಣಯಪ್ಪ ಕೆರೆ) ಉದ್ಯಾನವನದಲ್ಲಿನ ಶೌಚಾಲಯವನ್ನು ಜಿಬಿಎ ನಂತರ ತೋಟಗಾರಿಕಾ ವಿಭಾಗಕ್ಕೆ ಹಸ್ತಾಂತರಗೊಂಡಿದ್ದು, ಈ ಹಿಂದೆ ಕೆರೆಗಳ ವಿಭಾಗವು ನಿರ್ವಹಣೆ ಮಾಡುತ್ತಿತ್ತು. ಪ್ರಸ್ತುತ ಕೆರೆಯಲ್ಲಿನ ಶೌಚಾಲಯವನ್ನು ದುರಸ್ಥಿಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಮುಕ್ತಗೊಳಿಸಲಾಗಿದೆ.

ಟಿಪ್ಪು, ಔರಂಗಜೇಬ್ ಮನಸ್ಥಿತಿ ಇರುವವರನ್ನು ಕ್ಷಮಿಸಬಾರದು | ಮತಾಂಧರ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮಕ್ಕೆ ಆಗ್ರಹ

ಶಿವಾಜಿ ಮೆರವಣಿಗೆ ಮೇಲೆ ಕಲ್ಲೆಸೆತ: ಬಿಜೆಪಿ ಕೆಂಡ

ಬೆಂಗಳೂರು: ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿಯ ಸಂದರ್ಭದಲ್ಲಿ ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸಿದವರನ್ನು ಒದ್ದು ಒಳಗೆ ಹಾಕಿ ಎಂದಿರುವ ಬಿಜೆಪಿ, ದೇಶದ್ರೋಹಿಗಳನ್ನು ಕ್ಷಮಿಸುವ ಮಾತೇ ಎಂದು ಕಿಡಿ ಕಾರಿದೆ.

ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿಯ ಸಂದರ್ಭದಲ್ಲಿ ಕೆಲವು ದೇಶದ್ರೋಹಿಗಳು ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸಿದ್ದು, ಇವರು ಯಾರೆಂದು ಪೊಲೀಸರು ಪತ್ತೆ ಹಚ್ಚಿದ್ದಾರೆ. ಇಂಥ ದೇಶದ್ರೋಹಿಗಳನ್ನು ಒದ್ದು ಒಳಗೆ ಹಾಕಬೇಕೆಂದು ಮುಖ್ಯಮಂತ್ರಿ ಹಾಗೂ ಗೃಹ ಸಚಿವರಿಗೆ ಆಗ್ರಹಿಸಿದ್ದಾರೆ. ಅಲ್ಲದೆ, ಇಂಥ ಟಿಪ್ಪು, ಔರಂಗಜೇಬ್ ಮನಸ್ಥಿತಿ ಇರುವ ದೇಶದ್ರೋಹಿಗಳನ್ನು ಯಾವುದೇ ಕಾರಣಕ್ಕೆ ಕ್ಷಮಿಸಬಾರದು. ಇಂಥವರಿಗೆ ತಕ್ಕ ಪಾಠ ಕಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರತಿಪಕ್ಷ ನಾಯಕ ಆರ್.ಅಶೋಕ ಮಾತನಾಡಿ, ಮೆರವಣಿಗೆ ಮೇಲೆ ಕಲ್ಲು ತೂರಾಟ ಮಾಡಿದ ಮುಸ್ಲಿಮ್ ಮತಾಂಧರ ವಿರುದ್ಧ ಗೂಂಡಾ ಕಾಯ್ದೆ

ಯಡಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಇವೆಲ್ಲವೂ ಪೂರ್ವ ನಿಯೋಜಿತ ಕೃತ್ಯ. ಈ ಹಿಂದೆ ಮಂಡ್ಯದಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ಮೇಲೆ ಕಲ್ಲು ತೂರಾಟ, ಶ್ರೀರಾಮನ ಫ್ಲೆಕ್ಸ್ ಹರಿದುಹಾಕಿರುವುದು ಹೀಗೆ ಮೊದಲಾದ ರೀತಿಯಲ್ಲಿ ಮುಸ್ಲಿಮ್ ಮೂಲಭೂತವಾದಿಗಳು ದಾಳಿ ಮಾಡಿದ್ದರು. ಇಂತಹ ಮತಾಂಧರನ್ನು ಬಂಧಿಸಬಾರದು ಎಂದು ಕಾಂಗ್ರೆಸ್ ಸರಕಾರ ಪೊಲೀಸರಿಗೆ ಸೂಚನೆ ನೀಡಿದೆ ಎಂದರು.

ಕುಕ್ಕರ್ ಬಾಂಬ್ ಸ್ಫೋಟ ಮಾಡುವವರು ನಮ್ಮ ಬ್ರದರ್‌ಗಳು, ವಿಧಾನಸೌಧದಲ್ಲಿ ಪಾಕ್ ಜಿಂದಾಬಾದ್ ಎನ್ನುವವರು ನಮ್ಮ ಬಂಧುಗಳು ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸಬಾರದು ಎಂದು ಪೊಲೀಸರಿಗೆ ಸೂಚಿಸಿದ್ದಾರೆ. ಈ ಕಾರಣದಿಂದಲೇ ಇಂತಹ ಘಟನೆಗಳು ಎಲ್ಲ ಜಿಲ್ಲೆಗಳಲ್ಲಿ ನಡೆಯುತ್ತಿವೆ. ಶಿವಾಜಿ ಮಹಾರಾಜರ ಕುಟುಂಬದವರೇ ಬೆಂಗಳೂರಿನಲ್ಲಿ ದೇವಸ್ಥಾನ ಕಟ್ಟಿಸಿದ್ದರು. ಇಂತಹ ಮಹಾನ್ ವ್ಯಕ್ತಿಗೆ ಅಪಮಾನ ಮಾಡಿರುವ ಘಟನೆಗೆ ಕಾಂಗ್ರೆಸ್ ಕಾರಣ. ಗೃಹಸಚಿವ ಡಾ.ಜಿ.ಪರಮೇಶ್ವರ್ ಬುರುಡೆ ಬಿಡುತ್ತಿದ್ದಾರೆ. ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಈ ಹಿಂದಿನ ಪ್ರಕರಣಗಳಲ್ಲಿ ಕೇಸುಗಳನ್ನು ವಾಪಸ್ ಪಡೆಯಲಾಗಿದೆ. ಇದು ಗೊತ್ತಿರುವುದರಿಂದಲೇ ಮುಸ್ಲಿಮರು ಹೀಗೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರಕಾರ ಹಿಂದೂಗಳ ವಿರೋಧಿಯಾಗಿದೆ.

ಇಂತಹ ದುಷ್ಕರ್ಮಿಗಳ ವಿರುದ್ಧ ಗೂಂಡಾ ಕಾಯ್ದೆ ಪ್ರಯೋಗ ಮಾಡಿ ಜೈಲಿಗೆ ಹಾಕಬೇಕು. ಇಲ್ಲವಾದರೆ ಸರಕಾರವೇ ಇದರಲ್ಲಿ ಶಾಮೀಲಾಗಿದೆ ಹಾಗೂ ಮತಕ್ಕಾಗಿ ಓಲೈಕೆ ಮಾಡುತ್ತಿದೆ ಎಂದು ಅಂದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರಾಜ್ಯ ಸರಕಾರದ ತುಷ್ಟೀಕರಣ ಪರಾಕಾಷ್ಟೆಗೆ: ಬಸವರಾಜ ಬೊಮ್ಮಾಯಿ

ಬಾಗಲಕೋಟೆ ಬಸವಣ್ಣನ ಐಕ್ಯ ನಾಡು, ಇಲ್ಲಿ ಎಲ್ಲ ಸಮಾಜ ಸಾಮರಸ್ಯದಿಂದ ಇರುವಂತ ಬಾಗಲಕೋಟೆ ಜಿಲ್ಲೆ. ಇಂತಹ ಹಿನ್ನೆಲೆ ಇರುವ ಜಿಲ್ಲೆಯಲ್ಲಿ ಧಾರ್ಮಿಕ ಅಂಧರಿಗೆ ಸರಕಾರದ ಆಶ್ರಯ ಸಿಗುವಂತದ್ದು ಅತ್ಯಂತ ಕೇಡಿನ ಸಂಗತಿ. ಇಲ್ಲಿ ನಡೆದಿರುವ ಘಟನೆ ಕಲ್ಲು ತೂರಾಟ ಮಾಡುವ, ಚಪ್ಪಲಿ ತೂರುವ, ಶಿವಾಜಿ ಮಹಾರಾಜರಿಗೆ ಅಗೌರವ ತೋರುವವರಿಗೆ ಈ ಸರಕಾರ ಸಂಪೂರ್ಣ ಬೆಂಬಲಕ್ಕೆ ನಿಂತಿರುವುದು ಬಹಳ ಸ್ಪಷ್ಟ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಈ ಕುರಿತು ಪೋಸ್ಟ್ ಮಾಡಿರುವ ಅವರು, ಶಿವಾಜಿ ಮಹಾರಾಜ ಭಾರತ ದೇಶ ಕಂಡ ಒಬ್ಬ ಅಪ್ರತಿಮ ನಾಯಕ. ಇಡೀ ದೇಶ ಅವರನ್ನು ಗೌರವದಿಂದ ಕಾಣುತ್ತದೆ. ಅವರಿಗೆ ಕಿಡಿಗೇಡಿಗಳು ಅಪಮಾನ ಮಾಡಿರುವುದು ಅತ್ಯಂತ ಖಂಡನೀಯ. ಬಾಗಲಕೋಟೆಯ ಎಸ್ಪಿಗೆ ಕಲ್ಲೇಟು ಬಿದ್ದು ರಕ್ತ ಬೀಳುತ್ತಿರುವ ದೃಶ್ಯಗಳು ಇದ್ದರೂ ಕೂಡ ನನಗೇನು ಆಗಿಲ್ಲಾ ಅಂತ ಎಸ್‌ಪಿ ಹೇಳಿದ್ದಾರೆ. ಕಲ್ಲು ತೂರಿದವರಿಗೆ, ಚಪ್ಪಲಿ ತೂರಿದವರಿಗೆ ಇದರ ಹಿಂದೆ ಷಡ್ಯಂತ್ರ ಮಾಡಿದವರಿಗೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ. ನಾಮಕಾಸ್ತೆ ಬಂಧನ ತೋರಿಸುತ್ತಾರೆ. ತುಷ್ಟೀಕರಣದ ಪರಾಕಾಷ್ಟೆಗೆ ಈ ರಾಜ್ಯ ಸರಕಾರ ಮುಟ್ಟಿದೆ. ಇಲ್ಲಿ ನ್ಯಾಯಕ್ಕೆ, ಧರ್ಮಕ್ಕೆ ನೀತಿಗೆ ಯಾವುದೇ ಬೆಲೆ ಇಲ್ಲ. ಕೇವಲ ತುಷ್ಟೀಕರಣ, ಭ್ರಷ್ಟಾಚಾರ, ವಿಭಜಿಸುವಕರಣಕ್ಕೆ ಮಾತ್ರ ಬೆಲೆ ಇರುವುದು ಬಹಳ ಸ್ಪಷ್ಟ. ಈ ಸರಕಾರ ಆಯ್ಕೆಯಾಗಿರುವ ತಮ್ಮ ಕರ್ತವ್ಯಗಳನ್ನು ಮರೆತು ರಾಜ್ಯಕ್ಕೆ ದೀರ್ಘಕಾಲ ಹಾನಿಯಾಗುವ ಕೆಲಸ ಮಾಡುವುದನ್ನು ನೋಡಿದರೆ ಜನರು ಇದರ ವಿರುದ್ಧ ಹೋರಾಟ ಮಾಡುವುದು ಅನಿವಾರ್ಯ. ಈ ಘಟನೆ ಅತ್ಯಂತ ಖಂಡನಾರ್ಹ ಎಂದು ಹೇಳಿದ್ದಾರೆ.

ಡಿಕೆಶಿಯವರ ಮೈ ಬ್ರದರ್ಸ್ ಪಾಲಿಸಿಯಿಂದ ಹೀಗಾಗುತ್ತಿದೆ: ಎನ್ ರವಿಕುಮಾರ್

ಸರಕಾರಿ ನೌಕರರು, ಹಿಂದೂ ಕಾರ್ಯಕರ್ತರಿಗೆ ರಕ್ಷಣೆ ಇಲ್ಲವಾಗಿದೆ. ನಾವು ಅಲ್ಪಸಂಖ್ಯಾತರಿಗೆ, ಮುಸಲ್ಮಾನ ಬಂಧುಗಳಿಗೆ ಮಾತ್ರ ರಕ್ಷಣೆ ಕೊಡುವುದಾಗಿ ರಾಜ್ಯ ಸರಕಾರ ಘೋಷಿಸಲಿ ಎಂದು ವಿಧಾನಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಆಗ್ರಹಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಡಿ.ಕೆ.ಶಿವಕುಮಾರ್ ಅವರ ಮೈ ಬ್ರದರ್ಸ್ ಪಾಲಿಸಿಯಿಂದ ಹೀಗಾಗುತ್ತಿದೆ. ಹಾಗಿದ್ದರೆ ಹಿಂದೂಗಳು ನಿಮ್ಮ ಸಹೋದರರಲ್ಲವೇ? ವಿಧಾನಸೌಧದಲ್ಲಿ ಪಾಕಿಸ್ತಾನಕ್ಕೆ ಜಯವಾಗಲಿ ಎಂದು ಘೋಷಣೆ ಕೂಗಿದಾಗ ಮುಖ್ಯಮಂತ್ರಿಗಳು ಕ್ರಮ ಕೈಗೊಂಡಿದ್ದರೆ ಹೀಗಾಗುತ್ತಿರಲಿಲ್ಲ ಎಂದರು.

ಮೇಲುಕೋಟೆ, ಮಂಡ್ಯ, ಶಿವಮೊಗ್ಗ, ಮಂಗಳೂರು, ಕಲಬುರಗಿ, ಹುಬ್ಬಳ್ಳಿ, ಬೆಂಗಳೂರಿನಲ್ಲಿ ಪದೇ ಪದೆ ಗಲಾಟೆಗಳಾಗುತ್ತಿವೆ. ಈ ಸರಕಾರ ಸಂಪೂರ್ಣವಾಗಿ ತುಷ್ಟೀಕರಣ ಮಾಡುತ್ತಿದೆ. ಸರಕಾರವು ತುಷ್ಟೀಕರಣ ನೀತಿಯನ್ನು ಬಿಡಬೇಕು. ರಾಜ್ಯದಲ್ಲಿ ವಿಪರೀತ ತುಷ್ಟೀಕರಣದ ಕಾರಣದಿಂದ ರಾಜ್ಯ ಸರಕಾರವು ಗಲಭೆ ಮಾಡಿದ ಇವರ ಮೇಲೂ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಆರೋಪಿಸಿದರು.

ಬಾಗಲಕೋಟೆ ನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರ ಮೆರವಣಿಗೆ ಸಂದರ್ಭದಲ್ಲಿ ಕೆಲವು ದುಷ್ಕರ್ಮಿಗಳು ಪಂಖಾ ಮಸೀದಿ ಮುಂದೆ ಕಲ್ಲು ತೂರಾಟ ಹಾಗೂ ಚಪ್ಪಲಿ ಎಸೆದು ಅಂಗಡಿಗಳಿಗೆ ಬೆಂಕಿ ಹಚ್ಚಿರುವದು ಖಂಡನೀಯ. ಎಸ್‌ಪಿ ಸಿದಾರ್ಥ ಗೋಯಲ್ ಅವರೇ ನಿಮ್ಮಲ್ಲಿ ತಾಕತ್ತು ಇದ್ದರೆ, ಧೈರ್ಯ ಇದ್ದರೆ ಆ ಸಮುದಾಯದ 4 ಜನರಿಗೆ ಹೊಡೆಯಿರಿ ನೋಡೋಣ.

–ವೀರಣ್ಣ ಚರಂತಿಮಠ, ಮಾಜಿ ಶಾಸಕ

ಈ ಘಟನೆಯಿಂದ ಶಾಂತಿ ಸೌಹಾರ್ದತೆಗೆ ದಕ್ಕೆ ಬಂದಿದ್ದು, ಈ ಘಟನೆಯ ಹಿಂದೆ ಯಾವುದೇ ಜಾತಿ, ಧರ್ಮದವರು ಇದ್ದರೂ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ 8 ಜನರನ್ನು ಬಂಧಿಸಲಾಗಿದೆ. ಸಾರ್ವಜನಿಕರು ಪ್ರಚೋದನೆಗಳಿಗೆ ಕಿವಿಗೊಡದೆ ಸಂಯಮದಿಂದ ವರ್ತಿಸಬೇಕು. ಈ ಗಲಭೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು.

– ಆರ್ .ಬಿ.ತಿಮ್ಮಾಪೂರ ಉಸ್ತುವಾರಿ ಸಚಿವ

ಬಾಗಲಕೋಟೆ ನಗರದಲ್ಲಿ ಶಿವಾಜಿ ಜಯಂತಿ ಮೆರವಣಿಗೆ ಕಾಲಕ್ಕೆ ಅಹಿತಕರ ಘಟನೆ ಜರಗಿರುವುದು ಖಂಡನೀಯ. ಐತಿಹಾಸಿಕ ಹೋಳಿ ಹಬ್ಬ, ರಂಜಾನ ಹಬ್ಬದ ಸಂದರ್ಭದಲ್ಲಿ ಇಂತಹ ದುಷ್ಕೃತ್ಯಗಳು ಜರುಗಬಾರದು. ಕೋಮು ಸೌಹಾರ್ದತೆಗೆ ಧಕ್ಕೆಯಾಗಿದೆ. ಹೋಳಿ ಹಬ್ಬವು ಸಂತೋಷ ಮತ್ತು ಏಕತೆ ಸಂಕೇತವಾಗಿದ್ದರೆ, ರಂಜಾನ ಶಾಂತಿ ಸಂದೇಶ ನೀಡುತ್ತದೆ. ಕೆಲ ದುಷ್ಕರ್ಮಿಗಳಿಂದ ಇಂತಹ ಘಟನೆಗಳು ಜರುಗಿದ್ದು, ತಪಿಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಎಲ್ಲ ಹಬ್ಬಗಳನ್ನು ಶಾಂತಯುತವಾಗಿ ಆಚರಿಸಬೇಕು.

– ನಾಗರಾಜ್ ಹದ್ಲಿ
ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಬಾಗಲಕೋಟ

ಗುರುವಾರ ರಾತ್ರಿ, ಬಾಗಲಕೋಟೆಯಲ್ಲಿ ನಡೆದ ಶಿವಾಜಿ ಜಯಂತಿ ಪ್ರಯುಕ್ತ ಜರುಗಿದ ಮೆರವಣಿಗೆ ಸಂದರ್ಭದಲ್ಲಿ ಕೆಲವು ದುಷ್ಕರ್ಮಿಗಳು ಮೆರವಣಿಗೆಕಾರರ ಮೇಲೆ ಕಲ್ಲು ಹಾಗೂ ಚಪ್ಪಲಿಯನ್ನು ಎಸೆದಿದ್ದು ಖಂಡನೀಯ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಯಾವಾಗ ಅಧಿಕಾರದಲ್ಲಿ ಇರುತ್ತದೆಯೋ ಆಗ ಇಂತಹ ಗಲಭೆಗಳು ನಡೆಯುತ್ತವೆ. ಮತ ಬ್ಯಾಂಕ್ ಗೋಸ್ಕರ್ ಒಂದು ಕೋಮುವನ್ನು ತುಷ್ಟೀಕರಣಗೆ ಒಳಿಸುವುದಕ್ಕೋಸ್ಕರ ಮಾಡುತ್ತಿದೆ. ಈಗ ಬರುವಂತಹ ಹೋಳಿ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ಶಾಂತಿ ಕಾಪಾಡುವ ನಿಟ್ಟನಲ್ಲಿ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಂಡು ಸೂಕ್ತ ಬಂದೋಬಸ್ತ್ ವ್ಯವಸ್ಥೆಯನ್ನು ಒದಗಿಸಬೇಕು.

– ಪಿ.ಎಚ್.ಪೂಜಾರ
ವಿಧಾನ ಪರಿಷತ್ ಸದಸ್ಯ

ಬಾಗಲಕೋಟೆ ನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟದಲ್ಲಿ,ಯಾರು ಭಾಗಿಯಾಗಿದ್ದಾರೋ ಅವರನ್ನೆಲ್ಲ ಬಂಧಿಸಬೇಕು. ನಾಲ್ಕು ಮಂದಿಯನ್ನು ಮಾತ್ರ ಬಂಧಿಸುವುದರಿಂದ ಸಾಲದು. ಪ್ರಕರಣದ ಕುರಿತು ಸಂಪೂರ್ಣವಾಗಿ ತನಿಖೆ ನಡೆಸಿ, ಎಲ್ಲ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು.

–ನಾರಾಯಣಸಾ ಬಾಂಡಗೆ
ರಾಜ್ಯಸಭಾ ಸದಸ್ಯರು

ಗಲಭೆ ಸೃಷ್ಟಿಸಿದವರನ್ನು ಗಡಿಪಾರು ಮಾಡಬೇಕು

ರಾಯಚೂರು: ಬಾಗಲಕೋಟೆಯಲ್ಲಿ ಶಿವಾಜಿ ಭಾವ ಚಿತ್ರ ಮೆರವಣಿಗೆ ವೇಳೆ ಕಲ್ಲು ತೂರಾಟ ಮಾಡಿದ 8 ಜನರನ್ನು ಬಂಧನ ಮಾಡಿದ್ದೇವೆಂದು ರಾಜ್ಯ ಸರಕಾರ ಹೇಳುತ್ತದೆ. ಆದರೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಲೇ ಹೀಗೆ ಯಾಕೆ ಆಗುತ್ತದೆ? ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಪ್ರಶ್ನಿಸಿದರು. ಲಿಂಗಸುಗೂರು ತಾಲೂಕಿನ ಹಟ್ಟಿ ಪಟ್ಟಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರಕಾರದವರು ಬಾಂಬ್ ಹಾಕಿದವರನ್ನು ಬ್ರದರ್ಸ್ ಅಂತಾರೆ, ಅಕ್ರಮ ಮಸೀದಿ ಎಂದವರ ಮೇಲೆ ಪ್ರಕರಣ ದಾಖಲು ಮಾಡುತ್ತಾರೆ. ಪೊಲೀಸರಿಗೆ ಸ್ವತಂತ್ರ ನೀಡಿದರೆ ಯಾವುದೇ ಗಲಭೆಗಳು ನಡೆಯಲ್ಲ. ಆದರೆ ಕಾಂಗ್ರೆಸ್ ಪೊಲೀಸರ ಮೇಲೆ ಹಿಡಿತ ಇಟ್ಟುಕೊಂಡಿದೆ. ಅವರ ತುಷ್ಟೀಕರಣದಿಂದ ರಾಜ್ಯದಲ್ಲಿ ಅಶಾಂತಿ ಉಂಟಾಗುತ್ತಿದೆ. ಕಾನೂನು ಸುವ್ಯವಸ್ಥೆ ಹದಗೆಡದಂತೆ ನೋಡಿಕೊಳ್ಳಬೇಕು. ಆರೋಪಿಗಳನ್ನು ಬಂಧನ ಮಾಡುವುದಲ್ಲದೆ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಬೀದಿನಾಯಿ ದಾಳಿಗೆ ನಾಲ್ಕು ಮಕ್ಕಳಿಗೆ ಗಾಯ

ಕಲಬುರಗಿ: ನಗರದಲ್ಲಿ ಬೀದಿ ನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ದೇವಿನಗರ ಬಡಾವಣೆಯಲ್ಲಿ ಐವರು ಮಕ್ಕಳ ಮೇಲೆ ಬೀದಿನಾಯಿಗಳು ದಾಳಿ ನಡೆಸಿವೆ. ಮನೆ

ಮುಂದೆ ಆಟವಾಡುತ್ತಿದ್ದ ತನ್ವಿ (3), ವಿರಾಟ್ (3), ಸೃಷ್ಟಿ (6), ನಮ್ರತಾ (3) ಸೇರಿ ಅಶ್ವಿನಿ ಎಂಬ ಮಹಿಳೆ ಮೇಲೆ ನಾಯಿಗಳು ದಾಳಿ ನಡೆಸಿವೆ. ಮಕ್ಕಳ ಕಣ್ಣು, ಕಿವಿ ಹಾಗೂ ಎದೆ ಭಾಗಗಳಿಗೆ ಗಾಯಗಳಾಗಿದ್ದು, ಜೇಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಬೀದಿನಾಯಿಗಳ ನಿಯಂತ್ರಣಕ್ಕೆ ಹಲವು ಬಾರಿ ಮನವಿ ಮಾಡಿದರು ಪಾಲಿಕೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಹೀಗಾಗಿಯೇ ಬೀದಿನಾಯಿಗಳ ಹಾವಳಿ ಹೆಚ್ಚಾಗಿದೆ ಎಂದು ಸ್ಥಳೀಯರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಕ್ಕಳ ಆರೋಗ್ಯ ವಿಚಾರಿಸಿದ ಮಹಾಪೌರರು: ಬೀದಿನಾಯಿಗಳ ದಾಳಿಯಿಂದ ಗಾಯಗೊಂಡು ಜಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳನ್ನು ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ವರ್ಷಾ ಜಾಣೆ ಅವರು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ವೈದ್ಯರೊಂದಿಗೆ ಸಮಾಲೋಚಿಸಿ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದರು.

ಕಮಿಷನ್ ಚೋರ್ ಸರಕಾರ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನಿಮ್ಮದು ಕಮಿಷನ್ ಚೋರ್ ಸರಕಾರ, ಕಾಮ್ ಚೋರ್ ಮಂತ್ರಿಗಳು ಎಂದು ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ ಗಂಭೀರ ಆರೋಪ ಮಾಡಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಸಿಎಂ ಸಿದ್ದರಾಮಯ್ಯ ಅವರೇ, ಕರ್ನಾಟಕದಲ್ಲಿರುವ ನಿಮ ಕಮಿಷನ್ ಚೋರ್ ಕಾಂಗ್ರೆಸ್ ಸರಕಾರದಲ್ಲಿ ಕಾಮ್ ಚೋರ್ ಮಂತ್ರಿಗಳೇ ತುಂಬಿ ತುಳುಕುತ್ತಿದ್ದಾರೆ. ಒಂದು ಕಡೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಣಕಾಸು ಇಲಾಖೆಯಿಂದ 880 ಕೋಟಿ ಅನುದಾನ ಬಿಡುಗಡೆ ಆಗಿದ್ದರೂ ಸರಕಾರಿ ಆಸ್ಪತ್ರೆಗಳಿಗೆ ಔಷಧಿ ಖರೀದಿ ಮಾಡದೆ, ಸ್ಕ್ಯಾನಿಂಗ್ ಸೇವೆ ಒದಗಿಸುವ ಕಂಪನಿಗಳಿಗೆ 143 ಕೋಟಿ ಬಾಕಿ ಬಿಲ್ ಪಾವತಿ ಮಾಡದೆ, ಸಾರ್ವಜನಿಕರು ಪರದಾಡುವಂತೆ ಮಾಡಿದ್ದಾರೆ. ಇನ್ನೊಂದು ಕಡೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಇಎಸ್‌ಐ ಆಸ್ಪತ್ರೆಗಳಿಗೆ ಔಷಧಿ ಪೂರೈಕೆ ಮಾಡಿದ ಕಂಪನಿಗಳಿಗೆ 60 ಕೋಟಿ ಬಿಲ್ ಪಾವತಿ ಬಾಕಿ ಉಳಿಸಿಕೊಂಡು, ರೇಟ್ ಕಾರ್ಡ್ ಆಧಾರದಲ್ಲಿ ಔಷಧಿ, ಉಪಕರಣ ಖರೀಸುವ ಮೂಲಕ ಕಾರ್ಮಿಕರ ಹಣ ಲೂಟಿ ಹೊಡೆಯಲು ಹೊರಟಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಸಿಎಂ ಸಿದ್ದರಾಮಯ್ಯ ನವರೇ, ಎಲ್ಲ ಇಲಾಖೆಗಳಲ್ಲೂ ಹಿಂದಿನ ವರ್ಷಗಳಲ್ಲೇ ಸಾವಿರಾರು ಕೋಟಿ ಬಿಲ್ ಪಾವತಿ ಬಾಕಿ ಇರುವಾಗ ಈಗ ಇನ್ನೊಂದು ಬಜೆಟ್ ಮಂಡನೆ ಮಾಡಿ ಏನು ಸಾಧಿಸಲು ಹೊರಟಿದ್ದೀರಿ ಸ್ವಾಮಿ? ಇನ್ನೆಷ್ಟು ದಿನ ಸ್ವಾಮಿ ಈ ಭಂಡ ಬಾಳು? ರಾಜೀನಾಮೆ ಕೊಟ್ಟು ಕರ್ನಾಟಕವನ್ನು ಉಳಿಸಿ.

– ಆರ್.ಅಶೋಕ
ವಿಧಾನಸಭೆ ಪ್ರತಿಪಕ್ಷದ ನಾಯಕ

ಮತ್ತೊಂದು ಪೋಸ್ಟ್‌ನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಅವರ ವಿರುದ್ಧವೂ ಕಿಡಿಕಾರಿರುವ ಅಶೋಕ, ತಮ್ಮ ತವರು ಜಿಲ್ಲೆಯಲ್ಲಿ ಕುಡಿಯುವ ನೀರು ಕೊಡಲೂ ಯೋಗ್ಯತೆ ಇಲ್ಲದವರು ಕರಾವಳಿಯಲ್ಲಿ ಐಟಿ ಕಂಪನಿಗಳ ಹೂಡಿಕೆ ಬಗ್ಗೆ ಮಾತಾಡುವುದು ಈ ಶತಮಾನದ ಅತ್ಯಂತ ದೊಡ್ಡ ವಿಪರ್ಯಾಸ. ಕಲ್ಯಾಣ ಕರ್ನಾಟಕದ ಅಧಿಕಾರ ದಾಹಿ ದೆವ್ವಗಳು ಅಲ್ಲಿಂದ ತೊಲಗುವವರೆಗೂ ಕಲ್ಯಾಣ ಕರ್ನಾಟಕದ ಈ ದುಸ್ಥಿತಿಗೆ ಮುಕ್ತಿ ಇಲ್ಲ ಎಂದು ಅವರು ಟೀಕಾ ಪ್ರಹಾರ ನಡೆಸಿದ್ದಾರೆ.

ಭಾರತದಲ್ಲೂ ಹಿಂದೂಗಳ ಸ್ಥಿತಿ ಭಯಾನಕವಾಗಿದೆ: ಪೇಜಾವರ ಶ್ರೀ

ದಾವಣಗೆರೆ: ಬಾಂಗ್ಲಾದೇಶ ಮಾತ್ರವಲ್ಲ ಭಾರತದಲ್ಲಿ ಕೂಡ ಹಿಂದೂಗಳ ಸ್ಥಿತಿ ಭಯಾನಕವಾಗಿದೆ. ಬಾಂಗ್ಲಾದೇಶದಲ್ಲಿ ಹಿಂದೂಗಳ



ರಕ್ಷಣೆಗೆ ಕೇಂದ್ರ ಸರಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಗೋವುಗಳಿಗೆ ಮೀಸಲಾಗಿದ್ದ ಗೋಮಾಳಗಳನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳುವುದನ್ನು ನಿಲ್ಲಿಸಬೇಕು. ಇಂತಹ ಜಾಗವನ್ನು ಗೋವುಗಳ ಸೇವೆಯಲ್ಲಿ ತೊಡಗಿದವರಿಗೆ ಮಾತ್ರ ನೀಡಬೇಕು ಎಂದು ಸಲಹೆ ನೀಡಿದರು.

ಬ್ರಿಟಿಷರ ಕಾಲದಿಂದಲೂ ಗೋವುಗಳಿಗೆ ಗೋಮಾಳ ಮೀಸಲಿಡಲಾಗಿತ್ತು. ಆದರೆ, ಇಂದು ಈ ಜಾಗಗಳನ್ನು ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಗೋಹತ್ಯೆ ನಿಷೇಧ ಕೇವಲ ಕಾಗದದ ಮೇಲಿರದೆ ಪರಿಣಾಮಕಾರಿಯಾಗಿ ಜಾರಿಯಾಗಬೇಕಾದರೆ ಸರಕಾರ ಮತ್ತು ಸಾರ್ವಜನಿಕರು ಕೈಜೋಡಿಸಬೇಕು ಎಂದು ತಿಳಿಸಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ಕನಿಷ್ಠ ಒಂದು ಗೋಶಾಲೆಯನ್ನಾದರೂ ತೆರೆಯುವ ಅಗತ್ಯವಿದೆ. ಆಗ ಮಾತ್ರ ಗೋವುಗಳ ರಕ್ಷಣೆ ಮಾಡಲು ಸಾಧ್ಯ. ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ರಾಷ್ಟ್ರ ಸೇವೆ ಮಾಡುತ್ತಿದೆ. ಇಂತಹ ಸಂಘದ ಬಗೆಗಿನ ಆಕ್ಷೇಪ, ನಿಷೇಧದಂತಹ ಮಾತುಗಳು ಸರಿಯಲ್ಲ ಎಂದರು.

ವೇದ ಅಧ್ಯಯನ ಕೇಂದ್ರ ಸ್ಥಾಪನೆ ಮಾಡುವ ಆಲೋಚನೆ ಇದೆ. ಇದಕ್ಕೆ ಸೂಕ್ತ ಸ್ಥಳ ಲಭ್ಯವಾಗುತ್ತಿಲ್ಲ. ನಮ್ಮಂತವರಿಗೆ ಅಂತಹ ಸ್ಥಳವನ್ನು ಒದಗಿಸಿಕೊಳ್ಳುವುದೇ ಬಹಳ ಕಷ್ಟವಾಗಿದೆ. ಸ್ಥಳ ಸಿಕ್ಕರೆ ಅವಶ್ಯವಾಗಿ ವೇದ ಅಧ್ಯಯನ ಕೇಂದ್ರ ತೆರೆಯುತ್ತೇವೆ. ಇದಕ್ಕೆ ಬೇಕಾದ ಬೇರೆ ಎಲ್ಲ ವ್ಯವಸ್ಥೆ ಮಠದ ಬಳಿ ಇದೆ.

– ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ
ಪೇಜಾವರ ಮಠದ

ವೇದವಿದ್ಯಾ ವಿಹಾರ ಗುರುಕುಲಕ್ಕೆ ಸಚಿವೆ ನಿರ್ಮಲಾ ಶಂಕುಸ್ಥಾಪನೆ

ರಾಮನಗರ: ಇಲ್ಲಿನ ಬನ್ನಿಕುಪ್ಪೆ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ವೇದ ವಿದ್ಯಾ ವಿಹಾರ ಗುರುಕುಲಕ್ಕೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಶಂಕುಸ್ಥಾಪನೆ ನೆರವೇರಿಸಿದರು.

ಇದೇ ವೇಳೆ ಸ್ಥಳೀಯರಿಗೆ ಗುರುಕುಲದ ವತಿಯಿಂದ ಸೀರೆ ವಿತರಣೆ ಮಾಡಿದರು. ಈ ವೇಳೆ ಕೇಂದ್ರ ಸಚಿವರಿಗೆ ಸಂಸದ ಡಾ.ಮಂಜುನಾಥ್, ಪತ್ನಿ ಅನುಸೂಯ ಮಂಜುನಾಥ್ ಸೇರಿ ಸ್ಥಳೀಯ ಬಿಜೆಪಿ ಮುಖಂಡರು ಸಾಥ್ ನೀಡಿದರು.

ಬಳಿಕ ಬೆಂಗಳೂರು ಹೊರವಲಯದ ಎಸ್‌ಟಿಆರ್‌ಆರ್ ರಿಂಗ್ ರಸ್ತೆ ಭೂ ಪರಿಹಾರ ಸಂಬಂಧ ಕೇಂದ್ರ ಸಚಿವೆಗೆ ರೈತರು ಮನವಿ ಸಲ್ಲಿಸಿದರು. ಭೂಸ್ವಾಧೀನಕ್ಕೆ ಒಳಪಡುವ ರೈತರಿಗೆ ಶೀಘ್ರ ಪರಿಹಾರ ನೀಡುವಂತೆ ಮನವಿ ಮಾಡಿದರು. ರೈತರ ಮನವಿ ಸ್ವೀಕರಿಸಿದ ನಿರ್ಮಲಾ ಸೀತರಾಮನ್. ಸ್ಥಳದಲ್ಲೇ ಯೋಜನೆ ಬಗ್ಗೆ ಜಿಲ್ಲಾಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿ ಶೀಘ್ರ ಪರಿಹಾರ ನೀಡುವ ಭರವಸೆ ನೀಡಿದ್ರು.

ಬಳಿಕ ಮಾಧ್ಯಮಗಳ ಜತೆ ಮಾತನಾಡಿದ ಸೀತಾರಾಮನ್ ಅವರು, ಸಿಟಿ ಹೊರವಲಯದಲ್ಲಿ ಗುರುಕುಲ ನಿರ್ಮಾಣ ಆಗುತ್ತಿದೆ. ವೇದ ಶಿಕ್ಷಣ ನೀಡುವ ಗುರುಕುಲಕ್ಕೆ ಶಂಕುಸ್ಥಾಪನೆ ಮಾಡಿದ್ದೇವೆ. ಪ್ರಕೃತಿ ನಡುವೆ ವೇದಗಳ ಬೋಧನೆ ಆಗುತ್ತಿದೆ. ಸ್ಥಳೀಯ ಗ್ರಾಮಸ್ಥರು ಈ ಕಾರ್ಯಕ್ರಮಕ್ಕೆ ಬಂದಿದ್ದಾರೆ. ಸ್ಥಳೀಯರಿಗೂ ವೇದ ಶಿಕ್ಷಣದ ಸದುಪಯೋಗ ಆಗಲಿ. ಜತೆಗೆ ಗೋಶಾಲೆ ನಿರ್ಮಾಣವಾಗುತ್ತಿರುವುದು ಸಂತಸದ ವಿಚಾರ. ನೂತನ ಗುರುಕುಲಕ್ಕೆ ಶುಭವಾಗಲಿ ಎಂದು ಶುಭ ಹಾರೈಸಿದರು.

ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷರಾಗಿ ಅಮಿತ ಕೋರೆ ಅವಿರೋಧ ಆಯ್ಕೆ

ಬೆಳಗಾವಿ: ತೀವ್ರ ಕುತೂಹಲ ಮೂಡಿಸಿದ್ದ ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿ (ಕೆಎಲ್‌ಇ) ಕಾರ್ಯಾಧ್ಯಕ್ಷ ಸ್ಥಾನದ ಆಯ್ಕೆ

ಮುಕ್ತಾಯವಾಗಿದ್ದು, ಈ ಸ್ಥಾನಕ್ಕೆ ಡಾ. ಪ್ರಭಾಕರ ಕೋರೆ ಪುತ್ರ ಅಮಿತ ಕೋರೆ ಅವಿರೋಧ ಆಯ್ಕೆಯಾಗಿದ್ದಾರೆ.

ಸುದೀರ್ಘ 42 ವರ್ಷಗಳವರೆಗೆ ಕೆಎಲ್‌ಇ ಕಾರ್ಯಾಧ್ಯಕ್ಷ ಜವಾಬ್ದಾರಿ ಹೊತ್ತು ಸಂಸ್ಥೆಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆಸಿದ್ದ ಡಾ.ಪ್ರಭಾಕರ ಕೋರೆ ದಿಢೀರ್ ರಾಜೀನಾಮೆ ನೀಡಿದ್ದ ಬೆಳವಣಿಗೆ ಹಲವು ಅಚ್ಚರಿಗೆ ಕಾರಣವಾಗಿತ್ತು. ಆದರೆ ಕೊನೆ ಘಳಿಗೆಯಲ್ಲಿ ನಿರ್ದೇಶಕರನ್ನು ಅವಿರೋಧ ಆಯ್ಕೆ ಮಾಡಿ ನೂತನ ಸಾರಥಿ ನೇಮಕಕ್ಕೆ ವೇದಿಕೆ ಸಿದ್ಧಗೊಳಿಸಲಾಗಿತ್ತು. ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ ಕೆಎಲ್‌ಇ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರೆ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಸಾಕಷ್ಟು ಪೈಪೋಟಿ ಎದುರಾಗಿತ್ತು. ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ, ಪ್ರಭಾಕರ ಕೋರೆ ಪುತ್ರಿ ಪ್ರೀತಿ ದೊಡವಾಡ ಸೇರಿ ಹಲವರ ಹೆಸರು ಕೇಳಿಬಂದಿತ್ತು. ಆದರೆ ಕೊನೆ ಕ್ಷಣದಲ್ಲಿ ಅಮಿತ್ ಕೋರೆ ಆಯ್ಕೆ ಮಾಡುವ ಮೂಲಕ ಯುವಕರಿಗೆ ಆದ್ಯತೆ ನೀಡಲಾಗಿದೆ.

ಅಮಿತ ಕೊಡುಗೆ

ಅಮಿತ ಕೋರೆ ಅವರು ಕೆಎಲ್‌ಇ ಸೊಸೈಟಿಯ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಸದಸ್ಯರಾಗಿ 2010 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಆಡಳಿತಾತ್ಮಕ ನಿರ್ಧಾರಗಳು, ವಿಸ್ತರಣೆ ಯೋಜನೆಗಳು ಮತ್ತು ಸಂಸ್ಥೆಯ ದೀರ್ಘಕಾಲಿಕ ದೃಷ್ಟಿಕೋನ ರೂಪಿಸುವಲ್ಲಿ ಅವರು ಸಕ್ರಿಯರಾಗಿ ಅಪಾರ ಕೊಡುಗೆ ನೀಡಿದ್ದಾರೆ. ಶಿಕ್ಷಣ ಕ್ಷೇತ್ರದೊಂದಿಗೆ ಸಹಕಾರ ಹಾಗೂ ಕೈಗಾರಿಕಾ ವಲಯದಲ್ಲಿಯೂ ಅಮಿತ್ ಕೋರೆ ಅಪಾರ ಅನುಭವ ಹೊಂದಿದ್ದಾರೆ. ಇನ್ಮುಂದೆ ಅವರು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಪ್ರಭಾಕರ ಕೋರೆ ಗೌರವಾನ್ವಿತ ಕಾರ್ಯಾಧ್ಯಕ್ಷ

1984 ರಿಂದ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ 42 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದ ಪ್ರಭಾಕರ ಕೋರೆಯವರ ಅಪಾರ ಅನುಭವವನ್ನು ಸಂಸ್ಥೆಯ ಬೆಳವಣಿಗೆಗೆ ಬಳಸಿಕೊಳ್ಳಲು ಕೆಎಲ್‌ಇ ಸರ್ವ ಸಾಧಾರಣ ಸಭೆಯಲ್ಲಿ ಅವರನ್ನು ಗೌರವ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಚೆಂಡಿನ ಆಕಾರದ ಬಾಂಬ್ ಸ್ಫೋಟ: ಬಾಲಕನಿಗೆ ಗಾಯ

ಎಐ ಚಿತ್ರ.

ಮಂಗಳೂರು: ಚೆಂಡಿನಾಕಾರದ ಶಂಕಿತ ಬಾಂಬ್ ರೀತಿಯ ವಸ್ತುವಿನೊಂದಿಗೆ ಕ್ರಿಕೆಟ್ ಆಡಲು ಹೋದ ಬಾಲಕನೊಬ್ಬ ಗಾಯಗೊಂಡ ಘಟನೆ ದಕ್ಷಿಣ ಕನ್ನಡದಲ್ಲಿ ನಡೆದಿದೆ. ಬೆಳ್ತಂಗಡಿ ತಾಲೂಕಿನ ಬಂದಾರು ಗ್ರಾಮ ದಲ್ಲಿ ಚೆಂಡಿನ ಆಕಾ ರದ ವಸ್ತುವೊಂದು ಸ್ಫೋಟಗೊಂಡು ಬಾಲಕನೊಬ್ಬ ಗಂಭೀರವಾಗಿ ಗಾಯಗೊಂಡಿದ್ದಾನೆ. ಸದ್ಯ ಬಾಲಕ ಪ್ರಾಣಾಪಾಯದಿಂದ ಪಾರಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಘಟನೆಯಲ್ಲಿ ಅಭೀಶ್ ಎಂಬ ಬಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಬೆಳ್ತಂಗಡಿ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ರವಾನಿಸಲಾಗಿದೆ. ಸದ್ಯ ಬಾಲಕ ಪವಾಡಸದೃಶವಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಸದ್ಯ ಘಟನೆಯಿಂದ ಜನರಲ್ಲಿ ಆತಂಕ ಶುರುವಾಗಿದೆ. ಈ ಸಂಬಂಧ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೇಲ್ನೋಟಕ್ಕೆ ಇದು ಕಾಡು ಹಂದಿ ಬೇಟೆ ಆಡಲು ಇಟ್ಟಿದ್ದ ಬಾಂಬ್ ಎಂದು ಶಂಕಿಸಲಾಗಿದೆ.

ನಡೆದಿದ್ದೇನು?

ಬಾಲಕ ಅಭೀಶ್ ಮನೆ ಅಂಗಳದಲ್ಲಿ ಆಟ ಆಡುತ್ತಿದ್ದ. ಈ ವೇಳೆ ಚೆಂಡಿನಾಕಾರದ ವಸ್ತು ಪತ್ತೆಯಾಗಿದೆ. ಬಾಲ್ ರೀತಿ ಇದ್ದ ಬಾಂಬ್‌ನಿಂದ ಮಕ್ಕಳು ಕ್ರಿಕೆಟ್ ಆಡಿದ್ದಾರೆ. ಒಬ್ಬ ಬಾಲಕ ಪತ್ತೆಯಾದ ಚೆಂಡಿನಾಕಾರದ ವಸ್ತುವನ್ನು ಬೌಲ್ ಮಾಡಿದ್ದು, ಅಭೀಶ್ ಬ್ಯಾಟ್‌ನಿಂದ ಹೊಡೆದಾಗ ಬ್ಲಾಸ್ಟ್ ಆಗಿದೆ. ಈ ವೇಳೆ ಅಭೀಶ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ.

ಸಂಪಾದಕೀಯ

ತಡವಾಗಿಯಾದರೂ ಬಯಲಾಯ್ತಲ್ಲ!

ಎರಡು ವರ್ಷಗಳ ಹಿಂದೆ ಕೇವಲ 8 ರಾಜ್ಯಗಳಿಗೆ ಸೀಮಿತವಾಗಿದ್ದ ನಕಲಿ ವಿಶ್ವವಿದ್ಯಾಲಯಗಳು ಈಗ 12 ರಾಜ್ಯಗಳಿಗೆ ವಿಸ್ತರಣೆಯಾಗಿರುವುದರ ಮತ್ತು ಅವುಗಳ ಸಂಖ್ಯೆ 20ರಿಂದ 32ಕ್ಕೆ ಏರಿರುವುದರ ಮಾಹಿತಿ ಹೊರಬಿದ್ದಿದೆ. ಈ ಕುರಿತಾಗಿ ಪಟ್ಟಿಯೊಂದನ್ನು ಬಿಡುಗಡೆ ಮಾಡಿರುವ 'ವಿಶ್ವವಿದ್ಯಾಲಯ ಅನುದಾನ ಆಯೋಗ' (ಯುಜಿಸಿ), ಇಂಥ 'ನಕಲಿ ನೆಲೆ'ಗಳ ಕುರಿತು ಜಾಗೃತರಾಗಿರುವಂತೆ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಎಚ್ಚರಿಕೆ ನೀಡಿದೆ. ದೇಶದ ಶಿಕ್ಷಣ ವ್ಯವಸ್ಥೆಯೊಳಗೇ ತೂರಿಕೊಂಡು ಬಿಲವನ್ನು ಕೊರೆಯುವ ಇಂಥ ಹೆಗ್ಗಣಗಳನ್ನು ಹೀಗೆ ತಡವಾಗಿಯಾದರೂ ಪತ್ತೆಹಚ್ಚಿರುವುದು ಸಮಾಧಾನಕರ ಸಂಗತಿ. ಆದರೆ, ಇಂಥ ನಕಲಿ ವಿಶ್ವವಿದ್ಯಾಲಯಗಳು 12 ರಾಜ್ಯಗಳಿಗೆ ತಮ್ಮ ಕಬಂಧಬಾಹುವನ್ನು ಚಾಚಿ ಸಂಖ್ಯೆಯನ್ನು 32ಕ್ಕೆ ಹೆಚ್ಚಿಸಿಕೊಳ್ಳುವವರೆಗೆ ಆಯಾ ರಾಜ್ಯಗಳ ಆಳುಗ ವ್ಯವಸ್ಥೆಗಳು 'ಕಡ್ಲೆಪುರಿ' ತಿನ್ನುತ್ತಿದ್ದವಾ? ಅಲ್ಲಲ್ಲಿನ ಅಧಿಕಾರಿಗಳ 'ವಿಚಕ್ಷಣಾ ಸಾಮರ್ಥ್ಯ' ಎಲ್ಲಿ ಅವಿತಿಟ್ಟುಕೊಂಡಿತ್ತು? ಎಂಬ ಪ್ರಶ್ನೆಗಳು ಇಲ್ಲಿ ಮೂಡುತ್ತವೆ. ಏಕೆಂದರೆ, ವ್ಯವಸ್ಥೆಯನ್ನು ಕಾವಲು ಕಾಯಬೇಕಾದ ಕೊತ್ವಾಲರು ಮೇಜಿನ ಕೆಳಗೆ ಕೈಚಾಚಿ ಅದನ್ನು ಮಸಿಮಾಡಿಕೊಂಡಾಗ ಮಾತ್ರವೇ ಇಂಥ ಅಪಸವ್ಯಗಳು ಘಟಿಸಲು ಸಾಧ್ಯ ಮತ್ತು ನಕಲಿ ವಿವಿಗಳನ್ನು ತೆರೆದಿಟ್ಟು ಕೂರುವವರಿಗೆ ಭಂಡಧೈರ್ಯ ಬರಲು ಸಾಧ್ಯ. ಆದ್ದರಿಂದ, ಅಧಿಕಾರಿ ವರ್ಗದಲ್ಲಿ ಠಿಕಾಣಿ ಹೂಡಿದಿರುವ ಇಂಥ 'ಅನಾರೋಗ್ಯಕರ' ಕೊಂಡಿಗಳನ್ನು ಮುಲಾಜಿಲ್ಲದೆ ಕಿತ್ತೆಸೆಯಬೇಕಿದೆ. ಗುಣಮಟ್ಟದ ರಸಭರಿತ ಹಣ್ಣುಗಳ ಬುಟ್ಟಿಯಲ್ಲೊಂದು ಕೊಳೆತ ಹಣ್ಣು ಸೇರಿಕೊಂಡಿರುವುದು ಗೊತ್ತಿದ್ದರೂ 'ಒಂದೇ ಒಂದು ಕೊಳೆತ ಹಣ್ಣು ತಾನೇ..?' ಎಂದು ನಿರ್ಲಕ್ಷ್ಯ ಮಾಡಿದರೆ, ಅದು ಮುಂದೊಂದು ದಿನ ದುಬಾರಿಯಾಗಿ ಪರಿಣಮಿಸಬಹುದು. ಹಾಗಾಗಿ ನಕಲಿಗಳ ಮೂಲೋತ್ಪಾಟನೆಯಾಗಲಿ. ಇದು ನಕಲಿ ವಿವಿಗಳಿಗೆ ಮಾತ್ರವಲ್ಲದೆ, ವ್ಯವಸ್ಥೆಯೊಳಗೆ ಝೂಂಡಾ ಊರಿರುವ ಎಲ್ಲ ತೆರನಾದ ಕಳ್ಳಬೆಕ್ಕುಗಳಿಗೂ ಅನ್ವಯಿಸಬೇಕಾದ ಶಿಸ್ತುಕ್ರಮ ಎಂಬುದನ್ನು ಸಂಬಂಧಪಟ್ಟವರು ಅರಿಯಲಿ...

ಸೊಂಪಾದಕೀಯ

ಮದುವೆಯೋ ಮನೆಹಾಳೋ!

ಮದುವೆಗಳು ಸ್ವರ್ಗದಲ್ಲಿ ನಿಶ್ಚಯ ಆಗಿರುತ್ತವೆ ಅಂತ ಹೇಳುತ್ತಾರೆ. ಆದರೆ ಇನ್ನು ಕೆಲವರು 'ಮದುವೆಗಳು ಮನೆಗಳಲ್ಲಿ ನಿಶ್ಚಯ ಆಗುತ್ತವೆ, ಛತ್ರಗಳಲ್ಲಿ ನಡೆಯುತ್ತವೆ' ಅಂತಾರೆ. ಆದರ ಇತ್ತೀಚೆಗೆ ಛತ್ರಗಳಲ್ಲಿ ನಡೆಯಬೇಕಾದ ಮದುವೆಗಳು ಕೂಡಾ ನಡೆಯೋದು ಕಷ್ಟ ಅನ್ನೋ ಥರ ಆಗಿದೆ. ಯಾಕಂದ್ರೆ ಎಲ್ಲ ಸುಸೂತ್ರವಾಗಿ ರೆಡಿ ಆದಮೇಲೂ ಕೊನೆಯ ಕ್ಷಣದಲ್ಲಿ ಮದುವೆಗಳು ಕ್ಯಾನ್ಸಲ್ ಆಗುತ್ತಿವೆ. ವರ್ಷದ ಹಿಂದೆ ತುಮಕೂರು ಜಿಲ್ಲೆಯಲ್ಲಿ ಇದೇ ರೀತಿ ಅಂತಿಮ ಕ್ಷಣದಲ್ಲಿ ವಧು ಮನಸ್ಸು ಬದಲಾಯಿಸಿದ್ದರಿಂದ ಮದುವೆಯೊಂದು ನಿಂತುಹೋಯಿತು. ಅಂದರೆ, ಆಗಬೇಕಾದ ಹುಡುಗನ ಜತೆ ಆಗದೆ, ಬೇರೊಬ್ಬ ಹುಡುಗನ ಜತೆ ವಧುವಿನ ಮದುವೆ ಆಯಿತು ಅನ್ನೋದು ಇನ್ನೂ ಇಂಟರೆಸ್ಟಿಂಗ್ ವಿಷಯ. ಹಿಂದಿನ ದಿನ ರಾತ್ರಿ ಕೂಡಾ ಯಾರಿಗೂ ಲಗ್ನಕ್ಕೆ ವಿಘ್ನ ಬರುತ್ತೆ ಅಂತ ಗೊತ್ತಾಗಿರಲಿಲ್ಲ. ಯಾಕಂದ್ರೆ ಆರತಕ್ಷತೆಯಲ್ಲೂ ವಧು ನೀಟಾಗಿ ಅಕ್ಷತೆ ಹಾಕಿಸಿಕೊಂಡು ಕಾರ್ಯಕ್ರಮ ಮುಗಿಸಿದ್ದಳು. ಮರುದಿನ ಬೆಳಗ್ಗೆ ಹಸೆಮಣೆಯಲ್ಲಿ ವರನಿಂದ ತಾಳಿ ಕಟ್ಟಿಸಿಕೊಳ್ಳುವ ಸಮಯ. ವಧು ಅದಕ್ಕೂ ತಯಾರಾಗಿಯೇ ಕುಳಿತಿದ್ದಳು. ಆದರೆ, ಸರಿಯಾಗಿ ತಾಳಿ ಕಟ್ಟೋ ಸಮಯಕ್ಕೆ, ''ತಾಳಿ'' ಅಂತ ಹುಡುಗಿಯ ಪ್ರಿಯಕರ ಎಂಟ್ರಿ ಕೊಟ್ಟನಂತೆ. ಅವನನ್ನು ನೋಡಿದ ವಧು, ಕೊನೆಯ ಕ್ಷಣದಲ್ಲಿ ''ನಂಗೆ ಈ ಮದ್ವೆ ಬೇಡ'' ಅಂತ ವರಾತ ತೆಗೆದಳಂತೆ. ಹಳೆಯ ಪ್ರೀತಿಯು ತಾಳಿ ಕಟ್ಟೋ ಸಮಯದಲ್ಲಿ ಮರುಕಳಿಸಿದ ಕಾರಣಕ್ಕೆ ಮದುವೆ ಆಗೋ ಹುಡುಗನನ್ನು ಹೊರಗೆ ಕಳುಹಿಸಿ, ಪ್ರಿಯಕರನಿಂದಲೇ ತಾಳಿ ಕಟ್ಟಿಸಿಕೊಂಡಳಂತೆ ಹುಡುಗಿ. ಹುಡುಗನ ಕಡೆಯವರು ಪಾಪ, 'ನಿಮ್ಮ ಹುಡುಗಿಗಾಗಿ ನಾವು ಮಾಡಿದ ಖರ್ಚನ್ನು ನಮಗೆ ಕೊಡಿ' ಅಂತ ಖರ್ಚಿಗೆ ಕಾಸು ತೆಗೆದುಕೊಂಡವರಂತೆ ಅಲ್ಲಿಂದ ಹೊರಬಂದರಂತೆ. ಒಟ್ಟಿನಲ್ಲಿ ಕೈಗೆ ಬಂದಿದ್ದು ಬಾಯಿಗೆ ಬರಲಿಲ್ಲ ಎನ್ನುವಂತೆ, ನಿಶ್ಚಿತಾರ್ಥದವರೆಗೆ ಬಂದಿದ್ದು, ಮದುವೆವರೆಗೆ ಬಾರದೆ ವರ ನಿರಾಶನಾದನಂತೆ. ಇದನ್ನೆಲ್ಲಾ ನೋಡಿದವರು, ''ಹುಡುಗ-ಹುಡುಗಿಯ ಜಾತಕ ನೋಡಿ, ನಿಶ್ಚಿತಾರ್ಥ ನಡೆದು, ಬೆಳಗ್ಗೆ ಹಸೆಮಣೆ ಏರೋದು ಅಂತ ಫಿಕ್ಸ್ ಆಗಿದ್ದರೂ ತಾಳಿ ಕಟ್ಟುವ ಶುಭವೇಳೆ ಮುಗಿಯುವವರೆಗೂ ಮದುವೆ ಆಗೋದು ಗ್ಯಾರಂಟಿ ಇಲ್ಲ, ಯಾಕಂದ್ರೆ, ಎವ್ವೆರಿ ಡೇ ಈಸ್ ನಾಟ್ WED-nesday''ಎನ್ನುತ್ತಿದ್ದಾರೆ.

ಸಂಪಾದಕರ ಸದ್ಯಶೋಧನೆ

ಫ್ಯಾಂಟಮ್‌ಗೆ ತೊಂಬತ್ತು

ನನ್ನ ಕಾಮಿಕ್ಸ್ ಲೋಕದಲ್ಲಿ ಸೂಪರ್ ಹೀರೋಗಳ ಪಟ್ಟಿ ದೊಡ್ಡದಿದೆ. ಆದರೆ, ಯಾವುದೇ ಅತೀಂದ್ರಿಯ ಶಕ್ತಿಗಳಿಲ್ಲದೇ, ಕೇವಲ ತನ್ನ ಬುದ್ಧಿವಂತಿಕೆ ಮತ್ತು ದೈಹಿಕ ಬಲದಿಂದ ದುಷ್ಟರನ್ನು ಶಿಕ್ಷಿಸುವ, ಮುಖವಾಡ ಧರಿಸಿದ ಮೊದಲ ಹೀರೋ ಎಂದರೆ ಅದು 'ಫ್ಯಾಂಟಮ್'. 1936ರ ಫೆಬ್ರವರಿ 17ರಂದು ಅಮೆರಿಕದ ಲೀ ಫಾಕ್ ಅವರ ಕಲ್ಪನೆಯಲ್ಲಿ ಮೂಡಿಬಂದ ಈ ಪಾತ್ರಕ್ಕೆ ಈಗ ಭರ್ತಿ 90 ವರ್ಷ. ಫ್ಯಾಂಟಮ್‌ನ ಕಥೆ ಆರಂಭವಾಗುವುದು 1536ರಲ್ಲಿ, ಸಮುದ್ರದೇವತೆಗಳ ನಾಡು ಎಂದು ಕರೆಯುತ್ತಿದ್ದ ಬೆಂಗಾಲ್ಲಾ ತೀರದಲ್ಲಿ ಕಡಲ್ಗಳ್ಳರ ದಾಳಿಗೆ ಒಳಗಾದ ನಾವಿಕ ಕ್ರಿಸ್ಟೋಫರ್ ಸ್ಟ್ಯಾಂಡ್ ಎಂಬಾತ ತನ್ನ ತಂದೆಯ ಕೊಲೆಗೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಮತ್ತು ಜಗತ್ತಿನಾದ್ಯಂತ ಕಡಲ್ಗಳ್ಳತನ ಹಾಗೂ ಕ್ರೌರ್ಯವನ್ನು ಕೊನೆಗಾಣಿಸುವುದಾಗಿ ಸಮುದ್ರದ ತಟದಲ್ಲಿ ಬಿದ್ದಿದ್ದ ಹಂತಕನ ತಲೆಬುರುಡೆಯ ಮೇಲೆ ಆಣೆ ಮಾಡುತ್ತಾನೆ. ಅಂದಿನಿಂದ ಆರಂಭವಾದ ಈ ಪರಂಪರೆ ಇಂದಿಗೂ ಮುಂದುವರಿಯುತ್ತಿದೆ. ಸ್ವಾರಸ್ಯಕರ ಸಂಗತಿಯೆಂದರೆ, ಫ್ಯಾಂಟಮ್ ಅಮರನಲ್ಲ. ಪ್ರಸ್ತುತ ಕಾಮಿಕ್ಸ್‌ನಲ್ಲಿ ನಾವು ನೋಡುತ್ತಿರುವುದು 21ನೇ ತಲೆಮಾರಿನ ಫ್ಯಾಂಟಮ್. ತಂದೆಯಿಂದ ಮಗನಿಗೆ ಈ ಜವಾಬ್ದಾರಿ ಹಸ್ತಾಂತರವಾಗುತ್ತಾ ಸಾಗುತ್ತದೆ. ಹೊರಜಗತ್ತಿಗೆ ಫ್ಯಾಂಟಮ್ ಎಂದರೆ 400 ವರ್ಷಗಳಿಂದ ಬದುಕಿರುವ ಒಬ್ಬನೇ ವ್ಯಕ್ತಿ ಎಂಬ ನಂಬಿಕೆಯಿದೆ. ಹಾಗಾಗಿಯೇ ಅವನನ್ನು 'ನಡೆಯುವ ಪ್ರೇತ' (The Ghost Who Walks) ಎಂದು ಕರೆಯುತ್ತಾರೆ. ಫ್ಯಾಂಟಮ್ ಇತರ ಸೂಪರ್ ಹೀರೋಗಳಿಗಿಂತ ಭಿನ್ನವಾಗಿ ನಿಲ್ಲಲು ಕೆಲವು ಕಾರಣಗಳಿವೆ. ಕಾಮಿಕ್ಸ್ ಇತಿಹಾಸದಲ್ಲಿ ಮೊದಲ ಬಾರಿಗೆ ಮೈಗೆ ಅಂಟಿಕೊಳ್ಳುವಂಥ ಕಾಸ್ಟ್ಯೂಮ್ ಧರಿಸಿದ ಹೀರೋ ಇವನು. ಮೂಲತಃ ಲೀ ಫಾಕ್ ಇದನ್ನು ಬೂದು ಬಣ್ಣದಲ್ಲಿ ಕಲ್ಪಿಸಿಕೊಂಡಿದ್ದರು, ಆದರೆ ಮುದ್ರಣದ ತಾಂತ್ರಿಕ ಕಾರಣದಿಂದ ಅದು ನೇರಳೆ ಬಣ್ಣಕ್ಕೆ ತಿರುಗಿತು. ಫ್ಯಾಂಟಮ್‌ನ ಕಣ್ಣುಗಳು ಮುಖವಾಡದ ಹಿಂದೆ ಬಿಳಿಯಾಗಿ ಕಾಣುತ್ತವೆ. ಇದು ಅವನಲ್ಲಿ ಒಂದು ರಹಸ್ಯಮಯ ಮತ್ತು ಭಯಾನಕ ಕಳೆಯನ್ನು ನೀಡುತ್ತದೆ. ಫ್ಯಾಂಟಮ್ ತನ್ನ ಎರಡೂ ಕೈಗಳಲ್ಲಿ ಎರಡು ವಿಭಿನ್ನ ಉಂಗುರಗಳನ್ನು ಧರಿಸುತ್ತಾನೆ. ಬಲಗೈನಲ್ಲಿ 'ತಲೆಬುರುಡೆ'ಯ ಗುರುತಿನ ಉಂಗುರವಿದ್ದು, ಇದನ್ನು ಹೊಡೆದಾಗ ದುಷ್ಟರ ಮುಖದ ಮೇಲೆ ಶಾಶ್ವತವಾಗಿ ತಲೆಬುರುಡೆಯ ಗುರುತು ಮೂಡುತ್ತದೆ. ಎಡಗೈನಲ್ಲಿ 'ಒಳ್ಳೆಯತನ'ದ ಗುರುತಿನ ಉಂಗುರವಿದ್ದು, ಇದು ತನ್ನ ರಕ್ಷಣೆಗೆ ಬರುವವರಿಗೆ ಫ್ಯಾಂಟಮ್ ನೀಡುವ ರಕ್ಷಣೆಯ ಸಂಕೇತ. ಫ್ಯಾಂಟಮ್‌ನ ವಾಸಸ್ಥಾನ 'ತಲೆಬುರುಡೆ ಗುಹೆ'. ಬೆಂಗಾಲ್ಲಾ ಎಂಬ ಕಾಲ್ಪನಿಕ ದೇಶದ ದಟ್ಟ ಅರಣ್ಯದ ಒಳಗೆ ಇದು ನೆಲೆಸಿದೆ. ಅವನಿಗೆ ಸಹಾಯವಾಗಿ 'ಬಂದರ್' ಎಂಬ ಕುಳ್ಳಗಿನ ಬುಡಕಟ್ಟು ಜನಾಂಗದವರಿದ್ದಾರೆ. ಫ್ಯಾಂಟಮ್‌ನ ನಂಬಿಕಸ್ತ ನಾಯಿ 'ಡೆವಿಲ್' ಮತ್ತು ಕುದುರೆ 'ಹೀರೋ' ಕಾಮಿಕ್ಸ್ ಪ್ರಿಯರಿಗೆ ಚಿರಪರಿಚಿತ. ಫ್ಯಾಂಟಮ್ ಕೇವಲ ಕಾಡಿನ ರಾಜನಲ್ಲ, ಅವನು ಸುಧಾರಿತ ತಂತ್ರಜ್ಞಾನ ಹೊಂದಿರುವ 'ಜಂಗಲ್ ಪೆಟ್ರೋಲ್' ಎಂಬ ಪೊಲೀಸ್ ಪಡೆಯ ಮುಖ್ಯಸ್ಥನೂ ಹೌದು. ಭಾರತೀಯ ಕಾಮಿಕ್ಸ್ ಓದುಗರಿಗೆ ಫ್ಯಾಂಟಮ್ ಅಚ್ಚುಮೆಚ್ಚು. 60 ಮತ್ತು 70ರ ದಶಕದಲ್ಲಿ 'ಇಂದ್ರಜಾಲ ಕಾಮಿಕ್ಸ್' ಮೂಲಕ ಫ್ಯಾಂಟಮ್ ಭಾರತಕ್ಕೆ ಲಗ್ಗೆ ಇಟ್ಟ. ಲೀ ಫಾಕ್ ಆರಂಭದಲ್ಲಿ ಕಥೆಯ ಹಿನ್ನೆಲೆಯನ್ನು ಭಾರತವೆಂದೇ ಅಂದುಕೊಂಡಿದ್ದರು. ಹಾಗಾಗಿಯೇ ಇಲ್ಲಿ ಬರುವ ಹೆಸರುಗಳಾದ 'ಬೆಂಗಾಲ್ಲಾ', 'ಸಿಂಗ್ ಬ್ರದರ್‌ಹುಡ್' ಕಡಲ್ಗಳ್ಳರು ಭಾರತೀಯ ನಂಟನ್ನು ನೆನಪಿಸುತ್ತವೆ. ಕಿಶೋರ್ ಕುಮಾರ್ ಅವರಂಥ ದಿಗ್ಗಜರೂ ಫ್ಯಾಂಟಮ್‌ನ ದೊಡ್ಡ ಅಭಿಮಾನಿಗಳಾಗಿದ್ದರು. ಕನ್ನಡ ಸೇರಿದಂತೆ ಅನೇಕ ಭಾರತೀಯ ಭಾಷೆಗಳಲ್ಲಿ ಫ್ಯಾಂಟಮ್ ಕಥೆಗಳು ಅನುವಾದಗೊಂಡು ಮನೆಮಾತಾಗಿದ್ದವು. ಹೆಚ್ಚಿನ ಸೂಪರ್ ಹೀರೋಗಳು ಏಕಾಂಗಿಗಳು. ಆದರೆ ಫ್ಯಾಂಟಮ್ ತನ್ನ ಪ್ರೇಯಸಿ ಡಯಾನಾ ಪಾಮರ್‌ಳನ್ನು ಮದುವೆಯಾಗಿ, ಇಬ್ಬರು ಮಕ್ಕಳನ್ನು (ಕಿಟ್ ಮತ್ತು ಹೆಲಾಯಿಸ್) ಹೊಂದಿರುವ ಸಂಸಾರಿ. ಇದು ಅವನ ಪಾತ್ರಕ್ಕೆ ಹೆಚ್ಚಿನ ಮಾನವೀಯ ಮೌಲ್ಯವನ್ನು ನೀಡುತ್ತದೆ. ಅವನು ತನ್ನ ಮಕ್ಕಳನ್ನು ಮುಂದಿನ 'ಫ್ಯಾಂಟಮ್' ಆಗಿ ರೂಪಿಸಲು ಕಾಡಿನಲ್ಲೇ ಶಿಕ್ಷಣ ನೀಡುತ್ತಾನೆ. ಫ್ಯಾಂಟಮ್ ಕಥೆಗಳು ಕೇವಲ ಸಾಹಸವಲ್ಲ, ಅವುಗಳಲ್ಲಿ ಒಂದು ನೈತಿಕ ಸಂದೇಶವಿರುತ್ತದೆ. 'ಯಾರು ಅನ್ಯಾಯ ಮಾಡುತ್ತಾರೋ ಅವರಿಗೆ ಫ್ಯಾಂಟಮ್ ಶಿಕ್ಷೆ ನೀಡುತ್ತಾನೆ' ಎಂಬುದು ಅಲ್ಲಿನ ನಾಣ್ಣುಡಿ. ಪ್ರಾಣಿಗಳನ್ನು ಹಿಂಸಿಸುವುದು, ಕಾಡನ್ನು ನಾಶ ಮಾಡುವುದು ಮತ್ತು ಸ್ತ್ರೀ ಶೋಷಣೆಯ ವಿರುದ್ಧ ಫ್ಯಾಂಟಮ್ ಸದಾ ಧ್ವನಿ ಎತ್ತುತ್ತಾನೆ. ತೊಂಬತ್ತು ವರ್ಷಗಳಾದರೂ ಫ್ಯಾಂಟಮ್‌ನ ಜನಪ್ರಿಯತೆ ಕುಗ್ಗಿಲ್ಲ. ಇಂದಿನ ಸ್ಪೈಡರ್‌ಮ್ಯಾನ್ ಅಥವಾ ಬ್ಯಾಟ್‌ಮ್ಯಾನ್‌ಗಳಿಗಿಂತ ಮೊದಲೇ ಜಗತ್ತನ್ನು ರಕ್ಷಿಸಲು ನಿಂತವನು ಇವನು.

ಮೈ ಡಿಯರ್ ಎಡ್ವಿನಾ ಮೌಂಟ್ ಬ್ಯಾಟನ್!

ಮೋಹನ್ ವಿಶ್ವ
ವೀಕೆಂಡ್ ವಿತ್ ಮೋಹನ್
vveditoped@gmail.com

ಪ್ರಧಾನಮಂತ್ರಿಗಳ ಗ್ರಂಥಾಲಯವು ಕಳೆದ ವರ್ಷ ಸೋನಿಯಾ ಗಾಂಧಿಯವರಿಗೆ ಪತ್ರ ಬರೆದು, ಜವಾಹರಲಾಲ್ ನೆಹರು ಅವರು ಎಡ್ವಿನಾ ಮೌಂಟ್ ಬ್ಯಾಟನ್ ಅವರಿಗೆ ಬರೆದಿದ್ದ ಪತ್ರಗಳನ್ನು ಹಿಂದಿರುಗಿಸುವಂತೆ ಕೇಳಿತ್ತು. ಇದರ ಜತೆಗೆ ನೆಹರು ಅವರು ಜಯಪ್ರಕಾಶ್ ನಾರಾಯಣ್ ಮತ್ತು ಆಲ್ಬರ್ಟ್ ಐನ್‌ಸ್ಟೀನ್ ಅವರಿಗೆ ಬರೆದ ಪತ್ರಗಳನ್ನೂ ಹಿಂದಿರುಗಿಸುವಂತೆ ಅದು ಕೇಳಿದೆ. 51 ಪೆಟ್ಟಿಗೆಗಳಲ್ಲಿ ತುಂಬಿದ್ದ ಪತ್ರಗಳನ್ನು 2008ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಸೋನಿಯಾ ಗಾಂಧಿಯವರ ಮನೆಗೆ ಗ್ರಂಥಾಲಯದಿಂದ ತರಿಸಿಕೊಳ್ಳಲಾಗಿತ್ತು. ಅಂದಿನಿಂದ ಇಂದಿನವರೆಗೂ ಆ ಪತ್ರಗಳನ್ನು ಸೋನಿಯಾ ಗಾಂಧಿಯವರು ಹಿಂದಿರುಗಿಸಿಲ್ಲ. 2025ರ ಡಿಸೆಂಬರ್ 10ರಂದು ಪ್ರಧಾನಮಂತ್ರಿಗಳ ಗ್ರಂಥಾಲಯದ ಸದಸ್ಯರಾದ ರಿಜ್ವಾನ್ ಕದ್ರಿ ಅವರು ರಾಹುಲ್ ಗಾಂಧಿಯವರಿಗೆ ಪತ್ರ ಬರೆದು, ಸೋನಿಯಾ ಗಾಂಧಿಯವರು ಪಡೆದಿದ್ದ ಮೂಲಪತ್ರವನ್ನು ಹಿಂದಿರುಗಿಸಲು ಹೇಳಿದ್ದರು ಅಥವಾ ಪತ್ರಗಳನ್ನು ಫೋಟೋಕಾಪಿ ಅಥವಾ ಡಿಜಿಟಲ್ ರೂಪದಲ್ಲಿ ವಾಪಸ್ ನೀಡುವಂತೆ ಕೇಳಿದ್ದರು. ಗ್ರಂಥಾಲಯದ ಸದಸ್ಯರು ಕಳುಹಿಸಿದ ಪತ್ರಕ್ಕೆ ಸ್ಪಂದಿಸದ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿಯವರು ನೆಹರು ಬರೆದಿರುವ ಪತ್ರಗಳನ್ನು ಇಂದಿಗೂ ಹಿಂದಿರುಗಿಸಿಲ್ಲ. ಕದ್ರಿಯವರು ಹೇಳುವಂತೆ ಸೋನಿಯಾ ಗಾಂಧಿಯವರು ತೆಗೆದುಕೊಂಡು ಹೋಗಿದ್ದ ಪೆಟ್ಟಿಗೆಗಳಲ್ಲಿ ನೆಹರು ಅವರು ಎಡ್ವಿನಾ ಮೌಂಟ್ ಬ್ಯಾಟನ್, ಆಲ್ಬರ್ಟ್ ಐನ್‌ಸ್ಟೀನ್, ಜಯಪ್ರಕಾಶ್ ನಾರಾಯಣ್, ಪದ್ಮಜಾ ನಾಯ್ಡು, ವಿಜಯ ಲಕ್ಷ್ಮಿ ಪಂಡಿತ್ ಮತ್ತು ಬಾಬು ಜಗಜೀವನ್ ರಾಮ್ ಅವರಿಗೆ ಬರೆದ ಪತ್ರಗಳಿದ್ದು, ಅಷ್ಟೂ ಪತ್ರಗಳನ್ನು ಹಿಂದಿರುಗಿಸಿದರೆ ಅನೇಕ ಸಂಶೋಧನೆಗಳಿಗೆ ಉಪಯೋಗವಾಗಲಿದೆ.

ಸೋನಿಯಾ ಗಾಂಧಿಯವರು 2008ರಲ್ಲಿ, ನೆಹರು ಬರೆದ ಪತ್ರಗಳಿದ್ದ 51 ಪೆಟ್ಟಿಗೆಗಳನ್ನು ಪ್ರಧಾನಮಂತ್ರಿಗಳ ಗ್ರಂಥಾಲಯದಿಂದ ಅಧಿಕೃತವಾಗಿ ಹೊತ್ತೊಯ್ದದ್ದು ಯಾಕೆ ಎಂಬ ಪ್ರಶ್ನೆಗೆ ಇದುವರೆಗೂ ಉತ್ತರ ಸಿಕ್ಕಿಲ್ಲ. ಕಾಂಗ್ರೆಸ್ಸಿನ ನೆಹರು ಎಡ್ವಿನಾ ಮೌಂಟ್ ಬ್ಯಾಟನ್‌ಗೆ ಬರೆದಿದ್ದ ಪತ್ರದಲ್ಲಿ ಅಂಥದ್ದೇನಿದೆ? ಭಾರತದ ಮೊದಲ ಪ್ರಧಾನಿಯಾಗಿದ್ದ ನೆಹರು ಬರೆದಿದ್ದ ಪತ್ರದಲ್ಲಿರುವ ಅಂಶವನ್ನು ತಿಳಿಯುವ ಹಕ್ಕು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಇದೆ. ಜೈಲಿನಲ್ಲಿ ಐಷಾರಾಮಿ ಸೆರೆವಾಸ ಅನುಭವಿಸಿದ್ದ ನೆಹರುರಿಗೆ ಇಂದಿರಾ ಗಾಂಧಿಯವರು ಚಿಕ್ಕ ವಯಸ್ಸಿನಲ್ಲಿ ಬರೆದಿದ್ದ ಪತ್ರವನ್ನು ಶಾಲಾ ಮಕ್ಕಳ ಪಠ್ಯದಲ್ಲಿ ಸೇರಿಸಿದ್ದ ಕಾಂಗ್ರೆಸ್ ಪಕ್ಷವು, ನೆಹರು ಅವರು ಎಡ್ವಿನಾ ಮೌಂಟ್ ಬ್ಯಾಟನ್‌ರಿಗೆ ಬರೆದಿದ್ದ ಪತ್ರದ ಬಗ್ಗೆ ಕೇಳಿದಾಗ ಮಾತ್ರ ಗಪ್ ಚುಪ್ ಆಗಿದ್ದೇಕೆ? ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪಕ್ಷವೆಂದು ಬುರುಡೆ ಬಿಡುವ ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಗಾಂಧಿಯವರು, ನೆಹರು ಬರೆದ ಪತ್ರಗಳನ್ನು ಯಾಕೆ ಗ್ರಂಥಾಲಯಕ್ಕೆ ಹಿಂದಿರುಗಿಸಿಲ್ಲ? ಎಡ್ವಿನಾ ಮೌಂಟ್ ಬ್ಯಾಟನ್ ಅವರು, ಭಾರತದ ಕೊನೆಯ ಬ್ರಿಟಿಷ್ ವೈಸ್‌ರಾಯ್ ಆಗಿದ್ದ ಮೌಂಟ್ ಬ್ಯಾಟನ್‌ರ ಹೆಂಡತಿ; 1947ರಲ್ಲಿ ಬ್ರಿಟಿಷರಿಂದ ವಾಪಸ್ ಅಧಿಕಾರ ಹಸ್ತಾಂತರವಾಗುವ ಸಂದರ್ಭದಲ್ಲಿ ಅವರು ಭಾರತಕ್ಕೆ ಬಂದಿದ್ದರು. ಈ ಅಧಿಕಾರ ಹಸ್ತಾಂತರದ ಸಂದರ್ಭದಲ್ಲಿ ಅನೇಕ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು. ಪ್ರಮುಖವಾಗಿ ಅಖಂಡ ಭಾರತದ ವಿಭಜನೆಯಾಗಿತ್ತು. ನಿರ್ಣಯಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ನೆಹರು ಮತ್ತು ಇತರ ನಾಯಕರ ನಡುವೆ ಅನೇಕ ಪತ್ರ ವ್ಯವಹಾರಗಳು ನಡೆದಿದ್ದವು. ನೆಹರು ಹಾಗೂ ಎಡ್ವಿನಾ ಮೌಂಟ್ ಬ್ಯಾಟನ್ ನಡುವೆ ಪತ್ರದ ಮೂಲಕ ಅನೇಕ ವಿಷಯಗಳ ಬಗ್ಗೆ ಚರ್ಚೆಯಾಗಿರಬಹುದು. ಆ ವಿಷಯಗಳನ್ನು ವ್ಯವಸ್ಥಿತವಾಗಿ ಮುಚ್ಚಿಹಾಕುವ ಸಂಚಿನ ಭಾಗವಾಗಿ ಸೋನಿಯಾ ಗಾಂಧಿಯವರ ಕಡೆಯಿಂದ, ಪತ್ರಗಳಿದ್ದ 51 ಪೆಟ್ಟಿಗೆಗಳನ್ನು ಪ್ರಧಾನಿಯವರ ಗ್ರಂಥಾಲಯದಿಂದ 2008ರಲ್ಲಿ ಹೊತ್ತೊಯ್ಯಲಾಗಿತ್ತೆಂದು ಹೇಳಲಾಗುತ್ತಿದೆ. ಪ್ರಧಾನಮಂತ್ರಿಗಳ ಗ್ರಂಥಾಲಯದ ಸದಸ್ಯ ಕದ್ರಿಯವರು ಸೋನಿಯಾ ಗಾಂಧಿಯವರಿಗೆ ಬರೆದಿರುವ ಪತ್ರದಲ್ಲಿ, ಸ್ವತಃ ಇಂದಿರಾ ಗಾಂಧಿಯವರು 1971ರಲ್ಲಿ ನೆಹರು ಅವರ ಪತ್ರಗಳನ್ನು ಜೋಪಾನವಾಗಿ ಗ್ರಂಥಾಲಯದಲ್ಲಿ ಎತ್ತಿಡಲು ಸೂಚನೆ ನೀಡಿದ್ದರೆಂದು ಹೇಳಿದ್ದಾರೆ.

ನೆಹರು ಅವರು ಎಡ್ವಿನಾ ಮೌಂಟ್ ಬ್ಯಾಟನ್ ಅವರಿಗೆ ಬರೆದಿರುವ ಪತ್ರಗಳನ್ನು ಸೋನಿಯಾ ಗಾಂಧಿಯವರು ತೆಗೆದುಕೊಂಡು ಹೋಗಿರುವ ಕಾರಣಕ್ಕೆ, ಪತ್ರದಲ್ಲಿನ ವಿಷಯದ ಬಗ್ಗೆ ಗ್ರಂಥಾಲಯದಲ್ಲಿ ಮಾಹಿತಿಯಿಲ್ಲ, ಆದರೆ ಎಡ್ವಿನಾ ಮೌಂಟ್ ಬ್ಯಾಟನ್ ಮಗಳು ಪಮೇಲಾ ಹಿಕ್ಸ್ ಅವರು ಕೆಲವು ಪತ್ರಗಳನ್ನು ಓದಿರುವುದಾಗಿ ಹೇಳಿದ್ದಾರೆ. Daughter of Empire: Life as a Mountbatten ಎಂಬ ತಮ್ಮ

ಪುಸ್ತಕದಲ್ಲಿ ಅವರು ಈ ಬಗ್ಗೆ ಉಲ್ಲೇಖಿಸಿದ್ದಾರೆ. ಪಿಟಿಐ ವರದಿಯ ಪ್ರಕಾರ, ತಮ್ಮ ತಾಯಿ ಮತ್ತು ನೆಹರು ನಡುವೆ ಆಳವಾದ ಸ್ನೇಹವಿತ್ತು; ಅದು 1947ರಲ್ಲಿ ತಮ್ಮ ಪತಿ ಮತ್ತು ಭಾರತದ ಕೊನೆಯ ವೈಸರಾಯ್ ಲಾರ್ಡ್ ಲೂಯಿಸ್ ಮೌಂಟ್ ಬ್ಯಾಟನ್ ಅವರೊಂದಿಗೆ ಎಡ್ವಿನಾ ಭಾರತಕ್ಕೆ ಬಂದಿಳಿದಾಗ ಪ್ರಾರಂಭವಾಯಿತು ಎಂದು ಪಮೇಲಾ ಬರೆದಿದ್ದಾರೆ. ಎಡ್ವಿನಾ ಅವರು ನೆಹರುರಲ್ಲಿ ತಾವು ಬಯಸುತ್ತಿದ್ದ ಒಡನಾಟ, ಸಮಾನತೆ ಮತ್ತು ಬುದ್ಧಿಶಕ್ತಿಯನ್ನು ಕಂಡುಕೊಂಡರು ಎಂದು ಪಮೇಲಾ ಹೇಳಿದ್ದಾರೆ.

ಎಡ್ವಿನಾ ಮೌಂಟ್ ಬ್ಯಾಟನ್ ಭಾರತವನ್ನು ತೊರೆಯಲು ಸಜ್ಜಾದಾಗ, ನೆಹರುರಿಗೆ ಪಚ್ಚೆ ಉಂಗುರವನ್ನು ಉಡುಗೊರೆಯಾಗಿ ನೀಡಲು ಬಯಸಿದ್ದರು. ಆದರೆ ನೆಹರು ಅದನ್ನು ತೆಗೆದುಕೊಳ್ಳುವುದಿಲ್ಲ ಎಂದು ತಿಳಿದಿದ್ದ ಕಾರಣಕ್ಕೆ, ಅದನ್ನು ಅವರ ಮಗಳು ಇಂದಿರಾ ಗಾಂಧಿಗೆ ನೀಡಿದ್ದರು. ಪಮೇಲಾ ತಮ್ಮ ಪುಸ್ತಕದಲ್ಲಿ ಚರ್ಚಿಸುವ, ಎಡ್ವಿನಾ ಕುರಿತಾದ ನೆಹರು ಅವರ ವಿದಾಯ ಭಾಷಣವು ಕೂಡ ಆಸಕ್ತಿದಾಯಕವಾಗಿದೆ. 'ನೀವು ಎಲ್ಲಿಗೆ ಹೋದರೂ ಸಾಂತ್ವನವನ್ನು ತಂದಿದ್ದೀರಿ, ನೀವು ಭರವಸೆ ಮತ್ತು ಪ್ರೋತ್ಸಾಹವನ್ನು ತಂದಿದ್ದೀರಿ' ಎಂದು ನೆಹರು ಎಡ್ವಿನಾ ಕುರಿತು ತಮ್ಮ ಭಾಷಣದಲ್ಲಿ ಹೇಳಿದ್ದರು. 'ಭಾರತದ ಜನರು ನಿಮ್ಮನ್ನು ಪ್ರೀತಿಸಬೇಕು, ನಿಮ್ಮನ್ನು ತಮ್ಮಲ್ಲಿ ಒಬ್ಬರಾಗಿ ನೋಡಬೇಕು ಮತ್ತು ನೀವು ಹೋಗುತ್ತಿರುವುದಕ್ಕೆ ದುಃಖಿಸಬೇಕು' ಎಂದು ಕೂಡ ನೆಹರು ಹೇಳಿದ್ದಾರೆಂದು ಹೇಳುತ್ತಾರೆ. ಮೌಲಾನಾ ಅಬ್ದುಲ್ ಕಲಾಂ ಅವರು ತಮ್ಮ ಆತ್ಮಚರಿತ್ರೆಯ ಪುಸ್ತಕದಲ್ಲಿ- 1947ರಲ್ಲಿ ಭಾರತ ಸ್ವತಂತ್ರಗೊಂಡ ಸಂದರ್ಭದಲ್ಲಿ ಎಡ್ವಿನಾ ಮೌಂಟ್ ಬ್ಯಾಟನ್ ದೊಡ್ಡ ಪ್ರಭಾವ ಬೀರಿದ್ದರೆಂದು ಬರೆದಿದ್ದಾರೆ. 'ಜವಾಹರಲಾಲ್ ನೆಹರು ಅವರು ಲಾರ್ಡ್ ಮೌಂಟ್ ಬ್ಯಾಟನ್ ಅವರಿಂದ ಪ್ರಭಾವಿತರಾಗಿದ್ದರು. ಆದರೆ ಲೇಡಿ ಮೌಂಟ್ ಬ್ಯಾಟನ್ ಅವರ ಪ್ರಭಾವ ಇನ್ನೂ ಹೆಚ್ಚಾಗಿರಬಹುದು. ಅವರು ಬುದ್ಧಿವಂತರು ಮಾತ್ರವಲ್ಲ, ಅತ್ಯಂತ ಆಕರ್ಷಕ ಮತ್ತು ಸ್ನೇಹಪರ ಸ್ವಭಾವವನ್ನು ಹೊಂದಿದ್ದರು' ಎಂದು ಕೂಡ ಈ ಪುಸ್ತಕದಲ್ಲಿ ಬರೆಯಲಾಗಿದೆ.

ಪಮೇಲಾ ಮೌಂಟ್ ಬ್ಯಾಟನ್ ತಮ್ಮ ಮನೆಯಲ್ಲಿ ಸಿಕ್ಕ ಡೈರಿಗಳಲ್ಲಿ ಬರೆದಿದ್ದ ವಿಷಯಗಳು ಮತ್ತು ಅವರ ಕುಟುಂಬದ ಆಲ್ಬಮ್‌ಗಳಿಂದ ಆಯ್ದ ಭಾಗಗಳನ್ನು ಬಳಸಿ 'ಇಂಡಿಯಾ ರಿಮೆಂಬರ್ಡ್: ಎ ಪರ್ಸನಲ್ ಅಕೌಂಟ್ ಆಫ್ ದಿ ಮೌಂಟ್ ಬ್ಯಾಟನ್ಸ್ ಡ್ಯೂರಿಂಗ್ ದ ಪವರ್ ಟ್ರಾನ್ಸ್‌ಫರ್' ಎಂಬ ಪುಸ್ತಕವನ್ನು ಅವರು ಬರೆದಿದ್ದಾರೆ. ಪಮೇಲಾ ನೆಹರುರನ್ನು ಪ್ರೀತಿಯಿಂದ 'ಮಾಮು' ಎಂದು ಕರೆಯುತ್ತಿದ್ದರು, ಎಡ್ವಿನಾ-ನೆಹರು ಸಂಬಂಧದ ಕುರಿತು ಲಾರ್ಡ್ ಮೌಂಟ್ ಬ್ಯಾಟನ್ ಜೂನ್ 1948ರಲ್ಲಿ ತಮ್ಮ ಅಕ್ಕನಿಗೆ ಬರೆದ ಪತ್ರವನ್ನು ಪಮೇಲಾ ಉಲ್ಲೇಖಿಸುತ್ತಾ ಹೀಗೆ ಹೇಳುತ್ತಾರೆ: 'ಅವಳು ಮತ್ತು ಜವಾಹರಲಾಲ್ ಒಟ್ಟಿಗೆ ತುಂಬಾ ಚೆನ್ನಾಗಿರುತ್ತಾರೆ, ಪಮ್ಮಿ ಮತ್ತು ನಾನು ನಮ್ಮ ಕೈಲಾದಷ್ಟು ಸಹಾಯ ಮಾಡುತ್ತಿದ್ದೇವೆ. ಅಮ್ಮ ಇತ್ತೀಚೆಗಂತೂ ನಂಬಲಾರದಷ್ಟು ಆನಂದವಾಗಿದ್ದಾಳೆ ಮತ್ತು ನಾವೆಲ್ಲರೂ ತುಂಬಾ ಸಂತೋಷದ ಕುಟುಂಬವಾಗಿದ್ದೇವೆ'. ನೆಹರು ಸುಂದರ ಇಂಗ್ಲಿಷ್ ಮಾತನಾಡುತ್ತಾರೆ ಮತ್ತು ಬರೆಯುತ್ತಾರೆ ಎಂದು ಭಾವಿಸಿದ್ದ ಪಮೇಲಾ, ಮಾರ್ಚ್ 1957ರಲ್ಲಿ ನೆಹರು ಎಡ್ವಿನಾಗೆ ಬರೆದ ಪತ್ರವನ್ನು ಸಹ ಉಲ್ಲೇಖಿಸುತ್ತಾ ಹೇಳುತ್ತಾರೆ: 'ನಮ್ಮ ನಡುವೆ ಆಳವಾದ ಬಾಂಧವ್ಯವಿದೆ ಎಂದು ನಾನು ಇದ್ದಕ್ಕಿದ್ದಂತೆ ಅರಿತುಕೊಂಡೆ (ಬಹುಶಃ ನೀವು ಸಹ ಹಾಗೆ ಮಾಡಿರಬಹುದು), ಯಾವುದೋ ಅನಿಯಂತ್ರಿತ ಶಕ್ತಿ, ಅದರ ಬಗ್ಗೆ ನನಗೆ ಮಂದವಾಗಿ ತಿಳಿದಿತ್ತು, ನಂತರ ನಮ್ಮನ್ನು ಪರಸ್ಪರ ಸೆಳೆಯಿತು, ಈ ಹೊಸ ಆವಿಷ್ಕಾರದಿಂದ ನಾನು ಉತ್ಸುಕನಾಗಿದ್ದೆ. ಯಾವುದೋ ಮುಸುಕು ತೆಗೆದಂತೆ ಮತ್ತು ಭಯ ಅಥವಾ ಮುಜುಗರವಿಲ್ಲದೆ ಪರಸ್ಪರರ ಕಣ್ಣುಗಳನ್ನು ನೋಡಬಹುದೆಂಬಂತೆ ನಾವು ಹೆಚ್ಚು ಆತ್ಮೀಯವಾಗಿ ಮಾತನಾಡಿದೆವು'- ಎಡ್ವಿನಾ ಮೌಂಟ್ ಬ್ಯಾಟನ್ ಅವರ ಮಗಳು ಹೇಳುವ ವಿಷಯಗಳನ್ನು ಗಮನಿಸಿದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ಹತ್ತು ವರ್ಷಗಳ ನಂತರವೂ, ಅಂದರೆ 1957ರ ವರೆಗೂ ನೆಹರು ಮತ್ತು ಎಡ್ವಿನಾ ನಡುವೆ ನಿರಂತರವಾದ ಪತ್ರ ವ್ಯವಹಾರವಿರುವುದು ತಿಳಿದುಬರುತ್ತದೆ. ಬ್ರಿಟಿಷರ ವಿರುದ್ಧ ಹೋರಾಡಿದ ಪಕ್ಷವೆಂದು ಹೇಳುವ ಕಾಂಗ್ರೆಸ್‌ನ ನೆಹರು ಅವರು ಬ್ರಿಟಿಷ್ ವೈಸರಾಯ್ ಹೆಂಡತಿಯ ಜತೆ ಸ್ವಾತಂತ್ರ್ಯಾನಂತರವೂ ನಡೆಸಿದ್ದ ಪತ್ರ ಸಂಭಾಷಣೆ ನಿಜವಾಗಿದ್ದರೆ, ಆ ಪತ್ರಗಳಲ್ಲಿ ಸ್ವತಂತ್ರ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ವಿಷಯಗಳು ಇದ್ದಿರಬಹುದೆಂಬ ಅನುಮಾನ ಯಾರಿಗಾದರೂ ಮೂಡುವುದು ಸಹಜ. ಅದಕ್ಕೆ ಹೆದರಿ ಸೋನಿಯಾ ಗಾಂಧಿಯವರು ಆ ಪತ್ರಗಳನ್ನು ಪ್ರಧಾನಿಗಳ ಗ್ರಂಥಾಲಯದಿಂದ 2008ರಲ್ಲಿ ತೆಗೆದುಕೊಂಡು ಹೋಗಿರುವ ಅನುಮಾನ ಕಾಡುವುದು ಸಹಜ. ಅಂಡಮಾನ್ ಜೈಲಿನಲ್ಲಿ ಕರಿನೀರಿನ ಶಿಕ್ಷೆ ಅನುಭವಿಸಿದ್ದ ವೀರ ಸಾವರ್ಕರ್ ಅವರನ್ನು ಪುರಾವೆಗಳಿಲ್ಲದೆ 'ಬ್ರಿಟಿಷರ ಏಜೆಂಟ್' ಎಂದು ಹಸಿಸುಳ್ಳು ಹೇಳುವ ಕಾಂಗ್ರೆಸ್ಸಿಗರು, ತಮ್ಮ ಪಕ್ಷದ ನೆಹರು ಮತ್ತು ಎಡ್ವಿನಾ ಮೌಂಟ್ ಬ್ಯಾಟನ್ ಅವರ ನಡುವಿನ ಪತ್ರ ಸಂಭಾಷಣೆಯ ಬಗ್ಗೆ ಏನೆನ್ನುತ್ತಾರೆ? 1947ರ ಸಂದರ್ಭದಲ್ಲಿ ತೆಗೆದುಕೊಂಡ ಅನೇಕ ನಿರ್ಧಾರಗಳ ಹಿಂದೆ ಎಡ್ವಿನಾ ಮೌಂಟ್ ಬ್ಯಾಟನ್‌ರ ಕಾಣದ ಕೈ ಕೆಲಸ ಮಾಡಿರಬಹುದು. ಬ್ರಿಟಿಷ್ ವೈಸ್‌ರಾಯ್ ಹೆಂಡತಿ ಮೇಲಿನ ವ್ಯಾಮೋಹದಿಂದ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಅನೇಕ ನಿರ್ಧಾರಗಳನ್ನು ನೆಹರು ಕೈಗೊಂಡಿರುವ ಅನುಮಾನಗಳು ಇದರಿಂದ ಮೂಡುತ್ತದೆ. ಬ್ರಿಟಿಷರು ಪೂರ್ವನಿಯೋಜಿತವಾಗಿ ಬೇಕಂತಲೇ ಒಂದು ಹೆಣ್ಣನ್ನು ಮುಂದೆ ಬಿಟ್ಟು ತಾವಂದುಕೊಂಡ ಕೆಲಸವನ್ನು ಸಾಧಿಸಿಬಿಟ್ಟಿರಬಹುದೆಂಬ ಪ್ರಶ್ನೆಯೂ ಕಾಡುತ್ತದೆ. ನೆಹರು ಮತ್ತು ಎಡ್ವಿನಾ ನಡುವಿನ ಪತ್ರಗಳು ಬಹಿರಂಗಗೊಂಡರೆ ಬ್ರಿಟಿಷರ ಏಜೆಂಟರಂತೆ ವರ್ತಿಸುದ್ದು ಯಾರೆಂಬ ಸತ್ಯ ತಿಳಿಯುತ್ತದೆ.

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಪರೂಪದ ವ್ಯಕ್ತಿತ್ವ

ವಿಶ್ವೇಶ್ವರ ಭಟ್ಟರ 'ನೂರೆಂಟು ವಿಶ್ವ' ಅಂಕಣವು (ಫೆ.19) ಅತ್ಯಂತ ಭಾವನಾತ್ಮಕ ವಿಷಯದಿಂದ ಕೂಡಿತ್ತು. ಸ್ವತಂತ್ರ ಭಾರತದ ಎರಡನೇ ಪ್ರಧಾನಮಂತ್ರಿ, ಲಾಲ್ ಬಹಾದುರ್ ಶಾಸ್ತ್ರಿಯವರ 'ಡಿಎಲ್‌ಇ 6' ನಂಬರಿನ 'ಫಿಯೆಟ್' ಎಂಬ ಪುಟ್ಟ ಕಾರಿನ ಖರೀದಿಯ ಹಿಂದಿನ ಕಥೆ ಕೇಳಿ ನಿಜಕ್ಕೂ ಆಶ್ಚರ್ಯವಾಯಿತು. ದೇಶದ ಅತ್ಯಂತ ಪ್ರಮುಖ ಹುದ್ದೆಯನ್ನು ಅಲಂಕರಿಸಿದ ವ್ಯಕ್ತಿಯೊಬ್ಬರು ತಮ್ಮ ಕುಟುಂಬದ ಬಳಕೆಗೆ ಕಾರನ್ನು ಕೊಳ್ಳಲು ಹೀಗೆ ಬ್ಯಾಂಕಿಗೆ ಸಾಲದ ಅರ್ಜಿ ಸಲ್ಲಿಸಿದ ಪ್ರಸಂಗ ಬಹುಶಃ ವಿರಳ ಅನ್ನಬಹುದು (ವಿದೇಶಗಳಲ್ಲಿ ಹೇಗೋ? ಆದರೆ ಭಾರತದಲ್ಲಿ ಮಾತ್ರ ಇದು ಅಪರೂಪವೇ!). ದೇಶದ ಪ್ರಧಾನ ಮಂತ್ರಿ ಎನಿಸಿಕೊಂಡೂ ಅತ್ಯಂತ ಸರಳ ಬದುಕು ನಡೆಸಿದ ಶಾಸ್ತ್ರಿಯವರು ಪ್ರಾಮಾಣಿಕತೆಗೆ ಮತ್ತು ಜೀವನ ಮೌಲ್ಯಗಳಿಗೆ ನೀಡಿದ ಆದ್ಯತೆಯು ಎಂದೆಂದಿಗೂ ನಮಗೆ ಮಾದರಿ ಯಾಗಿದೆ. ಈಗ ಬಿಡಿ, ಗ್ರಾಮ/ಪಟ್ಟಣ ಪಂಚಾಯಿತಿ ಸದಸ್ಯರು ಕೂಡ ಐಷಾರಾಮಿ ಜೀವನ ನಡೆಸುವುದನ್ನು ಕಾಣುತ್ತಿದ್ದೇವೆ! ಶಾಸ್ತ್ರಿಯವರು ಸಾಲಮಾಡಿ ಇಷ್ಟಪಟ್ಟು ಕಾರು ಕೊಂಡಿದ್ದು, ನಂತರ ವಿದೇಶದಲ್ಲಿ ನಿಗೂಢವಾಗಿ ಸಾವನ್ನಪ್ಪಿದ್ದು, ಸಾಲದ ಬಾಕಿಯನ್ನು ಅವರ ಪತ್ನಿ ಲಲಿತಾ ಶಾಸ್ತ್ರಿಯವರು ತಮ್ಮ ಪಿಂಚಣಿ ಹಣದಲ್ಲಿ ತೀರಿಸಿದ್ದು, ಸದರಿ ಕಾರು ಇವತ್ತಿಗೂ ಸುಸ್ಥಿತಿಯಲ್ಲಿರುವುದು, ಶಾಸ್ತ್ರಿಯವರಿಗೆ ಸಕಾಲಕ್ಕೆ ಸಾಲ ನೀಡಿದ ಪಂಜಾಬ್ ನ್ಯಾಷನಲ್ ಬ್ಯಾಂಕ್ ಮುಂದೆ ಈ ಸಾಲದ ಪತ್ರಗಳನ್ನು ಗೌರವದಿಂದ ಕಾಪಾಡಿಕೊಂಡು ಬಂದಿದ್ದು ಇವೆಲ್ಲವೂ ವಿಸ್ಮಯದ ಸಂಗತಿಗಳೇ. ಆರು ದಶಕಗಳ ಹಿಂದಿನ, ಸತ್ಯ ಮತ್ತು ಪ್ರಾಮಾಣಿಕತೆಯ ದ್ಯೋತಕವಾದ ಈ ಘಟನೆಯನ್ನು ನೆನಪುಮಾಡಿಕೊಟ್ಟು, ಮನಸ್ಸನ್ನು ಭಾರವಾಗಿಸಿದ ವಿಶ್ವೇಶ್ವರ ಭಟ್ಟರಿಗೆ ಅನಂತ ನಮನಗಳು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಸವಿ ಸವಿ ನೆನಪು..

ಅಂಗಡಿ ಗಣೇಶ ಭಟ್ಟರ ಕುರಿತಾದ ಶಿಶಿರ್ ಹೆಗಡೆಯವರ ಅಂಕಣ ಬರಹವು (ಫೆ.20) ನನ್ನನ್ನು 40 ವರ್ಷಗಳಷ್ಟು ಹಿಂದಕ್ಕೆ ಎಳೆದುಕೊಂಡುಹೋಯಿತು. 1986ನೇ ಇಸವಿಯಲ್ಲಿ ಕೆಇಬಿಯಲ್ಲಿ ಕೆಲಸಕ್ಕೆ ಸೇರಿದ್ದ ನಾನು ಮೈಸೂರಿನಿಂದ ಮದ್ದೂರಿಗೆ ದಿನವೂ ಪ್ರಯಾಣಿಸುತ್ತಿದ್ದೆ. ಆಗ ರೈಲಿನಲ್ಲಿ ಬರುತ್ತಿದ್ದ ಬೇರೆ ಕಚೇರಿಯ ಗೆಳತಿಯರು, ನಾನು ಧರಿಸುತ್ತಿದ್ದ ಕಾಟನ್ ಸೀರೆಗೆ ಮರುಳಾಗಿ ತಮಗೂ ಬೇಕೆಂದು ಕೇಳುತ್ತಿದ್ದರು. ನಾನಾಗ ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿದ್ದ 'ವಾಣಿ ಟೆಕ್ಸ್‌ಟೈಲ್ಸ್' ಎಂಬ ಅಂಗಡಿಯಿಂದ ಸೀರೆಗಳನ್ನು ಖರೀದಿಸುತ್ತಿದ್ದೆ. ಅಂಗಡಿಯ ಮಾಲೀಕರು ಜೈನ್ ಸಮುದಾಯದವರಾಗಿದ್ದು, ಯಾವುದೇ ಪುರಾವೆಯಿಲ್ಲದೆ ನನಗೆ ಕಂತುಗಳಲ್ಲಿ ಸೀರೆಗಳನ್ನು ಕೊಡುತ್ತಿದ್ದರು. ನನ್ನ ಗೆಳತಿಯರಿಗಾಗಿ ಪ್ರತಿಬಾರಿ 10-15 ಸೀರೆಗಳನ್ನು ತೆಗೆದುಕೊಂಡು ಹೋಗುತ್ತಿದ್ದೆ. ಆ ಅಂಗಡಿಯ ಮಾಲೀಕರಿಗೆ ನನ್ನ ಹೆಸರಾಗಲೀ, ಮನೆಯ ವಿಳಾಸವಾಗಲೀ ತಿಳಿದಿರಲಿಲ್ಲ; ಕೇವಲ ನಂಬಿಕೆಯ ಮೇಲೆ ಸೀರೆಗಳನ್ನು ಕೊಡುತ್ತಿದ್ದರು. ಸುಮಾರು 3 ವರ್ಷಗಳ ಕಾಲ ಈ ವ್ಯಾಪಾರ ನಡೆದಿತ್ತು. ನನ್ನ ಮದುವೆಯಾದ ನಂತರ ಬೆಂಗಳೂರಿಗೆ ಬಂದ ಮೇಲೆ, ಆ ಅಂಗಡಿಗೆ ಹೋಗುವುದು ನಿಂತೇಹೋಯಿತು. ಕಳೆದ ವರ್ಷ ನನ್ನ ಸ್ನೇಹಿತೆಯ ಮಗನ ಮದುವೆಗೆಂದು ಮೈಸೂರಿಗೆ ಹೋದಾಗ ಅದೇ ಅಂಗಡಿಯ ನೆನಪಾಯಿತು. ನನ್ನ ಅಕ್ಕನನ್ನು ವಿಚಾರಿಸಿದಾಗ, ಅಂಗಡಿ ಮುಚ್ಚಿಹೋಗಿ ತುಂಬಾ ದಿನಗಳಾದವು ಎಂದು ತಿಳಿದು ಮನಸೇಕೋ ಮುದುಡಿದಂತಾಯಿತು. ಅಂಗಡಿ ಮುಚ್ಚಲು ಕಾರಣವೇನೋ ತಿಳಿಯದು, ಆದರೆ ಅದರ ಮಾಲೀಕರ ಹಸನ್ಮುಖ, ಮೃದುಮಾತು, ಪ್ರಾಮಾಣಿಕ ನಡವಳಿಕೆ ನನ್ನ ಮನದಲ್ಲಿನ್ನೂ ಹಸಿರಾಗಿಯೇ ಇದೆ.

- ಶೈಲಜಾ ವಾಸುಕಿ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಉದಾರವಾದಿ ಚಿಂತನೆಯ ಹಿಂದಿರುವ ಅಪಾಯಗಳು

ಸಂಸ್ಕೃತಿ ನಾಶವು ಆಕಸ್ಮಿಕವಾಗಿ ನಡೆಯುತ್ತಿಲ್ಲ. ಬೃಹತ್ ಜಾಗತಿಕ ಶಕ್ತಿಗಳು ಸ್ಥಳೀಯ ಸಂಪ್ರದಾಯಗಳನ್ನು ನಾಶಪಡಿಸುವ ಮೂಲಕ ಜಾಗತಿಕ ಕ್ರಮವನ್ನು ಮರುಹೊಂದಿಸಲು ತಮ್ಮೆಲ್ಲ ಶಕ್ತಿಯನ್ನು ಬಳಸುತ್ತಿವೆ. ಅವರು ಸ್ಥಳೀಯ ಸಂಪ್ರದಾಯಗಳನ್ನು ಏಕೆ ನಾಶಮಾಡಲು ಬಯಸುತ್ತಾರೆ? ಏಕೆಂದರೆ ಸ್ಥಳೀಯ ಸಂಪ್ರದಾಯಗಳು ಜನರಿಗೆ ಬಲವಾದ ಗುರುತನ್ನು ನೀಡುತ್ತವೆ.

ವಿಶ್ಲೇಷಣೆ
ಡಾ. ನಿರಂಜನ ಪೂಜಾರ
vveditoped@gmail.com

ನಾವು ದೊಡ್ಡ ಬದಲಾವಣೆಯ ಕಾಲದಲ್ಲಿ ಬದುಕುತ್ತಿದ್ದೇವೆ, ಆದರೆ ಎಲ್ಲಾ ಬದಲಾವಣೆಗಳೂ ಒಳ್ಳೆಯವಲ್ಲ. ಆಧುನಿಕ ಉದಾರವಾದವು ನಮ್ಮ ನಾಗರಿಕತೆಯನ್ನು ಹೇಗೆ ನಾಶಪಡಿಸುತ್ತಿದೆ ಎಂಬುದನ್ನು ನಾವು ಇಂದು ನೋಡುತ್ತಿದ್ದೇವೆ. ಲಿಬರಲ್ ಮತ್ತು ಸ್ವಾತಂತ್ರ್ಯ ಎಂಬ ಪದಗಳು ಕೇಳಲು ಬಹಳ ಮಧುರ. ಇದು ಎಲ್ಲರ ಜೀವನವನ್ನು ಸುಧಾರಿಸುವ ಮಾರ್ಗವೆಂದು ತೋರುತ್ತದೆ. ಆದರೆ, ನಾವು ಸ್ವಲ್ಪ ಆಳವಾಗಿ ಗಮನಿಸಿದರೆ, ನಮ್ಮ ಸಮಾಜದ ಬುನಾದಿಯೇ ನಾಶವಾಗುತ್ತಿರುವುದು ಕಾಣುತ್ತದೆ. ಸಾವಿರಾರು ವರ್ಷಗಳಿಂದ ಮಾನವ ಕುಲವನ್ನು ರಕ್ಷಿಸಿಕೊಂಡು ಬಂದಿರುವ ಸಾಂಪ್ರದಾಯಿಕ ಜೀವನ ವಿಧಾನಗಳು ಇಂದು ಕಣ್ಮರೆಯಾಗುತ್ತಿವೆ. ಸ್ವಾತಂತ್ರ್ಯದ ಹೆಸರಿನಲ್ಲಿ ನಾವು ನಮ್ಮ ಬೇರುಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಬೇರು ಕತ್ತರಿಸಿದ ಮರವು ಕೆಲವು ದಿನ ಹಸಿರಾಗಿ ಕಂಡರೂ, ಕೊನೆಗೆ ಸಾಯುತ್ತದೆ. ಅದೇ ರೀತಿ, ನಮ್ಮ ಸಂಪ್ರದಾಯಗಳಿಂದ ದೂರವಾಗುವುದು ನಮ್ಮ ಸಮಾಜವನ್ನು ನಾಶಪಡಿಸುತ್ತಿದೆ.

ತಾರ್ಕಿಕ ವಾದಗಳ ಬಲೆಯಲ್ಲಿ ನಾವು ಎದುರಿಸುತ್ತಿರುವ ಅತಿದೊಡ್ಡ ಸವಾಲೆಂದರೆ, ಈ ಹೊಸ ವಿಚಾರಗಳನ್ನು ನಮಗೆ ಹೇಗೆ ಪ್ರಸ್ತುತಪಡಿಸಲಾಗುತ್ತಿದೆ ಎಂಬುದು. ಎಡಪಂಥೀಯ ಉದಾರವಾದಿ ಆದರ್ಶಗಳು ಹೆಚ್ಚು ತಾರ್ಕಿಕ ವಾದದಿಂದ ಬರುತ್ತವೆ. ಮೊದಲ ಬಾರಿಗೆ ಕೇಳಿದಾಗ, ಅವು ನೂರಕ್ಕೆ ನೂರು ಸರಿ ಎನಿಸುತ್ತವೆ. ಲಿಂಗ ಸಮಾನತೆ, ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವ ಹಕ್ಕುಗಳು ಎಂಬ ಪದಗಳನ್ನು ಯಾರೂ ಬೇಡ ಎನ್ನುವುದಿಲ್ಲ. ಆಧುನಿಕ, ಉದಾರವಾದಿ, 'ವೋಕ್', ಎಲ್.ಜಿ.ಬಿ.ಟಿ.ಕ್ಯೂ ಮತ್ತು ಸ್ತ್ರೀವಾದ ಎಂಬ ಪರಿಕಲ್ಪನೆಗಳು ಯುವಜನರಿಗೆ ಬಹಳ ಆಕರ್ಷಕವಾಗಿ ಕಾಣುತ್ತವೆ.

ಆದರೆ ಇದರ ಹಿಂದೆ ಒಂದು ಕರಾಳ ಮುಖವಿದೆ. ಇದೊಂದು ವಿನಾಶಕಾರಿ ಅಜೆಂಡಾ. ಇದು ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ನಾಶಮಾಡುವ ಹಾಗೂ ಹೊಸ ವಿಶ್ವಕ್ರಮವನ್ನು ಸ್ಥಾಪಿಸುವ ಹುನ್ನಾರವಾಗಿದೆ. ಈ ಚಳವಳಿಗಳು ಸಂಕೀರ್ಣವಾದ, ಪ್ರಾಚೀನ ಸಾಮಾಜಿಕ ವ್ಯವಸ್ಥೆಗಳನ್ನು ಮುರಿಯಲು ಸರಳ ತರ್ಕವನ್ನು ಬಳಸುತ್ತವೆ. ಹಿಂದಿನ ಎಲ್ಲಾ ನಿಯಮಗಳು ಕೆಟ್ಟವು ಮತ್ತು ದಬ್ಬಾಳಿಕೆಯವು ಎಂದು ಜನರಿಗೆ ಹೇಳುತ್ತವೆ. ಒಮ್ಮೆ ಸಮಾಜವು ತನ್ನದೇ ಆದ ಗತಕಾಲವನ್ನು ದ್ವೇಷಿಸಲು ಪ್ರಾರಂಭಿಸಿದರೆ, ಆ ಸಮಾಜವನ್ನು ನಿಯಂತ್ರಿಸುವುದು ಸುಲಭವಾಗುತ್ತದೆ.

ಜಾಗತಿಕ ಶಕ್ತಿಗಳು ಮತ್ತು ಹೊಸ ವಿಶ್ವಕ್ರಮ

ಈ ಸಂಸ್ಕೃತಿ ನಾಶವು ಆಕಸ್ಮಿಕವಾಗಿ ನಡೆಯುತ್ತಿಲ್ಲ. ಬೃಹತ್ ಜಾಗತಿಕ ಶಕ್ತಿಗಳು ಸ್ಥಳೀಯ ಸಂಪ್ರದಾಯಗಳನ್ನು ನಾಶಪಡಿಸುವ ಮೂಲಕ ಜಾಗತಿಕ ಕ್ರಮವನ್ನು ಮರುಹೊಂದಿಸಲು ತಮ್ಮೆಲ್ಲ ಶಕ್ತಿಯನ್ನು ಬಳಸುತ್ತಿವೆ. ಅವರು ಸ್ಥಳೀಯ ಸಂಪ್ರದಾಯಗಳನ್ನು ಏಕೆ ನಾಶಮಾಡಲು ಬಯಸುತ್ತಾರೆ? ಏಕೆಂದರೆ ಸ್ಥಳೀಯ ಸಂಪ್ರದಾಯಗಳು ಜನರಿಗೆ ಬಲವಾದ ಗುರುತನ್ನು ನೀಡುತ್ತವೆ. ನೀವು ನಿಮ್ಮ ಕುಟುಂಬ, ಧರ್ಮ ಮತ್ತು ಸಮಾಜದೊಂದಿಗೆ ಸಂಪರ್ಕ ಹೊಂದಿದ್ದರೆ, ನಿಮ್ಮನ್ನು ಸುಲಭವಾಗಿ ಮೂರ್ಖರನ್ನಾಗಿಸಲು ಅಥವಾ ನಿಯಂತ್ರಿಸಲು ಸಾಧ್ಯವಿಲ್ಲ.

ಜಾಗತಿಕ ನಿಯಂತ್ರಣ ಸಾಧಿಸಲು ಈ ಶಕ್ತಿಗಳಿಗೆ ಪ್ರಪಂಚದ ಎಲ್ಲರೂ ಒಂದೇ ರೀತಿಯಾಗಿರಬೇಕು. ಜನರು ತಮ್ಮ ವಿಶಿಷ್ಟ ಸ್ಥಳೀಯ ಭಾಷೆ, ದೇವರುಗಳು, ಹಬ್ಬಗಳು ಮತ್ತು ಕುಟುಂಬ ವ್ಯವಸ್ಥೆಯನ್ನು ಮರೆಯಬೇಕೆಂದು ಅವರು ಬಯಸುತ್ತಾರೆ. ಸಂಪ್ರದಾಯವಿಲ್ಲದ ಜಗತ್ತು ಎಂದರೆ ಒಂಟಿವ್ಯಕ್ತಿಗಳ ಜಗತ್ತು. ಈ ಒಂಟಿವ್ಯಕ್ತಿಗಳನ್ನು ಆಳುವುದು ಮತ್ತು ಅವರಿಗೆ ತಮ್ಮ ಉತ್ಪನ್ನಗಳನ್ನು ಮಾರುವುದು ಕಾರ್ಪೊರೇಟ್ ಕಂಪನಿಗಳಿಗೆ ಬಹಳ ಸುಲಭ.

ಸ್ವತಂತ್ರ ಎಂಬ ಸುಳ್ಳು ಕಲ್ಪನೆ

ಸಮಾಜವನ್ನು ಒಡೆಯಲು ಈ ತರ್ಕ ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಒಂದು ಸ್ಪಷ್ಟ ಉದಾಹರಣೆ ಇಲ್ಲಿದೆ. ಮಹಿಳೆಗೆ ಸಮಾನ ಅವಕಾಶ ಸಿಗಬೇಕು, ಆಕೆಯೂ ದುಡಿಯಬೇಕು, ಸ್ವತಂತ್ರಳಾಗಿರಬೇಕು ಎಂದು ಆಧುನಿಕ ಜಗತ್ತು ಹೇಳುತ್ತದೆ. ನಾವು ಲಿಂಗ ಸಮಾನತೆಯನ್ನು ಸಾಧಿಸಬೇಕು ಎಂಬುದು ತಾರ್ಕಿಕವಾಗಿ ಸರಿಯಾಗಿ ಕಾಣುತ್ತದೆ. ಪ್ರತಿಯೊಬ್ಬರಿಗೂ ಕೆಲಸ ಮಾಡುವ ಮತ್ತು



ಹಣ ಸಂಪಾದಿಸುವ ಅವಕಾಶ ಇರಬೇಕು ಎಂಬುದು ಅರ್ಥಪೂರ್ಣವಾಗಿದೆ.

ಆದರೆ ಕುಟುಂಬದಲ್ಲಿ ಪುರುಷ ಮತ್ತು ಮಹಿಳೆ ಒಂದೇ ಅಲ್ಲವೇ? ಅವರು ಸ್ಪರ್ಧಾಳುಗಳಲ್ಲ, ಬದಲಾಗಿ ಒಬ್ಬರಿಗೊಬ್ಬರು ಪೂರಕರು. ಕುಟುಂಬ ಎಂದರೆ ಏನು? ಎಂದು ನಾವು ಗಂಭೀರವಾಗಿ ಪ್ರಶ್ನಿಸಿಕೊಳ್ಳಬೇಕು. ಕುಟುಂಬವೆಂದರೆ ಕೇವಲ ಇಬ್ಬರು ಸ್ವತಂತ್ರ ವ್ಯಕ್ತಿಗಳು ಒಂದೇ ಮನೆಯಲ್ಲಿ ವಾಸಿಸುವುದಲ್ಲ ಮತ್ತು ಬಿಲ್‌ಗಳನ್ನು ಹಂಚಿಕೊಳ್ಳುವುದಲ್ಲ. ಇದು ಮುಂದಿನ ಪೀಳಿಗೆಯನ್ನು ಬೆಳೆಸುವ ಪವಿತ್ರ ಬಂಧವಾಗಿದೆ. ಪುರುಷನಂತೆ ಹಣ ಸಂಪಾದಿಸಿದರೆ ಮಾತ್ರ ಮಹಿಳೆಗೆ ಬೆಲೆ ಎಂಬ ಕಲ್ಪನೆಯನ್ನು ತರುವ ಮೂಲಕ, ಸಮಾಜವು ಮನೆಯ ನೈಸರ್ಗಿಕ ಸಮತೋಲನವನ್ನು ಹಾಳುಮಾಡಿದೆ.

ನಮ್ಮ ಸಂಸ್ಕೃತಿಯ ಮೂಲ

ಪೋಷಕರಿಬ್ಬರೂ ಕೇವಲ ತಮ್ಮ ವೃತ್ತಿಜೀವನದ ಮೇಲೆ ಗಮನಹರಿಸಿದಾಗ, ಮಕ್ಕಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತಾರೆ. ಮುಂದಿನ ಪೀಳಿಗೆಯನ್ನು ಬೆಳೆಸುವುದು ಕಡಿಮೆ ಪ್ರಾಮುಖ್ಯದ ಸಂಗತಿಯೇ? ಆಧುನಿಕ ಸಮಾಜವು ಮನೆ ಮತ್ತು ಮಕ್ಕಳನ್ನು ನೋಡಿಕೊಳ್ಳುವುದನ್ನು ಒಂದು ಕೀಳು ಕೆಲಸ ಎಂಬಂತೆ ಬಿಂಬಿಸುತ್ತಿದೆ. ಆದರೆ ಸತ್ಯವೇನೆಂದರೆ, ಸಂಪ್ರದಾಯ, ಸಂಸ್ಕೃತಿ, ಮೌಲ್ಯಗಳು ಎಲ್ಲವೂ ಇದರೊಂದಿಗೆ ತಳುಕುಹಾಕಿಕೊಂಡಿವೆ. ಆದ್ದರಿಂದ, ಭವಿಷ್ಯದ ಕುಟುಂಬವನ್ನು ಬೆಳೆಸುವುದು ಹೊರಗೆ ಹಣ ಸಂಪಾದಿಸುವುದಕ್ಕಿಂತ ಹೆಚ್ಚು ಮುಖ್ಯವಾಗಿದೆ. ಬದುಕಲು ಹಣದ ಅವಶ್ಯಕತೆಯಿದೆ, ಆದರೆ ಹೊರಗೆ ದುಡಿಯುವುದು ಕುಟುಂಬದ ಬೆಂಬಲಕ್ಕಾಗಿ ಮಾತ್ರವೇ ಹೊರತು ಅದೇ ಅಂತಿಮ ಗುರಿಯಲ್ಲ. ಜೀವನದ ನಿಜವಾದ ಗುರಿ- ಬಲವಾದ, ನೈತಿಕ ಮತ್ತು ಸಂತೋಷದ ಕುಟುಂಬವನ್ನು ನಿರ್ಮಿಸುವುದು. ಕುಟುಂಬದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಂಡರೆ ಮಾತ್ರ ಸಮಾಜವು ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ.

ಹೆಚ್ಚುತ್ತಿರುವ ಅಪರಾಧಗಳು

ಕುಟುಂಬ ವ್ಯವಸ್ಥೆಯನ್ನು ಒಡೆದರೆ ಏನಾಗುತ್ತದೆ ಎಂಬುದನ್ನು ನೋಡಲು ನಾವು ಹೆಚ್ಚು ದೂರ ಹೋಗಬೇಕಿಲ್ಲ. ನಮ್ಮ ಸುತ್ತಮುತ್ತಲೂ ದುಃಖ, ಕೋಪ ಮತ್ತು ಹಿಂಸೆ ಹೆಚ್ಚಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಕುಟುಂಬ ವ್ಯವಸ್ಥೆಯ ಕುಸಿತವೇ ಅಪರಾಧಗಳು ಮತ್ತು ಸಮಾಜದ ಅಸಮತೋಲನಕ್ಕೆ ಮುಖ್ಯ ಕಾರಣ. ಪೋಷಕರ ಮಾರ್ಗದರ್ಶನ, ಪ್ರೀತಿ ಮತ್ತು ಶಿಸ್ತು ಇಲ್ಲದ ಮನೆಗಳಲ್ಲಿ ಬೆಳೆಯುವ ಮಕ್ಕಳು ದಾರಿತಪ್ಪುತ್ತಾರೆ. ಒಡೆದ ಕುಟುಂಬವು ಒಡೆದ ಮನಸ್ಸನ್ನು ಸೃಷ್ಟಿಸುತ್ತದೆ. ಆಧುನಿಕ ಉದಾರವಾದಿ ಅಜೆಂಡಾವು ನಮಗೆ ಸಂಪೂರ್ಣ ಸ್ವಾತಂತ್ರ್ಯ ಮತ್ತು ಸಂತೋಷವನ್ನು ನೀಡುವುದಾಗಿ ಭರವಸೆ ನೀಡಿತ್ತು. ಆದರೆ ಅದರ ಬದಲಿಗೆ, ಜನರು ತೀವ್ರ ಒಂಟಿತನ ಮತ್ತು ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವ ಜಗತ್ತನ್ನು ಅದು ಸೃಷ್ಟಿಸಿದೆ. ಕುಟುಂಬದ ನಿಯಮಗಳು ಮತ್ತು ಸಂಪ್ರದಾಯಗಳು ಜೈಲಿನಂತಿರುವುದಿಲ್ಲ; ಅವು ಹೊರಗಿನ ಪ್ರಪಂಚದ ಅರಾಜಕತೆಯ ವಿರುದ್ಧದ ಬಲವಾದ ರಕ್ಷಣಾ ಕವಚಗಳಾಗಿವೆ.

ನಿತ್ಯಕರ್ಮಗಳನ್ನು ಬಿಟ್ಟಂತೆ, ಸಂಪ್ರದಾಯ ಮರೆತಂತೆ, ಕುಟುಂಬವು ಕುಸಿದಂತೆ ನಮ್ಮ ಆಧ್ಯಾತ್ಮಿಕ ಜೀವನವೂ ಕುಸಿಯುತ್ತದೆ. ಇಂದು ಪ್ರತಿಯೊಂದು ಜಾತಿ ಮತ್ತು ಮತದವರೂ ನಿತ್ಯಕರ್ಮಗಳಿಂದ ದೂರ ಸರಿಯುತ್ತಿದ್ದಾರೆ. ನಿತ್ಯಕರ್ಮ ಎಂದರೆ ಒಬ್ಬ ವ್ಯಕ್ತಿಯು ಪ್ರತಿದಿನ ಮಾಡಬೇಕಾದ ಆಧ್ಯಾತ್ಮಿಕ ಕರ್ತವ್ಯಗಳು ಮತ್ತು ಆಚರಣೆಗಳು. ಇಂದು, ಯುವಕರು ಸಂಪ್ರದಾಯಗಳನ್ನು ಮರೆಯುತ್ತಿದ್ದಾರೆ. ದೈನಂದಿನ ಕರ್ತವ್ಯಗಳನ್ನು ಮಾಡಲು ತಮಗೆ ಸಮಯವಿಲ್ಲ ಎಂದು ಹೇಳುತ್ತಾರೆ. ದೈನಂದಿನ ಕರ್ತವ್ಯಗಳನ್ನು ನಿಲ್ಲಿಸಿದಾಗ, ಆಧ್ಯಾತ್ಮಿಕ ರಕ್ಷಾಕವಚವನ್ನು ನಾವು ಕಳೆದುಕೊಳ್ಳುತ್ತೇವೆ, ಒಳಗಿನಿಂದ ಖಾಲಿಯಾಗುತ್ತೇವೆ. ಈ ಖಾಲಿತನವೇ ಜಾಗತಿಕ ಶಕ್ತಿಗಳಿಗೆ ಬೇಕಾಗಿರುವುದು. ಏಕೆಂದರೆ ಒಳಗಿನಿಂದ ಖಾಲಿಯಾದ ಮನುಷ್ಯನು ಆಧುನಿಕ ವಸ್ತುಗಳನ್ನು ಖರೀದಿಸುವ ಮೂಲಕ ಆ ಖಾಲಿತನವನ್ನು ತುಂಬಿಕೊಳ್ಳಲು ಪ್ರಯತ್ನಿಸುತ್ತಾನೆ.

ಜ್ಞಾನದ ಕೇಂದ್ರಗಳಾಗಿ ಉಳಿದಿಲ್ಲ

ನಾವು ಈ ಸ್ಥಿತಿಗೆ ಹೇಗೆ ತಲುಪಿದೆವು? ನಮ್ಮದೇ ಸಂಸ್ಕೃತಿಯನ್ನು ದ್ವೇಷಿಸಲು ನಾವು ಹೇಗೆ ಕಲಿತೆವು? ಇದರ ಉತ್ತರ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿದೆ. ಇಂದು ಶಾಲೆ ಎನ್ನುವುದು ಬ್ರೈನ್ ವಾಶ್ ಮಾಡುವ ಕೇಂದ್ರವಾಗಿದೆ.

ಪ್ರಾಚೀನ ಕಾಲದಲ್ಲಿ, ಶಿಕ್ಷಣವು ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗಾಗಿ ಇತ್ತು. ಆದರೆ ಆಧುನಿಕ ಶಾಲೆಯನ್ನು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಕ್ಕಾಗಿ ವಿನ್ಯಾಸಗೊಳಿಸಲಾಗಿಲ್ಲ. ಬದಲಾಗಿ, ಮಕ್ಕಳನ್ನು ನಿಯಂತ್ರಿಸಲು ಮತ್ತು ಅವರಿಗಾಗಿ ಕೆಲಸ ಮಾಡುವ ಗುಲಾಮರನ್ನು ಉತ್ಪಾದಿಸಲು ನಿರ್ಮಿಸಲಾಗಿದೆ. ಯಶಸ್ಸು ಎಂದರೆ ಕೇವಲ ಹೆಚ್ಚು ಸಂಬಳದ ಕೆಲಸ ಪಡೆಯುವುದು ಎಂದು ಮಕ್ಕಳಿಗೆ ಕಲಿಸಲಾಗುತ್ತದೆ. ಆಧ್ಯಾತ್ಮಿಕವಾಗಿ ಜಾಗೃತ ಮನುಷ್ಯನಾಗುವುದು ಹೇಗೆ ಎಂದು ಅವರಿಗೆ ಎಂದಿಗೂ ಕಲಿಸಲಾಗುವುದಿಲ್ಲ. ಯಂತ್ರಗಳಾಗುವ ಅಪಾಯ, ಕುಟುಂಬದ ಕುಸಿತ, ಸಂಪ್ರದಾಯದ ನಷ್ಟ ಮತ್ತು ಶಾಲೆಗಳಲ್ಲಿ ನಡೆಯುವ ಬ್ರೈನ್ ವಾಶ್‌ನಿಂದಾಗಿ, ಭೀಕರ ಬದಲಾವಣೆಯೊಂದು ನಡೆಯುತ್ತಿದೆ. ನಮ್ಮ ಸಂಸ್ಕೃತಿಯಿಲ್ಲದೆ, ನಾವು ಹೆಚ್ಚು ಯಂತ್ರಗಳಾಗುತ್ತಿದ್ದೇವೆ- ಅಂದರೆ ಬೆಳಗ್ಗೆ ಏಳುತ್ತೇವೆ, ಕೆಲಸಕ್ಕೆ ಹೋಗುತ್ತೇವೆ, ಫೋನ್ ನೋಡುತ್ತೇವೆ, ಮನರಂಜನೆ ಪಡೆಯುತ್ತೇವೆ, ನಿದ್ರಿಸುತ್ತೇವೆ. ಇದರಲ್ಲಿ ಯಾವುದೇ ಆಳವಾದ ಅರ್ಥವಿಲ್ಲ. ಯಂತ್ರಗಳಿಗೆ ಕುಟುಂಬಗಳಿಲ್ಲ, ಸಂಸ್ಕೃತಿ ಇಲ್ಲ; ಅವು ಕೇವಲ ಕೆಲಸ ಮಾಡುತ್ತವೆ. ನಾವು ಇದೇ ಹಾದಿಯಲ್ಲಿ ಸಾಗಿದರೆ, ಭವಿಷ್ಯದಲ್ಲಿ ಮಾನವಕುಲಕ್ಕೆ ಇದೊಂದು ದೊಡ್ಡ ಸವಾಲಾಗಲಿದೆ.

ನಾಗರಿಕತೆಯ ಯುದ್ಧ

ಈ ನಾಗರಿಕತೆಯ ಯುದ್ಧದ ದೃಷ್ಟಿಕೋನದಿಂದಲೇ ನಾವು ಜಗತ್ತನ್ನು ನೋಡಬೇಕು. ಆಧುನಿಕತೆ ಮತ್ತು ವಿಮೋಚನೆ ಎಂಬ ಆಕರ್ಷಕ ಪದಗಳಿಗೆ ಮೋಸಹೋಗುವುದನ್ನು ನಾವು ನಿಲ್ಲಿಸಬೇಕು. ಆಧುನಿಕ ಉದಾರವಾದಿ ಅಜೆಂಡಾದ ಫಲಿತಾಂಶವೆಂದರೆ ಒಡೆದ, ಒಂಟಿಯಾದ ಮತ್ತು ಯಂತ್ರದಂತಿರುವ ಸಮಾಜ. ಇದರ ವಿರುದ್ಧ ಹೋರಾಡಲು ಯುದ್ಧಭೂಮಿ ನಮ್ಮ ಸ್ವಂತ ಮನೆಗಳಲ್ಲಿದೆ. ಕುಟುಂಬ ಮತ್ತು ಸಂಪ್ರದಾಯವೇ ನಮ್ಮ ದೊಡ್ಡ ಶಕ್ತಿ ಎಂಬುದನ್ನು ನಾವು ಅರಿತುಕೊಳ್ಳಬೇಕು. ನಾವು ನಮ್ಮ ದೈನಂದಿನ ಕರ್ತವ್ಯಗಳಿಗೆ, ನಮ್ಮ ನಿತ್ಯ ಕರ್ಮಗಳಿಗೆ ಹಿಂತಿರುಗಬೇಕು. ಕುಟುಂಬವನ್ನು ಉಳಿಸುವ ಮೂಲಕ, ಸಂಪ್ರದಾಯಗಳನ್ನು ಆಚರಿಸುವ ಮೂಲಕ ನಾವು ಜಾಗತಿಕ ವಿನಾಶಕಾರಿ ಅಜೆಂಡಾವನ್ನು ತಡೆದು ನಮ್ಮ ಪರಂಪರೆಯನ್ನು ಉಳಿಸಬಹುದು.

(ಲೇಖಕರು, ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು)

ಭಟ್ಟರ್ ಸ್ಕಾಚ್

- **ಸುಷ್ಮಾ ಪಾಟೀಲ, ಬೈಲಹೊಂಗಲ**
ಭಟ್ರೇ, ಕೆಲವರು ನಮ್ಮಿಂದ ದೂರವಾದರೆ ಕಿರಿಕಿರಿ ಆಗುತ್ತದೆಯಲ್ಲ?
- **ಹತ್ತಿರ ಬಂದ್ರೆ ಇನ್ನೂ ಕಿರಿಕಿರಿ!**

- **ಜೆ.ಕೆ.ಭಟ್, ಹೊನ್ನಾವರ**
ಭಟ್ರೇ, ನಮ್ಮ ಬಗ್ಗೆ ಟೀಕೆಗಳು ಕೇಳಿಬಂದಾಗ ಏನು ಮಾಡಬೇಕು!
- **ಗಾಂಧೀಜಿಯ ಮೂರು ಮಂಗಗಳ ಪೈಕಿ ಕಿವಿ ಮುಚ್ಚಿಕೊಂಡ ಮಂಗನಾಗಬೇಕು!**

- **ಕೆ.ಗಣಪತಿ, ಶ್ರೀರಂಗಪಟ್ಟಣ**
ಭಟ್ರೇ, ಮನೆಯೇ ಅಂತಃಪುರ ಅಂತಾರಲ್ಲ, ಹಾಗಾದರೆ ವನ್ಯಧಾಮ ಯಾವುದು?
- **ಸ್ಟೋರ್ ರೂಮ್!**

- **ಶ್ರೀಕಾಂತ ಅಂಬಲಿ, ಧಾರವಾಡ**
ಭಟ್ರೇ, ಮದುವೆ ಅಂದ್ರೆ ರಾತ್ರಿ ಬರುವ ಫೋನ್ ಕಾಲ್ ಇದ್ದಂತೆ ಅಂತಾರಲ್ಲ?
- **ಹೂಂ.. ಮೊದಲು ರಿಂಗ್ ಆಗುತ್ತದೆ, ನಂತರ ಬೆಳಗಿನ ತನಕ ಎಚ್ಚರವಾಗಿರಬೇಕು!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಹೆಂಗಸರು ರಾತ್ರಿ ಮಲಗುವಾಗ ಧರಿಸುವ ನೈಟಿಯನ್ನು ಹಗಲು ಹೊತ್ತಲ್ಲೂ ಧರಿಸಿ ಊರೆಲ್ಲಾ ಅಡ್ಡಾಡಿದರೆ ಅದಕ್ಕೆ ಏನೆಂದು ಕರೆಯುತ್ತೀರಿ?
- **ಡೇಟಿ!**

- **ಗಾಣಗಾಪುರ ಪಾಂಡು, (ಇಮೇಲ್ ಮೂಲಕ)**
ಭಟ್ರೇ, ಎಷ್ಟೇ ದುಡಿದರೂ ಸಂಬಳ ಸಾಕಾಗುತ್ತಿಲ್ಲವಲ್ಲ?
- **ಆ ಸಂಬಳದಲ್ಲಿ ನನಗೆ ಕಮಿಷನ್ ಕೊಟ್ರೆ ಉಳಿತಾಯ ಮಾಡೋದು ಹೇಗೆ ಅನ್ನೋದನ್ನು ಹೇಳಬಹುದಪ್ಪಾ!**

- **ಕಮಲಾ ಹೆಗಡೆ, ರಾಜಾಜಿನಗರ**
ಭಟ್ರೇ, 'ನೀನೇಕೆ ನಿನ್ನ ಗಂಡನ ಮೊಬೈಲನ್ನು ಚೆಕ್ ಮಾಡುವುದಿಲ್ಲ' ಅಂತ ಕೇಳ್ತಾಳಲ್ಲ?
- **ನನ್ನ ಗಂಡನಿಗೆ ವಯಸ್ಸಾಯ್ತು ಅಂತ ಹೇಳಬೇಕಿತ್ತು!**

- **ಆವಿಕ್ ಗೊಂದಿಮನೆ, ಕಡೂರು**
ಭಟ್ರೇ, ಮಂಡ್ಯ, ಶಿವಮೊಗ್ಗ, ಕುಡ್ಲ, ಕುಂದಾಪುರ, ಕಲಬುರ್ಗಿ, ಹುಬ್ಬಳ್ಳಿ ಭಾಗದ ಕನ್ನಡ ಸೇರಿಸಿ ಒಂದು ಭಾಷಣ ಮಾಡಿದ್ರೆ ಹೇಗಿರುತ್ತೆ?
- **ಅದು ಗ್ರೀಕ್ ಅಥವಾ ಸ್ಪ್ಯಾನಿಷ್ ಮಂದಿಗೆ ಅರ್ಥವಾಗಬಹುದು!**

- **ಸುರೇಂದ್ರ ಭಟ್, ಹೊನಗದ್ದೆ**
ಭಟ್ರೇ, ನನ್ನ ಸ್ನೇಹಿತ ಹೆಂಡತಿ ಹೇಳಿದಂತೆ ಕೇಳುತ್ತಾನಲ್ಲ?
- **ಜಗತ್ತು ನಡೆಯಬೇಕಾದುದು ಹಾಗೇ ಅಲ್ಲವೇ ಸುರೇಂದ್ರ?!**

- **ಅರವಿಂದ ನಾಡಿಗ, (ಇಮೇಲ್ ಮೂಲಕ)**
ಭಟ್ರೇ, 'ಪ್ರವಾಸಿ ಪ್ರಪಂಚ' ಓದದಿದ್ದರೆ ನಿದ್ದೆ ಬರೊಲ್ಲ ಅಂತಾಳಲ್ಲ?
- **ಪೂರ್ತಿ ಓದಿದರೂ ಚೆನ್ನಾಗಿ ನಿದ್ದೆ ಬರುತ್ತೆ ಅಂತ ಹೇಳಬೇಕಾಗಿತ್ತು!**

ಬಾಧಿಸುವ ಬಾಯಿಹುಣ್ಣು: ವಿಟಮಿನ್ ಕೊರತೆಯೇ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ. ಸಾಧನಶ್ರೀ
vveditoped@gmail.com

ಇತ್ತೀಚೆಗೆ ನನ್ನ ಚಿಕಿತ್ಸಾಲಯಕ್ಕೆ ಸುಮಾರು 35 ವರ್ಷದ ವ್ಯಕ್ತಿಯೊಬ್ಬರು ಬಂದರು. ಉದ್ಯೋಗದ ಒತ್ತಡ, ಅನಿಯಮಿತ ಜೀವನಶೈಲಿ ಮತ್ತು ನಿರಂತರ ಪ್ರಯಾಣ- ಇವೆಲ್ಲವೂ ಅವರ ದಿನಚರಿಯ ಭಾಗವಾಗಿದ್ದವು. ಆದರೆ ಅವರನ್ನು ಅತ್ಯಂತ ಕಂಗೆಡಿಸಿದ್ದ ಸಮಸ್ಯೆ ಒಂದೇ- ಬಾಯಿಯಲ್ಲಿ ಪದೇ ಪದೆ ಕಾಣಿಸಿಕೊಳ್ಳುವ ಹುಣ್ಣು. ''ಡಾಕ್ಟರ್, ಇದು ಸಣ್ಣ ಸಮಸ್ಯೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ತಿಂಗಳಿಗೆ ಒಂದು ಬಾರಿ ಬಂದರೂ ಸಾಕು, ಊಟ ಮಾಡಲಾಗುವುದಿಲ್ಲ, ಮಾತಾಡಲು ನೋವು, ಮನಸ್ಸಿಗೂ ಬೇಸರ. ನಾನು ಎಲ್ಲ ಪರೀಕ್ಷೆಗಳನ್ನೂ ಮಾಡಿಸಿದ್ದೇನೆ. ವಿಟಮಿನ್ ಕೊರತೆ ಎಂದು ಹೇಳಿ ವಿವಿಧ ಮಾತ್ರೆಗಳನ್ನು ಕೊಟ್ಟರು. ತಿಂಗಳ ತಿಂಗಳು ತೆಗೆದುಕೊಂಡಿದ್ದೇನೆ. ಆದರೆ ಹುಣ್ಣು ಮತ್ತೆ ಬರುತ್ತಲೇ ಇದೆ'' ಎಂದು ಅವರು ಹೇಳಿದರು.

ಅವರು ತಮ್ಮೊಂದಿಗೆ ತಂದಿದ್ದ ವೈದ್ಯಕೀಯ ವರದಿಗಳ ದಟ್ಟ ಕಡತವನ್ನು ನನ್ನ ಮುಂದೆ ಇಟ್ಟರು. ರಕ್ತಪರೀಕ್ಷೆಗಳು, ವಿಟಮಿನ್ ಬಿ-12 ಮಟ್ಟ, ಐರನ್ ಪ್ರಮಾಣ- ಎಲ್ಲವೂ ಸಮಾನವಾಗಿದ್ದವು. ಪ್ರತಿ ಬಾರಿ ಹುಣ್ಣು ಉಂಟಾದಾಗ ಹೊಸ ಜೆಲ್, ಹೊಸ ಮೌತ್ ವಾಶ್, ಹೊಸ ವಿಟಮಿನ್ ಪೂರಕ. ತಾತ್ಕಾಲಿಕವಾಗಿ ಶಮನವಾಗುತಿತ್ತು; ಆದರೆ ಕೆಲವು ವಾರಗಳಲ್ಲೇ ಮತ್ತೆ ಅದೇ ನೋವು, ಅದೇ ಕಿರಿಕಿರಿ.

ಅವರ ಮಾತುಗಳನ್ನು ಕೇಳಿದ ನಂತರ ನಾನು ಕೆಲ ಸರಳ ಪ್ರಶ್ನೆಗಳು ಕೇಳಿದೆ- ''ಊಟದ ಸಮಯ ನಿಯತವಾಗಿದೆಯೇ? ಹಸಿವು ಸರಿಯಾಗಿ ಕಾಣಿಸುತ್ತಿದೆಯೇ? ಮಲವಿಸರ್ಜನೆ ಹೇಗಿದೆ? ಹೊಟ್ಟೆಯಲ್ಲಿ ಉಬ್ಬರವಿರುವ ಅನುಭವವಿದೆಯೇ?'' ಇತ್ಯಾದಿ.

ಅವರು ಸ್ವಲ್ಪ ತಡಕಾಡಿ ಉತ್ತರಿಸಿದರು- ''ಬೆಳಗ್ಗೆ ಕಾಫಿಯೇ ಮುಖ್ಯ. ದಿನದಲ್ಲಿ 4-5 ಬಾರಿ ಕಾಫಿ ಇದ್ದೇ ಇರುತ್ತದೆ. ಜತೆಗೆ ಸುಮಾರು 2-3 ಲೀ. ನೀರು ಕೂಡ. ಮಧ್ಯಾಹ್ನ ಕೆಲಸದ ಮಧ್ಯೆ ಏನಾದರೂ ಸಿಕ್ಕರೆ ತಿನ್ನುತ್ತೇನೆ. ಕೆಲವೊಮ್ಮೆ ಊಟವೇ ತಪ್ಪುತ್ತದೆ. ರಾತ್ರಿ ಮನೆಗೆ ತಡವಾಗಿ ಬಂದು ಹೆಚ್ಚು ತಿನ್ನುತ್ತೇನೆ. ಗ್ಯಾಸು, ಹೊಟ್ಟೆ ಬಿಗಿತ, ಮಲಬದ್ಧತೆ- ಇವುಗಳೆಲ್ಲಾ ಸಹಜವೇ ಎಂದುಕೊಂಡಿದ್ದೆ''.

ಅವರ ನಾಲಿಗೆಯನ್ನು ಪರಿಶೀಲಿಸಿದಾಗ ಮೇಲ್ಮೈಯಲ್ಲಿ ಬಿಳಿ ಆವರಣ ಕಂಡಿತು- ಆಮದ ಸ್ಪಷ್ಟ ಸೂಚನೆ. ಜೀರ್ಣಾಗ್ನಿ ಸಮರ್ಪಕವಾಗಿ ಕಾರ್ಯನಿರ್ವಹಿಸದಿದ್ದಾಗ, ಆಹಾರವು ಸಂಪೂರ್ಣವಾಗಿ ಪಚನಗೊಳ್ಳದೆ ದೇಹದಲ್ಲಿ ಅಜೀರ್ಣ ಅವಶೇಷಗಳು ಸಂಗ್ರಹವಾಗುತ್ತವೆ. ಅವು ದೋಷಗಳನ್ನು ಕೋಪಗೊಳಿಸಿ ಸೂಕ್ಷ್ಮ ಮಾರ್ಗಗಳಲ್ಲಿ ಸಂಚರಿಸಿ, ಅಂತಿಮವಾಗಿ ಬಾಯಿಯ ಒಳಪದರದೆಯಲ್ಲಿ ಹುಣ್ಣಾಗಿ ವ್ಯಕ್ತವಾಗುತ್ತವೆ. ಆಯುರ್ವೇದದ ದೃಷ್ಟಿಯಲ್ಲಿ ಇದು ಕೇವಲ ಸ್ಥಳೀಯ ತೊಂದರೆ ಅಲ್ಲ; ಜೀರ್ಣದೌರ್ಬಲ್ಯದ, ಹೊರಪ್ರತಿಫಲ.

ನಾನು ಅವರಿಗೆ ಸ್ಪಷ್ಟವಾಗಿ ತಿಳಿಸಿದೆ- ''ನೀವು ವಿಟಮಿನ್ ಕೊರತೆಯನ್ನು ಚಿಕಿತ್ಸೆ ಮಾಡುತ್ತಿದ್ದೀರಿ; ಆದರೆ ನಿಮ್ಮ ಜೀರ್ಣಶಕ್ತಿಯನ್ನು ಪರಿಶೀಲಿಸಿಲ್ಲ. ದೇಹಕ್ಕೆ ನೀಡಿದ ಪೋಷಕಾಂಶಗಳು ಸರಿಯಾಗಿ ಜೀರ್ಣವಾಗದಿದ್ದರೆ ಮಾತ್ರೆಗಳ ಪ್ರಯೋಜನ ಸೀಮಿತವಾಗಿರುತ್ತದೆ. ಅಗ್ನಿ ದುರ್ಬಲವಾದರೆ ಆಮ ಉತ್ಪತ್ತಿಯಾಗಿ ದೋಷಗಳನ್ನು ಕೆರಳಿಸುತ್ತದೆ. ಹುಣ್ಣು ಆ ಅಸಮತೋಲನದ ಸೂಚನೆ''.

ಅವರಿಗೆ ಇದು ಹೊಸ ದೃಷ್ಟಿಕೋನವಾಗಿತ್ತು. ''ಹಾಗಾದರೆ ನನಗೆ ಇನ್ನಷ್ಟು ಔಷಧಗಳು ಬೇಕೇ?'' ಎಂದು ಅವರು ಕೇಳಿದರು.

ನಾನು ಹೀಗೆ ಉತ್ತರಿಸಿದೆ- ''ಬಹುಶಃ ಕಡಿಮೆ ಔಷಧ ಮತ್ತು ಹೆಚ್ಚು ಶಿಸ್ತಿನ ಜೀವನವೇ ಬೇಕು''.

ಅವರಿಗೆ ನೀಡಿದ ಮಾರ್ಗದರ್ಶನ ಅತಿ ಸರಳವಾಗಿತ್ತು. ಮೊದಲ ತಿಂಗಳು ಕಳೆದರೂ ಹುಣ್ಣು ಕಾಣಿಸಲಿಲ್ಲ. ಅವರು ಸ್ವಲ್ಪ ಆಶ್ಚರ್ಯದಿಂದಲೇ ವಿಚಾರಿಸಿದರು- ''ಇದು ಯಾದೃಚ್ಛಿಕವೋ?''. ಮೂರು ತಿಂಗಳು ಕಳೆದಾಗಲೂ ಸಮಸ್ಯೆ ಮರುಕಳಿಸಲಿಲ್ಲ. ಅವರ ಹೊಟ್ಟೆಯ ಭಾರ ಕಡಿಮೆಯಾಯಿತು, ಮಲವಿಸರ್ಜನೆ ನಿಯತವಾಯಿತು, ದೇಹದಲ್ಲಿ ಹಗುರತೆ ಮತ್ತು ಚೈತನ್ಯ ಹೆಚ್ಚಾಯಿತು. ಒಂದು ದಿನ ಸ್ವಲ್ಪ ಸಮಾಧಾನದಿಂದ ಹೇಳಿದರು- ''ಇಷ್ಟು ದಿನ ನಾನು ಹುಣ್ಣನ್ನು ಶತ್ರುವೆಂದು ಕಂಡಿದ್ದೆ. ಈಗ ಅದು ನನ್ನ ದೇಹದ ಎಚ್ಚರಿಕೆಯ ಸಂಕೇತ ಎಂದು ತಿಳಿದುಬಂದಿದೆ''.

ಸ್ನೇಹಿತರೆ, ಈ ಹಿನ್ನೆಲೆಯಲ್ಲಿಯೇ ಮುಖಪಾಕವನ್ನು/ಬಾಯಿಹುಣ್ಣನ್ನು ಆಯುರ್ವೇದದ ದೃಷ್ಟಿಯಿಂದ ಅವಲೋಕಿಸುವುದು ಅಗತ್ಯ. ಅದರ ಸ್ವರೂಪ, ವಿಧಗಳು, ಕಾರಣಗಳು ಮತ್ತು ದೋಷಾನುಸಾರ ನಿರ್ವಹಣೆಯ ಬಗ್ಗೆ ಸಮಗ್ರವಾಗಿ ಪರಿಶೀಲಿಸೋಣ.

ಮುಖಪಾಕ: ಜೀರ್ಣದೋಷದ ಪ್ರತಿಫಲ

ಇಂದಿನ ಜೀವನಶೈಲಿಯಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ತೊಂದರೆಗಳಲ್ಲಿ 'ಮೌತ್ ಅಲ್ಸರ್' ಒಂದು. ಬಾಯಿಯ ಒಳಭಾಗದಲ್ಲಿ ಉಂಟಾಗುವ ಸಣ್ಣ ಹುಣ್ಣುಗಳು, ಉರಿಯೂತ, ನೋವು, ಊಟ ಮಾಡುವಾಗ ತೊಂದರೆ- ಇವೆಲ್ಲವೂ ಇದರ ಲಕ್ಷಣಗಳು. ಆದರೆ ಆಯುರ್ವೇದದ ಪರಿಕಲ್ಪನೆಯಲ್ಲಿ ಈ ಸಮಸ್ಯೆಯನ್ನು ಕೇವಲ ಬಾಯಿಯ ರೋಗವೆಂದು ಪರಿಗಣಿಸಲಾಗುವುದಿಲ್ಲ. ಇದನ್ನು 'ಮುಖಪಾಕ' ಎಂದು ಕರೆಯಲಾಗುತ್ತದೆ ಮತ್ತು ಇದನ್ನು ದೇಹದ ಒಳಗಿನ ಜೀರ್ಣದೋಷದ ಪ್ರತಿಫಲವೆಂದು ವಿವರಿಸಲಾಗುತ್ತದೆ.

ಆಯುರ್ವೇದದ ಪ್ರಕಾರ ದೇಹದ ಆರೋಗ್ಯವು 'ಅಗ್ನಿ'ಯ ಸಮತೋಲನದ ಮೇಲೆ ನಿಂತಿದೆ. ಜೀರ್ಣಾಗ್ನಿ ಕ್ಷೀಣಿಸಿದಾಗ ಆಹಾರ ಸಮರ್ಪಕವಾಗಿ ಜೀರ್ಣವಾಗದೆ 'ಆಮ' ಎಂಬ ಅಪಕ್ವ ದೋಷಪದಾರ್ಥ ರೂಪುಗೊಳ್ಳುತ್ತದೆ. ಈ ಆಮವು ದೇಹದ ವಿವಿಧ ಮಾರ್ಗಗಳಲ್ಲಿ ಸಂಚರಿಸಿ ದೋಷಗಳನ್ನು ಕೆರಳಿಸಿ ವಿವಿಧ ರೋಗಗಳಿಗೆ ಕಾರಣವಾಗುತ್ತದೆ. ಬಾಯಿಯಲ್ಲಿರುವ ಒಳಪದರವೇ ಇಡೀ ಜೀರ್ಣಾಂಗವ್ಯೂಹದಲ್ಲಿದೆ. ಆದ್ದರಿಂದ ಬಾಯಿಯಲ್ಲಿ ಆಗುವ ತೊಂದರೆಗೆ ಮೂಲಕಾರಣ ಜೀರ್ಣಾಂಗವ್ಯೂಹದಲ್ಲಿದೆ. ದೇಹದ ಪ್ರವೇಶದ್ವಾರವಾದ್ದರಿಂದ, ಒಳಗಿನ ಅಸಮತೋಲನವು ಬಹುಸಾರಿ ಇಲ್ಲಿ ಮೊದಲ ಲಕ್ಷಣವಾಗಿ ವ್ಯಕ್ತವಾಗುತ್ತದೆ. ಹೀಗಾಗಿ ಮುಖಪಾಕವು ಕೇವಲ ಗಾಯವಲ್ಲ; ಅದು ದೇಹದ ಅಂತರಂಗದ ಅಸಮತೋಲನದ ಸೂಚನೆ.

ಮುಖಪಾಕದ ದೋಷಾನುಸಾರ ವಿಭಾಗಗಳು

ಆಯುರ್ವೇದವು ಮುಖಪಾಕವನ್ನು ಮುಖ್ಯವಾಗಿ ನಾಲ್ಕು ವಿಧಗಳಾಗಿ ವರ್ಗೀಕರಿಸುತ್ತದೆ: ವಾತಜ, ಪಿತ್ತಜ, ಕಫಜ ಮತ್ತು ರಕ್ತಜ. ಪ್ರತಿ ವಿಧಕ್ಕೂ ವಿಭಿನ್ನ ಲಕ್ಷಣಗಳು ಹಾಗೂ ನಿರ್ವಹಣಾ ವಿಧಾನಗಳಿವೆ.

1. ವಾತಜ ಮುಖಪಾಕ: ಚಿಕ್ಕ-ಚಿಕ್ಕ, ಒಣಗಿದ ಹುಣ್ಣುಗಳು, ಚುಚ್ಚುವಂಥ ತೀವ್ರನೋವು, ನಾಲಿಗೆಯ ಅಂಚಿನಲ್ಲಿ ಸುಕ್ಕುಗಟ್ಟಿದ ಗಾಯ, ಬಾಯಿಯ ಒಣಗುವಿಕೆ, ಕಪ್ಪು ಛಾಯೆಯ ಒಣಗಿದ ಒಳಪದರ, ಮಾತನಾಡುವಾಗ ಅಥವಾ ಊಟ ಮಾಡುವಾಗ ಹೆಚ್ಚುವ ನೋವು.

ಕಾರಣಗಳು: ಅತಿಯಾದ ಖಾರ, ಕಹಿ, ಒಗರು ರುಚಿ. ಜಿಡ್ಡುರಹಿತ, ಒಣ, ಶೀತ ಆಹಾರ. ಹಸಿ ತರಕಾರಿಗಳ ಅತಿಸೇವನೆ. ಕಾಳುಗಳ ಅಧಿಕ ಬಳಕೆ. ಅಲ್ಪಾಹಾರ ಅಥವಾ ನಿಯಮವಿಲ್ಲದ ಉಪವಾಸ. ಅಲ್ಪನಿದ್ರೆ, ಮಾನಸಿಕ ಒತ್ತಡ

2. ಪಿತ್ತಜ ಮುಖಪಾಕ: ಕೆಂಪು ಅಥವಾ ಹಳದಿ ಛಾಯೆಯ ಗಾಯ. ಉರಿ, ದಾಹ. ಕಹಿ ಅಥವಾ ಅಮ್ಲ ರುಚಿ. ಕೆಲವೊಮ್ಮೆ ಹಳದಿ ಸ್ರಾವ. ಕೆಲವೊಮ್ಮೆ ಜ್ವರದ ಅನುಭವ.

ಕಾರಣಗಳು: ಅತಿಯಾದ ಖಾರ, ಹುಳಿ, ಉಪ್ಪು. ಮಸಾಲೆ ಮತ್ತು ತೀಕ್ಷ್ಣ ಪದಾರ್ಥಗಳು. ಜಂಕ್‌ಫುಡ್, ಕರಿದ ಪದಾರ್ಥಗಳು. ಜೀರ್ಣಶಕ್ತಿಗಿಂತ ಹೆಚ್ಚು ಆಹಾರ. ಅತಿಯಾದ ಉಷ್ಣಗುಣದ ಆಹಾರ. ಕೋಪ, ಹೆಚ್ಚು ಬಿಸಿಲಿನ ಸಂಪರ್ಕ

3. ಕಫಜ ಮುಖಪಾಕ: ಬಾಯಿಯ ಬಣ್ಣದಂತೆಯೇ ಮೃದುವಾದ ಗಾಯ. ತೀವ್ರ ನೋವು ಇಲ್ಲ. ಅಂಟಿನಂತೆ ಲೇಪಸ್ವರೂಪ. ಹೆಚ್ಚಿನ ಲಾಲಾಸ್ರಾವ. ಮೈಭಾರದ ಅನುಭವ

ಕಾರಣಗಳು: ಅತಿಯಾದ ಸಿಹಿ ಮತ್ತು ಜಿಡ್ಡಿನ ಆಹಾರ. ಹಾಲು, ಮೊಸರು, ಐಸ್‌ಕ್ರೀಮ್, ಶೀತಲೀಕೃತ ಆಹಾರ, ಅತಿಯಾದ ನಿದ್ರೆ, ವ್ಯಾಯಾಮರಹಿತ ಜೀವನಶೈಲಿ- ಇವು ಕಫದ ಹೆಚ್ಚಳಕ್ಕೆ ಕಾರಣವಾಗುತ್ತವೆ.

4. ರಕ್ತಜ ಮುಖಪಾಕ: ರಕ್ತದ ದೋಷದಿಂದ ಉಂಟಾಗುವ ಈ ಪ್ರಕಾರ ಹೆಚ್ಚು ತೀವ್ರವಾಗಿರುತ್ತದೆ. ತೀವ್ರ ಕೆಂಪುಗಾಯ. ವಿಪರೀತ ಉರಿ. ಎಂಜಲು ನುಂಗಲು ಕಷ್ಟ. ಕೆಲವೊಮ್ಮೆ ರಕ್ತಸ್ರಾವ

ಬಾಯಿಹುಣ್ಣಿನ ನಿರ್ವಹಣೆ: ದೋಷಾನುಸಾರ ಕ್ರಮಗಳು

ಮುಖಪಾಕದ ಚಿಕಿತ್ಸೆಯಲ್ಲಿ ಮೊದಲ ಗುರಿ ಜೀರ್ಣಾಗ್ನಿಯನ್ನು ಪುನಃಸ್ಥಾಪಿಸುವುದು. ಕೇವಲ ಹೊರಗೆ 'ಜೆಲ್' ಹಚ್ಚುವುದರಿಂದ ತಾತ್ಕಾಲಿಕ ಶಮನ ಸಿಗಬಹುದು; ಆದರೆ ಮೂಲಕಾರಣ ನಿವಾರಣೆಯಾಗದಿದ್ದರೆ ಸಮಸ್ಯೆ ಮರುಕಳಿಸುತ್ತದೆ.

ಪಾಲಿಸಬೇಕಾದ ನಿಯಮಗಳು

ದಿನದಲ್ಲಿ ಎರಡು ಅಥವಾ ಮೂರು ಹೊತ್ತಿಗಿಂತ ಹೆಚ್ಚು ಬಾರಿ ಆಹಾರ ಸೇವನೆ ಮಾಡಬಾರದು. ಊಟದ ನಡುವಿನ ಸಮಯವನ್ನು ಸಮರ್ಪಕವಾಗಿ ಬಿಡುವುದು ಜೀರ್ಣಾಗ್ನಿಯ ರಕ್ಷಣೆಗೆ ಅಗತ್ಯ. ಪದೇ ಪದೆ ಏನಾದರೂ ತಿನ್ನುವ ಅಭ್ಯಾಸವನ್ನು ತಪ್ಪಿಸಬೇಕು. ನಿರಂತರ ಆಹಾರ ಸೇವನೆ ಜೀರ್ಣಕ್ರಿಯೆಯನ್ನು ದುರ್ಬಲಗೊಳಿಸುತ್ತದೆ. ಆಹಾರ ಸೇವಿಸುವ ಸಮಯದಲ್ಲಿಯೇ ಅಗತ್ಯವಿರುವ ಪ್ರಮಾಣದ ನೀರನ್ನು ಸೇವಿಸಬೇಕು.

ಅನಿಯತವಾಗಿ, ಅತಿಯಾಗಿ ನೀರು ಕುಡಿಯುವ ಅಭ್ಯಾಸವೂ ಜೀರ್ಣಾಗ್ನಿಯನ್ನು ಕ್ಷೀಣಗೊಳಿಸಿ ಮುಖಪಾಕಕ್ಕೆ ಕಾರಣವಾಗಬಹುದು. ವಾತಜ ಮತ್ತು ಕಫಜ ಮುಖಪಾಕದಲ್ಲಿ- ಕುದಿಸಿದ ನೀರನ್ನು ಬೆಚ್ಚಗಿನ ಸ್ಥಿತಿಯಲ್ಲಿಯೇ ಊಟದ ಜತೆ ಸೇವಿಸುವುದು ಹಿತಕರ. ಪಿತ್ತಜ ಮತ್ತು ರಕ್ತಜ ಮುಖಪಾಕದಲ್ಲಿ- ಕುದಿಸಿ ಆರಿಸಿದ (ಶೀತಲಗೊಳಿಸಿದ) ನೀರನ್ನು ಸೇವಿಸುವುದು ಶ್ರೇಯಸ್ಕರ. ನಿಯತ ಹಾಗೂ ಸಮರ್ಪಕ ನಿದ್ರೆ ಅತ್ಯಂತ ಮುಖ್ಯ. ಸಕಾಲದಲ್ಲಿ ಮಲಗುವುದು ಮತ್ತು ಯಥಾಶಕ್ತಿ ವಿಶ್ರಾಂತಿ ಪಡೆಯುವುದು ಮುಖಪಾಕದ ಶಮನಕ್ಕೆ ಸಹಾಯಕ. ಈ ಸರಳ ಜೀವನಕ್ರಮದ ನಿಯಮಗಳ ಪಾಲನೆಯಿಂದ ಜೀರ್ಣಾಗ್ನಿ ಸಮತೋಲನದಲ್ಲಿದ್ದು, ಮುಖಪಾಕವು ಬೇಗ ಗುಣಮುಖವಾಗಲು ಸಹಕಾರಿಯಾಗುತ್ತದೆ.

ವಾತಜ ಮುಖಪಾಕಕ್ಕೆ

ಸಾಮಾನ್ಯವಾಗಿ ಎಲ್ಲ ರೀತಿಯ ಮುಖಪಾಕದಲ್ಲಿಯೂ ಅನ್ನ, ಹೆಸರುಬೇಳೆ ಕಟ್ಟುಸಾರು ಹಿತ. ವಿಶೇಷವಾಗಿ ವಾತದಲ್ಲಿ ತುಪ್ಪದಲ್ಲಿ ಹುರಿದ ಅಕ್ಕಿಯ ಅನ್ನ, ತುಪ್ಪದಲ್ಲಿ ಹುರಿದ ಹೆಸರುಬೇಳೆಯ ಕಟ್ಟುಸಾರು ಹಿತ. ತುಪ್ಪದಲ್ಲಿ ಹುರಿದು ಮಾಡಿದ ಪೊಂಗಲ್, ವಿವಿಧ ರೀತಿಯ ಪಾಯಸ ಹಿತಕರ.

ದಿನಚರ್ಯೆಯಲ್ಲಿ ಪಾಲಿಸಬಹುದಾದ ಕ್ರಮಗಳು:

ರಾತ್ರಿ ಊಟವಾದ ತಕ್ಷಣ ಸ್ವಲ್ಪ ತುಪ್ಪ ಮತ್ತು ಕಲ್ಲುಸಕ್ಕರೆಯ ಮಿಶ್ರಣವನ್ನು ನೆಕ್ಕುವುದು ಹಿತಕರ. ಬೆಳಿಗ್ಗೆ ಹಲ್ಲುಜ್ಜಿದ ನಂತರ, ಬಾಯಿ ಒಳಗೆ ಕೊಬ್ಬರಿ ಎಣ್ಣೆ ಅಥವಾ ತುಪ್ಪವನ್ನು ಸ್ವಲ್ಪ ಬೆಚ್ಚಗೆ ಮಾಡಿ 2-3 ನಿಮಿಷ ಇಟ್ಟುಕೊಳ್ಳುವುದು (ಗಂಡೂಷ/ಕವಳ) ಪ್ರಯೋಜನಕಾರಿ. 2-3 ಚಮಚದಷ್ಟು ಎಳ್ಳನ್ನು ಸ್ವಲ್ಪ ಅಗಿದು ಬಾಯಿಯಲ್ಲಿ ಇಟ್ಟುಕೊಳ್ಳುವುದು ಪರಿಣಾಮಕಾರಿ.

ಪಿತ್ತಜ ಮತ್ತು ರಕ್ತಜ ಮುಖಪಾಕಕ್ಕೆ

ಲಕ್ಷಣಗಳ ಹಿನ್ನೆಲೆ: ಉರಿಯಿಂದಾಗಿ ಹಸಿವೆ ಹೆಚ್ಚಿದಂತೆ ಭ್ರಮೆ ಉಂಟಾಗುವುದು. ಒಳಗೆ ಬಿಸಿ, ಅಮ್ಲದ್ರವದಂಥ ಪಿತ್ತದ ಕಾವು ಇದಕ್ಕೆ ಕಾರಣ

ಹಿತಕರ ಆಹಾರ: ಸಾದಾ ಅನ್ನ, ಬೇಳೆ ಕಟ್ಟುಸಾರು, ನೆಲ್ಲಿಪುಡಿ/ನೆಲ್ಲಿಕಾಯಿ ಹೆಸರುಬೇಳೆ ಸಾರು, ದಾಳಿಂಬೆ ಹಣ್ಣಿನ ರಸದ ಸಾರು

ಪಾನೀಯ ಕ್ರಮಗಳು: ಆಹಾರದ ನಡುವೆ ಮಧ್ಯೆ ಕುದಿಸಿದ ನೀರಿನಲ್ಲಿ ಸ್ವಲ್ಪ ತ್ರಿಫಲಾ ಪುಡಿ ಹಾಗೂ ಬೆಣ್ಣೆ ಸೇರಿಸಿ ಸೇವಿಸುವುದು. ಒಣದ್ರಾಕ್ಷಿಯನ್ನು ನೆನೆ ಹಾಕಿ ಕಿವುಚಿದ ನೀರು ಸೇವನೆ. ಕೊತ್ತಂಬರಿ ಬೀಜವನ್ನು ರಾತ್ರಿ ನೆನೆ ಹಾಕಿದ ತಂಪಾದ ನೀರು ಕುಡಿಯುವುದು

ಬಾಯಿ ಶುದ್ಧಿಗಾಗಿ: ತ್ರಿಫಲಾ ಪುಡಿಯಿಂದ ಹಲ್ಲುಜ್ಜುವುದು. ತ್ರಿಫಲಾ ಕಷಾಯದಿಂದ ಬಾಯಿ ಮುಕ್ಕಳಿಸುವುದು

ಕಫಜ ಮುಖಪಾಕಕ್ಕೆ

ಹಿತಕರ ಆಹಾರ ಮತ್ತು ಸಾರು: ಶುಂಠಿ, ಮೆಣಸು, ಜೀರಿಗೆ ಹಾಕಿ ತಯಾರಿಸಿದ ಸಾರು (ಉಷ್ಣ, ದೀಪನ ಗುಣಯುಕ್ತ). ಲಘು ಮತ್ತು ಸುಲಭವಾಗಿ ಜೀರ್ಣವಾಗುವ ಆಹಾರ. ಹಸಿವಿಲ್ಲದಿದ್ದಾಗ ಘನ ಆಹಾರವನ್ನು ತಾತ್ಕಾಲಿಕವಾಗಿ ವರ್ಜಿಸಿ ಕೇವಲ ಬಿಸಿ ಕಟ್ಟುಸಾರು (ಲಘು ಬೇಳೆಸಾರು) ಸೇವಿಸಬಹುದು.

ಬಾಯಿ ಶುದ್ಧಿಗಾಗಿ: ಸ್ವಲ್ಪ ಖಾರ ರಸಯುಕ್ತ ದಂತಮಂಜನ ಪುಡಿಯನ್ನು ಹಲ್ಲುಜ್ಜಲು ಉಪಯೋಗಿಸಬಹುದು. ಜೇನುತುಪ್ಪವನ್ನು ಬಾಯಿ ಒಳಗೆ ಇಟ್ಟುಕೊಳ್ಳುವುದು ಹಿತಕರ.

ಪಾನೀಯ: ಕುದಿಸಿದ ಬಿಸಿನೀರಿಗೆ ಸ್ವಲ್ಪ ಶುಂಠಿ ಪುಡಿ ಅಥವಾ ತ್ರಿಕಟು ಪುಡಿ ಸೇರಿಸಿ ಸೇವಿಸುವುದು ಉತ್ತಮ.

ಸ್ನೇಹಿತರೆ, ಮುಖಪಾಕದ ಉದಾಹರಣೆ ನಮ್ಮ ಆರೋಗ್ಯದ ಕುರಿತು ನಾವು ಹೊಂದಿರುವ ಮನೋಭಾವವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಬಾಯಿಯಲ್ಲಿ ಸಣ್ಣ ಹುಣ್ಣು ಕಾಣಿಸಿಕೊಂಡಾಗ ನಾವು ತಕ್ಷಣವೇ ಜೆಲ್ ಹಚ್ಚುವುದು, ಮೌತ್ವಾಷ್ ಬಳಸುವುದು, ನೋವು ಕಡಿಮೆಯಾಗುವ ತನಕ ತಾತ್ಕಾಲಿಕ ಪರಿಹಾರ ಹುಡುಕುವುದು- ಇದುವೇ ನಮ್ಮ ಸಾಮಾನ್ಯ ಪ್ರವೃತ್ತಿ. ಹುಣ್ಣು ಕೆಲವು ದಿನಗಳಲ್ಲಿ ಶಮನವಾದರೆ, ಸಮಸ್ಯೆ ಮುಗಿಯಿತೆಂದೇ ಭಾವಿಸುತ್ತೇವೆ. ಆದರೆ ಒಳಗಿನ ಅಜೀರ್ಣ, ದೋಷಗಳ ಅಸಮತೋಲನ, ಜೀವನಶೈಲಿಯ ಎಡವಟ್ಟುಗಳು- ಇವೆಲ್ಲವೂ ಹಾಗೆಯೇ ಉಳಿದುಕೊಳ್ಳುತ್ತವೆ.

ಆರೋಗ್ಯ ಸಂರಕ್ಷಣೆ ಎಂದರೆ ಲಕ್ಷಣಗಳನ್ನು ಮುಚ್ಚಿಹಾಕುವುದು ಅಲ್ಲ. ಅದು ಮೂಲಕಾರಣವನ್ನು ಗುರುತಿಸಿ, ಅದನ್ನು ಸರಿಪಡಿಸುವ ಪ್ರಕ್ರಿಯೆ. ಮುಖಪಾಕವು ಮೇಲ್ನೋಟಕ್ಕೆ ಸಣ್ಣ ಸಮಸ್ಯೆಯಂತೆ ಕಂಡರೂ, ಅದು ದೇಹದ ಆಂತರಿಕ ಏರುಪೇರಿನ ಪ್ರತಿಬಿಂಬ. ಅದನ್ನು ಕೇವಲ ಹೊರಗೆ ಜೆಲ್ ಹಚ್ಚಿ ಶಮನಗೊಳಿಸುವುದು, ಮನೆಯ ಗೋಡೆಯಲ್ಲಿ ಕಾಣಿಸಿಕೊಂಡ ಬಿರುಕಿನ ಮೇಲೆ ಬಣ್ಣ ಹಚ್ಚಿದಂತೆಯೇ. ಬಿರುಕು ಮತ್ತೆ ಮೂಡುತ್ತದೆ, ಏಕೆಂದರೆ ಮೂಲಸಮಸ್ಯೆ ನಿವಾರಣೆಯಾಗಿಲ್ಲ

ನಮಗೆ ರೋಗ ಬಂದಾಗ ಹೆಚ್ಚಾಗಿ ಹೊರಗೆ ಕಾಣುವ ಲಕ್ಷಣಗಳು ಹೋದರೆ ಸಾಕಪ್ಪ ಎಂಬ ಮನೋಭಾವದಲ್ಲೇ ಇರುತ್ತೇವೆ; 'ರೋಗದ ಮೂಲ ನಾಶವಾಗಬೇಕು' ಎಂಬ ಚಿಂತನೆ ವಿರಳ. ಇದು ಕೇವಲ ಮುಖಪಾಕದ ವಿಚಾರವಲ್ಲ; ನಮ್ಮ ಸಮಗ್ರ ಆರೋಗ್ಯದ ವಿಚಾರ. ತಾತ್ಕಾಲಿಕ ಆರಾಮದ ಹಿಂದೆ ಓಡುವ ಮನಸ್ಥಿತಿಯಿಂದ ಹೊರಬಂದು, ದೇಹದ ಒಳಗಿನ ಸಮತೋಲನವನ್ನು ಪುನಃಸ್ಥಾಪಿಸುವತ್ತ ಗಮನ ಹರಿಸುವುದು ಅಗತ್ಯ. ಆಯುರ್ವೇದವು ನಮಗೆ ನೀಡುವ ಮಹತ್ವದ ಸಂದೇಶವೇ ಇದು- ಸ್ವಾಸ್ಥ್ಯ ಒಳಗಿನಿಂದ ನಿರ್ಮಾಣವಾಗುತ್ತದೆ. ಲಕ್ಷಣಗಳು ಕೇವಲ ಸೂಚನೆಗಳು; ಅವುಗಳನ್ನು ಬಲವಂತವಾಗಿ ಮೌನಗೊಳಿಸುವುದಲ್ಲ, ಬದಲಿಗೆ ಅವು ಹೇಳುವ ಸಂದೇಶವನ್ನು ಆಲಿಸುವುದು ಮುಖ್ಯ. ಆದ್ದರಿಂದ ತ್ವರಿತ ಪರಿಹಾರಗಳ ಹಿಂದೆ ಓಡುವುದನ್ನು ಬಿಟ್ಟು, ಶಾಶ್ವತ ಆರೋಗ್ಯದತ್ತ ಸಾಗುವ ಮನೋಭಾವವನ್ನು ಬೆಳೆಸಿಕೊಳ್ಳೋಣ. ಬಾಹ್ಯ ಶಮನಕ್ಕಿಂತ ಆಂತರಿಕ ಶುದ್ಧೀಕರಣ, ತಾತ್ಕಾಲಿಕ ಆರಾಮಕ್ಕಿಂತ ಶಾಶ್ವತ ಸಮತೋಲನ- ಇದುವೇ ನಿಜವಾದ ಆರೋಗ್ಯಪಥ.

ಮರಳುಗಾಡಿನ ಮತಗಳೊಂದಿಗೆ ಸಮೀಕರಿಸುವುದೆಷ್ಟು ಸರಿ?

ಯಕ್ಷಪ್ರಶ್ನೆ

ಜನಮೇಜಯ ಉಮರ್ಜಿ
vveditoped@gmail.com

ಕಳೆದ ಶನಿವಾರದಂದು, 'ಅನುಮಾನವೇಕೆ, ಬಸವಣ್ಣ ಹಿಂದೂ' ಎಂಬ ಶೀರ್ಷಿಕೆಯ ಲೇಖನ ಪ್ರಕಟವಾಗಿತ್ತು. ಬಸವಣ್ಣನವರು ಯಾವೆಲ್ಲ ಕಾರಣಕ್ಕಾಗಿ ಹಿಂದೂ ಎಂಬುದನ್ನು ಅವರ ವಚನಗಳ ಸಾಧಾ ರವಾಗಿ ನಿರೂಪಿಸಲಾಗಿತ್ತು. ಸಾಕಷ್ಟು ಉತ್ತಮ ಪ್ರತಿಕ್ರಿಯೆಗಳು ಬಂದವು. ಜತೆಗೆ ಒಂದಿಷ್ಟು ವಿಷಯಗಳ ಪಟ್ಟಿ ಮತ್ತು ಅವುಗಳ ಬಗ್ಗೆ ಬರೆಯಲು ಆಗ್ರಹ. ಹೀಗಾಗಿ ಬರೆಯಲೇಬೇಕಾಗಿದೆ. ಉದಾತ್ತ ಲಿಂಗಾಯತವನ್ನು ಮರಳುಗಾಡಿನ ಮತಗಳೊಂದಿಗೆ ಸಮೀಕರಿಸುವುದೆಷ್ಟು ಸರಿ? ಇಲ್ಲಿಂದ ಶುರು ಮಾಡೋಣ. ಪ್ರತ್ಯೇಕ ಧರ್ಮ ಮಾಡಲು ಹೊರಟ ಘಟಾನುಘಟಿಗಳಲ್ಲಿ ಕೆಲವರು ಲಿಂಗಾಯತವನ್ನು ಮರಳುಗಾಡಿನ ಮತಗಳೊಂದಿಗೆ ಸಮೀಕರಿಸಲು ಹೆಣಗುತ್ತಿರುವುದು ಹಲವು ಭಾಷಣಗಳಲ್ಲಿ, ಕಾರ್ಯಕ್ರಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ವಿದಿತವಾಗಿದೆ. ಈ ಬಲೆ ಹೆಣೆದವರಾರು? ಇದರ ಹಿಂದಿನ ಕಾರಣವೇನಿರಬಹುದು? ಸದ್ಯಕ್ಕಿದು ಕುತೂಹಲ.

ಮರಳುಗಾಡಿನ ಮತಗಳು, ರಿಲಿಜನ್ನುಗಳೇ ಹೊರತು ಧರ್ಮವಲ್ಲ. 'ರಿಲಿಜನ್' ಮತ್ತು 'ಧರ್ಮ' ಒಂದೇ ಅರ್ಥದ ಪದಗಳಲ್ಲ. ಮತ ಹತ್ತಿರದ ಪದ ಆದರೆ ಭಾರತೀಯ ಭಾಷೆಗಳಲ್ಲಿ ರಿಲಿಜನ್ನಿಗೆ ಸಮಾನಾರ್ಥಕ ಪದವಿಲ್ಲ. ರಿಲಿಜನ್ ಮುಖ್ಯವಾಗಿ ನಿರ್ದಿಷ್ಟ ನಂಬಿಕೆ, ಪ್ರವಾದಿ ಮತ್ತು ಗ್ರಂಥವನ್ನು ಕೇಂದ್ರವಾಗಿಟ್ಟುಕೊಂಡ ವ್ಯವಸ್ಥೆಯಾಗಿದ್ದರೆ, ಬದಲಾಗಿ ಧರಿಸಲ್ಪಡುವುದು ಧರ್ಮ. ಆಚರಿಸಲ್ಪಡುವುದು ಧರ್ಮ. ಅದು ನೈತಿಕ-ಅಧ್ಯಾತ್ಮಿಕ ನಿಯಮ ಮತ್ತು ಜೀವನಪದ್ಧತಿ. ರಿಲಿಜನ್ ''ನೀವು ಏನು ನಂಬುತ್ತೀರಿ?'' ಎಂದು ಕೇಳುತ್ತದೆ; ಧರ್ಮ ''ನೀವು ಹೇಗೆ ಬದುಕುತ್ತೀರಿ?'' ಎಂಬುದನ್ನು ಬಯಸುತ್ತದೆ. ಆದ್ದರಿಂದ ಧರ್ಮವು ಕೇವಲ ಪೂಜಾಪದ್ಧತಿಗೆ ಸೀಮಿತವಲ್ಲ, ಅದು ಕರ್ತವ್ಯ-ಅಕರ್ತವ್ಯ, ಕರ್ಮ-ಅಕರ್ಮ, ಸತ್ಯ-ಅಸತ್ಯ ಮತ್ತು ನೀತಿ-ಅನೀತಿಯ ಸಮಗ್ರ ಜೀವನದರ್ಶನ.

ಉದಾತ್ತ ಲಿಂಗಾಯತವನ್ನು ರಿಲಿಜನ್ನುಗಳಂತೆ ಸಮೀಕರಿಸಲು, ಅಂದರೆ ಒಂದೇ ದೇವರು, ಒಬ್ಬನೇ ಪ್ರವಾದಿ ಯಾನೆ ಸಂಸ್ಥಾಪಕ, ಒಂದೇ ಪವಿತ್ರ ಗ್ರಂಥ, ಒಂದೇ ಭಾಷೆ, ಒಂದೇ ಪವಿತ್ರ ಸಂಖ್ಯೆ ಇವುಗಳನ್ನೆಲ್ಲ ಲಿಂಗಾಯತಕ್ಕೆ ಅಂಟಿಸಲಾಗುತ್ತಿದೆ. 'ಇಷ್ಟ ಲಿಂಗ' ಒಂದೇ ದೇವರು, 'ವಚನಗಳು ಮಾತ್ರವೇ ಧರ್ಮಗ್ರಂಥ', 'ಬಸವಣ್ಣನವರು ಪ್ರವಾದಿ' ಮತ್ತು ಒಂದೇ ಪವಿತ್ರ ಸಂಖ್ಯೆ, ಇದು ಕನ್ನಡದ ಧರ್ಮ- ಈ ರೀತಿ ಮರುವಿನ್ಯಾಸಗೊಳಿಸಲು ಒಂದು ಗುಂಪು ಹೆಣಗುತ್ತಿದೆ. ವಿಚಾರಿಸಿ ನೋಡಿದರೆ ಹಿಂದೂ ಲಿಂಗಾಯತ ದರ್ಶನ ಮತ್ತು ಸೆಮೆಟಿಕ್-ಅಬ್ರಹಾಮಿಕ್ ರಿಲಿಜನ್ನುಗಳ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ರಿಲಿಜನ್ನುಗಳು ಸಹ ದೇವರ ಅಸ್ತಿತ್ವದಲ್ಲಿ ನಂಬಿಕೆಯನ್ನು ಹೊಂದಿದ್ದರೂ, ಅವುಗಳ ಮೂಲತತ್ತ್ವಗಳಲ್ಲಿ ಮಹತ್ತರ ಭೇದಗಳಿವೆ. ಲಿಂಗಾಯತ ದರ್ಶನದಲ್ಲಿ ಇಷ್ಟಲಿಂಗದ ಮೂಲಕ ಶಿವಾನುಭವವನ್ನು ಸಾಧಿಸುವ ಸಾಕಾರ-ನಿರಾಕಾರದ ಏಕತ್ವ ದರ್ಶನವಿದೆ. ಹಿಂದಿನ ಲೇಖನದಲ್ಲಿ ಹೇಳಿದಂತೆ ಸ್ಥಾವರ-ಜಂಗಮ ರೂಪಗಳ ವೈವಿಧ್ಯದಲ್ಲಿಯೂ ಪರಮತತ್ತ್ವದ ಏಕತ್ವವನ್ನು ಒಪ್ಪಿಕೊಳ್ಳಲಾಗುತ್ತದೆ. ಈ ಉಪಾಸನಾ ವೈವಿಧ್ಯವೇ ಮುಂದೆ ವಿಭಜನೆಯಾಗಬಾರದೆಂದು ಎಚ್ಚರಿಕೆಯನ್ನೂ ವಹಿಸಿದ್ದಾರೆ ಬಸವಣ್ಣನವರು. ಉದಾಹರಣೆಗೆ ''ಕನ್ನಡಿಯ ನೋಡುವ ಅಣ್ಣಗಳಿರಾ, ಜಂಗಮವ ನೋಡಿರೇ; ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿರ್ಪ. 'ಸ್ಥಾವರ ಜಂಗಮ ಒಂದೆ' ಎಂದುದು ಕೂಡಲಸಂಗನ ವಚನ'', ''ಆರಾಧನೆಯ ಮಾಡಿದಡೆ ಅಮೃತದ ಬೆಳಸು, ವಿರೋಧಿಸಿದಡೆ ವಿಷದ ಬೆಳಸು! ಇದು ಕಾರಣ, ಲಿಂಗ ಜಂಗಮಕ್ಕಂಜಲೆಬೇಕು. ಸ್ಥಾವರ ಜಂಗಮ ಒಂದೆಯೆಂದರಿದರೆ, ಕೂಡಲಸಂಗಮದೇವ ಶರಣಸನ್ನಿಹಿತ'' ಈ ವಚನಗಳನ್ನು ನೋಡಬಹುದು. ರಿಲಿಜನ್ನುಗಳಲ್ಲಿ ನಿರಾಕಾರ ಏಕದೇವತ್ವವೇ ಮೂಲಾಧಾರವಾಗಿದ್ದು, ದೇವರಿಗೆ ಯಾವುದೇ ರೂಪ-ಪ್ರತಿಮೆಯನ್ನು ನಿರಾಕರಿಸಲಾಗುತ್ತದೆ. ಜತೆಗೆ ನಮ್ಮ ದೇವರು ಮಾತ್ರ ದೇವರು, ಉಳಿದವರಲ್ಲ ಎಂಬುದನ್ನು ಹೇಳಲಾಗುತ್ತದೆ. ಈ ವ್ಯತ್ಯಾಸ ಸ್ಪಷ್ಟವಿದ್ದರೂ ಲಿಂಗಾಯತವನ್ನು ರಿಲಿಜನ್ನುಗಳ ರೀತಿ ನಿರಾಕಾರ ಹಾಗೂ ಏಕದೇವವಾದಕ್ಕೆ ಒಗ್ಗಿಸಲು ಮೂರ್ತಿಪೂಜೆ ನಿರಾಕರಿಸುವ, ಜಗುಲಿಗಳಿಂದ, ಗೂಡುಗಳಿಂದ ಮೂರ್ತಿಗಳನ್ನು ತೆಗೆಸಿಹಾಕುವ, ದೇವಸ್ಥಾನಗಳಿಗೆ ಹೋಗದಂತೆ ತಡೆಯುವ ಶತಪ್ರಯತ್ನ ನಡೆಸಲಾಗುತ್ತದೆ.

ಇನ್ನು ರಿಲಿಜನ್ನುಗಳಲ್ಲಿ ದೇವರಿಗೆ ಒಂದೇ ಹೆಸರು. ಶಿವಶರಣರು ಒಂದೇ ಪರತತ್ತ್ವವನ್ನು ತಮ್ಮ ಇಷ್ಟದ ಹೆಸರಿಟ್ಟು ಕರೆದಿದ್ದಾರೆ. ಅವನನ್ನು ಇಷ್ಟದಂತೆ ಕರೆಯುವ ಸ್ವಾತಂತ್ರ್ಯವಿದೆ. 'ಕೂಡಲಸಂಗಮದೇವ', 'ಗುಹೇಶ್ವರ', 'ಚೆನ್ನಮಲ್ಲಿಕಾರ್ಜುನ', 'ಸೌರಾಷ್ಟ್ರ ಸೋಮನಾಥ' ಹೀಗೆ ನೂರಾರು ಹೆಸರು ಶಿವನಿಗೆ. ಇವುಗಳನ್ನು ಅಂಕಿತನಾಮಗಳು ಎನ್ನುವುದರ ಜತೆಗೆ ಇಷ್ಟದೈವ ಎನ್ನುವುದು ಸತ್ಯ. ಅಂಬಿಗರ ಚೌಡಯ್ಯನವರ ಅಂಕಿತ ಇದಕ್ಕೆ ಹೊರತು ಎಂದು ಕೆಲವರು ವಾದಿಸಬಹುದು. ಇದು ಲಿಂಗಾಂಗ ಸಾಮರಸ್ಯದ ಸ್ಥಿತಿ. ಇದೇ ರೀತಿ ಇನ್ನೂ ಕೆಲವು ಇರಬಹುದು ಆದರೆ ಬಹುಪಾಲು ಇಷ್ಟದೈವಗಳೇ. ಅಷ್ಟೇ ಅಲ್ಲದೇ ವಚನಗಳಲ್ಲಿ ಅಭವ, ನೊಸಲಗಣ್ಣ, ತ್ರಿಪುರಾರಿ, ಲಿಂಗ, ಶಿವ, ಶಂಕರ, ರುದ್ರ, ಪಂಚವಕ್ತ್ರ ಈ ರೀತಿ ಹಲವು ಹೆಸರುಗಳಿಂದ ಕರೆಯಲಾಗಿದೆ. ಅಕ್ಕಮಹಾದೇವಿಯವರ ವಚನಗಳನ್ನು ನೋಡಿದಾಗ ಅವರು ಚೆನ್ನಮಲ್ಲಿಕಾರ್ಜುನನ ಗುಣ ರೂಪಗಳನ್ನು ಎಷ್ಟು ರೀತಿ ವರ್ಣಿಸಿದ್ದಾರೆ ಎಂಬುದಕ್ಕೆ ಲೆಕ್ಕವಿಲ್ಲ. ಉದಾಹರಣೆಗೆ, ''ಅಕ್ಕ ಕೇಳವ್ವ ನಾನೊಂದು ಕನಸ ಕಂಡೆ, ಅಕ್ಕಿ ಅಡಕೆ ಓಲೆ ತೆಂಗಿನಕಾಯಿ ಕಂಡೆ, ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು, ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ, ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈಪಿಡಿದೆ, ಚೆನ್ನಮಲ್ಲಿಕಾರ್ಜುನನ ಕಂಡು ನಾ ಕಣ್ತೆರೆದೆ'' ವಚನವನ್ನು ನೋಡಬಹುದು. ಈ ವಚನದಲ್ಲಿ ಚೆನ್ನಮಲ್ಲಿಕಾರ್ಜುನ ಕೆಂಜೆಡೆಗಳ ಸುಲಿಪಲ್ಲ ಗೊರವ. ಈ ಸ್ವಾತಂತ್ರ್ಯವು ಹಿಂದೂ ಧರ್ಮದಲ್ಲಿ ಮಾತ್ರವೇ ಇದೆ. ಅನೇಕ ನಿಂದಾಪರ ಸ್ತುತಿ ವಚನಗಳನ್ನು ಸಹ ನೋಡಬಹುದು. ಇದು ರಿಲಿಜನ್ನುಗಳಲ್ಲಿ ಊಹಿಸಲೂ ಸಾಧ್ಯವಿಲ್ಲ.

ಕರ್ಮ, ಪುನರ್ಜನ್ಮ ಮತ್ತು ಮೋಕ್ಷದ ವಿಷಯದಲ್ಲಿಯೂ ಸನಾತನ ಲಿಂಗಾಯತ ದರ್ಶನ ಮತ್ತು ಅಬ್ರಹಾಮಿಕ್ ರಿಲಿಜನ್ನುಗಳ ನಡುವೆ ಮೂಲಭೂತ ಭೇದವಿದೆ. ಲಿಂಗಾಯತ ದರ್ಶನದಲ್ಲಿ ಕರ್ಮ-ಫಲದ ನಿಯಮ ಅಚಲಸತ್ಯ; ಸಂಸಾರವು ಹುಟ್ಟು-ಸಾವುಗಳ ಚಕ್ರ, ಮತ್ತು ಆ ಭವದಿಂದ ಬಿಡುಗಡೆ ಹೊಂದುವುದೇ ಲಿಂಗಾಂಗ ಸಾಮರಸ್ಯ. ವಚನಗಳಲ್ಲಿ ಹಲವು ಕಡೆ ''ಕುಂಭೀಪಾತಕ ನಾಯಕ ನರಕ'' ಮುಂತಾದ ಶಬ್ದಗಳು ಬಂದಿವೆ. ಅವು ಅನೈತಿಕ ಕರ್ಮದ ಫಲವನ್ನು ಸೂಚಿಸುವ ಎಚ್ಚರಿಕೆಗಳು. ಆದರೆ ಪ್ರತಿ ಶರಣರ ಗುರಿ ಸೌಲಭ್ಯಗಳಿರುವ ಸ್ವರ್ಗಪ್ರಾಪ್ತಿ ಅಲ್ಲ. ಬದಲಾಗಿ ಭವ ನಾಸ್ತಿಯಾಗುವುದು, ಹುಟ್ಟುಗೆಡುವುದು, ಮತ್ತೆ ಹುಟ್ಟದಿರುವುದು. ಉದಾಹರಣೆಗೆ ಬಸವಣ್ಣನವರ ಈ ವಚನಗಳನ್ನು ನೋಡಬಹುದು ''ಭವಬಂಧನ ಭವಪಾಶವಾದ ಕಾರಣವೇನಯ್ಯಾ? ಹಿಂದಣ ಜನ್ಮನಲ್ಲಿ ಲಿಂಗವ ಮರೆದೆನಾಗಿ, ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ, ಅರಿದೊಡೀ ಸಂಸಾರವ ಹೊದ್ದಲೀವನೆ, ಕೂಡಲ ಸಂಗಮದೇವ?'', ''ಭವಭವದಲ್ಲೆನ್ನ ಮನವು ನೀವಲ್ಲದೆ ಭವಭವದಲ್ಲೆನ್ನ ಮನವು ಸಿಲುಕದೆ? ಭವರಾಟಳದೊಳು ತುಂಬದೆ? ಕೆಡಹದೆ? ಭವರೋಗವೈದ್ಯ ನೀನು, ಭವವಿರಹಿತ ನೀನು, ಅವಧಾರು, ಕರುಣಿಸುವುದು, ಕೂಡಲಸಂಗಮದೇವಾ''. ಆದರೆ ರಿಲಿಜನ್ನುಗಳಲ್ಲಿ ಒಂದೇ ಜನ್ಮ, ಸಾವಿನ ನಂತರ ಎಲ್ಲರಿಗೂ ಒಂದೇ ದಿನ ನ್ಯಾಯದಿನ. ಅವುಗಳು ಸ್ವರ್ಗ-ನರಕದಲ್ಲಿ ಸಿಗುವ ಶಾಶ್ವತ ಸೌಲಭ್ಯ ಅಥವಾ ಶಿಕ್ಷೆಯ ಮೇಲೆ ಕೇಂದ್ರಿತವಾಗಿವೆ. ಅಲ್ಲಿ ಪುನರ್ಜನ್ಮ ಇಲ್ಲ. ಲಿಂಗಾಯತದಲ್ಲಿ ಲಿಂಗಾಂಗ ಸಾಮರಸ್ಯವೇ ಜೀವನದ ಅಂತಿಮ ಗುರಿ, ಅದುವೇ ಮುಕ್ತಿ. ಶುದ್ಧಜೀವನ ಕ್ರಮವೇ ಅದರ ದಾರಿ. ಹೀಗಾಗಿ ಇಲ್ಲಿ ಆಚಾರವೇ ಸ್ವರ್ಗ, ಅನಾಚಾರವೇ ನರಕ. ಇಲ್ಲಿ ಜೀವನೇ ಶಿವನಾಗುವುದಿದೆ. ರಿಲಿಜನ್ನುಗಳಲ್ಲಿ 'ಜೀವ-ದೇವ' ಒಂದಾಗುವ ಅದ್ವೈತ ಸಾಧ್ಯವೇ ಇಲ್ಲ. ಇದೇ ಜನ್ಮದಲ್ಲಿ ಮುಕ್ತಿಯಾಗಬೇಕು, ಮತ್ತೆ ಹುಟ್ಟಬಾರದು ಎಂಬುದನ್ನು ಬಹುತೇಕ ಎಲ್ಲ ಹಿಂದೂ ದರ್ಶನಗಳು ಸಾರುತ್ತವೆ.

ಗ್ರಂಥಾಧಿಕಾರ ಮತ್ತು ಪ್ರವಾದಿತ್ವದ ದೃಷ್ಟಿಯಿಂದಲೂ ಲಿಂಗಾಯತ ದರ್ಶನ ಮತ್ತು ರಿಲಿಜನ್ನುಗಳ ನಡುವೆ ಸ್ಪಷ್ಟ ತತ್ತ್ವಭೇದವಿದೆ. ಲಿಂಗಾಯತದಲ್ಲಿ ವಚನಗಳು ಅಂತಿಮ 'ದೈವ ಪ್ರಕಟಣೆ'ಗಳಲ್ಲ; ಶರಣರ ಅನುಭಾವದಿಂದ ಉಗಮಿಸಿದ ಆಧ್ಯಾತ್ಮಿಕ ಸ್ರೋತಗಳು. ಇಲ್ಲಿ ಅಂತಿಮ ಪ್ರವಾದಿ ಎಂಬ ಸ್ಥಿರ ಕಲ್ಪನೆ ಇಲ್ಲ; ಗುರು-ಲಿಂಗ-ಜಂಗಮ ತತ್ತ್ವದ ಮೂಲಕ ಅನುಭಾವ ಪರಂಪರೆ ನಿರಂತರವಾಗಿ ಜೀವಂತವಾಗಿರುತ್ತದೆ. ಸತ್ಯವು ಕಾಲಾತೀತ; ಅದು ಅನುಭವಿಸಬೇಕಾದದ್ದು, ಒಂದೇ ವ್ಯಕ್ತಿಯ ಮೂಲಕ ಅಂತಿಮವಾಗಿ ಮುಕ್ತಾಯಗೊಳ್ಳುವುದಲ್ಲ. ಬಸವಣ್ಣನವರು ಪ್ರವರ್ತಿಸಿದ ಭಕ್ತಿ ಪರಂಪರೆಗೆ 63 ಪುರಾತನರೇ ಸ್ಫೂರ್ತಿ. ಬಸವಣ್ಣನವರ ವಚನವೊಂದು ಹೀಗೆ ಹೇಳುತ್ತದೆ. ''ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ನೊರೆ ತೆರೆಯಂತೆ, ಆದ್ಯರ ವಚನವಿರಲು, ಬೇರೆ ಬಾವಿಯ ತೋಡಿ ಉಪ್ಪನೀರನುಂಬವನ ವಿಧಿಯಂತೆ ಆಯಿತ್ತೆನ್ನ ಮತಿ, ಕೂಡಲಸಂಗಮದೇವಾ''. ಬಸವಣ್ಣನವರಿಗೆ ಪ್ರೇರಣೆ ನೀಡಿದ ಭಕ್ತಿಪಂಥಗಳು ಮೊದಲೇ ಇದ್ದವು, ಅವರ ಪ್ರೇರಣೆಯಿಂದ ಹುಟ್ಟಿದ ಪಂಥಗಳು ಮುಂದೇಯೂ ಬಂದಿವೆ. ಈಗಲೂ ಇವೆ.

ಕೊನೆಯದಾಗಿ ಭಾಷೆಯನ್ನು ಬಳಸಿಕೊಂಡು ಧರ್ಮವನ್ನು ಒಡೆಯುವ ಪ್ರಯತ್ನಗಳೂ ನಡೆದಿವೆ. ವಚನ ಸಾಹಿತ್ಯವು ಕನ್ನಡದಲ್ಲಿ ರಚಿತವಾದುದರಿಂದ ಅದು ಕನ್ನಡದ ಅಮೂಲ್ಯ ಆಸ್ತಿ ಎಂಬುದು ನಿಸ್ಸಂಶಯ. ಲೋಕಭಾಷೆ ಕನ್ನಡವನ್ನು ಬಳಸಿಕೊಂಡು ಅಮೂಲ್ಯವಾದ ಅನುಭಾವ ಜನ್ಯ ಅಮೃತನುಡಿಗಳನ್ನು ಸೃಜಿಸಿದ್ದಾರೆ ಶರಣರು. ಆದರೆ ವಚನ ದರ್ಶನ ಭಾಷಾ-ಪ್ರಾದೇಶಿಕ ಗಡಿಗಳಿಗೆ ಸೀಮಿತವಾಗಿಲ್ಲ; ಅದು ವೈಶ್ವಿಕವಾಗಿದೆ. ಭಾಷೆಯನ್ನು ಬಳಸಿಕೊಂಡು ಒಡೆವ ಅಪಾಯವನ್ನು ಊಹಿಸಿಯೇ ಬಸವಣ್ಣನವರು ಈ ವಚನವನ್ನು ಬರೆದಿರಬಹುದೇನೋ?- ಕಾಳಿದಾಸಂಗೆ (ಸಂಸ್ಕೃತ) ಕಣ್ಣನಿತ್ತೆ, ಓಹಿಲಯ್ಯನ (ತಮಿಳು) ನಿಜಪುರಕ್ಕೊಯ್ದೆ: ನಂಬಿ ಕರೆದೋಡೋ ಎಂದೆ, ತೆಲುಗು ಜೊಮ್ಮಯ್ಯಂಗೆ ಒಲಿದೆ, ದೇವಾ, ಕೂಡಲಸಂಗಮದೇವಾ, ಎನ್ನನೇಕೆ ಒಲ್ಲೆಯಯ್ಯಾ?

ಈ ಎಲ್ಲ ತತ್ತ್ವ-ಆಚಾರ-ದರ್ಶನಗಳ ವ್ಯತ್ಯಾಸಗಳನ್ನು ಸಮಗ್ರವಾಗಿ ಪರಿಶೀಲಿಸಿದಾಗ, ಉದಾತ್ತ ಲಿಂಗಾಯತವನ್ನು ಸೆಮೆಟಿಕ್ ರಿಲಿಜನ್ನುಗಳೊಂದಿಗೆ ಸರಳ ಸಮೀಕರಣ ಮಾಡುವುದು ಬೌದ್ಧಿಕವಾಗಿ ಮತ್ತು ಐತಿಹಾಸಿಕವಾಗಿ ಬಗೆಯುವ ದ್ರೋಹವಾಗುತ್ತದೆ. ಆದರೆ ನಡೆಯುತ್ತಿರುವುದು ಮಾತ್ರ ಹಿಂದೂ ಧರ್ಮ ಭಂಜನೆಯ ಭಾಗ. ವಿಧಿಯ ಬದಲು ನಿಷೇಧಗಳನ್ನು ಹೇರುವಲ್ಲಿ ಬೆರಳೆಣಿಕೆಯ ಜನರಿರುವ ಒಂದು ಗುಂಪು ನಿರತವಾಗಿದೆ. ಲಿಂಗಾಯತವು ಅಂತಿಮ ಗ್ರಂಥ-ಪ್ರವಾದಿ ಆಧಾರಿತ ಸಂಕುಚಿತ ವ್ಯವಸ್ಥೆಯಲ್ಲ; ಅದು ಅನುಭಾವ, ಕಾಯಕ, ಭಕ್ತಿ, ದಾಸೋಹ ಮತ್ತು ಲಿಂಗಾಂಗ ಸಾಮರಸ್ಯದ ಮೂಲಕ ಜೀವನೇ ಶಿವನಾಗುವ ಸಾಧನೆಯ ಮಾರ್ಗ. ಇದು ಸನಾತನ ಭಾರತೀಯ ಜೀವನಪದ್ಧತಿಯೊಳಗೆ ರೂಪುಗೊಂಡ ವಿಶಿಷ್ಟ ದರ್ಶನ. ಆದ್ದರಿಂದ ನಿಜ ಲಿಂಗಾಯತದ ಅಸ್ತಿತ್ವವನ್ನು ಉಳಿಸಬೇಕಾದರೆ ಅದನ್ನು ಅನ್ಯ ಮಾದರಿಗಳ ಚೌಕಟ್ಟಿಗೆ ಸಿಕ್ಕಿಸದೇ, ರಾಜಕೀಯ ಕಾರಣಗಳಿಗಾಗಿ ತುಷ್ಟೀಕರಣಕ್ಕಿಳಿಯದೇ ಅದರ ತತ್ತ್ವಗಾಂಭೀರ್ಯ, ವೈಶಾಲ್ಯ ಮತ್ತು ಸನಾತನ ಮೂಲಸಂಬಂಧವನ್ನು ಅರಿತು ಸಮಗ್ರವಾಗಿ ಪ್ರಚಾರ ಮಾಡುವುದು ಈ ಕಾಲದ ಅಗತ್ಯವಾಗಿದೆ.

(ಲೇಖಕರು ಸಂಸ್ಕೃತಿ ಚಿಂತಕರು)

ಕಾಲಚಕ್ರ

ರವೀ ಸಜಂಗದ್ದೆ

ಎಐ ಎಂಬ ಸುನಾಮಿ ಬರುತ್ತಿದೆ, ದಾರಿ ಬಿಡಿ!

ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದ ಪ್ರಮುಖ ಕಂಪನಿಗಳು, ಹೂಡಿಕೆದಾರರು, ಜಾಗತಿಕ ನಾಯಕರನ್ನು ಒಂದೆಡೆ ಸೇರಿಸಿದ ಮತ್ತು ಭಾರತವು ಆತಿಥ್ಯವನ್ನು ವಹಿಸಿದ್ದ 'ಎಐ ಇಂಪ್ಯಾಕ್ಟ್ ಸಮಿಟ್-2026' ಹೆಸರಿನ 5 ದಿನಗಳ ಶೃಂಗಸಭೆಯು ಇತ್ತೀಚೆಗೆ ನವದೆಹಲಿಯಲ್ಲಿ ಸಂಪನ್ನಗೊಂಡಿತು. ಬಹೂಪಯೋಗಿ ಎನ್ನಲಾಗಿರುವ ಈ ಬಹುಚರ್ಚಿತ ಶೃಂಗದಲ್ಲಿ ನೀತಿ ನಿರೂಪಕರು, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸಂಶೋಧಕರು/ದಿಗ್ಗಜರು, ಸ್ಟಾರ್ಟಪ್ ನಾಯಕರು, ವಿದೇಶಿ ಗಣ್ಯರು, ಮಾಹಿತಿ ತಂತ್ರಜ್ಞಾನ ಸಚಿವಾಲಯದ ಪ್ರಮುಖರು ಭಾಗಿಯಾಗಿದ್ದರು.

'ಎಐ' ತಂತ್ರಜ್ಞಾನದಲ್ಲಿ ತನಗಿರುವ ಬಲಿಷ್ಠ ಸಾಮರ್ಥ್ಯವನ್ನು ಭಾರತವು ಜಗಕ್ಕೆ ಸಾರುವ ನಿಟ್ಟಿನಲ್ಲಿ ಈ ಶೃಂಗವು ಬಹಳ ಪ್ರಾಮುಖ್ಯವನ್ನು ಪಡೆದುಕೊಂಡಿತ್ತು. ಶೃಂಗವನ್ನು ಸಮರ್ಥವಾಗಿ ನಿರ್ವಹಿಸಿದ ಭಾರತವು, 'ಎಐ' ತಂತ್ರಜ್ಞಾನ ಲೋಕಕ್ಕೆ ಸಂಬಂಧಿಸಿದ ನಿಯಮಾವಳಿ,

ಯೋಜನೆಗಳು ಮತ್ತು ದೃಷ್ಟಿಕೋನವನ್ನು ರೂಪಿಸಬಲ್ಲ ನಾಯಕನ ಪಾತ್ರವನ್ನು ತಾನು ವಹಿಸುವುದಾಗಿ ಜಗತ್ತಿಗೆ ಸ್ಪಷ್ಟವಾಗಿ ಸಾರಿತು. ಇದು ಶೃಂಗದ ಯಶಸ್ಸಿನ ಬಲುದೊಡ್ಡ ಭಾಗ. 'ಎಐ' ತಂತ್ರಜ್ಞಾನದ ಬಗೆಗಿನ ಭಾರತದ ಚಿಂತನೆ ಮತ್ತು ಯೋಜನೆಗಳು ಪ್ರಬುದ್ಧವಾಗುತ್ತಿವೆ ಎಂಬುದನ್ನು ಈ ಶೃಂಗ ರುಜುವಾತು ಮಾಡಿದೆ.

'ಎಐ' ತಂತ್ರಜ್ಞಾನದಲ್ಲಿನ ಮುಂಚೂಣಿಯ ದೇಶವಾಗಿ ಹೊರಹೊಮ್ಮುತ್ತಿರುವ ಭಾರತವು ಮುಂದಿನ 2 ವರ್ಷಗಳಲ್ಲಿ ಈ ವಲಯದಲ್ಲಿ 200 ಶತಕೋಟಿ ಡಾಲರ್‌ಗಿಂತಲೂ ಅಧಿಕ ಹೂಡಿಕೆಯನ್ನು ಆಕರ್ಷಿಸುತ್ತಿದೆ ಎನ್ನುವ ವಿಚಾರವೇ ಸಂಚಲನ ಮೂಡಿಸಿದೆ. ಭಾರತದಲ್ಲಿ 'ಎಐ' ತಂತ್ರಜ್ಞಾನದ ಆವಿಷ್ಕಾರ ಮತ್ತು ಪ್ರಸರಣ ತ್ವರಿತವಾಗಿ ಸಾಗಲಿದ್ದು, ಜನರ ಜೀವನಮಟ್ಟವನ್ನು ಸುಗಮಗೊಳಿಸಲು ಹೊಸ ಕಂಪನಿಗಳು ಮತ್ತು ಅವುಗಳ 'ಎಐ' ಉತ್ಪನ್ನಗಳು ಮುಂದಿನ ದಿನಗಳಲ್ಲಿ ಬರಲಿವೆ. ಪ್ರಧಾನಿ ಮೋದಿಯವರು ಈ ಶೃಂಗದಲ್ಲಿ ಮಾತನಾಡುತ್ತಾ, ''ಎಐ ತಂತ್ರಜ್ಞಾನವು ಉದ್ಯೋಗಗಳನ್ನು ಕಸಿದುಕೊಳ್ಳಲಿದೆ ಎಂಬ ಆತಂಕ ಬೇಡ. ಯಾವುದೇ ಸವಾಲಿಗೆ ಸಮರ್ಪಕ ಪೂರ್ವಸಿದ್ಧತೆಯೇ ಮದ್ದು ಎನ್ನುವಂತೆ, ನವೀನ ಕೌಶಲದ ಕಲಿಕೆಯ ಮೂಲಕ 'ಎಐ' ಸವಾಲನ್ನು ಎದುರಿಸಲು ಭಾರತವು ಸಿದ್ಧವಾಗಬೇಕು. ಇದಕ್ಕಾಗಿ ಸರಕಾರವು 'ಕೌಶಲಾಭಿವೃದ್ಧಿ' ಯೋಜನೆಗಳನ್ನು ಆರಂಭಿಸಿದೆ. ಮಾನವ ಸಂಪನ್ಮೂಲದ ಕೌಶಲವನ್ನು ಅವಲೋಕಿಸಿ, ಅದಕ್ಕೆ ಮತ್ತಷ್ಟು ಬಲ ತುಂಬಿ, 'ಎಐ' ವ್ಯವಸ್ಥೆಗೆ ಸಜ್ಜುಗೊಳಿಸುವ ಕಾರ್ಯ ಭರದಿಂದ ಸಾಗಿದೆ'' ಎಂದರು. ಇದು ದೇಶದ 'ಎಐ' ಭವಿಷ್ಯಕ್ಕೆ ಹಿಡಿದ ದುರ್ಬೀನು ಎಂದರೆ ಅತಿಶಯೋಕ್ತಿಯಲ್ಲ.

ಎಐ ತಂತ್ರಜ್ಞಾನದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಳಾಗಿ, ಆ ವಲಯ ಬೆಳೆದಂತೆ ಹೊಸ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎನ್ನುವುದು ತಜ್ಞರ ಅಭಿಮತ. 'ಎಐ' ವಿಚಾರದಲ್ಲಿ ಸಾರ್ವಭೌಮತ್ವ, ಒಳಗೊಳ್ಳುವಿಕೆ ಮತ್ತು ನಾವೀನ್ಯ ಈ ಮೂರು ಭಾರತದ ದೃಷ್ಟಿಕೋನಗಳಾಗಿವೆ. ಎಲ್ಲವೂ ಅಂದುಕೊಂಡಂತೆಯೇ ನಡೆದಲ್ಲಿ ಮುಂದಿನ ಕೆಲವೇ ವರ್ಷಗಳಲ್ಲಿ ಜಗತ್ತಿನ ಮೊದಲ 3 ಸೂಪರ್‌ಪವರ್ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಲಿದೆ. ಆಹಾರ, ಕೃಷಿ, ಹವಾಮಾನ, ಉತ್ಪಾದನೆ, ಮಾರುಕಟ್ಟೆ, ಸರಕು ಸಾಗಣೆ, ಮಾಹಿತಿ ತಂತ್ರಜ್ಞಾನ, ಮನರಂಜನೆ, ಶಿಕ್ಷಣ, ಪ್ರವಾಸ, ಆರೋಗ್ಯ, ಹಣಕಾಸು, ಕಾರ್ಯಾಂಗ, ನ್ಯಾಯಾಂಗ, ರೈಲು, ವೈಮಾನಿಕ ಕ್ಷೇತ್ರ, ಶ್ರಮಿಕ ವಲಯ ಹೀಗೆ ಎಲ್ಲ ಕ್ಷೇತ್ರಗಳಲ್ಲೂ 'ಎಐ' ತನ್ನ ಛಾಪನ್ನು ಮೂಡಿಸಲಿದೆ, ಒಟ್ಟಾರೆಯಾಗಿ ಬದುಕನ್ನು ಮತ್ತಷ್ಟು ಸಮೃದ್ಧವಾಗಿಸಲಿದೆ. ಸಮಸ್ಯೆಗಳಿಗೆ ಪರಿಹಾರಗಳನ್ನು ತ್ವರಿತವಾಗಿ ಮತ್ತು ನಿಖರವಾಗಿ ನೀಡಲಿದೆ. ಹೀಗಾದಾಗ ದೈನಂದಿನ ಜೀವನ ಸುಲಲಿತ.

ಇವೆಲ್ಲದರ ನಡುವೆ, 'ಇನ್ನು ಕೆಲವೇ ವರ್ಷಗಳಲ್ಲಿ ದೇಶದ ಐಟಿ ವಲಯವು ಬಹುತೇಕ ಉದ್ಯೋಗಗಳನ್ನು ಕಳೆದುಕೊಳ್ಳಲಿದೆ' ಎನ್ನುವ ಸುದ್ದಿಯು ತಳಮಳವನ್ನು ಸೃಷ್ಟಿಸಿದೆ. ಆದರೆ 'ಎಐ' ಕ್ಷೇತ್ರದ ತಜ್ಞರು ಹೇಳುವಂತೆ, ಎಐ ತಂತ್ರಜ್ಞಾನದ ಜತೆಗೆ ಐಟಿ ಉದ್ಯಮವೂ ಮತ್ತಷ್ಟು ಬೆಳೆಯಲಿದೆ. ಹೀಗಾಗಿ 'ಎಐ' ತಂತ್ರಜ್ಞಾನವು ಕೆಲಸಗಳನ್ನು ಕಸಿಯಲಿದೆ ಎನ್ನುವುದನ್ನು ಒಪ್ಪಲಾಗದು. ಆದರೆ ಕಾಲಕ್ಕೆ ತಕ್ಕಂತೆ ಕೌಶಲವನ್ನು ನವೀಕರಿಸಿಕೊಂಡರೆ ಮಾತ್ರವೇ ಚಲಾವಣೆಯಲ್ಲಿರಲು ಸಾಧ್ಯ ಎಂಬ ಸತ್ಯವನ್ನು ನಾವೆಲ್ಲರೂ ಅರಿಯಬೇಕಾಗಿದೆ. ಮಾಡುವ ಉದ್ಯೋಗಗಳ ಸ್ವರೂಪವು ನಿರಂತರ ಬದಲಾಗುವುದು ಐಟಿ ಉದ್ಯಮದ ಪ್ರಮುಖ ಅಂಶ. ಹೀಗಾಗಿ, ಈಗಿನ 'ಎಐ' ತಂತ್ರಜ್ಞಾನವು ಐಟಿ ಕ್ಷೇತ್ರದ ವಿಸ್ತರಿತ ಭಾಗವಾಗಿದೆ ಮತ್ತು ಐಟಿ ಕ್ಷೇತ್ರದ ಹೊಸತನದ ರೂಪವಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

ಹೀಗೆ ವ್ಯಾಪಕವಾಗಿ ಬದಲಾಗುತ್ತಿರುವ ಸನ್ನಿವೇಶಕ್ಕೆ ಹೊಂದಿಕೊಂಡು ಮುನ್ನಡೆಯಲೆಂದು, ನಮ್ಮ ಚಿಂತನೆ ಮತ್ತು ಕೌಶಲಗಳಲ್ಲಿ ಅಪ್‌ಗ್ರೇಡ್ ಮಾಡಿಕೊಳ್ಳಬೇಕಿದೆ. ಡೇಟಾದ ಸಮರ್ಪಕ ಅರಿವು ಬೆಳೆಸಿಕೊಂಡು, 'ಎಐ' ತಂತ್ರಜ್ಞಾನವನ್ನು ವಿವೇಚನಾಯುತವಾಗಿ ಬಳಸುವ ಉದ್ಯೋಗಿಗಳು ಮತ್ತು ಸಂಸ್ಥೆಗಳು ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿ ನಿಲ್ಲುವುದು ಕಟ್ಟಿಟ್ಟಬುತ್ತಿ. ಆದ್ದರಿಂದ, ''ಭಾರತದ ಐಟಿ ಉದ್ಯಮವು 'ಎಐ' ಅನ್ನು ಬೆದರಿಕೆ ಎಂದು ಭಾವಿಸದೆ, ಕೌಶಲವನ್ನು ಮೇಲ್ದರ್ಜೆಗೇರಿಸಿಕೊಳ್ಳುವ ಸುವರ್ಣಾವಕಾಶ ಎಂದು ಭಾವಿಸಬೇಕು'' ಎನ್ನುತ್ತಾರೆ 'ಎಐ' ತಜ್ಞರು.

ಜಗತ್ತಿನ ವಿವಿಧ ದೇಶಗಳಿಗೆ ಅನೇಕ ಐಟಿ ಸೇವೆಗಳನ್ನು ರಫ್ತು ಮಾಡುವಲ್ಲಿ ಭಾರತ ಮುಂಚೂಣಿಯಲ್ಲಿದೆ. 'ಎಐ' ಅಲೆಯಿಂದ ಬಚಾವಾಗಲು, 'ಎಐ' ತಂತ್ರಜ್ಞಾನದ ಅಭಿವೃದ್ಧಿ, 'ಎಐ' ಆಧಾರಿತ ಸೇವೆ ಮತ್ತು 'ಎಐ' ಉತ್ಪನ್ನಗಳ ರಫ್ತಿನ ಕುರಿತು ಗಮನಹರಿಸುವ ಅಗತ್ಯವಿದೆ. ಏಕೆಂದರೆ, ತಂತ್ರಜ್ಞಾನ ಬದಲಾದಾಗಲೆಲ್ಲಾ ಜಗತ್ತು ಕಂಪಿಸಿದೆ, ಅಚ್ಚರಿಯೆಂದರೆ ಅಂಥ ಬದಲಾವಣೆಗಳಿಗೆ ಅದು ಕ್ಷಿಪ್ರವಾಗಿ ಒಗ್ಗಿಕೊಂಡು ಮುನ್ನಡೆದಿದೆ. ಐಟಿ ಉದ್ಯಮವು ತಾನು ಬದಲಾಗುವುದರ ಜತೆಗೆ ಮುಂದಿನ ಪೀಳಿಗೆಯನ್ನೂ ಇಂಥ ಬದಲಾವಣೆಗೆ ಸಜ್ಜುಗೊಳಿಸುವಂತಾಗಲು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲೂ ಸೂಕ್ತ ಮಾರ್ಪಾಟು ಆಗಬೇಕು.

'ಎಐ' ಎಂಬುದು ಜಗದಗಲ ಕಾಡ್ಗಿಚ್ಚಿನಂತೆ ವ್ಯಾಪಿಸುತ್ತಿರುವ ಈ ಕಾಲಘಟ್ಟದಲ್ಲಿ ನಮ್ಮೆಲ್ಲರ ಸುರಕ್ಷತೆಯ ಜವಾಬ್ದಾರಿಯನ್ನು ಮರೆಯಬಾರದು. 'ಎಐ' ಎಷ್ಟೇ ಪ್ರಬಲವಾಗಿದ್ದರೂ, ಕರಾರುವಾಕ್ಕಾಗಿದ್ದರೂ, ಯಾವುದೇ ವಿಚಾರದಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿ ಮನುಷ್ಯರದ್ದೇ ಆಗಿರಬೇಕು. ತಂತ್ರಜ್ಞಾನವು ಬೆಳೆದಂತೆ ಅದರ ದುರುಪಯೋಗದ ಪ್ರಮಾಣವೂ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಆದ್ದರಿಂದ 'ಡೀಪ್ ಫೇಕ್', ಡಿಜಿಟಲ್ ಅರೆಸ್ಟ್ ಅಪರಾಧಗಳು, ಭಯೋತ್ಪಾದಕ ಚಟುವಟಿಕೆಗಳು ಮುಂತಾದ ಸಮಾಜಘಾತುಕ ವಿಚಾರಗಳಲ್ಲಿ 'ಎಐ'ನ ದುರ್ಬಳಕೆಯನ್ನು ತಡೆಯುವ ಕಠಿಣ ಕಾನೂನುಗಳು ಜಾರಿಯಾಗಬೇಕು.

ರೇಡಿಯೋ, ಟಿವಿ, ದೂರವಾಣಿ, ಕಂಪ್ಯೂಟರ್, ಮೊಬೈಲ್, ಇಂಟರ್‌ನೆಟ್, ಸಾಫ್ಟ್‌ವೇರ್, ವಿವಿಧ ಆ್ಯಪ್‌ಗಳು ಮತ್ತು ಈಗ 'ಎಐ' ತಂತ್ರಜ್ಞಾನದ ತನಕ ಜಗತ್ತು ಬೆಳೆದುಬಂದಿದೆ. ಯಾವುದೇ ಹೊಸ ತಂತ್ರಜ್ಞಾನವಿರಲಿ, ಅದೊಂದು ಆಯುಧದಂತೆ; ಅದರಿಂದ ಒಳಿತು ಇರುವಂತೆ ಕೆಡುಕೂ ಇರುತ್ತದೆ. ಆಯುಧವನ್ನು ಬಳಸುವವರಿಗೆ ವಿವೇಚನೆ ಇರಬೇಕಷ್ಟೇ. 'ಎಐ' ಎನ್ನುವ ಆಯುಧವೂ ಜಗದ ಒಳಿತಿಗಾಗಿ ಮಾತ್ರವೇ ಬಳಕೆಯಾಗಬೇಕು. ತಂತ್ರಜ್ಞಾನವು ಮನುಕುಲದ ಸೇವೆಗಾಗಿ ಇರಬೇಕೇ ವಿನಾ, ಅದು ಮನುಕುಲಕ್ಕೇ ಅಸ್ತಿತ್ವಕ್ಕೇ ಧಕ್ಕೆ ತರಬಾರದು!

'ಎಐ'ಯನ್ನು ಕಾರ್ಯತಂತ್ರದ ದೃಷ್ಟಿಕೋನದಿಂದ ನೋಡಿ, ಪ್ರಜ್ಞಾಪೂರ್ವಕವಾಗಿ ಬಳಸಿದಾಗ, ಅದು ನಮ್ಮೆಲ್ಲರ ಒಳಿತಿಗೆ ಮತ್ತು ಅಭಿವೃದ್ಧಿಯ ವಿಚಾರಗಳಿಗೆ ಸೂಕ್ತ ಪರಿಹಾರವನ್ನು ಒದಗಿಸಿ, ಹೊಸ ಆರ್ಥಿಕ ಮತ್ತು ಔದ್ಯೋಗಿಕ ಅವಕಾಶಗಳನ್ನು ಸೃಷ್ಟಿಸಲಿದೆ. ಎಲ್ಲರನ್ನೂ ಒಳಗೊಂಡ ಪ್ರಗತಿ ಮತ್ತು ನವೀನ ಅವಕಾಶಗಳ ಲಭ್ಯತೆಗೆ 'ಎಐ' ತಂತ್ರಜ್ಞಾನವು ದಿಕ್ಸೂಚಿಯಾಗಲಿ. 2047ರ 'ವಿಕಸಿತ ಭಾರತ'ದ ಗುರಿ ತಲುಪಲು 'ಎಐ' ತಂತ್ರಜ್ಞಾನವು ದೀವಟಿಕೆಯಾಗಲಿ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:38

ಸಮಾಚಾರ ಸಣ್ಣದಲ್ಲ

ಫೆ.27ಕ್ಕೆ ಕೇರಳ ಸ್ಟೋರಿ-2 ಬಿಡುಗಡೆ: ಬಹಿಷ್ಕಾರಕ್ಕೆ ಸಿಎಂ ಪಿಣರಾಯಿ ಕರೆ

ತಿರುವನಂತಪುರಂ: ಚುನಾವಣೆ ಹೊಸ್ತಿಲಲ್ಲಿರುವ ಕೇರಳದಲ್ಲಿ ಕೇರಳಸ್ಟೋರಿ 2 ಸಿನಿಮಾ ರಾಜಕೀಯ ವಸ್ತುವಾಗಿದೆ. ಸೆನ್ಸಾರ್ ಮಂಡಳಿ ಯುಎ ಸರ್ಟಿಫಿಕೇಟ್ ಕೊಟ್ಟಿದ್ದು, ಫೆ.27ಕ್ಕೆ ಸಿನಿಮಾ ರಿಲೀಸ್ ಆಗಲಿದೆ. ಚಿತ್ರದಲ್ಲಿ ಕೇರಳದ ಜಾತ್ಯತೀತ ಮೌಲ್ಯಗಳಿಗೆ ಅಡ್ಡಿ ಮಾಡುವ, ಧಾರ್ಮಿಕ ಸೌಹಾರ್ದತೆಗೆ ಧಕ್ಕೆ ಅಂಶಗಳಿವೆ. ಹೀಗಾಗಿ ಚಿತ್ರವನ್ನು ಬಹಿಷ್ಕರಿಸಿ ಎಂದು ಜನತೆಗೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕರೆ ನೀಡಿದ್ದಾರೆ. ವಿಜಯನ್‌ಗೆ ತಿರುಗೇಟು ನೀಡಿರುವ ಬಿಜೆಪಿ ಜನತೆಗೆ ಬೆದರಿಕೆ ಹಾಕುವ ಬದಲು ನ್ಯಾಯಾಲಯಕ್ಕೆ ಹೋಗಿ ಎಂದಿದೆ. ಸಿನಿಮಾದ ಬಗ್ಗೆ ಚರ್ಚೆ ಜೋರಾಗುತ್ತಿದ್ದಂತೆ ಕಣ್ಣೂರು ಮೂಲದ ಶ್ರೀದೇವ್ ನಂಬೂದಿರಿ ಕೇರಳ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಚಿತ್ರದಲ್ಲಿ ಕೇರಳವನ್ನು ಕೆಟ್ಟದಾಗಿ ಬಿಂಬಿಸಿರುವ, ಕೋಮು-ಪ್ರಾದೇಶಿಕ ಸಂಘರ್ಷಕ್ಕೆ ಎಡೆಮಾಡಿಕೊಡುವ, ಶಾಂತಿ ಸುವ್ಯವಸ್ಥೆಕ್ಕೆ ಧಕ್ಕೆ ತರುವ ಅಂಶಗಳು ಟ್ರೈಲರ್‌ನಲ್ಲಿ ಕಂಡಿದೆ. ಚಿತ್ರ ಬಿಡುಗಡೆಗೆ ತಡೆ ಕೊಡಬೇಕು ಎಂದು ಮನವಿ ಮಾಡಿದ್ದಾರೆ.

ಆರ್‌ಎಸ್‌ಎಸ್ ಮುಖ್ಯಸ್ಥ ಭಾಗವತ್ ಇದ್ದ ವಂದೇ ಭಾರತ್ ರೈಲಿಗೆ ಕಲ್ಲೇಟು

ಲಖ್ನೋ: ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಪ್ರಯಾಣಿಸುತ್ತಿದ್ದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಕಲ್ಲು ತೂರಾಟ ಮಾಡಿರುವ ಘಟನೆ ನಡೆದಿದೆ. ಲಖ್ನೋ-ದೆಹಲಿ ವಂದೇ ಭಾರತ್‌ನಲ್ಲಿ

ಭಾಗವತ್ ಅವರು ಮೀರತ್‌ಗೆ ಹಿಂತಿರುಗುತ್ತಿದ್ದರು. ಈ ವೇಳೆ ಹಾರ್ದೋಯ್ ಗ್ರಾಮದಲ್ಲಿ ಕಲ್ಲು ತೂರಾಟವಾಗಿದೆ. ಗುರುವಾರ ಮಧ್ಯಾಹ್ನ 3:30ರ ವೇಳೆಗೆ ಘಟನೆಯಾಗಿದೆ. ರಾತ್ರಿ 9 ಗಂಟೆ ಸುಮಾರಿಗೆ ಮೀರತ್ ರೈಲು ನಿಲ್ದಾಣದಲ್ಲಿ ಬಿಗಿಭದ್ರತೆಯಲ್ಲಿ ಮೋಹನ್ ಭಾಗವತ್ ಅವರು ಇಳಿದಿದ್ದಾರೆ. ಶುಕ್ರವಾರ ಮತ್ತು ಶನಿವಾರದ 2 ದಿನಗಳ ಸಂವಾದ ಕಾರ್ಯಕ್ರಮಕ್ಕಾಗಿ ಅವರು ಮೀರತ್‌ಗೆ ಆಗಮಿಸಿದ್ದಾರೆ. ಅವರು ಕ್ರೀಡಾಪಟುಗಳು ಮತ್ತು ಬುದ್ಧಿಜೀವಿಗಳ ಸದಸ್ಯರೊಂದಿಗೆ ಸಂವಾದ ನಡೆಸಲಿದ್ದಾರೆ. ಕಲ್ಲು ಹೊಡೆದ ಬಗ್ಗೆ ರೈಲ್ವೆ ಪೊಲೀಸ್ ವಿಶೇಷ ತಂಡದಿಂದ ತನಿಖೆ ನಡೆಸಲಾಗುತ್ತಿದೆ.

ರಫೇಲ್ ಒಪ್ಪಂದಕ್ಕೆ ವಿರೋಧ ಏಕೆ?: ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್ ಅಚ್ಚರಿ

ದೆಹಲಿ: ಭಾರತ-ಫ್ರಾನ್ಸ್ ನಡುವಿನ 114 ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದ ಕುರಿತು ಮುಕ್ತವಾಗಿ ಮಾತನಾಡಿರುವ ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯೆಲ್ ಮ್ಯಾಕ್ರನ್, ರಫೇಲ್ ಯುದ್ಧ ವಿಮಾನಗಳು ಭಾರತೀಯ ವಾಯುಸೇನೆಯ ಯುದ್ಧ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರ ರಾಜಧಾನಿ ದಿಲ್ಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮ್ಯಾಕ್ರನ್, ಭಾರತದಲ್ಲಿ ರಫೇಲ್ ಒಪ್ಪಂದವನ್ನು ಟೀಕಿಸುತ್ತಿರುವವರಿಗೆ ಸ್ಪಷ್ಟ ಸಂದೇಶವನ್ನು ನೀಡಿದ್ದಾರೆ. ಈ ಒಪ್ಪಂದ ಭಾರತದ ಮಿಲಿಟರಿ ಸಾಮರ್ಥ್ಯವನ್ನು ಬಲಪಡಿಸುತ್ತದೆ. ಎರಡೂ ದೇಶಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಜನರು ಈ ಒಪ್ಪಂದವನ್ನು ಏಕೆ ಟೀಕಿಸುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಇದು ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂದು ಮ್ಯಾಕ್ರನ್ ಸೂಚ್ಯವಾಗಿ ಹೇಳಿದರು.

ದೇಗುಲಗಳಲ್ಲಿ ಅಕ್ರಮ: ತಪಾಸಣೆಗೆ ಉತ್ತರಾಖಂಡ ಹೈಕೋರ್ಟ್ ಸೂಚನೆ

ಡೆಹ್ರಾಡೂನ್: ಹರಿದ್ವಾರದ ಕೆಲವು ಧಾರ್ಮಿಕ ಸ್ಥಳಗಳಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳನ್ನು ಪ್ರಸ್ತಾಪಿಸಿರುವ ಉತ್ತರಾಖಂಡ ಹೈಕೋರ್ಟ್ ಪರಿಸ್ಥಿತಿ ಚಿಂತಾಜನಕವಾಗಿದ್ದು, ದೇಗುಲ ಮತ್ತು ಆಶ್ರಮಗಳಲ್ಲಿ ದಿಢೀರ್ ತಪಾಸಣೆ ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಿದೆ. ಮಹಿಳೆಯೊಂದಿಗೆ ಸಹಜೀವನ ನಡೆಸುತ್ತಿರುವ ಆರೋಪವೂ ಸೇರಿದಂತೆ ಮಾ ಚಂಡಾ ದೇವಿ ದೇಗುಲದ ಮುಖ್ಯ ಅರ್ಚಕರ ವಿರುದ್ಧ ದಾಖಲಾಗಿರುವ ವಿವಿಧ ಕ್ರಿಮಿನಲ್ ಪ್ರಕರಣಗಳ ವಿಚಾರಣೆ ವೇಳೆ ನ್ಯಾಯಮೂರ್ತಿ ರಾಕೇಶ್ ತಪ್ಲಿಯಾಲ್ ಈ ನಿರ್ದೇಶನ ನೀಡಿದ್ದಾರೆ. ದೇವಾಲಯ ನಿರ್ವಹಿಸುತ್ತಿರುವವರ ವಿರುದ್ಧ ಇಂತಹ ಹಲವು ಅಪರಾಧ ಪ್ರಕರಣಗಳು ದಾಖಲಾಗುತ್ತಿರುವುದನ್ನು ಗಮನಿಸಿರುವುದಾಗಿ ನ್ಯಾಯಾಲಯ ತಿಳಿಸಿದೆ.

ಅನ್ಯಗ್ರಹ ಜೀವಿಗಳ ಕುರಿತ ಫೈಲ್ಸ್ ಬಿಡುಗಡೆ ಮಾಡಿ: ಅಧ್ಯಕ್ಷ ಟ್ರಂಪ್ ಆದೇಶ

ವಾಷಿಂಗ್ಟನ್: ನಮ್ಮ ಸೌರ ಮಂಡಲ ಎಷ್ಟು ವಿಶಾಲವೆಂದರೆ, ಇದರಲ್ಲಿನ ಹಲವು ನಿಗೂಢ ವಿಚಾರಗಳನ್ನು ತಿಳಿದುಕೊಳ್ಳಲು ವಿಜ್ಞಾನಿಗಳು ನೂರಾರು ವರ್ಷಗಳಿಂದ ಹಗಲಿರುಳು ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ಅದರಲ್ಲೂ ಅನ್ಯಗ್ರಹ ಜೀವಿಗಳ ವಿಶೇಷ ಕುತೂಹಲವಿದೆ. ಈ ಏಲಿಯನ್‌ಗಳು ನಿಜವೇ, ನಿಜವಾಗಿಯೂ ಇದ್ದಾವಾ? ಅದರಲ್ಲೂ ಭೂಮಿಯ ಮೇಲೆ ಇವುಗಳ ಚಲವಲನ ಕಂಡುಬಂದಿದೆಯೇ ಎಂಬುದರ ಕುರಿತು ಹಲವಾರು ಕಟ್ಟುಕಥೆಗಳು ಹರಿದಾಡುತ್ತಲೇ ಇವೆ. ಅದರಲ್ಲೂ ಅಮೆರಿಕದ ರಾಜಕೀಯದಲ್ಲಿ ಇದೊಂದು ಜಟಾಪಟಿಯ ವಿಷಯವಾಗಿದೆ. ಹೀಗಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಅನ್ಯಗ್ರಹ ಜೀವಿಗಳ ಕುರಿತಾಗಿ ಇರುವ ಮಾಹಿತಿ ಬಿಡುಗಡೆ ಮಾಡಬೇಕು ಎಂದು ಅಮೆರಿಕದ ರಕ್ಷಣಾ ಇಲಾಖೆಗೆ ಆದೇಶಿಸಿದ್ದಾರೆ.

ಎಐ ತಂತ್ರಜ್ಞಾನ ಅಭಿವೃದ್ಧಿಗೆ ಭಾರೀ ಹಣ ಹರಿವು: ಕೇಂದ್ರ ಸಚಿವ ವೈಷ್ಣವ್ | ಇಂದು ಮಹತ್ವದ ನಿರ್ಣಯ ಘೋಷಣೆ ಸಾಧ್ಯತೆ

ಎಐ ಶೃಂಗದಿಂದ ಮೂಲಸೌಕರ್ಯಕ್ಕೆ 22 ಲಕ್ಷ ಕೋಟಿ ರು.

ದೆಹಲಿ: ಶುಕ್ರವಾರ ಮುಗಿಯಬೇಕಿದ್ದ ದೆಹಲಿ ಎಐ ಶೃಂಗ ಶನಿವಾರಕ್ಕೆ ವಿಸ್ತರಿಸಲ್ಪಟ್ಟಿದೆ. ಜನರ ವಿಪರೀತ ಬೇಡಿಕೆ ಮೇರೆಗೆ ಇನ್ನೂ ಒಂದು ದಿನ ಪ್ರದರ್ಶನವನ್ನು ವಿಸ್ತರಿಸಲಾಗಿದೆ. ಆದರೆ ವಿವಿಧ ದೇಶಗಳಿಂದ ಆಗಮಿಸಿದ ಪ್ರತಿನಿಧಿಗಳ ನಡುವಿನ ಚರ್ಚೆಯಲ್ಲಿ ಪಾಲ್ಗೊಳ್ಳಲು ಜನರಿಗೆ ಅವಕಾಶ ಇಲ್ಲ ಎಂದು ಹೇಳಲಾಗಿದೆ.

ಶನಿವಾರ ಶೃಂಗದ ನಿರ್ಣಯಗಳನ್ನು ಘೋಷಿಸುವ ಸಾಧ್ಯತೆಯಿದೆ. ಈಗಾಗಲೇ ನಿರ್ಣಯಕ್ಕೆ 70ಕ್ಕೂ ಅಧಿಕ ದೇಶಗಳು ಸಹಿ ಹಾಕಿವೆ. ಇದು 80 ದೇಶಗಳನ್ನು ದಾಟಬಹುದು. ಪ್ರಮುಖ ದೇಶಗಳೆಲ್ಲ ಸಹಿ ಹಾಕಿಯಾಗಿದೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಇದುವರೆಗೆ ಶೃಂಗಕ್ಕೆ 5 ಲಕ್ಷಕ್ಕೂ ಅಧಿಕ ಮಂದಿ ಆಗಮಿಸಿದ್ದಾರೆ. ಅವರೆಲ್ಲ ಹಲವಾರು ತಜ್ಞರೊಂದಿಗೆ ಚರ್ಚಿಸಿದ್ದಾರೆ. 250 ಬಿಲಿಯನ್ ಡಾಲರ್ (22 ಲಕ್ಷ ಕೋಟಿ ರು.) ಹಣ ಮೂಲಭೂತ ಸೌಕರ್ಯಕ್ಕಾಗಿ ಹೂಡಿಕೆಯಾಗುವ ನಿರೀಕ್ಷೆಯಿದೆ. 20 ಬಿಲಿಯನ್ ಡಾಲರ್ (1.8 ಲಕ್ಷ ಕೋಟಿ ರು.)

ಮೊತ್ತ ಡೀಪ್ ಟೆಕ್ ವೆಂಚರ್ ಕ್ಯಾಪಿಟಲ್‌ನಲ್ಲಿ ಅಂದರೆ ತಂತ್ರಜ್ಞಾನದ ಅಭಿವೃದ್ಧಿಗೆ ಹೂಡಿಕೆಯಾಗುವ ಸಾಧ್ಯತೆ ಇದೆ ಎಂದು ವೈಷ್ಣವ್ ಹೇಳಿದ್ದಾರೆ.

ಸದ್ಯದಲ್ಲೇ ಭಾರತ ಎಐ ಮಿಷನ್ 2.0 ಬಗ್ಗೆ ಚಿಂತನೆ ಶುರು ಮಾಡಲಿದೆ. ಇದು ಎಐ 1.0ಗಿಂತ ದೊಡ್ಡದಾಗಿರಲಿದೆ. 1.0 ಯೋಜನೆಯಲ್ಲಿ ಹಾಕಿಕೊಂಡಿದ್ದ ಹಲವು ಗುರಿಗಳನ್ನು ಮುಟ್ಟಲಾಗಿದೆ. ಇನ್ನು ಕೆಲವೆಡೆ ಗುರಿ ಮೀರಿದ ಸಾಧನೆಯಾಗಿದೆ. ನಾವು 10000 ಜಿಪಿಯುಗಳನ್ನು (ಗ್ರಾಫಿಕ್ ಪ್ರೊಸೆಸಿಂಗ್ ಯುನಿಟ್) ಹೊಂದಲು ಬಯಸಿದ್ದೆವು. ಆದರೆ ಈಗಾಗಲೇ 38000 ಜಿಪಿಯುಗಳನ್ನು ಹೊಂದಿದ್ದೇವೆ. ಇನ್ನೂ 20000 ಘಟಕಗಳನ್ನು ಸದ್ಯದಲ್ಲೇ ಬಿಡುಗಡೆ ಮಾಡಲಾಗುತ್ತದೆ ಎಂದು ವೈಷ್ಣವ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶೃಂಗದ 5ನೇ ದಿನವಾದ ಶುಕ್ರವಾರ, ಜಾಗತಿಕ ಆಡಳಿತ, ಬಹುಪಕ್ಷೀಯ ಸಹಕಾರದ ಬಗ್ಗೆ ಚರ್ಚಿಸಲಾಯಿತು. ಮುಖ್ಯವಾಗಿ ಜಿಪಿಎಐ (ಗ್ಲೋಬಲ್ ಪಾರ್ಟನರ್‌ಶಿಪ್ ಆನ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ನಿಯೋಗದ ಸದಸ್ಯರು ಚರ್ಚೆ ನಡೆಸಿದರು. ಕೃತಕ ಬುದ್ಧಿಮತ್ತೆಯ ಪ್ರಗತಿಯ ಬಗ್ಗೆ ವಿಶ್ಲೇಷಣೆ ನಡೆಸಲಾಯಿತು. ಒಂದು ಜವಾಬ್ದಾರಿಯುತ ಹಾಗೂ ಎಲ್ಲರನ್ನೂ ಒಳಗೊಳ್ಳುವ ತಂತ್ರಜ್ಞಾನದ ಕುರಿತ ಚರ್ಚೆಯೇ ಇಲ್ಲಿ ಮುಖ್ಯವಾಗಿತ್ತು.

ಭಾರತ-ಅಮೆರಿಕ ವ್ಯಾಪಾರಿ ಒಪ್ಪಂದಕ್ಕೆ ವಿರೋಧ | ಕಾಂಗ್ರೆಸ್ ಆ್ಯಂಟಿ ಇಂಡಿಯಾ: ಬಿಜೆಪಿ

ಅಂಗಿ ಬಿಚ್ಚಿ ಪ್ರತಿಭಟಿಸಿದ ಕೈ ಯುವ ನಾಯಕರ ಬಂಧನ

ದೆಹಲಿಯಲ್ಲಿ ಶುಕ್ರವಾರ ಎಐ ಶೃಂಗದ ಸಭಾಂಗಣವೊಂದರ ಹೊರಗೆ ಯುವ ಕಾಂಗ್ರೆಸ್ ಕಾರ್ಯಕರ್ತರು ನುಗ್ಗಿ, ಅಂಗಿಬಿಚ್ಚಿ ಪ್ರತಿಭಟಿಸಿದ್ದಾರೆ. ಈ ಸಂಬಂಧ 10 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಭಾರತ-ಅಮೆರಿಕ ಒಪ್ಪಂದದಿಂದ ಭಾರತಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿ ಈ ಪ್ರತಿಭಟನೆ ನಡೆಸಲಾಗಿದೆ. ಕಾಂಗ್ರೆಸ್ ನಾಯಕ ಟೀಶರ್ಟ್‌ಗಳಲ್ಲಿ ಮೋದಿ, ಭಾರತ-ಅಮೆರಿಕ ವ್ಯಾಪಾರಿ ಒಪ್ಪಂದ, ಹಾಗೂ ಎಪ್‌ಸ್ಟೀನ್ ಫೈಲ್ಸ್‌ಗೆ ಸಂಬಂಧಿಸಿದ ಘೋಷಣೆಗಳಿದ್ದವು. ಇದನ್ನು ಬಿಜೆಪಿ ತೀವ್ರವಾಗಿ ವಿರೋಧಿಸಿದೆ. ಯುವ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ಕೃಷ್ಣ ಹರಿ, ಬಿಹಾರ ಕಾರ್ಯದರ್ಶಿ ಕುಂದನ್ ಯಾದವ್, ಉತ್ತರಪ್ರದೇಶ ಘಟಕದ ಉಪಾಧ್ಯಕ್ಷ ಅಜಯ್ ಕುಮಾರ್, ರಾಷ್ಟ್ರೀಯ ಸಂಯೋಜಕ ನರಸಿಂಹ ಯಾದವ್ ಬಂಧನಕ್ಕೊಳಗಾಗದ ಪ್ರಮುಖರು.

ಈ ಬೆಳವಣಿಗೆಯ ಬಗ್ಗೆ ಬಿಜೆಪಿಯ ಪ್ರಮುಖ ನಾಯಕರೆಲ್ಲರೂ ಕೆಂಡಕಾರಿದ್ದಾರೆ. ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಕಾಂಗ್ರೆಸ್ ಪಾಲಿಗೆ ಎಐ ಅಂದರೆ ಆ್ಯಂಟಿ ಇಂಡಿಯಾ (ಭಾರತ ವಿರೋಧಿ), ಈ ಕಾಂಗ್ರೆಸ್ ಐಎನ್‌ಸಿಯೂ ಅಲ್ಲ, ಅದು ಎಎನ್‌ಸಿ ಅರ್ಥಾತ್ ಆ್ಯಂಟಿ ನಾಷನಲ್ ಕಾಂಗ್ರೆಸ್ (ದೇಶವಿರೋಧಿ ಕಾಂಗ್ರೆಸ್) ಎಂದು ಹರಿಹಾಯ್ದಿದ್ದಾರೆ.

ಎಐ ಸಮ್ಮಿಟ್ ಅನ್ನು ಕಾಂಗ್ರೆಸ್ ಹಿರಿಯ ಸಂಸದ ಶಶಿ ತರೂರ್ ಬೆಂಬಲಿಸಿದ್ದರೆ, ಅದಕ್ಕೆ ವ್ಯತಿರಿಕ್ತ ಕಾರ್ಯವನ್ನು ಇದೀಗ ಯುವ ಕಾಂಗ್ರೆಸ್ ಕಾರ್ಯಕರ್ತರು ಮಾಡಿದ್ದಾರೆ. ಜಾಗತಿಕ ವೇದಿಕೆಯಲ್ಲಿ

ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಈ ನಡೆ ತೀವ್ರ ಟೀಕೆಗೆ ಗುರಿಯಾಗಿದೆ. ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಗಜೇಂದ್ರ ಸಿಂಗ್ ಶೆಖಾವತ್, ಪೀಯೂಷ್ ಗೋಯಲ್, ಪ್ರಲ್ಹಾದ ಜೋಶಿ ಸೇರಿದಂತೆ ಅನೇಕ ಸಚಿವರು, ಬಿಜೆಪಿ ಮುಖಂಡರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಪ್ರಧಾನಿ ಮೋದಿ ಮತ್ತು ಪ್ರಸ್ತಾವಿತ ಭಾರತ-ಅಮೆರಿಕ ವ್ಯಾಪಾರ ಒಪ್ಪಂದದ ವಿರುದ್ಧ ಪ್ರತಿಭಟನೆ ನಡೆಸಿರುವ ಕಾಂಗ್ರೆಸ್ ಕಾರ್ಯಕರ್ತರು ಭಾರತ್ ಮಂಟಪ್ ನಲ್ಲಿ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತಂದಿದೆ ಎಂದು ಆರೋಪಿಸಿದ್ದಾರೆ. ಆದರೆ ಬಿಜೆಪಿ ನಾಯಕರು, ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶರ್ಟ್ ಬಿಚ್ಚಿ ಪ್ರತಿಭಟನೆ ನಡೆಸುವ ಮೂಲಕ ರಾಷ್ಟ್ರೀಯ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಎಸ್‌ಐಆರ್ ಸುಗಮವಾಗಿ ನಡೆಯಲು ಜಿಲ್ಲಾ ನ್ಯಾಯಾಧೀಶರ ನೇಮಕ

ಮುಖ್ಯಮಂತ್ರಿ ಮಮತಾ ಸರಕಾರದ ಅಸಹಕಾರದ ವಿರುದ್ಧ ಆಕ್ರೋಶ

ಪ.ಬಂಗಾಳ-ಚು.ಆಯೋಗ ಎಸ್‌ಐಆರ್ ಜಟಾಪಟಿ: ಸುಪ್ರೀಂ ಕೋರ್ಟ್ ಸಂಧಾನ

ದೆಹಲಿ: ಮತಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್)ಗೆ ಸಂಬಂಧಿಸಿದಂತೆ ಪ.ಬಂಗಾಳ ಸರಕಾರ ಹಾಗೂ ಕೇಂದ್ರ ಚುನಾವಣಾ ಆಯೋಗದ ನಡುವೆ ಜಟಾಪಟಿ ತೀವ್ರಗೊಂಡಿದೆ. ಈ ಹಿನ್ನೆಲೆಯಲ್ಲಿ ಮಧ್ಯಪ್ರವೇಶಿಸಿರುವ ಸರ್ವೋಚ್ಚ ನ್ಯಾಯಾಲಯ, ಕಲ್ಕತಾ ಉಚ್ಚ ನ್ಯಾಯಾಲಯಕ್ಕೆ ಮಹತ್ವದ ಆದೇಶ ನೀಡಿದೆ. ಪ.ಬಂಗಾಳ ಸರಕಾರ ಮತ್ತು ಚುನಾವಣಾ ಆಯೋಗದ ನಡುವೆ ಸಮನ್ವಯ ಸಾಧಿಸಲು, ಎಸ್‌ಐಆರ್ ಗೊಂದಲವಿಲ್ಲದೇ ನಡೆಯಲು ನಿವೃತ್ತ ಹಾಗೂ ಪ್ರಸ್ತುತ ಕರ್ತವ್ಯದಲ್ಲಿರುವ ನ್ಯಾಯಾಧೀಶರನ್ನು ನೇಮಿಸಲು ಸೂಚಿಸಿದೆ.

ಪ್ರಸ್ತುತ ಎರಡು ಸಾಂವಿಧಾನಿಕ ಸಂಸ್ಥೆಗಳ ನಡುವೆ ದುರದೃಷ್ಟಕರ ಆರೋಪ-ಪ್ರತ್ಯಾರೋಪ ನಡೆಯುತ್ತಿದೆ. ಇದು ಪರಸ್ಪರ ನಂಬಿಕೆಯ ಕೊರತೆಯನ್ನು ತೋರಿಸುತ್ತದೆ. ಈ ಹಿನ್ನೆಲೆಯಲ್ಲಿ ನ್ಯಾಯಾಂಗಕ್ಕೆ ಸೇರಿದ ಮಾಜಿ ಅಧಿಕಾರಿಗಳು, ಹಾಲಿ ಜಿಲ್ಲಾ ನ್ಯಾಯಾಧೀಶರನ್ನು ನೇಮಿಸಬಹುದು ಎಂದು ಸರ್ವೋಚ್ಚ ಪೀಠ ಹೇಳಿದೆ. ಇದೇ ವೇಳೆ ಪ.ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ನ್ಯಾಯಪೀಠ ಕಿಡಿಕಾರಿದೆ. ನಾವು ಬಂಗಾಳದಿಂದ ಸಹಕಾರವನ್ನು ಕೇಳಿದ್ದೆವು. ಫೆ.9ರ ಆದೇಶಕ್ಕೆ ಫೆ.17ಕ್ಕೆ ಉತ್ತರ ನೀಡಲಾಗಿದೆ. ಇದಾ ನೀವು ನೀಡುತ್ತಿರುವ ಸಹಕಾರ? ಇದರಿಂದ ನಮಗೆ ಬೇಸರವಾಗಿದೆ. ರಾಜ್ಯಗಳು ಸಹಕರಿಸುತ್ತವೆ ಎಂದು ನಾವು ಬಯಸಿದ್ದೆವು ಎಂದು ನ್ಯಾಯಪೀಠ ಕಟುಶಬ್ದಗಳಲ್ಲಿ ಹೇಳಿದೆ.

ಟೇಬಲ್ ಟೆನಿಸ್ ಸಭಾಂಗಣದಲ್ಲಿ ಮುಸ್ಲಿಮರಿಂದ ನಮಾಜ್ ವಿಡಿಯೋ ಹರಿದಾಟ: ಹಿಂದೂ ಸಂಘಟನೆಗಳಿಂದ ಆಕ್ರೋಶ

ಸರ್ಕಾರಿ ಕಟ್ಟಡದಲ್ಲಿ ನಮಾಜ್, ಜೋಶಿಮಠ ಉದ್ವಿಗ್ನ

ಡೆಹ್ರಾಡೂನ್: ಉತ್ತರಾಖಂಡದ ಐತಿಹಾಸಿಕ ಪವಿತ್ರ ಪಟ್ಟಣ ಜೋಶಿಮಠದ ಸರ್ಕಾರಿ ಕಟ್ಟಡದೊಳಗೆ ನಮಾಜ್ ಮಾಡಿದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಸ್ಥಳೀಯವಾಗಿ ಉದ್ವಿಗ್ನ ಸ್ಥಿತಿ ಉಂಟಾಗಿದೆ. ನಗರ ಪಾಲಿಕೆಯಿಂದ ಕ್ರೀಡಾ ಇಲಾಖೆಗೆ ನೀಡಲಾಗಿರುವ ಒಂದು ಕಟ್ಟಡದಲ್ಲಿ ಟೇಬಲ್ ಟೆನಿಸ್ ಹಾಲ್ ನಿರ್ಮಾಣ ಮಾಡುವ ಉದ್ದೇಶವಿತ್ತು.

ಆದರೆ ಕಳೆದ ಕೆಲವು ದಿನಗಳಿಂದ ಈ ಕಟ್ಟಡದೊಳಗೆ ಮುಸ್ಲಿಂ ಸಮುದಾಯದವರು ಅನುಮತಿಯಿಲ್ಲದೆ ಜಮಾತ್ ನಮಾಜ್ ಮಾಡುತ್ತಿದ್ದಾರೆ ಎಂಬ ಆರೋಪಗಳಿವೆ. ನಮಾಜ್ ಮಾಡುವವರ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಿರುವುದನ್ನು ತೋರಿಸುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿವೆ.

ಸ್ಥಳೀಯ ನಿವಾಸಿಗಳು ಮತ್ತು ಹಿಂದೂ ಸಂಘಟನೆಗಳು ಈ ಕ್ರಮವನ್ನು ವಿರೋಧಿಸಿ, ಸರ್ಕಾರಿ ಆಸ್ತಿಯನ್ನು ಧಾರ್ಮಿಕ ಕಾರ್ಯಕ್ಕೆ ಬಳಸುವುದು ಅಕ್ರಮ ಎಂದು ಆರೋಪಿಸಿ, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಗಢವಾಲ್ ಕಮಿಷನರ್ ವಿನಯ್ ಶಂಕರ್ ಪಾಂಡೆ, ಹಿಂದೂ ಸಂಘಟನೆಗಳು ಸಲ್ಲಿಸಿದ ಮನವಿಯ ಮೇಲೆ ಕ್ರಮ ಕೈಗೊಳ್ಳಲಾಗಿದ್ದು, ಸಮಸ್ಯೆಯನ್ನು ಪರಿಹರಿಸಲಾಗಿದೆ ಎಂದು ಹೇಳಿದ್ದಾರೆ.

ಭಾರತೀಯ ಆಹಾರ ನಿಗಮ-ಡಬ್ಲ್ಯೂಎಫ್‌ಪಿ ಒಪ್ಪಂದ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ

ಈ ವರ್ಷ ಮಾ.31ರವರೆಗೆ ಪ್ರತಿ ಕ್ವಿಂಟಲ್‌ಗೆ 2800 ರು. ಬೆಲೆ, ನಂತರ ಮತ್ತೆ ಬೆಲೆ ಪರಿಷ್ಕರಣೆ

ವಿಶ್ವಸಂಸ್ಥೆಗೆ 5 ವರ್ಷ ಭಾರತದಿಂದ ಅಕ್ಕಿ ರಫ್ತು

ದೆಹಲಿ: ಅಮೆರಿಕದ ಜೊತೆ ಐತಿಹಾಸಿಕ ವಾಣಿಜ್ಯ ಒಪ್ಪಂದದ ನಂತರ, ಜಾಗತಿಕ ಮಾರುಕಟ್ಟೆಯಲ್ಲಿ ಭಾರತದಿಂದ ರಫ್ತಾಗುವ ವಸ್ತುಗಳು/ಬೆಳೆಗಳ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದರ ಮುಂದುವರಿದ ಭಾಗವಾಗಿ, ದೇಶದ ಪ್ರಮುಖ ಉತ್ಪನ್ನವಾದ ಅಕ್ಕಿಗೆ ಭರ್ಜರಿ ಬೇಡಿಕೆ ಬರಲಾರಂಭಿಸಿದೆ. ಜಾಗತಿಕ ಮಟ್ಟದಲ್ಲಿ

ಆಹಾರ ಭದ್ರತೆ ಒದಗಿಸುವ ಭಾಗವಾಗಿ, ಭಾರತ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ. ಐದು ವರ್ಷಗಳ ಕಾಲ ಪ್ರತಿವರ್ಷ ವಿಶ್ವಸಂಸ್ಥೆಗೆ 2 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಪೂರೈಕೆಗೆ ಭಾರತ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ಹಾಕಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಮಾಹಿತಿಯನ್ನು ನೀಡಿದ್ದಾರೆ.

ಈ ವರ್ಷ ಮಾ.31ರವರೆಗೆ ಪ್ರತಿ ಕ್ವಿಂಟಲ್‌ಗೆ 2,800 ರು. ಬೆಲೆಯನ್ನು ನಿಗದಿಪಡಿಸಲಾಗಿದೆ. ಅನಂತರ ಪರಿಸ್ಥಿತಿ ನೋಡಿಕೊಂಡು ಬೆಲೆಯನ್ನು ನಿರ್ಧರಿಸಲಾಗುತ್ತದೆ. ಈ ಒಪ್ಪಂದ, ಭಾರತದ ಅಕ್ಕಿ ಬೆಳೆಯುವ ರೈತರಿಗೆ ಭರ್ಜರಿ ವರದಾನವಾಗಲಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಜಾಗತಿಕವಾಗಿ ಹಸಿವು ನೀಗಿಸುವ ಗುರಿಯೊಂದಿಗೆ ಹೆಜ್ಜೆ ಹಾಕಿರುವ ಭಾರತ, ಮಾನವೀಯತೆ ತೋರುವ ಜತೆಗೆ ಆಹಾರ ಪೂರೈಕೆಯಲ್ಲಿ ವಿಶ್ವಕ್ಕೇ ಬೆಂಬಲವಾಗಿ ನಿಂತಿದೆ. ಇದಕ್ಕೆ ಸಾಕ್ಷಿ ಎನ್ನುವಂತೆ ಅಕ್ಕಿ ಪೂರೈಕೆಗಾಗಿ ಫೆ.18ರಂದು ಭಾರತೀಯ ಆಹಾರ ನಿಗಮ ವಿಶ್ವ ಆಹಾರ ಕಾರ್ಯಕ್ರಮದ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ಕೇಂದ್ರ ಸಚಿವರು ಹೇಳಿದ್ದಾರೆ.

ಜಾಗತಿಕವಾಗಿ ಅಪೌಷ್ಟಿಕತೆ ಮತ್ತು ಆಹಾರ ಅಭದ್ರತೆ ಎದುರಿಸುವಲ್ಲಿ ಭಾರತ ಅಂತರಾಷ್ಟ್ರೀಯ ಸಮುದಾಯದೊಂದಿಗೆ ನಿಲ್ಲುವುದನ್ನು ಮುಂದುವರಿಸುತ್ತದೆ. ಭಾರತದ ಈ ಬೆಂಬಲ ಮುಂದಿನ ಐದು ವರ್ಷಗಳಲ್ಲಿ ಪೌಷ್ಟಿಕ ಆಹಾರದೊಂದಿಗೆ ದುರ್ಬಲರನ್ನು ಹೆಚ್ಚು ಪರಿಣಾಮಕಾರಿಯಾಗಿ ತಲುಪಲು ಡಬ್ಲ್ಯೂಎಫ್‌ಪಿಗೆ ಸಹಾಯ ಮಾಡುತ್ತದೆ ಎಂದು ಜೋಶಿ ಹೇಳಿದ್ದಾರೆ. ಅಕ್ಕಿ ಪೂರೈಕೆ ಒಪ್ಪಂದಕ್ಕೆ ಸಹಿ ಹಾಕುವ ವೇಳೆ ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮದ ಉಪ ಕಾರ್ಯನಿರ್ವಾಹಕ ನಿರ್ದೇಶಕ

ಭವಿಷ್ಯದಲ್ಲಿ ಮತ್ತೆ ರಫ್ತು ಪ್ರಮಾಣ ಪರಿಷ್ಕರಣೆ

ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಕಾರ್ಯದರ್ಶಿ ಸಮ್ಮುಖದಲ್ಲಿ (ಎಫ್‌ಸಿಐ ಸಿಎಂಡಿ) ರವೀಂದ್ರ ಕುಮಾರ್ ಅಗರ್ವಾಲ್ ಮತ್ತು ವಿಶ್ವ ಆಹಾರ ಕಾರ್ಯಕ್ರಮದ (ಡಬ್ಲ್ಯೂಎಫ್‌ಪಿ) ಉಪ ಕಾರ್ಯನಿರ್ವಾಹಕ ನಿರ್ದೇಶಕ ಕಾರ್ಲ್ ಸ್ಕೌ ಅವರು ಈ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಒಪ್ಪಂದದ ಪ್ರಕಾರ ಎಫ್‌ಸಿಐ, ಡಬ್ಲ್ಯೂಎಫ್‌ಪಿಗೆ 2 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಪೂರೈಸುತ್ತದೆ. ಈ ಒಪ್ಪಂದ ಇದೇ 2026ರ ಫೆಬ್ರವರಿ 18ರಿಂದ ಐದು ವರ್ಷಗಳ ಅವಧಿಗೆ ಮಾನ್ಯವಾಗಿರುತ್ತದೆ. ಅಲ್ಲದೇ ಭವಿಷ್ಯದಲ್ಲಿ ಪರಸ್ಪರ ಒಪ್ಪಿಗೆ ಮೂಲಕ ಈ ಒಪ್ಪಂದದ ರಫ್ತು ಪ್ರಮಾಣ, ಅವಶ್ಯಕತೆಗೆ ತಕ್ಕಂತೆ ಹೆಚ್ಚಾಗಲೂಬಹುದು ಎಂದು ಪ್ರಲ್ಹಾದ ಜೋಶಿ ಸ್ಪಷ್ಟಪಡಿಸಿದ್ದಾರೆ.

ರೈತರ ಹಿತದೃಷ್ಟಿಯಿಂದ ಒಪ್ಪಂದ: ಸಚಿವ ಜೋಶಿ

ಅಕ್ಕಿ ಬೆಲೆಯನ್ನು ವಾರ್ಷಿಕ ಆಧಾರದ ಮೇಲೆ ಪರಸ್ಪರ ಒಪ್ಪಿಕೊಳ್ಳಲಾಗುತ್ತದೆ. ಪ್ರಸ್ತುತ ಬೆಲೆ ಕ್ವಿಂಟಲ್‌ಗೆ ರು. 2,800 ಆಗಿದ್ದು, ಇದೇ ಮಾರ್ಚ್ 31ರವರೆಗೆ ಮಾತ್ರ ಈ ಬೆಲೆಯನ್ನು ನಿಗದಿಪಡಿಸಲಾಗಿರುತ್ತದೆ. ಆ ಮೂಲಕ, ರೈತರ ಹಿತದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಳ್ಳಲಾಗಿದೆ ಎಂದು ಸಚಿವರು ಹೇಳಿದ್ದಾರೆ. ಡಬ್ಲ್ಯೂಎಫ್‌ಪಿ ಜತೆಗಿನ ಪಾಲುದಾರಿಕೆ ಮೂಲಕ ಭಾರತ ಜಗತ್ತಿನಲ್ಲಿ ಹಸಿವನ್ನು ಎದುರಿಸುತ್ತಿರುವವರಿಗೆ ಭರವಸೆಯಾಗಿ ನಿಂತಿದೆ. ಈ ಒಪ್ಪಂದ ಯಾರೂ ಹಸಿವಿನಿಂದ ಬಳಲದಂತೆ ನೋಡಿಕೊಳ್ಳುವ ಭಾರತದ ಸಂಕಲ್ಪವನ್ನು ಪ್ರದರ್ಶಿಸುತ್ತದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಕಾರ್ಲ್ ಸ್ಕೌ, ಭಾರತದೊಂದಿಗಿನ ಈ ಒಪ್ಪಂದವು ಜಾಗತಿಕ ಹಸಿವಿನ ವಿರುದ್ಧ ಹೋರಾಡುವಲ್ಲಿ ಪ್ರಮುಖ ಮೈಲಿಗಲ್ಲಾಗಿದೆ ಎಂದಿದ್ದಾರೆ. ಕೃಷಿ ಪ್ರಧಾನ ರಾಷ್ಟ್ರ ಮತ್ತು ಜಾಗತಿಕ ಒಗ್ಗಟ್ಟಿನ ಪ್ರತಿಪಾದಕವಾಗಿರುವ ಭಾರತ, ಜಾಗತಿಕ 'ಶೂನ್ಯ ಹಸಿವು ನೀಗಿಸುವ ಗುರಿ'ಯನ್ನು ಕಾರ್ಯರೂಪಕ್ಕೆ ತತರುವಲ್ಲಿ ಸ್ಫೂರ್ತಿ ನೀಡುತ್ತದೆ. ಈ ಪರಿವರ್ತನಾತ್ಮಕ ಪಾಲುದಾರಿಕೆಗಾಗಿ ಭಾರತಕ್ಕೆ ಕಾರ್ಲ್ ಸ್ಕೌ ಧನ್ಯವಾದ ಹೇಳಿದ್ದಾರೆ

ಭಾರತದ ಸ್ಥಾಪಿತ ಪಳೆಯುಳಿಕೆಯೇತರ ಇಂಧನ ಸಾಮರ್ಥ್ಯ 272 ಗಿಗಾವ್ಯಾಟ್ ದಾಟಿದೆ. ಅದರಲ್ಲಿ 141 ಗಿಗಾ ವ್ಯಾಟ್‌ಗಿಂತ ಹೆಚ್ಚು ಸೌರ ಮತ್ತು 55 ಗಿಗಾ ವ್ಯಾಟ್‌ಗಿಂತ ಹೆಚ್ಚು ಪವನ ಸಾಮರ್ಥ್ಯ ಸೇರಿದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಭಾರತ 35 ಗಿಗಾ ವ್ಯಾಟ್‌ಗಿಂತ ಹೆಚ್ಚು ಸೌರ ಮತ್ತು 4.61 ಗಿಗಾ ವ್ಯಾಟ್‌ಗಿಂತ ಹೆಚ್ಚು ಪವನ ಸಾಮರ್ಥ್ಯ ಸೇರ್ಪಡೆ ಮಾಡಿದೆ ಎಂದು ಪ್ರಲ್ಹಾದ ಜೋಶಿ ವಿವರಿಸಿದರು.

ಕಡಲತಡಿಯ ಪವನ ಶಕ್ತಿ ಭಾರತದ ಶುದ್ಧ, ವಿಶ್ವಾಸಾರ್ಹ ಮತ್ತು ಸ್ವಾವಲಂಬಿ ಇಂಧನಕ್ಕೆ ಭವಿಷ್ಯದಲ್ಲಿ ಬಲವಾದ ಆಧಾರಸ್ತಂಭವಾಗಿ ಹೊರಹೊಮ್ಮಬಹುದು ಮತ್ತು ವಿಷನ್ 2035ರಡಿಯಲ್ಲಿ ಭಾರತ-ಯುಕೆ ಸಹಕಾರದ ಪ್ರಮುಖ ಅಂಶವಾಗಿ ಹೊರಹೊಮ್ಮಬಹುದು ಎಂದು ಜೋಶಿ ಆಶಿಸಿದರು.

ಕುಸಿದು ಬಿದ್ದ 54 ವರ್ಷದ ಸಂಸದ | ಪ್ರಧಾನಿ ಮೋದಿ, ವಿಪಕ್ಷ ನಾಯಕ ರಾಹುಲ್ ಸಂತಾಪ

ಶಿಲ್ಲಾಂಗ್ ಸಂಸದ ಸಿಂಗ್‌ಕಾನ್‌ಗೆ ಹೃದಯಾಘಾತ, ನಿಧನ

ಶಿಲ್ಲಾಂಗ್: ಮೇಘಾಲಯದ ಶಿಲ್ಲಾಂಗ್ ಲೋಕಸಭಾ ಕ್ಷೇತ್ರದ ಸಂಸದ ರಿಕಿ ಎಜೆ ಸಿಂಗ್‌ಕಾನ್ ಅವರ ನಿಧನಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ

ತೀವ್ರ ಸಂತಾಪ ವ್ಯಕ್ತಪಡಿ ಸಿದ್ದಾರೆ. 54 ವರ್ಷದ ಸಿಂಗ್‌ಕಾನ್ ಅವರು ಗುರುವಾರ ಸಂಜೆ ಹೃದಯಾಘಾತದಿಂದ ಕೊನೆಯುಸಿರೆಳೆದರು. ಮೇಘಾಲಯದಿಂದ ಲೋಕಸಭೆಗೆ ಆಯ್ಕೆ ಯಾಗಿದ್ದ ಇಬ್ಬರು ಸಂಸದರಲ್ಲಿ ಇವರೂ ಒಬ್ಬರಾ ಗಿದ್ದರು.ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ರಾಹುಲ್ ಗಾಂಧಿ, ಸಿಂಗ್‌ಕಾನ್ ಅವರ ಸಾರ್ವಜನಿಕ ಸೇವೆ ಮತ್ತು ಮೇಘಾಲಯದ ಜನರ ಬಗೆಗಿನ ಅವರ ಬದ್ಧತೆಯನ್ನು ಸ್ಮರಿಸಿದ್ದಾರೆ. 'ಶಿಲ್ಲಾಂಗ್ ಸಂಸದ ಡಾ. ರಿಕಿ ಎಜೆ ಸಿಂಗ್‌ಕಾನ್ ಅವರ ನಿಧನದ ಸುದ್ದಿ ಕೇಳಿ ದುಃಖವಾಯಿತು. ಸಾರ್ವಜನಿಕ ಸೇವೆ ಮತ್ತು ಮೇಘಾಲಯದ ಜನರಿಗಾಗಿ ಅವರಲ್ಲಿದ್ದ ಬದ್ಧತೆ ಸದಾ ಗೌರವದಿಂದ ನೆನಪಿನಲ್ಲಿ ಉಳಿಯುತ್ತದೆ. ಅವರ ಕುಟುಂಬ, ಸ್ನೇಹಿತರು ಮತ್ತು ಬೆಂಬಲಿಗರಿಗೆ ನನ್ನ ಸಂತಾಪಗಳು' ಎಂದು ರಾಹುಲ್ ಗಾಂಧಿ ಬರೆದುಕೊಂಡಿದ್ದಾರೆ. ಸಿಂಗ್‌ಕಾನ್ ಅವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆ, ರಾಜಕೀಯ ನಾಯಕರು ಮತ್ತು ಸಹೋದ್ಯೋಗಿಗಳು ಸಾಮಾಜಿಕ ಜಾಲತಾಣಗಳಲ್ಲಿ ಸಂತಾಪ ಸಂದೇಶಗಳ ಮಹಾಪೂರವನ್ನೇ ಹರಿಸುತ್ತಿದ್ದಾರೆ. ಮೇಘಾಲಯದ ಸಂಸದರ ಅಗಲಿಕೆಗೆ ಕಂಬನಿ ಮಿಡಿಯುತ್ತಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಕೂಡ ಶಿಲ್ಲಾಂಗ್ ಸಂಸದರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ. ಮೇಘಾಲಯದ ಜನರಿಗೆ ಸಿಂಗ್‌ಕಾನ್ ಸಲ್ಲಿಸಿದ ಸೇವೆಯನ್ನು ಅವರು ಸ್ಮರಿಸಿದ್ದಾರೆ. 'ಶಿಲ್ಲಾಂಗ್ ಲೋಕಸಭಾ ಸಂಸದ ಡಾ.ರಿಕಿ ಎಜೆ ಸಿಂಗ್‌ಕಾನ್ ಅವರ ನಿಧನದಿಂದ ದುಃಖವಾಗಿದೆ. ಮೇಘಾಲಯದ ಜನರಿಗೆ ಅವರು ಸಲ್ಲಿಸಿದ ಸಮರ್ಪಿತ ಸೇವೆಯನ್ನು ಸದಾ ಸ್ಮರಿಸಲಾಗುತ್ತದೆ. ಈ ಕಷ್ಟದ ಸಮಯದಲ್ಲಿ ಅವರ ಕುಟುಂಬ, ಸ್ನೇಹಿತರು ಮತ್ತು ಬೆಂಬಲಿಗರೊಂದಿಗೆ ನನ್ನ ಆಲೋಚನೆಗಳಿವೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ' ಎಂದು ಪ್ರಧಾನಿ ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಮೇಘಾಲಯದ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ಕೂಡ ದುಃಖ ವ್ಯಕ್ತಪಡಿಸಿದ್ದಾರೆ.

ನಷ್ಟದ ಹಿನ್ನೆಲೆಯಲ್ಲಿ ಶೋರೂಮ್‌ಗಳು 700ರಿಂದ 550ಕ್ಕಿಳಿಕೆ

ಓಲಾ ವಿದ್ಯುತ್ ವಾಹನ ಮಾರಾಟ ಕುಸಿತ

ಬೆಂಗಳೂರು: ಮಾರಾಟ ತೀವ್ರ ಕುಸಿತಗೊಂಡ ಬೆನ್ನಲ್ಲೇ ಓಲಾ ಎಲೆಕ್ಟ್ರಿಕ್ ಕಂಪನಿ ತನ್ನ ಶೋರೂಮ್ ಸಂಖ್ಯೆಯನ್ನು ಮಾರ್ಚ್ ಅಂತ್ಯಕ್ಕೆ 550ಕ್ಕೆ ಇಳಿಸಲು ಚಿಂತನೆ ನಡೆಸಿದೆ ಎಂದು ಮಾಧ್ಯಮ ವರದಿ ಮಾಡಿದೆ.

4000 ಮಳಿಗೆ ಮಾಡಲು ಹೊರಟಿದ್ದ ಕಂಪನಿಗೆ ಆಘಾತ, ಉದ್ಯೋಗಿಗಳಿಗೆ ಕೊಕ್

ಬೆಂಗಳೂರು ಮೂಲದ ಎಲೆಕ್ಟ್ರಿಕ್ ವಾಹನ ತಯಾರಕ ಕಂಪನಿಯು ತನ್ನ ಚಿಲ್ಲರೆ ಮಾರಾಟ ಜಾಲವನ್ನು ದೇಶಾದ್ಯಂತ 4,000 ಮಳಿಗೆಗಳಿಗೆ ವಿಸ್ತರಿಸುವುದಾಗಿ ಘೋಷಿಸಿದ ಕೇವಲ ಒಂದು ವರ್ಷದ ಒಳಗಡೆ ಮಳಿಗೆಗಳನ್ನು ಇಳಿಸಲು ಮುಂದಾಗಿದೆ.ಈಗಾಗಲೇ ಈಗ ತನ್ನ ಶೋರೂಮ್‌ಗಳ ಸಂಖ್ಯೆಯನ್ನು 700ಕ್ಕೆ ಇಳಿಸಿದೆ. ಇದರ ಭಾಗವಾಗಿ ಈಗ 550ಕ್ಕೆ ಇಳಿಸಲು

ಮುಂದಾಗಿದೆ. ಕಂಪನಿಯು ದೇಶಾದ್ಯಂತ ಹಲವು ಶೋರೂಮ್‌ಗಳನ್ನು ಮುಚ್ಚಿದ್ದು ಆ ಸ್ಥಳಗಳಲ್ಲಿದ್ದ ಹಲವಾರು ಉದ್ಯೋಗಿಗಳನ್ನು ತೊರೆಯುವಂತೆ ಸೂಚಿಸಲಾಗಿದೆ. ಡಿಸೆಂಬರ್ 31, 2025ರಲ್ಲಿ ಅಂತ್ಯಗೊಂಡ ತ್ರೈಮಾಸಿಕದಲ್ಲಿ, ಓಲಾ ಎಲೆಕ್ಟ್ರಿಕ್‌ಗೆ 487 ಕೋಟಿ ರು. ನಿವ್ವಳ ನಷ್ಟವಾಗಿತ್ತು. ಕಾರ್ಯಾಚರಣೆಗಳ ಆದಾಯವು ಕುಸಿದಿದೆ.

ಆದಾಯ ತೆರಿಗೆ ಇಲಾಖೆ ತಪಾಸಣೆ | 2019- 2026ರ ಬಿಲ್‌ಗಳ ಪರಿಶೀಲನೆಯಲ್ಲಿ ಮೋಸ ಬಹಿರಂಗ

ಬಿಲ್ ವಂಚನೆಯಲ್ಲಿ ಕರ್ನಾಟಕವೇ ನಂ.1

ಹೈದರಾಬಾದ್: ವಂಚನೆ ಅನ್ನುವುದು ಭಾರತದಲ್ಲಿ ಮಾಮೂಲಿ ವಿದ್ಯಮಾನ ವಾದಂತಾಗಿದೆ. ಆದರೆ ಅಧಿಕೃತವಾಗಿ ಬಿಲ್ ನೀಡಿಯೂ ಆದಾಯ ತೆರಿಗೆ ಇಲಾಖೆಯನ್ನೇ ಬೆಚ್ಚಿಬೀಳಿಸಿದ ಪ್ರಕರಣಗಳು ಈಗ ಬೆಳಕಿಗೆ ಬಂದಿವೆ. ಬಿಲ್ಲಿಂಗ್ ಸಾಫ್ಟ್‌ವೇರ್ ಬಳಸಿಕೊಂಡು ದೇಶಾದ್ಯಂತ ಇರುವ ರೆಸ್ಟೋರೆಂಟ್‌ಗಳು 70000 ಕೋಟಿ ರು. ತೆರಿಗೆ ವಂಚನೆ ನಡೆಸಿದ್ದು ಈಗ ಪತ್ತೆಯಾಗಿದೆ. ವಂಚನೆಯ ಪ್ರಮಾಣ ಮತ್ತು ವಿಧಾನ ಕಂಡು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳೇ ಅಚ್ಚರಿಗೊಳಗಾಗಿದ್ದಾರೆ.

ಸ್ಥಳೀಯ ಬಿರಿಯಾನಿ ರೆಸ್ಟೋರೆಂಟ್‌ಗಳ ಲೆಕ್ಕಪತ್ರದ ಸಾಮಾನ್ಯ ತನಿಖೆಗಿಳಿದ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಇಂತಹದ್ದೊಂದು ವಿಚಾರ ಗೊತ್ತಾಗಿದೆ. ದೇಶಾದ್ಯಂತ ಇರುವ ರೆಸ್ಟೋರೆಂಟ್‌ಗಳು ಇಲಾಖೆಯನ್ನೇ ದಾರಿ ತಪ್ಪಿಸಿವೆ. ತೆರಿಗೆ ವಂಚನೆಯಲ್ಲಿ ಕರ್ನಾಟಕದ ರೆಸ್ಟೋರೆಂಟ್‌ಗಳೇ ದೇಶದಲ್ಲಿ ಮೊದಲನೇ ಸ್ಥಾನ ಪಡೆದಿವೆ ಎನ್ನುವುದು ಇನ್ನೂ ಆಘಾತ ಮೂಡಿಸಿದೆ. ರಾಜ್ಯದಲ್ಲಿ ಅಂದಾಜು 2000 ಕೋಟಿ ರು. ಮೊತ್ತದ ಬಿಲ್‌ಗಳನ್ನು ಅಳಿಸಿಹಾಕಲಾಗಿದೆ. ತೆಲಂಗಾಣ (1500 ಕೋಟಿ ರು.), ತಮಿಳುನಾಡು (1200 ಕೋಟಿ ರು.) ನಂತರದ ಸ್ಥಾನಗಳಲ್ಲಿವೆ.



ಇದು ಮೋಸ ಮಾರ್ಗ!

ರೆಸ್ಟೋರೆಂಟ್ ಮಾಲೀಕರು ನಾನಾ ರೀತಿಯಲ್ಲಿ ತೆರಿಗೆ ವಂಚನೆ ನಡೆಸಿರುವುದು ಕಂಡುಬಂದಿದೆ. ಕೆಲವೊಂದು ರೆಸ್ಟೋರೆಂಟ್‌ಗಳಲ್ಲಿ ಗ್ರಾಹಕರಿಗೆ ಬಿಲ್ ನೀಡಿದ ಬಳಿಕ ಅದು ಸಾಫ್ಟ್‌ವೇರ್‌ನ ದಾಖಲಾತಿಗಳಿಂದ ತಂತಾನೆ ಅಳಿಸಿಹೋಗುತ್ತಿತ್ತು. ಇನ್ನು ಕೆಲವು ಪ್ರಕರಣಗಳಲ್ಲಿ ಮಾಲೀಕರೇ ಉದ್ದೇಶಪೂರ್ವಕವಾಗಿ ಕೆಲ ಬಿಲ್‌ಗಳನ್ನು ರದ್ದುಪಡಿಸಿದ್ದು ಕಂಡುಬಂದಿದೆ. ಇನ್ನು ಕೆಲವು ಪ್ರಕರಣಗಳಲ್ಲಿ ಒಂದಿಡೀ ದಿನ, ವಾರದ ಬಿಲ್‌ಗಳನ್ನೇ ಅಳಿಸಿಹಾಕಿದ್ದು ಕಂಡುಬಂದಿದೆ. ಮತ್ತೊಂದಿಷ್ಟು ಪ್ರಕರಣಗಳಲ್ಲಿ ಬಿಲ್‌ಗಳಲ್ಲಿ ಯಾವುದೇ ವ್ಯತ್ಯಾಸ ಮಾಡದೇ, ಆದಾಯ ತೆರಿಗೆ ಇಲಾಖೆಗೆ ದಾಖಲೆ ಸಲ್ಲಿಸುವಾಗ ಕಡಿಮೆ ಆದಾಯ ತೋರಿಸಿ ವಂಚನೆ ಎಸಗಲಾಗಿದೆ.

2019-26ನೇ ಸಾಲಿನವರೆಗಿನ 1.77 ಲಕ್ಷ ರೆಸ್ಟೋರೆಂಟ್‌ಗಳ ಬಿಲ್‌ಗಳನ್ನು ಎಐ ತಂತ್ರಜ್ಞಾನ ಬಳಸಿ ಪರಿಶೀಲಿಸಿದಾಗ ಈ ವಂಚನೆ ನಡೆದಿರುವುದು ಕಂಡುಬಂದಿದೆ. ಈ ರೆಸ್ಟೋರೆಂಟ್‌ಗಳ 2.43 ಲಕ್ಷ ಕೋಟಿ ರು. ಮೊತ್ತದ ಬಿಲ್‌ಗಳನ್ನು ತಪಾಸಣೆ ನಡೆಸಿದಾಗ 13317 ಕೋಟಿ ರು. ಮೌಲ್ಯದ ಬಿಲ್‌ಗಳು ಅಳಿಸಿ ಹಾಕಿರುವುದು ಪತ್ತೆಯಾಗಿದೆ.

ಸ್ವತಃ ಪರಿಶೀಲನೆ: ವಂಚನೆ ಖಚಿತಪಡಿಸಿಕೊಳ್ಳಲು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳೇ ಹೈದ್ರಾಬಾದ್‌ನ 40ಕ್ಕೂ ಹೆಚ್ಚು ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡಿ ಆಹಾರ ಖರೀದಿ ಮಾಡಿದ್ದಾರೆ. ಆದರೆ ದಾಖಲೆ ಪರಿಶೀಲನೆ ವೇಳೆ ಅವರಿಗೆ ನೀಡಿದ ಬಿಲ್‌ಗೂ, ರೆಸ್ಟೋರೆಂಟ್‌ಗಳಲ್ಲಿನ ದಾಖಲೆಗಳಿಗೂ ವ್ಯತ್ಯಾಸ ಕಂಡುಬಂದಿದೆ.

ಎಐ ಬಳಸಿ ವಂಚನೆ ಪತ್ತೆ: ಅಕ್ರಮ ಬಯಲಿಗೆಳೆಯಲು 1.77 ಲಕ್ಷ ರೆಸ್ಟೋರೆಂಟ್‌ಗಳ 60 ಟೆರಾಬೈಟ್‌ನಷ್ಟು ದತ್ತಾಂಶ ಹೊಂದಿರುವ ಬಿಲ್‌ಗಳನ್ನು ತೆರಿಗೆ ಅಧಿಕಾರಿಗಳು ಪರಿಶೀಲಿಸಿದ್ದಾರೆ. ಈ ಕಾರ್ಯಕ್ಕೆ ಅವರು ಬಳಸಿದ್ದು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವನ್ನು. ಹೀಗಾಗಿ ತನಿಖೆ ಸುಲಭವಾಗಿದೆ.

ಅಮೆರಿಕ ನೇತೃತ್ವದ ಪ್ಯಾಕ್ಸ್ ಸಿಲಿಕಾಗೆ ಭಾರತ ಸೇರ್ಪಡೆ

ನವದೆಹಲಿ: ಭಾರತವು ಶುಕ್ರವಾರ ಅಮೆರಿಕ ನೇತೃತ್ವದ ಜಾಗತಿಕ ತಂತ್ರಜ್ಞಾನ ಮೈತ್ರಿಕೂಟವಾದ ಪ್ಯಾಕ್ಸ್ ಸಿಲಿಕಾಗೆ ಅಧಿಕೃತವಾಗಿ ಸೇರ್ಪಡೆಯಾಗಿದೆ. ಇದು ಕೃತಕ ಬುದ್ಧಿಮತ್ತೆ (ಎಐ), ಸೆಮಿಕಂಡಕ್ಟರ್‌ಗಳ ಸರಬರಾಜು ಸರಪಳಿಗಳನ್ನು ಸುರಕ್ಷಿತಗೊಳಿಸುವ ಉದ್ದೇಶದೊಂದಿಗೆ ರಚಿತವಾದ ಒಂದು ಪ್ರಮುಖ ಒಕ್ಕೂಟವಾಗಿದೆ. ನವದೆಹಲಿಯಲ್ಲಿ ನಡೆಯುತ್ತಿರುವ ಇಂಡಿಯಾ ಎಐ ಶೃಂಗದಲ್ಲಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ಅಮೆರಿಕ ರಾಜ್ಯ ಸಚಿವಾಲಯದ ಆರ್ಥಿಕ ವಿಷಯಗಳ ಅಂಡರ್ ಸೆಕ್ರೆಟರಿ ಜೇಕಬ್ ಹೆಲ್ಬರ್ಗ್ ಮತ್ತು ಅಮೆರಿಕಾದ ಭಾರತದ ರಾಯಭಾರಿ ಸರ್ಗಿಯೊ ಗೋರ್ ಅವರು ಪ್ಯಾಕ್ಸ್ ಸಿಲಿಕಾ ಘೋಷಣೆಗೆ ಸಹಿ ಹಾಕಿದರು. ಈ ಮೂಲಕ ಭಾರತ ಈ ಗುಂಪಿನ 11ನೇ ಸದಸ್ಯ ರಾಷ್ಟ್ರವಾಯಿತು. ಪ್ಯಾಕ್ಸ್ ಸಿಲಿಕಾ ಎಂಬುದು 202 5ರ ಡಿಸೆಂಬರ್‌ನಲ್ಲಿ ಅಮೆರಿಕದಿಂದ ಪ್ರಾರಂಭಿಸಲಾದ ಒಂದು ಕಾರ್ಯತಂತ್ರದ ಮೈತ್ರಿಕೂಟ. ಎಐ ಮತ್ತು ಸೆಮಿಕಂಡಕ್ಟರ್‌ಗಳ ಸರಬರಾಜು ಸರಪಳಿಯನ್ನು ಸುರಕ್ಷಿತವಾಗಿ, ನಂಬಿಕಾರ್ಹ ರಾಷ್ಟ್ರಗಳ ನಡುವೆ ರಕ್ಷಿಸುವುದು ಮತ್ತು ಚೀನಾ ಸೇರಿದಂತೆ ಅನ್ಯ ರಾಷ್ಟ್ರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು ಇದರ ಉದ್ದೇಶವಾಗಿದೆ. ಇದು ಪ್ರಮುಖ ಖನಿಜಗಳಾದ ಲಿಥಿಯಂ, ಕೋಬಾಲ್ಟ್, ಅಪರೂಪದ ಖನಿಜಗಳು, ಸೆಮಿಕಂಡಕ್ಟರ್ ಉತ್ಪಾದನೆಯನ್ನು ಒಳಗೊಂಡಿದೆ.ಪ್ರಸ್ತುತ ಅಮೆರಿಕ, ಜಪಾನ್, ಬ್ರಿಟನ್, ಆಸ್ಟ್ರೇಲಿಯಾ, ದಕ್ಷಿಣ ಕೊರಿಯಾ, ಇಸ್ರೇಲ್, ಸಿಂಗಾಪೂರ್, ಗ್ರೀಸ್, ಕತಾರ್ ಮತ್ತು ಯುಎಇ ಸದಸ್ಯ ರಾಷ್ಟ್ರಗಳಾಗಿವೆ.

ಸಮಾಚಾರ ಸಣ್ಣದಲ್ಲ

ಹಳಿ ತಪ್ಪಿದ ಹಳದಿ ಮೆಟ್ರೋ

ಬೆಂಗಳೂರು: ಹಳದಿ ಮಾರ್ಗದಲ್ಲಿ ಸಂಚಾರ ನಡೆಸುತ್ತಿದ್ದ ಚಾಲಕರಹಿತ ರೈಲು ಜನವರಿ 15ರಂದು ಹೆಬ್ಬಗೋಡಿ ಡಿಪೋದಲ್ಲಿ ಹಳಿ ತಪ್ಪಿದ ಘಟನೆ ತಡವಾಗಿ ತಿಳಿದು ಬಂದಿದೆ.

ಹೆಬ್ಬಗೋಡಿ ಡಿಪೋದಲ್ಲಿ ಈ ಅವಘಡ ಸಂಭವಿಸಿದ್ದು, ಡಿಪೋದಿಂದ ಬೊಮ್ಮಸಂದ್ರ ನಿಲ್ದಾಣ ದತ್ತ ಸಾಗುತ್ತಿದ್ದ ವೇಳೆ ಮೂರನೇ ಚಾಲಕರಹಿತ ರೈಲು ಹಳಿ ತಪ್ಪಿದೆ. ಅದರ ಪರಿಣಾಮವಾಗಿ ಟ್ರ್ಯಾಕ್ ಸ್ಲೀಪರ್‌ಗಳು (ಹಳಿ ಆಧಾರಗಳು), 3ನೇ ರೇಲ್, ಟ್ರ್ಯಾಕ್ಷನ್ ಹಾಗೂ ರೋಲಿಂಗ್ ಸ್ಟಾಕ್ ಘಟಕಗಳಿಗೆ ಹಾನಿಯಾಗಿದೆ. ಈ ಅವಘಡಕ್ಕೆ ಕಾರಣ ಮಾನವನ ಅಜಾಗರೂಕತೆಯೇ, ವ್ಯವಸ್ಥಾತ್ಮಕ ದೌರ್ಬಲ್ಯವೇ ಅಥವಾ ಸಿಗ್ನಲಿಂಗ್ ವ್ಯವಸ್ಥೆಯ ದೋಷವೇ ಎಂಬುದನ್ನು ಪರಿಶೀಲಿಸುತ್ತಿದೆ. ರೈಲು ಆಪರೇಟರ್, ಡಿಪೋ ಕಂಟ್ರೋಲರ್ ಹಾಗೂ ಇತರ ಸಿಬ್ಬಂದಿಗಳು ತನಿಖೆಗೆ ಒಳಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ಎಲಿವೇಟೆಡ್ ಕಾರಿಡಾರ್ ಮೇಲೆ ಸಂಭವಿಸಿದ್ದರೆ ದೊಡ್ಡ ಅನಾಹು ತವಾಗುತ್ತಿತ್ತು ಎಂಬ ಆತಂಕ ವ್ಯಕ್ತವಾಗಿದ್ದು, ಈ ಹಿನ್ನೆಲೆಯಲ್ಲಿ ನಮ್ಮ ಸತ್ಯಶೋಧನಾ ಸಮಿತಿಯನ್ನು ರಚಿಸಿದೆ.

ಮೇಕೆದಾಟು ಯೋಜನೆ ರಾಜ್ಯದ ಹೊಸ ಪ್ರಸ್ತಾವ

ಬೆಂಗಳೂರು: ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣಕ್ಕೆ ಅಗತ್ಯವಿರುವ ವನ್ಯಜೀವಿ ಅನುಮೋದನೆ ಪಡೆಯಲು ಕರ್ನಾಟಕ ಸರಕಾರ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯಕ್ಕೆ ಪ್ರತ್ಯೇಕ ಪ್ರಸ್ತಾವ ಸಲ್ಲಿಸಿದೆ. ಯೋಜನೆಗೆ 5,200 ಹೆಕ್ಟೇರ್ ಅರಣ್ಯ ಪ್ರದೇಶ ಬಳಕೆಗೆ ಅನುಮೋದನೆ ಕೋರಿ ಕಾವೇರಿ ನೀರಾವರಿ ನಿಗಮವು ಜನವರಿ 4 ರಂದು ಪ್ರಸ್ತಾವ ಸಲ್ಲಿಸಿತ್ತು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ವಿಸ್ತೃತ ಯೋಜನಾ ವರದಿಯನ್ನು ರಾಜ್ಯ ಸಲ್ಲಿಸಿಲ್ಲ ಎಂದು ಕೇಂದ್ರ ಜಲಶಕ್ತಿ ಸಚಿವಾಲಯವು ಜನವರಿ 15 ರಂದು ಆಕ್ಷೇಪ ವ್ಯಕ್ತಪಡಿಸಿತ್ತು. ರಾಜ್ಯ ಸರಕಾರ ಅಪೂರ್ಣ ದಾಖಲೆಗಳನ್ನು ಸಲ್ಲಿಸಿದೆ ಎಂದೂ ಹೇಳಿತ್ತು. ಸಮೀಕ್ಷೆ ಕಾರ್ಯಕ್ಕೆ ಈ ದಾಖಲೆಗಳನ್ನು ನೀಡುವ ಅಗತ್ಯ ಇಲ್ಲ ಎಂದು ನೀರಾವರಿ ನಿಗಮವು ಫೆ. 17ರಂದು ಉತ್ತರ ನೀಡಿದೆ. ಜತೆಗೆ, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯಿಂದ ವನ್ಯಜೀವಿ ಅನುಮೋದನೆ ಪಡೆಯಲು ಮತ್ತೊಂದು ಪ್ರಸ್ತಾವವನ್ನೂ ಸಲ್ಲಿಸಿದೆ.

ದುರ್ನಡತೆ ಆರೋಪ: ವಜಾಗೊಳಿಸಬಹುದು

ಬೆಂಗಳೂರು: ಒಂದೇ ಆರೋಪದ ಸಂಬಂಧ ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆ ಆಗದಿದ್ದರೂ, ಆಡಳಿತಾತ್ಮಕ ನಿಟ್ಟಿನಿಂದ ದುರ್ನಡತೆ ಆರೋಪ ಸಾಬೀತಾಗಿದ್ದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನು ವಜಾಗೊಳಿಸಬಹುದು ಎಂದು ಹೈಕೋರ್ಟ್ ಆದೇಶಿಸಿತು. ಗದಗ-ಬೇಟಗೇರಿ ಸಿಟಿ ಮುನಿಸಿಪಾಲಿಟಿಯ ಸದಸ್ಯರಾದ ಉಷಾ ಮಹೇಶ್ ದಾಸರ, ಅನಿಲ್ ಎಂ.ಅಬ್ಬಿಗೇರಿ ಮತ್ತು ಗುಳ್ಳಪ್ಪ ಎಸ್.ಮುಷಿಗೇರಿ ಅವರನ್ನು ಸದಸ್ಯತ್ವದಿಂದ ವಜಾಗೊಳಿಸಿದ್ದ ಸರಕಾರದ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿಯಿತು. ಸಾರ್ವಜನಿಕ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದ ಕೆಲವು ವ್ಯಕ್ತಿಗಳ ಜತೆ ಶಾಮೀಲಾಗಿ ಮುನಿಸಿಪಾಲಿಟಿ ಆಯುಕ್ತರ ಸಹಿಯನ್ನು ನಕಲು ಮಾಡಿ, ಸುಳ್ಳು ನಿರ್ಣಯವನ್ನು ಸೃಷ್ಟಿಸಿ ಒತ್ತುವರಿದಾರರಿಗೆ ಭೂ ಸ್ವಾಧೀನ ಪತ್ರ ನೀಡಿದ್ದ ಆರೋಪದಲ್ಲಿ ತಮ್ಮನ್ನು ವಜಾಗೊಳಿಸಿದ್ದ ಸರಕಾರದ ಕ್ರಮ ಪ್ರಶ್ನಿಸಿ ಈ ಮೂವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಪಿ.ಜಿ ಪರಿಶೀಲನೆ: ಜಂಟಿ ತಂಡ ರಚನೆ

ಬೆಂಗಳೂರು: ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾಮಗಾರಿ ಇಲಾಖೆ ಪ್ರಗತಿ ಪರಿಶೀಲನೆ, ಪಿಜಿಗಳ ತಪಾಸಣೆಗೆ ಜಂಟಿ ತಂಡ ರಚನೆ, ರಾಷ್ಟ್ರೀಯ ಜನಗಣತಿಗೆ ಪೂರ್ವಸಿದ್ಧತೆ ಹಾಗೂ ನ್ಯಾಯಾಲಯ ಪ್ರಕರಣಗಳ ತ್ವರಿತ ಕ್ರಮದ ಕುರಿತು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಉಚ್ಚ ನ್ಯಾಯಾಲಯದ ಆದೇಶದನ್ವಯ ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷತೆ ನಿಯಮ ಪಾಲನೆ ಹಿನ್ನೆಲೆಯಲ್ಲಿ ಪಿಜಿಗಳ ಪರಿಶೀಲನೆಗೆ ಆರೋಗ್ಯ ವಿಭಾಗ ಹಾಗೂ ನಗರ ಯೋಜನೆ ವಿಭಾಗದ ಅಧಿಕಾರಿಗಳನ್ನು ಒಳಗೊಂಡ ಜಂಟಿ ಪರಿಶೀಲನಾ ತಂಡವನ್ನು ರಚಿಸಲಾಗಿದ್ದು, ಜಂಟಿ ತಂಡವು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಪಿಜಿಗಳನ್ನು15 ದಿನಗಳೊಳಗೆ ಸಮಗ್ರವಾಗಿ ಪರಿಶೀಲಿಸಿ ಅನುಸರಣಾ ವರದಿ ಸಲ್ಲಿಸಲು ಸೂಚಿಸಲಾಗಿದೆ ಎಂದು ಆಯುಕ್ತರು ತಿಳಿಸಿದರು.

{ ಸತೀಶ್ ಜಾರಕಿಹೊಳಿ } ಸಚಿವ

ಲೋಕೋಪಯೋಗಿ ಇಲಾಖೆಯಲ್ಲಿ 12 ಸಾವಿರ ಕೋಟಿ ರು. ಬಾಕಿ ಇತ್ತು. 3 ಸಾವಿರ ಕೋಟಿ ಕೊಡಲಾಗಿದೆ. 9 ಸಾವಿರ ಕೋಟಿ ಬಾಕಿ ಇದೆ. ಅದನ್ನು ಬ್ಯಾಲೆನ್ಸ್ ಮಾಡುತ್ತೇವೆ. ಇದರಲ್ಲಿ ಅಧಿಕಾರಿಗಳ ಲೋಪ ಎನ್ನಲು ಬರಲ್ಲ. ಹಿಂದಿನ ಸರಕಾರವೇ ಇದಕ್ಕೆ ಕಾರಣ.

ಸಫಾರಿಗೆ ಕಟ್ಟುನಿಟ್ಟಿನ ಷರತ್ತುಗಳ ಜಾರಿ | ಷರತ್ತುಗಳ ಉಲ್ಲಂಘನೆಗೆ ಅಧಿಕಾರಿಗಳೇ ಹೊಣೆ

ಇಂದಿನಿಂದ ಸಫಾರಿ ಪುನಾರಂಭ: ಖಂಡ್ರೆ

ಮೈಸೂರು: ಮಾನವ-ಹುಲಿ ಸಂಘರ್ಷದ ಹಿನ್ನೆಲೆಯಲ್ಲಿ ಕಳೆದ ನವೆಂಬರ್ 7ರಂದು ಸ್ಥಗಿತಗೊಳಿಸಲಾಗಿದ್ದ ಸಫಾರಿಯನ್ನು ಫೆ.21ರಿಂದ ಷರತ್ತುಬದ್ಧವಾಗಿ ಪುನಾರಂಭಿಸಲು ನಿರ್ಧರಿಸಿದ್ದು, ಈ ಷರತ್ತುಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ.

ಮೈಸೂರಿನಲ್ಲಿ ಮೈಸೂರು, ಕೊಡಗು ಮತ್ತು ಚಾಮರಾಜನಗರ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬಹುತೇಕ ಶನಿವಾರದಿಂದ ಸಫಾರಿ ಆರಂಭಿಸಲು ಅಧಿಕೃತ ಆದೇಶ ಹೊರಡಿಸಲಾಗುವುದು. ಈ ಆದೇಶದಲ್ಲಿರುವ ಷರತ್ತುಗಳ ಉಲ್ಲಂಘನೆ ಆದರೆ, ಸಂಬಂಧಿತ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದರು. ನ.7ಕ್ಕೆ ಮೊದಲು ಬಳಕೆಯಾಗುತ್ತಿದ್ದ ಸಫಾರಿ ವಾಹನಗಳ ಶೇ.50ರಷ್ಟು ವಾಹನ ಮತ್ತು ಸಿಬ್ಬಂದಿಯನ್ನು ಮಾತ್ರವೇ ಬಳಕೆ ಮಾಡಬೇಕು. ಹೆಚ್ಚಾಗಿ ಬಸ್‌ಗಳ ಮೂಲಕ ಸಫಾರಿ ನಡೆಸಬೇಕು. ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಕ್ಯಾಂಪರ್ ಮತ್ತು ಜೀಪ್ ಬಳಕೆ ಮಾಡಬೇಕು ಈ ಬಗ್ಗೆ ಸ್ಪಷ್ಟ ಆದೇಶ ಹೊರಡಿಸಲಾಗುವುದು ಎಂದರು.

ಮಾನವ ಜೀವ ರಕ್ಷಣೆ ಆದ್ಯತೆ: ವನ್ಯಜೀವಿಗಳ ರಕ್ಷಣೆಯ ಜತೆಗೆ ಕಾಡಿನಂಚಿನಲ್ಲಿ ವಾಸಿಸುತ್ತಿರುವ ನಿವಾಸಿಗಳ ಜೀವ ರಕ್ಷಣೆಯೂ ಅರಣ್ಯ ಇಲಾಖೆಯ ಪ್ರಥಮ ಆದ್ಯತೆ ಆಗಿದೆ. ಇದರ ಜೊತೆಗೆ ಬೆಳೆ ರಕ್ಷಣೆಗೂ ಒತ್ತು ನೀಡಬೇಕು ಎಂದರು.

ಸಫಾರಿಯಿಂದ ಬರುವ ಆದಾಯದಲ್ಲಿ ಶೇ.35ರಷ್ಟು ಹಣವನ್ನು ಅರಣ್ಯದಂಚಿನ ವಸತಿ ಪ್ರದೇಶಗಳಲ್ಲಿನ ಯುವಜನರಿಗೆ ಕೌಶಲ್ಯ ತರಬೇತಿ ನೀಡಲು, ಜಾನುವಾರುಗಳಿಗೆ ಮೇವು ಒದಗಿಸಲು, ಮಕ್ಕಳಿಗೆ ಶಿಕ್ಷಣ ಕೊಡಿಸಲು ವಿನಿಯೋಗಿಸಬೇಕು ಎಂದು ತಿಳಿಸಿದರು.

ನಾಗರಹೊಳೆ, ಬಂಡೀಪುರ, ಬಿ.ಆರ್.ಟಿಯಲ್ಲಿ ಈ ಬೇಸಿಗೆಯಲ್ಲಿ ಕಾಡ್ಗಿಚ್ಚು ನಿಯಂತ್ರಿಸಲು ಕ್ರಮ ವಹಿಸುವಂತೆ ಸೂಚಿಸಿದ ಸಚಿವರು, ಬೇಸಿಗೆಯಲ್ಲಿ ಹುಲಿ, ಚಿರತೆ, ಆನೆ ಸೇರಿದಂತೆ ಯಾವುದೇ ವನ್ಯಜೀವಿ ಆಹಾರ ಮತ್ತು ನೀರಿನ ಕೊರತೆಯಿಂದ ಕಾಡಿನಿಂದ ಹೊರಬಾರದಂತೆ ಕ್ರಮ ಕೈಗೊಳ್ಳಿ.

-ಈಶ್ವರ್ ಖಂಡ್ರೆ, ಅರಣ್ಯ ಸಚಿವ

ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಸೂಚನೆ: ಅರಣ್ಯ ಸಂರಕ್ಷಣೆ, ವನ್ಯಜೀವಿ ಸಂರಕ್ಷಣೆ ಆಗಬೇಕಾದರೆ ಸ್ಥಳೀಯರ ನೆರವು, ಸಹಕಾರ, ಸಹಯೋಗ ಅತ್ಯಂತ ಮುಖ್ಯ. ಈ ನಿಟ್ಟಿನಲ್ಲಿ ಅರಣ್ಯ ಸಿಬ್ಬಂದಿ ಸ್ಥಳೀಯರೊಂದಿಗೆ ಸೌಹಾರ್ದಯುತವಾಗಿ ವರ್ತಿಸಬೇಕು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅರಣ್ಯ ಸಂರಕ್ಷಣೆ ಮಾಡಬೇಕು ಎಂದರು.

ಇ-ಗಸ್ತು ಅಳವಡಿಕೆಗೆ ಸೂಚನೆ: ಇಲಾಖೆಯ ಕಾಯಂ ಸಿಬ್ಬಂದಿ ಕಡ್ಡಾಯವಾಗಿ ಅರಣ್ಯ ಇಲಾಖೆ ಆಂತರಿಕವಾಗಿ ಅಭಿವೃದ್ಧಿಪಡಿಸಿರುವ ಇ-ಗಸ್ತು ತಂತ್ರಾಂಶವನ್ನು ಬಳಕೆ ಮಾಡಬೇಕು. ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹೊರಗುತ್ತಿಗೆಯ ಸಿಬ್ಬಂದಿ ಇಸ್ಟ್ರೈಪ್ ಬಳಕೆ ಮಾಡಲಿ ಎಂದು ತಿಳಿಸಿದರು. ಸಮಗ್ರ ಕಮಾಂಡ್ ಕೇಂದ್ರದಲ್ಲಿ ವನ್ಯಜೀವಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕು. ಕೂಡಲೇ ಸಂಬಂಧಿತ ವಲಯದ ಅಧಿಕಾರಿ, ಸಿಬ್ಬಂದಿಗೆ ಸೂಚನೆ ನೀಡಬೇಕು. 1926 ದೂರವಾಣಿ ಸಂಖ್ಯೆಗೆ ಬರುವ ದೂರು ಮತ್ತು ಮಾಹಿತಿಗೆ ತಕ್ಷಣ ಸ್ಪಂದಿಸಬೇಕು ಎಂದು ಸೂಚಿಸಿದರು.

ವನ್ಯಜೀವಿಗಳು ಕಾಡಿನಿಂದ ಹೊರಬರದಂತೆ ಕ್ರಮ

ಬಂಡಿಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಮಾನವ-ವನ್ಯಜೀವಿ ಸಂಘರ್ಷ ಇರುವ ಪ್ರದೇಶವನ್ನು ಗುರುತಿಸಬೇಕು. ಆ ಪ್ರದೇಶದಲ್ಲಿ ಗಸ್ತು ಹೆಚ್ಚಿಸಬೇಕು. ವನ್ಯಜೀವಿಗಳು ವಸತಿ ಪ್ರದೇಶಕ್ಕೆ ಬಾರದಂತೆ, ಜೀವಹಾನಿ, ಬೆಳೆ ಹಾನಿ ಮಾಡದಂತೆ ಎಚ್ಚರಿಕೆ ವಹಿಸಬೇಕು ಎಂದು ಪರಿಸರ ಸಚಿವ ಈಶ್ವರ್ ಖಂಡ್ರೆ ನಿರ್ದೇಶನ ನೀಡಿದರು. ಬಂಡೀಪುರ ಅರಣ್ಯದ ಗಡಿಯಲ್ಲಿ 100 ಕಿ.ಲೋ. ಮೀಟರ್ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, ಇಲ್ಲಿ 5 ಕಿ.ಮೀ.ಗೆ ಒಂದರಂತೆ 25 ಶಿಬಿರ ನಿರ್ಮಿಸಿ ಪ್ರತಿ ಶಿಬಿರದಲ್ಲಿ ಸ್ಥಳೀಯರನ್ನು ಕಾಡಿನ ಮಿತ್ರ ಎಂದು ನೇಮಕ ಮಾಡಿಕೊಂಡು ವನ್ಯಜೀವಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕು. ಥರ್ಮಲ್ ಡ್ರೋನ್, ವಾಹನ ಇತ್ಯಾದಿ ಯಾವುದೇ ಸೌಲಭ್ಯ ಬೇಕಿದ್ದರೂ ಲಿಖಿತ ಮೂಲಕ ಪ್ರಸ್ತಾವನೆ ಸಲ್ಲಿಸಿ ಎಂದರು.



ಆಗಸದ ಹೃದಯ ಬಿಚ್ಚಿದಾಗ

ಬಿರುಬಿಸಿಲಿನ ಬೇಸಿಗೆಯ ಆಗಮನದ ಹೊಸ್ತಿಲಲ್ಲೇ ಬೆಂಗಳೂರಿನ ಆಗಸದಲ್ಲಿ ಮೋಡಗಳ ಹಿಂದೆ ಅಡಗಿರುವ ಸೂರ್ಯನ ಕಿರಣಗಳು ಭೂಮಿಗೆ ಸ್ಪರ್ಶಿಸುವ ದೃಶ್ಯ ಮೋಡಗಳ ಮಡಿಲಲ್ಲಿ ಹುಟ್ಟಿದ ಬೆಳಕಿನಂತಿದೆ. ನಯನಮನೋಹರವಾದ ಈ ದೃಶ್ಯ ವಿಶ್ವವಾಣಿ ಪತ್ರಿಕೆಯ ಛಾಯಾಗ್ರಾಹಕ ಸುಧಾಕರ್ ದೇವರಾಜ್ ಅವರ ಕ್ಯಾಮೆರಾ ಕಣ್ಣಲ್ಲಿ ಕಂಡಿದ್ದು ಹೀಗೆ...

ಬಾಕಿ ಪ್ರಕರಣ: ಕಂದಾಯ ಇಲಾಖೆ ವಿಶೇಷ ಆದ್ಯತೆ

ಬೆಂಗಳೂರು: ಕಂದಾಯ ಇಲಾಖೆಯ ವತಿಯಿಂದ ಶುಕ್ರವಾರ ಅಪರ ಮುಖ್ಯ ಕಾರ್ಯದರ್ಶಿ, ಆಯುಕ್ತರು ಹಾಗೂ ಬೆಂಗಳೂರು ಜಿಲ್ಲಾಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಸಭೆ ಆಯೋಜಿಸಲಾಗಿತ್ತು.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಕಂದಾಯ ಇಲಾಖೆಯು, ರಾಜ್ಯಾದ್ಯಂತ ಕಂದಾಯ ನ್ಯಾಯಾಲಯಗಳಲ್ಲಿ ವರ್ಷಗಳಿಂದ ಬಾಕಿ ಉಳಿದಿರುವ ಪ್ರಕರಣಗಳನ್ನು ತ್ವರಿತವಾಗಿ ವಿಲೇಗೊಳಿಸುವ ದಿಟ್ಟ ಹೆಜ್ಜೆಯನ್ನು ಕಂದಾಯ ಇಲಾಖೆ ಕೈಗೊಂಡಿದೆ. ಅದರ ಭಾಗವಾಗಿ ಗರಿಷ್ಠ ಬಾಕಿ ಪ್ರಕರಣಗಳನ್ನು ಹೊಂದಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ವಿಶೇಷ ಆದ್ಯತೆ ನೀಡಲಾಗಿದೆ. 10-20 ವರ್ಷಗಳ ಹಳೆಯ ಪ್ರಕರಣಗಳಲ್ಲಿ ಪ್ರತಿವಾದಿಗಳ ವಿಳಾಸ ಸಿಗದಿರುವ ಸಮಸ್ಯೆ ಕಂಡುಬಂದಿರುವುದರಿಂದ ಗ್ರಾಮ ಆಡಳಿತಾಧಿಕಾರಿಗಳ ಮೂಲಕ ನೋಟಿಸ್ ಜಾರಿಗೊಳಿಸಲು ಸೂಚಿಸಲಾಗಿದೆ. ಪ್ರಸ್ತುತ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಒಟ್ಟು 4,937 ಪ್ರಕರಣಗಳು ಬಾಕಿ ಇದ್ದು, ಅವುಗಳಲ್ಲಿ 4,154 ಪ್ರಕರಣಗಳು ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಬಾಕಿಯಾಗಿವೆ. ಕೆಲ ಪ್ರಕರಣಗಳು 10ರಿಂದ 20 ವರ್ಷಗಳವರೆಗೆ ವಿಲೇ ಆಗದೇ ಉಳಿದಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಸರಕಾರ ವಿಶೇಷ ಅಭಿಯಾನ ಆರಂಭಿಸಿ, ಬಾಕಿ ಪ್ರಕರಣಗಳ ವಿಲೇಗೆ 9 ವಿಶೇಷ ಜಿಲ್ಲಾಧಿಕಾರಿಗಳನ್ನು ನೇಮಿಸಿದೆ.ಎಲ್ಲಾ ಪ್ರಕರಣಗಳನ್ನು ಆನ್‌ಲೈನ್ ಕಂದಾಯ ನ್ಯಾಯಾಲಯ ವ್ಯವಸ್ಥೆಗೆ ಒಳಪಡಿಸಲಾಗಿದ್ದು, ಪ್ರಕರಣಗಳ ಸ್ಥಿತಿ, ಪ್ರಗತಿ, ಆದೇಶ ಮತ್ತು ಅನುಷ್ಠಾನವನ್ನು ಪಾರದರ್ಶಕವಾಗಿ ನೋಡಬಹುದಾಗಿದೆ. ಸಾರ್ವಜನಿಕರು https://rccms.karnataka.gov.in ವೆಬ್‌ಸೈಟ್ ಮೂಲಕ ತಮ್ಮ ಪ್ರಕರಣಗಳ ಹಾಲಿ ಸ್ಥಿತಿ ಪರಿಶೀಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಖಾಸಗಿ ಬಿಲ್ಡರ್ಸ್‌ಗಳಿಗೆ ಬೆದರಿಸಿ ಹಣ ವಸೂಲಿ | ಪರಮೇಶ್ ಬಂಧನಕ್ಕೆ ಆಗ್ರಹ

ನಕಲಿ ದಾಖಲೆ ಸೃಷ್ಟಿಸಿ ಸರಕಾರಕ್ಕೆ ವಂಚನೆ

ವಿಶ್ವವಾಣಿ ಸುದ್ದಿಮನೆ ಮಹದೇವಪುರ

ನಕಲಿ ಎಸ್.ಟಿ.ಜಾತಿ ಪ್ರಮಾಣ ಪತ್ರ ಪಡೆದು ಎಸ್.ಸಿ, ಎಸ್.ಟಿ ಕಾಯ್ದೆ ದುರುಪಯೋಗ ಮಾಡಿಕೊಂಡು ಸರಕಾರಿ ಅಧಿಕಾರಿಗಳು ಮತ್ತು ಖಾಸಗಿ ಬಿಲ್ಡರ್ಸ್‌ಗಳಿಗೆ ಬೆದರಿಸಿ ಅವರಿಂದ ಹಣ ಸುಲಿಗೆ ಮಾಡುತ್ತಿರುವ ಆಂಧ್ರ ಮೂಲದ ಪರಮೇಶ್ ಎಂಬಾತನನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ದಲಿತ ರಕ್ಷಣಾ ವೇದಿಕೆ ಮತ್ತು ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ವೈಟ್ ಫೀಲ್ಡ್‌ನ ಡಿಸಿಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ಕುರಿತು ಕರ್ನಾಟಕ ದಲಿತ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಸೋರಹುಣಸೆ ವೆಂಕಟೇಶ್ ಮಾತನಾಡಿ, ಪರಮೇಶ್ ಎಂಬಾತನು ನಕಲಿ ದಾಖಲೆಗಳು ಸೃಷ್ಟಿಸಿ ಎಸ್.ಟಿ ಜಾತಿ ಪ್ರಮಾಣಪತ್ರ ಪಡೆದು ಸರಕಾರಕ್ಕೆ ವಂಚನೆ ಮಾಡುತ್ತಿದ್ದಾರೆ, ಅಲ್ಲದೆ ಅಟ್ರಾಸಿಟಿ ಕಾಯ್ದೆಯನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣಗಳು ದಾಖಲಿಸುವುದಾಗಿ ಜನರನ್ನು ಬೆದರಿಕೆ ಹಾಕುತ್ತಿದ್ದಾನೆ ಎಂದು ಆರೋಪಿಸಿದರು.

ಸರಕಾರಿ ಜಮೀನುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸುವುದು, ಆರ್‌ಟಿಐ ಕಾರ್ಯಕರ್ತ, ವಕೀಲ ಹಾಗೂ ಪತ್ರಕರ್ತ ಎಂದು ಹೇಳಿಕೊಂಡು ಸರಕಾರಿ ಅಧಿಕಾರಿಗಳಿಗೆ ಹಾಗೂ ಖಾಸಗಿ ಬಿಲ್ಡರ್ಸ್‌ಗಳಿಗೆ ಬೆದರಿಕೆ ಹಾಕಿ ಕೋಟ್ಯಂತರ ರು. ಹಣ ಸುಲಿಗೆ ಮಾಡಿಕೊಂಡು ಕೆಲವು ಮಹಿಳೆಯರಿಗೆ ಹಣ ಒಡವೆ ಆಸೆ ತೋರಿಸಿ ಅವರಿಗೆ ವಂಚನೆ ಮಾಡುವ ಮೂಲಕ ಅವರ ಜೀವನ ಹಾಳು ಮಾಡಿದ್ದಾನೆ ಎಂದರು. ಈ ವೇಳೆ ಕರ್ನಾಟಕ ಸರಕಾರಿ ಭೂ ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಎನ್.ವಿಜಯ್ ಕುಮಾರ್, ಕರ್ನಾಟಕ ಸಿಂಹ ಸೇನೆ ಪ್ರಧಾನ ಕಾರ್ಯದರ್ಶಿ ನಡವತ್ತಿ ಶ್ರೀನಿವಾಸ್, ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷೆ ಭಾಗ್ಯ ಸೇರಿದಂತೆ ಮತ್ತಿತರರಿದ್ದರು.

ಮಹದೇವಪುರದ ವೈಟ್ ಫೀಲ್ಡ್ ಪೊಲೀಸ್ ಠಾಣೆ ಎದುರು ಆಂಧ್ರಪ್ರದೇಶದ ಮೂಲದ ಪರಮೇಶ್‌ರವರ ಮೇಲೆ ಕಾನೂನು ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ದಲಿತ ರಕ್ಷಣಾ ವೇದಿಕೆ ಮತ್ತು ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕರ್ನಾಟಕ ದಲಿತ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಸೋರೆಹುಣಸೆ ವೆಂಕಟೇಶ್ ನನ್ನ ವಿರುದ್ಧ ಮಾನಹಾನಿ ಹೇಳಿಕೆ ಹಾಗೂ ಸಮಾಜದಲ್ಲಿ ಹೆಸರು ಕೆಡಿಸಲು ನನ್ನ ಮೇಲೆ ಸುಳ್ಳು ಆರೋಪ ಮಾಡಿದ್ದಾರೆ. ಅವರ ವಿರುದ್ಧ ಕಾನೂನು ಹೋರಾಟದ ಮೂಲಕ ಉತ್ತರ ನೀಡಲಾಗುವುದು. ಈ ಸುಳ್ಳು ಹೋರಾಟಕ್ಕೆ ನಾನು ಜಗ್ಗುವುದಿಲ್ಲ, ಪ್ರಾಮಾಣಿಕವಾಗಿ ಕಾನೂನು ಹೋರಾಟ ಮಾಡುತ್ತೇನೆ, ನನ್ನ ಮೇಲಿನ ಆರೋಪಗಳಲ್ಲಿ ಯಾವುದೇ ಹುರಳಿಲ್ಲ, ಯಾವುದಕ್ಕಾದರೂ ಒಂದಾದರೂ ದಾಖಲೆ ಕೊಡಿ.

- ಬೆಳತ್ತೂರು ಪರಮೇಶ್

ತಂತ್ರಜ್ಞಾನ ಆಧಾರಿತ ವಿಧಾನ ಅಸ್ತ್ರಂನ ಬಳಕೆ ಹಾಗೂ ಪ್ರಗತಿಯ ಕುರಿತು ಮಾಹಿತಿ ಸಂಗ್ರಹ

ಟ್ರಾಫಿಕ್ ಕಂಟ್ರೋಲ್ ವೀಕ್ಷಿಸಿದ ನೆದರ್ಲೆಂಡ್ ಪ್ರಧಾನಿ

ಬೆಂಗಳೂರು: ಸಂಚಾರ ನಿರ್ವಹಣೆಗಾಗಿ ತಂತ್ರಜ್ಞಾನವನ್ನು ಯಶಸ್ವಿಯಾಗಿ ಸಂಯೋಜಿಸಿರುವ ಬೆಂಗಳೂರು ಸಂಚಾರ ನಿರ್ವಹಣಾ ಕೇಂದ್ರಕ್ಕೆ ನೆದರ್ಲೆಂಡ್ ಪ್ರಧಾನಿ ಡಿಕ್ ಸ್ಕೂಫ್ ಅವರು ಶುಕ್ರವಾರ ಭೇಟಿ ನೀಡಿದರು.

ಬೆಂಗಳೂರು ನಗರದ ಸಂಚಾರ ವ್ಯವಸ್ಥೆಯನ್ನು ವಿಶ್ಲೇಷಿಸಲು ಮತ್ತು ನಿರ್ವಹಿಸಲು ತಂತ್ರಜ್ಞಾನ ಆಧಾರಿತ ವಿಧಾನವಾದ ಅಸ್ತ್ರಂ ನ ಬಳಕೆ ಹಾಗೂ ಅದರ ಪ್ರಗತಿಯ ಕುರಿತು ಸ್ಕೂಫ್ ಅವರು ಮಾಹಿತಿ ಪಡೆದರು.

ಸುರಕ್ಷಿತ ಸಂಚಾರಕ್ಕಾಗಿ ಪೊಲೀಸರು ಬಳಸುತ್ತಿರುವ ಎಐ ಕ್ಯಾಮೆರಾಗಳು, ರಿಯಲ್-ಟೈಮ್ ಟ್ರಾಫಿಕ್ ಮಾನಿಟರಿಂಗ್ ಮತ್ತು ಅಡ್ವಾನ್ಸ್ಡ್ ಸಿಗ್ನಲ್ ಸಿಸ್ಟಮ್‌ಗಳ ಬಗ್ಗೆ ಅವರಿಗೆ ಮಾಹಿತಿ ನೀಡಲಾಯಿತು. ತಂತ್ರಜ್ಞಾನದ ಮೂಲಕ ಸಂಚಾರ ವ್ಯವಸ್ಥೆ ಹೇಗೆ ಸುಧಾರಿಸಲಾಗುತ್ತಿದೆ ಎಂಬುದನ್ನು ಅವರು ವೀಕ್ಷಿಸಿದರು.

ನಗರದಲ್ಲಿನ ನಿರ್ದಿಷ್ಟ ಸ್ಥಳಗಳ ಸಂಚಾರ ದಟ್ಟಣೆ ಗುರುತಿಸಲು ಮೂರು ವಿಭಿನ್ನವಾದ ನಕ್ಷೆಗಳನ್ನು ಅಸ್ತ್ರಂ ಬಳಸುತ್ತದೆ. ಪ್ರಮುಖವಾಗಿ ಗೂಗಲ್ ನಕ್ಷೆಯ ಡೇಟಾವು, ನೈಜಸಮಯದಲ್ಲಿ ಸಂಚಾರ ದಟ್ಟಣೆಯ ಎಚ್ಚರಿಕೆಗಳನ್ನು ನೀಡುತ್ತದೆ. ನಂತರ ಪ್ರತಿ 15 ನಿಮಿಷಗಳಿಗೊಮ್ಮೆ ನಿರ್ದಿಷ್ಟ ಸಂಚಾರ ದಟ್ಟಣೆಯ ಬಿಂದುಗಳ ಬಗ್ಗೆ ನವೀಕರಿಸಲಾಗುತ್ತದೆ. ನಿರ್ದಿಷ್ಟ ಸ್ಥಳದಲ್ಲಿ ಸಂಚಾರ ದಟ್ಟಣೆಯ ಹೆಚ್ಚು ಸಮಸ್ಯಾತ್ಮಕವಾದಾಗ, ಕಾರಣಗಳನ್ನು ವಿಶ್ಲೇಷಿಸಲು ಮತ್ತು ಪರಿಹಾರ ಕಂಡುಕೊಳ್ಳಲು ಇದು ಅನುಕೂಲವಾಗುತ್ತದೆ. ಅಲ್ಲದೆ, ಸಾರ್ವಜನಿಕರು ತಮ್ಮ ಸುತ್ತಮುತ್ತಲಿನ ಸಂಚಾರ ಉಲ್ಲಂಘನೆಗಳನ್ನು ವರದಿ ಮಾಡಲು ಇದು ಅನುವು ಮಾಡಿಕೊಡಲಾಗುತ್ತದೆ.

ಅಸ್ತ್ರಂ ವ್ಯವಸ್ಥೆಯು ಪರಿಣಾಮಕಾರಿಯಾಗಿ ಬಳಕೆಯಾಗುತ್ತಿದ್ದು, ಇತರ ನಗರಗಳ ಪೊಲೀಸ್ ಇಲಾಖೆಗಳೂ ಸಹ ಇದನ್ನ ಅಳವಡಿಸಿಕೊಳ್ಳಲು ಬಯಸುತ್ತಿವೆ. ಇತ್ತೀಚೆಗೆ ಹೈದರಾಬಾದ್ ಸಹ ಈ ತಂತ್ರಜ್ಞಾನ ಬಯಸಿದ್ದು, ಅಸ್ತ್ರಂನ ಒಂದು ಸಣ್ಣ ಭಾಗವನ್ನು ತನ್ನ ಪೊಲೀಸ್ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿದೆ. ತಾಂತ್ರಿಕ ಏಕೀಕರಣದ ಬಗ್ಗೆ ತಿಳಿದುಕೊಳ್ಳಲು ದೆಹಲಿ ಪೊಲೀಸರು ಸಹ ಭೇಟಿ ನೀಡಿದ್ದರು ಎಂದು ಸಂಚಾರ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಬೆಂಗಳೂರು ಸಂಚಾರ ನಿರ್ವಹಣಾ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆದ ನೆದರ್ಲೆಂಡ್ ಪ್ರಧಾನಿ.

ನೆದರ್ಲೆಂಡ್ ಮೂಲದ ಅಸ್ತ್ರಂ

ಸಂಚಾರ ದಟ್ಟಣೆ ಸಮಸ್ಯೆ ನಿರ್ವಹಿಸಲು ರಿಯಲ್ ಟೈಮ್ ಡೇಟಾ ಮತ್ತು ಕ್ಯುರೇಟೆಡ್ ತಂತ್ರಗಳನ್ನು ಬಳಸುತ್ತಿರುವ ಅಸ್ತ್ರಂ ವ್ಯವಸ್ಥೆಯನ್ನು ನೆದರ್ಲೆಂಡ್ ಮೂಲದ ಅರ್ಕಾಡಿಸ್ ಕಂಪನಿಯ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಸಂಚಾರ ದಟ್ಟಣೆ ವಿಚಾರದಲ್ಲಿ ಜಾಗತಿಕವಾಗಿ ಕುಖ್ಯಾತಿ ಪಡೆದಿದ್ದ ಬೆಂಗಳೂರಿನಲ್ಲಿ ಡಚ್ ಕಂಪನಿಯು ಅಭಿವೃದ್ಧಿಪಡಿಸಿರುವ ತಂತ್ರಜ್ಞಾನದ ಕುರಿತು ಸ್ಕೂಫ್ ಮಾಹಿತಿ ಪಡೆದುಕೊಂಡರು.

ಸ್ಲೀಪರ್ ಬಸ್ ಸಿಬ್ಬಂದಿಗೆ ಕಿರುಕುಳ

ಬೆಂಗಳೂರು: ಹೊಸದಾಗಿ ಕಡ್ಡಾಯಗೊಳಿಸಲಾದ ಬಸ್ ಸುರಕ್ಷತಾ ನಿಯಮಗಳನ್ನು ಪಾಲಿಸಲು ಫೆ.28ರ ವರೆಗೆ ಸರಕಾರ ಗಡುವು ನೀಡಿದ್ದರೂ, ಅಧಿಕಾರಿಗಳು ಈಗಲೇ ದಂಡ ವಿಧಿಸಿ ಕಿರುಕುಳ ನೀಡುತ್ತಿದ್ದಾರೆ ಎಂದು ಖಾಸಗಿ ಬಸ್ ನಿರ್ವಾಹಕರು ಆರೋಪಿಸಿದ್ದಾರೆ.

ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ ನಟರಾಜ್ ಶರ್ಮಾ ಮಾತನಾಡಿ, ಸರಕಾರದ ನಿರ್ದೇಶನಗಳ ಬಹುತೇಕ ಅಂಶಗಳನ್ನು ಈಗಾಗಲೇ ಪಾಲಿಸಲಾಗಿದೆ. ಅಗ್ನಿ ಪತ್ತೆ ಮತ್ತು ನಿಗ್ರಹ ವ್ಯವಸ್ಥೆ ಅಳವಡಿಕೆ ಮತ್ತು ಮೇಲ್ಛಾವಣಿಯ ಸರಕು ಸಾಗಣೆ ಕ್ಯಾರಿಯರ್ ನವೀಕರಣ ಮಾತ್ರ ಬಾಕಿಯಿದ್ದು, ಈ ಕಾರ್ಯಕ್ಕೆ ಫೆ.28ರ ವರೆಗೆ ಸಮಯಾವಕಾಶ ನೀಡಲಾಗಿದೆ. ಆದರೆ ಗಡುವು ಮುಗಿಯುವ ಮುನ್ನವೇ ಸಾರಿಗೆ ಇಲಾಖೆ ಅಧಿಕಾರಿಗಳು ವಾಹನಗಳನ್ನು ತಡೆದು ದಂಡ ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಸುರಕ್ಷತಾ ನಿಯಮಗಳನ್ನು ಜಾರಿಗೆ ತರುವ ಮುನ್ನ ತಾಂತ್ರಿಕ ತಜ್ಞರು, ವಾಹನ ತಯಾರಕರು, ಬಿಲ್ಡರ್‌ಗಳು ಹಾಗೂ ಬಸ್ ಮಾಲೀಕರ ಸಂಘಟನೆಗಳನ್ನು ಒಳಗೊಂಡ ಸಂಶೋಧನಾ ಸಮಿತಿ ರಚಿಸಬೇಕಿತ್ತು. ತಾಂತ್ರಿಕ ಸಲಹೆಗಳ ಆಧಾರದಲ್ಲಿ ನಿಯಮ ರೂಪಿಸಬೇಕಿತ್ತು ಎಂದು ಒತ್ತಾಯಿಸಿದ್ದಾರೆ. ಅಲ್ಲದೆ, ಸಾರಿಗೆ ಇಲಾಖೆ ಅಧಿಕಾರಿಗಳು, ಹೊಸ ಸುರಕ್ಷತಾ ನಿಯಮಗಳು ಕಡ್ಡಾಯವಾಗಿದ್ದು, ಪಾಲನೆ ಮಾಡದ ವಾಹನಗಳ ವಿರುದ್ಧ ಪರವಾನಗಿ ಸ್ಥಗಿತ ಅಥವಾ ರದ್ದುಪಡಿಸುವ ಕ್ರಮವೂ ಕೈಗೊಳ್ಳಬಹುದು. ಪರಿಶೀಲನೆ ಪ್ರಕ್ರಿಯೆ ಹೆಚ್ಚು ಸಮಯ ತೆಗೆದುಕೊಳ್ಳುವುದರಿಂದ ಸಂಚಾಲಕರು ಅದನ್ನು ಕಿರುಕುಳವೆಂದು ಭಾವಿಸುತ್ತಿದ್ದಾರೆ ಎಂದರು.

ಸಾರಿಗೆ ಇಲಾಖೆಯ 11 ಸುರಕ್ಷತಾ ನಿರ್ದೇಶನಗಳಲ್ಲಿ, 12 ಮೀ. ಉದ್ದದವರೆಗೆ ಇರುವ ಬಸ್‌ಗಳಿಗೆ ಕನಿಷ್ಠ 4 ತುರ್ತು ನಿರ್ಗಮನ ದ್ವಾರಗಳು ಕಡ್ಡಾಯವಾಗಿದ್ದು, ಅದಕ್ಕಿಂತ ಉದ್ದದ ಬಸ್‌ಗಳಿಗೆ ಐದು ದ್ವಾರಗಳು ಇರಬೇಕು ಎಂದು ಎಐಎಸ್:119 ಮಾನ ದಂಡದಲ್ಲಿ ತಿಳಿಸಲಾಗಿದೆ. ಮೇಲ್ಛಾವಣಿಯ ಸರಕು ಸಾಗಣೆ ಕ್ಯಾರಿಯರ್ ಹಾಗೂ ಮೆಟ್ಟಿಲುಗಳನ್ನು ತೆಗೆದು ಹಾಕಬೇಕು ಮತ್ತು ಅನಧಿಕೃತ ಚ್ಯಾಸಿಸ್ ವಿಸ್ತರಣೆ ಮೂಲಕ ನಿರ್ಮಿಸಲಾದ ಬಸ್‌ಗಳನ್ನು ತಕ್ಷಣ ನಿಲ್ಲಿಸಲಾಗುತ್ತದೆ ಎಂದು ಸೂಚಿಸಲಾಗಿದೆ.

ಕೇಂದ್ರ ಬಜೆಟ್ ಕುರಿತು ವಿಶೇಷ ಸಂವಾದ | 2047ರ ವೇಳೆಗೆ ನಮ್ಮ ದೇಶ ವಿಕಸಿತ ರಾಷ್ಟ್ರ ಆಗುವುದು ಖಚಿತ

ಭಾರತಕ್ಕಿದೆ ಯುವಶಕ್ತಿಯ ಬಲ: ಪ್ರಲ್ಹಾದ್ ಜೋಶಿ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲಿ ಇಂದು ವೃದ್ಧರ ಸಂಖ್ಯೆ ಹೆಚ್ಚಾಗಿ ಕೆಲಸಕ್ಕೆ ಕೈಗಳಿಲ್ಲದೆ ಸಂಕಷ್ಟ ಎದುರಿಸುತ್ತಿದ್ದರೆ, ಭಾರತವು ಅತೀ ಹೆಚ್ಚು ಯುವಜನತೆಯನ್ನು ಹೊಂದಿರುವ ದೇಶವಾಗಿ ಮಿಂಚುತ್ತಿದೆ. ಈ ಯುವಶಕ್ತಿಗೆ ಸ್ಕಿಲ್, ಸ್ಕೇಲ್ ಮತ್ತು ಸ್ಪೀಡ್ ತರಬೇತಿ ನೀಡುವ ಮೂಲಕ 2047ರ ವೇಳೆಗೆ ಭಾರತವನ್ನು ವಿಕಸಿತ ಭಾರತವನ್ನಾಗಿ ಮಾಡುವುದು ಕೇಂದ್ರ ಬಜೆಟ್‌ನ ದೂರದೃಷ್ಟಿ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದರು.

ಶುಕ್ರವಾರ ನಗರದ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯಲ್ಲಿ '2026ರ ಕೇಂದ್ರ ಬಜೆಟ್' ಕುರಿತು ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಬಾರಿಯ ಬಜೆಟ್ ಕೇವಲ ಅಂಕಿ-ಅಂಶಗಳ ಸಂಕಲನವಲ್ಲ, ಬದಲಾಗಿ ಮುಂದಿನ 25 ವರ್ಷಗಳ ಭಾರತದ ಭವಿಷ್ಯದ ನಕಾಶೆಯಾಗಿದೆ. ಮೋದಿ ಸರಕಾರ ಅಧಿಕಾರಕ್ಕೆ ಬಂದ ಮೇಲೆ ದೇಶದ ಆರ್ಥಿಕ ಶಕ್ತಿ 1 ಟ್ರಿಲಿಯನ್‌ನಿಂದ 4 ಟ್ರಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಮುಂದಿನ ಐದು ವರ್ಷಗಳಲ್ಲಿ ಇದು 6 ಟ್ರಿಲಿಯನ್ ತಲುಪಲಿದ್ದು, ಭಾರತವು ಶೀಘ್ರದಲ್ಲೇ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿದೆ ಎಂದರು. ಕಾಂಗ್ರೆಸ್ ಅವಧಿಯಲ್ಲಿ ಕೇವಲ ಒಂದು ಟ್ರಿಲಿಯನ್ ಇದ್ದ ಆರ್ಥಿಕ ಶಕ್ತಿ, ಇಂದು ನಾಲ್ಕು ಟ್ರಿಲಿಯನ್ ತಲುಪಿದೆ. ಮುಂದಿನ ಐದು ವರ್ಷಗಳಲ್ಲಿ ಇದು ಆರು ಟ್ರಿಲಿಯನ್ ಡಾಲರ್ ತಲುಪುವ ಮೂಲಕ ಅಮೆರಿಕ ಮತ್ತು ಚೀನಾದಂತಹ ರಾಷ್ಟ್ರಗಳಿಗೆ ಸ್ಪರ್ಧೆ ನೀಡಲಿದೆ ಎಂದರು.

12 ಲಕ್ಷ ಕೋಟಿ ಹೂಡಿಕೆ: ದೇಶದ ಅಭಿವೃದ್ಧಿಗಾಗಿ ರಸ್ತೆ, ವಾಯು, ಜಲ ಹಾಗೂ ಮೆಟ್ರೋ ಸಾರಿಗೆ ಸೇರಿದಂತೆ ಮೂಲಸೌಕರ್ಯ ವಲಯಕ್ಕೆ 12 ಲಕ್ಷ ಕೋಟಿ ರೂಪಾಯಿ ಹೂಡಿಕೆ ಮಾಡಲಾಗುತ್ತಿದೆ. ಎಲೆಕ್ಟ್ರಾನಿಕ್ ಉತ್ಪಾದನೆ, ಕೃತಕ ಬುದ್ಧಿಮತ್ತೆ (ಎಐ), ಬಯೋ ಫಾರ್ಮಾ ಹಾಗೂ ಗ್ರೀನ್ ಹೈಡ್ರೋಜನ್ ತಂತ್ರಜ್ಞಾನಕ್ಕೆ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಇದೇ ಮೊದಲ ಬಾರಿಗೆ ಭಾರತವು ರಕ್ಷಣಾ ಉಪಕರಣಗಳ ರಫ್ತಿನಲ್ಲಿ ಹೊಸ ದಾಖಲೆ ಬರೆಯುತ್ತಿದೆ ಎಂದು ಜೋಶಿ ವಿವರಿಸಿದರು.

ಕಲಬುರಗಿ ಏರ್ಪೋರ್ಟ್ ಪುನರ್ ಆರಂಭಿಸಬೇಕು. ಕಲಬುರಗಿ ರೈಲ್ವೆ ವಿಭಾಗೀಯ ಕೇಂದ್ರ ಅನುಷ್ಠಾನಗೊಳಿಸಬೇಕು. ಶೀಘ್ರ ಜವಳಿ ಪಾರ್ಕ್ ಕಾರ್ಯರೂಪಕ್ಕೆ ತರಬೇಕು. ಇದಲ್ಲದೇ, ಯಾದಗಿರಿ, ರಾಯಚೂರಿನಂತೆ ಕಲಬುರಗಿ ಜಿಲ್ಲೆಯನ್ನು ಮಹಾತ್ವಾಕಾಂಕ್ಷಿ ಜಿಲ್ಲೆಯೆಂದು ಘೋಷಣೆ ಮಾಡಬೇಕು. ಸೋಲಾರ್ ಇಂಡಸ್ಟ್ರಿ ಕಾರಿಡಾರ್ ಪ್ರಾರಂಭಿಸಬೇಕು.

-ಶಿವರಾಜ್ ಇಂಗಿನಶೆಟ್ಟಿ, ಗೌರವ ಕಾರ್ಯದರ್ಶಿ, ಕೆಕೆಸಿಸಿಐ

ಕಲ್ಯಾಣ ಅಭಿವೃದ್ಧಿಯೇ ನಾಡಿನ ಶಕ್ತಿ: ಜಿಲ್ಲೆಯ ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಪೂರಕವಾಗಿ ಕಲಬುರಗಿಯಲ್ಲಿ ಮೆಗಾ ಟೆಕ್ಸ್ಟೈಲ್ ಪಾರ್ಕ್ ಸ್ಥಾಪಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಈ ಕುರಿತು ಈಗಾಗಲೇ ಸಂಬಂಧಪಟ್ಟ ಕೇಂದ್ರ ಸಚಿವರೊಂದಿಗೆ ಪ್ರಾಥಮಿಕ ಚರ್ಚೆ ನಡೆಸಲಾಗಿದೆ. ರಾಜ್ಯ ಸರಕಾರವು ಪಾರ್ಕ್ ಸ್ಥಾಪನೆಗೆ ಬೇಕಾದ ಅಗತ್ಯ ಭೂಮಿ ಹಾಗೂ ಮೂಲಸೌಕರ್ಯಗಳನ್ನು ಒದಗಿಸಿದರೆ, ಶೀಘ್ರವೇ ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಕಲ್ಯಾಣ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯಿಲ್ಲದೆ ವಿಕಸಿತ ಭಾರತದ ಕಲ್ಪನೆ ಪೂರ್ಣಗೊಳ್ಳಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯಲ್ಲಿ ಸಂಸ್ಥೆಯ ಅಧ್ಯಕ್ಷ ಶರಣಬಸಪ್ಪ ಪಪ್ಪಾ ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯ ಸಮಗ್ರ ಪ್ರಗತಿಗೆ ಕೇಂದ್ರ ಸರಕಾರ ವಿಶೇಷ ಆದ್ಯತೆ ನೀಡಬೇಕು. ಹುಬ್ಬಳ್ಳಿ-ಧಾರವಾಡ ಮಾದರಿಯಲ್ಲಿ ಕಲಬುರಗಿಯನ್ನೂ ಅಭಿವೃದ್ಧಿಪಡಿಸಿ, ವಿಶೇಷ ಅನುದಾನ ನೀಡುವ ಮೂಲಕ ಈ ಭಾಗದ ಏಳಿಗೆ ಮಾಡಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರಿಗೆ ಮನವಿ ಮಾಡಿದರು.

ಮೂರು ತಿಂಗಳಿನಲ್ಲಿ ವಿಮಾನಯಾನ

ತಾಂತ್ರಿಕ ಕಾರಣಗಳಿಂದ ಸ್ಥಗಿತಗೊಂಡಿರುವ ಕಲಬುರಗಿ ವಿಮಾನ ನಿಲ್ದಾಣದ ವಿಮಾನ ಹಾರಾಟವನ್ನು ಪುನರಾರಂಭಿಸಲು ವಿಮಾನಯಾನ ಸಚಿವರೊಂದಿಗೆ ಮಾತುಕತೆ ನಡೆಸಿದ್ದೇನೆ. ಮುಂದಿನ 3ರಿಂದ 4 ತಿಂಗಳಲ್ಲಿ ವಿಮಾನಗಳ ಸಂಚಾರ ಮರುಪ್ರಾರಂಭವಾಗಲಿದ್ದು, ಈ ಭಾಗದ ಪ್ರಯಾಣಿಕರ ಸಮಸ್ಯೆಗೆ ಮುಕ್ತಿ ಸಿಗಲಿದೆ ಎಂದು ಜೋಶಿ ವಿಶ್ವಾಸ ವ್ಯಕ್ತಪಡಿಸಿದರು.

ಸಮಾಚಾರ ಸಣ್ಣದಲ್ಲ

ಕಾರ್ಯಾಚರಣೆ ವೇಳೆ ಅರ್ಜುನ ಆನೆ ನಾಪತ್ತೆ

ಚಿಕ್ಕಮಗಳೂರು: ತಾಲೂಕಿನ ಪುರ ಗ್ರಾಮಕ್ಕೆ ನರ ಹಂತಕ ಕಾಡಾನೆಯನ್ನು ಸೆರೆಹಿಡಿಯಲು ಬಂದಿದ್ದ ಸಾಕಾನೆ ಜ್ಯೂನಿಯರ್ ಅರ್ಜುನ ಭಯದಿಂದ ಕಾಡು ಸೇರಿದ ಘಟನೆ ನಡೆದಿದೆ. ಮದವೇರಿದ

ಕಾಡಾನೆ ಜತೆ ಕಾದಾಟದಲ್ಲಿ ಜ್ಯೂನಿಯರ್ ಅರ್ಜುನ ಹೆದರಿ ಕಾಡು ಸೇರಿದ್ದ. ಸುಮಾರು ಒಂದು ಗಂಟೆಗಳ ಕಾಲ ಸಾಕಾನೆ ಹುಡುಕುತ್ತಾ ಅರಣ್ಯ ಇಲಾಖೆ ಅಧಿಕಾರಿಗಳು ಹೈರಾಣಾಗಿದ್ದರು. ಒಂದು ಗಂಟೆ ಬಳಿಕ ಕಾಡಲ್ಲಿ ಸಾಕಾನೆ ಪತ್ತೆಯಾಗಿದೆ. ಫೆ.16 ರಂದು ಒಬ್ಬ ಕಾರ್ಮಿಕನನ್ನು ಕಾಡಾನೆ ತುಳಿದು ಕೊಂದು ಹಾಕಿತ್ತು. ಆ ಕಾಡಾನೆ ಸೆರೆಗೆ ಸರಕಾರ ಆದೇಶಿಸಿದೆ. ಗುಂಪಿನಲ್ಲಿ ಮೂರು ಕಾಡಾನೆಗಳಿದ್ದು ಅದರಲ್ಲಿ ಒಂದು ಕಾಡಾನೆಯನ್ನ ಸೆರೆ ಹಿಡಿದು, ಉಳಿದ ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಸಲು ಸೂಚನೆ ನೀಡಲಾಗಿದೆ. ಸರಕಾರದ ಸೂಚನೆಯಂತೆ 7 ಕುಮ್ಕಿ ಆನೆಗಳನ್ನು ಬಳಕೆ ಮಾಡಿಕೊಂಡು ಕಾಡಾನೆ ಸೆರೆ ಹಿಡಿಯಲು ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಕಾಡಾನೆ ದಾಳಿಗೆ ಯಲ್ಲಪ್ಪ ಎಂಬ ಕಾರ್ಮಿಕ ಬಲಿಯಾಗಿದ್ದರು. ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಕಾಡಾನೆ ಸೆರೆಹಿಡಿಯುವಂತೆ ಬಾಳೆಹೊನ್ನೂರು ಅರಣ್ಯ ಇಲಾಖೆ ಕಚೇರಿ ಮುಂದೆ ಪ್ರತಿಭಟಿಸಿದ್ದರು.

ಜೇನ್ನೊಣಗಳ ದಾಳಿ: ಕ್ರಿಕೆಟ್ ಅಂಪೈರ್ ಸಾವು

ಲಖನೌ: ಉತ್ತರ ಪ್ರದೇಶದ ಉನ್ನಾವೊದ ಸಪ್ರು ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯದ ವೇಳೆ ಜೇನು ದಾಳಿಯಿಂದ ಅನುಭವಿ ಕ್ರಿಕೆಟ್ ಅಂಪೈರ್ ಮಾಣಿಕ್ ಗುಪ್ತಾ ಸಾವನ್ನಪ್ಪಿದ್ದಾರೆ. ಮಾಣಿಕ್ ಕಾನ್ಪುರ ಕ್ರಿಕೆಟ್ ಸರ್ಕ್ಯೂಟ್‌ನಲ್ಲಿ ಗಣ್ಯ ಅಂಪೈರ್ ಆಗಿದ್ದರು. ಕಾನ್ಪುರ ಕ್ರಿಕೆಟ್ ಅಸೋಸಿಯೇಷನ್‌ನೊಂದಿಗೆ ಸಹ ಸಂಬಂಧ ಹೊಂದಿದ್ದರು. ಪಂದ್ಯ ಮುಗಿಸಿದ ನಂತರ, ಮಾಣಿಕ್ ಪಾನೀಯ ವಿರಾಮದ ಸಮಯದಲ್ಲಿ ಸಹ ಅಂಪೈರ್ ಅವರನ್ನು ಭೇಟಿ ಮಾಡಲು ಹೋದಾಗ, ಜೇನು ಹಿಂಡು ಇದ್ದಕ್ಕಿದ್ದಂತೆ ಅಲ್ಲಿದ್ದ ಎಲ್ಲರ ಮೇಲೆ ದಾಳಿ ಮಾಡಿತು. ತಪ್ಪಿಸಿಕೊಳ್ಳಲು ಪ್ರಯತ್ನಿಸುವಾಗ, ಮಾಣಿಕ್ ಆಯತಪ್ಪಿ ಬಿದ್ದರು, ಅವರಿಗೆ ಜೇನು ಮುತ್ತಿಕೊಂಡು ಕಚ್ಚಿವೆ. ಮಾಣಿಕ್ ಸುಮಾರು 30 ವರ್ಷಗಳಿಂದ ಅಂಪೈರ್ ಆಗಿದ್ದರು. ರಾಜ್ಯ ಸಮಿತಿಯ ಅಂಪೈರ್ ಕೂಡ ಆಗಿದ್ದರು. ಅಂಪೈರ್ ಮಾಣಿಕ್ ಗುಪ್ತಾ ಅವರ ನೆರೆಯ ಭರತೇಂದು ಪುರಿ, ಮಾಣಿಕ್ ಗುಪ್ತಾ ತಮ್ಮ ಇಡೀ ಜೀವನವನ್ನು ಅಂಪೈರಿಂಗ್ ಮತ್ತು ಕುಟುಂಬಕ್ಕಾಗಿ ಮುಡಿಪಾಗಿಟ್ಟರು ಎಂದು ನೆನಪಿಸಿಕೊಂಡಿದ್ದಾರೆ. ಅವರು ಕ್ರಿಕೆಟ್‌ಗೆ ಸಂಪೂರ್ಣವಾಗಿ ಸಮರ್ಪಿತರಾಗಿದ್ದರು. ಈ ಘಟನೆ ದುರದೃಷ್ಟಕರ ಎಂದಿದ್ದಾರೆ.

ಖಾಸಗಿ ಫೈನಾನ್ಸ್ ವಿರುದ್ಧ ಪ್ರತಿಭಟನೆ | ರೈತನಿಗೆ ಸಂಘಟನೆಗಳ ಬೆಂಬಲ

1 ಕಂತು ಬಾಕಿ: ಕೇವಲ 1.46 ಲಕ್ಷ ರು.ಗೆ ಟ್ರ್ಯಾಕ್ಟರ್ ಹರಾಜು

ಶಿವಮೊಗ್ಗ: ಸಾಲದ ಸುಳಿಗೆ ಸಿಲುಕಿ ರೈತರು ಕಂಗಾಲಾಗುತ್ತಿರುವ ಬೆನ್ನಲ್ಲೇ, ಖಾಸಗಿ ಫೈನಾನ್ಸ್ ಕಂಪನಿಗಳ ದರ್ಪಕ್ಕೆ ಮತ್ತೊಬ್ಬ ಅನ್ನದಾತ ಬಲಿಯಾಗಿರುವ ಘಟನೆ ಶಿವಮೊಗ್ಗದಲ್ಲಿ ನಡೆದಿದೆ. ಕೇವಲ ಒಂದು ಕಂತಿನ ಹಣ ಪಾವತಿಸಿಲ್ಲ ಎಂಬ ಕಾರಣಕ್ಕೆ ರೈತನಿಗೆ ಯಾವುದೇ ಮುನ್ಸೂಚನೆ ನೀಡದೆ ಲಕ್ಷಾಂತರ ರುಪಾಯಿ ಮೌಲ್ಯದ ಟ್ರ್ಯಾಕ್ಟರ್ ಜಪ್ತಿ ಮಾಡಿ, ಅದನ್ನು ಅತ್ಯಂತ ಕಡಿಮೆ ಬೆಲೆಗೆ ಹರಾಜು ಹಾಕಿರುವ 'ಚೋಳ ಫೈನಾನ್ಸ್' ವಿರುದ್ಧ ಆಕ್ರೋಶ ಭುಗಿಲೆದ್ದಿದೆ.

ಶಿವಮೊಗ್ಗದ ಹೊಳೆ ಸ್ಟಾಪ್ ಬಳಿ ಇರುವ ಚೋಳ ಫೈನಾನ್ಸ್ ಶಾಖೆಯಲ್ಲಿ ರೈತ ಶ್ರೀನಿವಾಸ್ ಅವರು ಕೃಷಿ ಚಟುವಟಿಕೆಗಾಗಿ ಟ್ರ್ಯಾಕ್ಟರ್ ಖರೀದಿಸಲು 6 ಲಕ್ಷ ರು. ಸಾಲ ಪಡೆದಿದ್ದರು. ಕಷ್ಟಪಟ್ಟು ಕಂತುಗಳನ್ನು ಪಾವತಿಸುತ್ತಿದ್ದ ಶ್ರೀನಿವಾಸ್, ಅನಿವಾರ್ಯ ಕಾರಣಗಳಿಂದ ಕೇವಲ ಒಂದು ತಿಂಗಳ ಕಂತನ್ನು ಪಾವತಿಸಲು ಸಾಧ್ಯವಾಗಿರಲಿಲ್ಲ. ಇದನ್ನೇ ನೆಪವಾಗಿಸಿಕೊಂಡ ಫೈನಾನ್ಸ್ ಕಂಪನಿಯ ಸಿಬ್ಬಂದಿ, ರೈತನಿಗೆ ಯಾವುದೇ ನೋಟಿಸ್ ನೀಡದೆ ಹಠಾತ್ತನೆ ಟ್ರ್ಯಾಕ್ಟರ್ ಅನ್ನು ಜಪ್ತಿ ಮಾಡಿದ್ದರು.

ರೈತನಿಗೆ ಡಿಎಸ್‌ಎಸ್ ಬೆಂಬಲ: ರೈತ ಶ್ರೀನಿವಾಸ್ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಅವರಿಗೆ ಅನ್ಯಾಯವಾಗಿರುವುದನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿ (ದಸಂಸ) ಮೈದಾನಕ್ಕಿಳಿದಿದೆ. ದಸಂಸ ಮುಖಂಡ ಹರಮಘಟ್ಟ ರಂಗಪ್ಪ ಅವರ ನೇತೃತ್ವದಲ್ಲಿ ಫೈನಾನ್ಸ್ ಕಚೇರಿ ಮುಂದೆ ಭಾರಿ ಪ್ರತಿಭಟನೆ ನಡೆಸಲಾಯಿತು. ಫೈನಾನ್ಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ರಂಗಪ್ಪ ಅವರು, ಬಡ ರೈತರ ಮೇಲೆ ಸವಾರಿ ಮಾಡುವುದನ್ನು ನಿಲ್ಲಿಸಿ. ಲಕ್ಷಾಂತರ ರು. ಮೌಲ್ಯದ ಟ್ರ್ಯಾಕ್ಟರ್ ಅನ್ನು ಕಾನೂನು ಬಾಹಿರವಾಗಿ ಜಪ್ತಿ ಮಾಡಿ, ಅತಿ ಕಡಿಮೆ ಬೆಲೆಗೆ ಹರಾಜು ಹಾಕಿರುವುದು ದಗಾಕೋರತನ ಎಂದು ಕಿಡಿಕಾರಿದರು.

ವಿಷಯ ತಿಳಿದ ರೈತ ಕಂಗಾಲು

ಜಪ್ತಿ ಮಾಡಿದ ನಂತರ ಸಾಲ ತೀರಿಸಲು ರೈತ ಮುಂದಾದಾಗ ಫೈನಾನ್ಸ್ ಕಂಪನಿ ಅಘಾತಕಾರಿ ವಿಷಯವೊಂದನ್ನು ತಿಳಿಸಿದೆ. ಆರು ಲಕ್ಷ ರೂಪಾಯಿ ಸಾಲದ ಮೇಲೆ ಖರೀದಿಸಿದ್ದ ಟ್ರ್ಯಾಕ್ಟರ್ ಅನ್ನು ಆನ್‌ಲೈನ್ ಬಿಡ್ಡಿಂಗ್ ಮೂಲಕ ಕೇವಲ 1 ಲಕ್ಷದ 46 ಸಾವಿರ ರು. ಮಾರಾಟ ಮಾಡಿದ್ದೇವೆ ಎಂದು ಕಂಪನಿ ಹೇಳಿದೆ. ಈ ವಿಚಾರ ತಿಳಿಯುತ್ತಿದ್ದಂತೆ ರೈತ ಶ್ರೀನಿವಾಸ್ ಕಂಗಾಲಾಗಿದ್ದಾರೆ.

ಈ ಸಲ ವಾಡಿಕೆಗಿಂತ ಹೆಚ್ಚು ತಾಪಮಾನ?

ಬೆಂಗಳೂರು: ರಾಜ್ಯದಲ್ಲಿ ತಾಪಮಾನ ಹೆಚ್ಚಾಗಿದ್ದು, ಮಾರ್ಚ್‌ನಿಂದ ಮೇ ತಿಂಗಳವರೆಗೆ ರಾಜ್ಯದಲ್ಲಿ ಬಿಸಿಲಿನ ಬೇಗೆ ಮತ್ತಷ್ಟು ಹೆಚ್ಚಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಮಾರ್ಚ್ 2026ರಿಂದ ಮೇ ಅವಧಿಯಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ಗರಿಷ್ಠ ಮತ್ತು ಕನಿಷ್ಠ ತಾಪಮಾನ ಸಾಮಾನ್ಯಕ್ಕಿಂತ ಹೆಚ್ಚಾಗಲಿದ್ದು, ಕೇರಳ ಮತ್ತು ತಮಿಳುನಾಡು ಹೊರತುಪಡಿಸಿ ಇತರೆ ಪ್ರದೇಶಗಳಲ್ಲಿ ವಾಡಿಕೆಗಿಂತಲೂ ಬಿಸಲು ಹೆಚ್ಚಾಗುವ ಸಾಧ್ಯತೆ ಇದೆ. ಉತ್ತರ ಒಳನಾಡು ಕರ್ನಾಟಕದ ಬಹುತೇಕ ಭಾಗಗಳಿಗೆ ಮಾರ್ಚ್ –ಮೇ ಅವಧಿಯಲ್ಲಿ ಉಷ್ಣ ಅಲೆ ತೀವ್ರಗೊಳ್ಳುವ ಸಾಧ್ಯತೆಯಿದ್ದು, ರೆಡ್ ಅಲರ್ಟ್ ಘೋಷಿಸಿದೆ. ಪ್ರಸ್ತುತ ಹೆಚ್ಚಾಗಿರುವ ತಾಪಮಾನವು 3 ರಿಂದ 6 ದಿನಗಳವರೆಗೆ ಮುಂದುವರಿ ಯುವ ಸಾಧ್ಯತೆ ಇದ್ದು, ನಂತರ ಕಡಿಮೆಯಾಗುವ ಸಾಧ್ಯತೆಗಳಿವೆ ಎಂದು ತಿಳಿಸಿದೆ. ಈ ನಡುವೆ ಕರಾವಳಿ ಮತ್ತು ಉತ್ತರ ಒಳನಾಡು ಕರ್ನಾಟಕದ ಬಹುತೇಕ ಭಾಗಗಳಲ್ಲಿ ಕನಿಷ್ಠ ತಾಪಮಾನವೂ ಸಾಮಾನ್ಯಕ್ಕಿಂತ ಹೆಚ್ಚಾಗುವ ಸಾಧ್ಯತೆ ಇದೆ. ಮಾರ್ಚ್‌ನಿಂದ ಮೇವರೆಗೆ ಸಂಪೂರ್ಣ ಕರ್ನಾಟಕದಲ್ಲಿ ಗರಿಷ್ಠ ತಾಪಮಾನ ಸಾಮಾನ್ಯಕ್ಕಿಂತ ಹೆಚ್ಚು ಇರುವ ಸಾಧ್ಯತೆ ಇದೆ. ಕರಾವಳಿ ಕರ್ನಾಟಕದಲ್ಲಿ ಗರಿಷ್ಠ ತಾಪಮಾನ ಶೇ.65 ರಿಂದ 75 ರಷ್ಟು ಹೆಚ್ಚಾಗುವ ಸಾಧ್ಯತೆಯಿದೆ. ಈ ನಡುವೆ ಹವಾಮಾನ ತಜ್ಞರು ಫೆಬ್ರವರಿಯಲ್ಲೇ ಉಷ್ಣತೆ ಏರಿಕೆಯಾಗುತ್ತಿರುವುದನ್ನು ಗಮನಿಸಿದ್ದು, ಮುಂದಿನ ತಿಂಗಳುಗಳಲ್ಲಿ ಇದು ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ನಾಗರಿಕರು ಈ ಅವಧಿಯಲ್ಲಿ ಎಚ್ಚರಿಕೆಯಿಂದ ಇರಬೇಕು ಎಂದು ಇಲಾಖೆ ಸಲಹೆ ನೀಡಿದೆ.



- **ಕರಾವಳಿಯಲ್ಲಿ ಗರಿಷ್ಠ ತಾಪಮಾನ ಶೇ 65ರಿಂದ 75 ಹೆಚ್ಚಳ ಸಾಧ್ಯತೆ**
- **ರಾಜ್ಯದ ಬಹುತೇಕ ಭಾಗಗಳಲ್ಲಿ ಮಾರ್ಚ್, ಮೇ ವೇಳೆ ಉಷ್ಣಅಲೆ ತೀವ್ರ ಸಾಧ್ಯತೆ**
- **ಈ ಅವಧಿಯಲ್ಲಿ ಎಚ್ಚರಿಕೆಯಿಂದ ಇರಲು ಹವಾಮಾನ ಇಲಾಖೆ ಸಲಹೆ**

ಕರ್ನಾಟಕ ಸೇರಿ ಮತದಾರರ ಪಟ್ಟಿ ಪರಿಷ್ಕರಣೆಗೆ ಆಯೋಗ ಸಿದ್ಧತೆ

23 ರಾಜ್ಯಗಳಲ್ಲಿ ಏಪ್ರಿಲ್‌ನಿಂದ ಎಸ್‌ಐಆರ್?

ದೆಹಲಿ: ಭಾರತೀಯ ಚುನಾವಣಾ ಆಯೋಗವು ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಸೇರಿದಂತೆ ಹಲವಾರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಪತ್ರ ಬರೆದಿದ್ದು, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಏಪ್ರಿಲ್ 2026ರಲ್ಲಿ ಪ್ರಾರಂಭವಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ. ಹೀಗಾಗಿ, ಎಸ್‌ಐಆರ್‌ಗೆ ಸಂಬಂಧಿಸಿದ ಎಲ್ಲಾ ಸಿದ್ಧತೆಗಳನ್ನು ಸಾಧ್ಯವಾದಷ್ಟು ಬೇಗ ಪೂರ್ಣಗೊಳಿಸಬೇಕೆಂದು ಚುನಾವಣಾ ಸಂಸ್ಥೆ ನಿರ್ದೇಶನ ನೀಡಿದೆ.

ಈ ಕೆಳಗಿನ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ವರ್ಷ ಏಪ್ರಿಲ್ ತಿಂಗಳಿನಿಂದ ಎಸ್‌ಐಆರ್ ಪ್ರಾರಂಭವಾಗುವ ನಿರೀಕ್ಷೆಯಿದೆ. ಅವುಗಳೆಂದರೆ, ಕರ್ನಾಟಕ, ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ಚಂಡೀಗಢ, ದಾದ್ರಾ ಮತ್ತು ನಗರ ಹವೇಲಿ, ದಾಮನ್ ಮತ್ತು ಡಿಯು, ಜಾರ್ಖಂಡ್, ಲಡಾಖ್, ಮಹಾರಾಷ್ಟ್ರ, ಮಣಿಪುರ, ಮೇಘಾಲಯ, ಮಿಜೋರಾಮ್, ಉತ್ತರಾಖಂಡ, ನಾಗಾಲ್ಯಾಂಡ್, ದೆಹಲಿ-ಎನ್‌ಸಿಆರ್, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರ, ತೆಲಂಗಾಣ, ಹರ್ಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ಚುನಾವಣಾ ಆಯೋಗವು 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯ ಎರಡನೇ ಹಂತವನ್ನು ಕೈಗೊಳ್ಳುವುದಾಗಿ ಘೋಷಿಸಿತ್ತು. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಛತ್ತೀಸ್‌ಗಢ, ಗೋವಾ, ಗುಜರಾತ್, ಕೇರಳ, ಲಕ್ಷದ್ವೀಪ, ಮಧ್ಯಪ್ರದೇಶ, ಪುದುಚೇರಿ, ರಾಜಸ್ಥಾನ, ತಮಿಳುನಾಡು, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಕಳೆದ ವರ್ಷ ಎಸ್‌ಐಆರ್ ನಡೆಸಲಾಗಿತ್ತು.

ಚುನಾವಣಾ ಸಂಸ್ಥೆಯ ಪ್ರಕಾರ, ಕೊನೆಯ ಎಸ್‌ಐಆರ್ ಅನ್ನು 21 ವರ್ಷಗಳ ಹಿಂದೆ 2001–2004ರ ನಡುವೆ ನಡೆಸಲಾಗಿತ್ತು. ಆಗಾಗ ವಲಸೆ, ಡಬಲ್ ಮತದಾರರ ಗುರುತಿನ ಚೀಟಿಗಳು, ಮೃತಪಟ್ಟ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕದಿರುವುದು ಮತ್ತು ವಿದೇಶಿಯರನ್ನು ತಪ್ಪಾಗಿ ಪಟ್ಟಿಗೆ ಸೇರಿಸಿಕೊಳ್ಳುವುದನ್ನು ತಡೆಗಟ್ಟಲು ಎಸ್‌ಐಆರ್ ಪ್ರಕ್ರಿಯೆ ಅಗತ್ಯ ಎಂದು ಚುನಾವಣಾ ಆಯೋಗ ಹೇಳಿದೆ.

ಎಸ್‌ಐಆರ್‌ಗೆ ಒಳಗಾಗುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮತದಾರರ ಪಟ್ಟಿಯನ್ನು ಸ್ಥಗಿತಗೊಳಿಸಲಾಗುತ್ತದೆ. ಅಧಿಕಾರಿಗಳು (ಪ್ರತಿ ವಿಧಾನಸಭಾ ಮತ್ತು ಸಂಸದೀಯ ಕ್ಷೇತ್ರಗಳಿಗೆ ಮತದಾರರ ಪಟ್ಟಿಯನ್ನು ತಯಾರಿಸಲು ಮತ್ತು ಪರಿಷ್ಕರಿಸಲು ಆಯೋಗದಿಂದ ನೇಮಿಸಲ್ಪಟ್ಟ ಅಧಿಕಾರಿಗಳು) ಈ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಪ್ರತಿಯೊಬ್ಬ ನೋಂದಾಯಿತ ಮತದಾರರಿಗೆ ವಿಶಿಷ್ಟ ಎಣಿಕೆ ನಮೂನೆಗಳನ್ನು ಮುದ್ರಿಸುತ್ತಾರೆ. ಎಣಿಕೆ ನಮೂನೆಗಳನ್ನು ಹೆಚ್ಚಾಗಿ ಹೆಸರು, ಮತಗಟ್ಟೆ, ಕ್ಷೇತ್ರ ಮತ್ತು ಹಳೆಯ ಫೋಟೋ ಸೇರಿದಂತೆ ಮೊದಲೇ ಭರ್ತಿ ಮಾಡಲಾಗುತ್ತದೆ. ಬೂತ್ ಮಟ್ಟದ ಅಧಿಕಾರಿಗಳು ಈ ಪ್ರಕ್ರಿಯೆಯನ್ನು ನಡೆಸಲು ಪ್ರತಿ ಮನೆಗೆ 3 ಬಾರಿ ಭೇಟಿ ನೀಡುತ್ತಾರೆ. ಅವರು ಸೇರ್ಪಡೆಗಾಗಿ ಹೊಸ ಮತದಾರರಿಂದ ಫಾರ್ಮ್ 6 ಮತ್ತು ಘೋಷಣೆ ನಮೂನೆಗಳನ್ನು ಸಂಗ್ರಹಿಸುತ್ತಾರೆ. ಮತದಾರರು ಎಣಿಕೆ ನಮೂನೆಗಳನ್ನು ಭರ್ತಿ ಮಾಡಲು ಸಹಾಯ ಮಾಡುತ್ತಾರೆ. ಅದನ್ನು ಅಧಿಕಾರಿಗಳಿಗೆ ಸಲ್ಲಿಸುತ್ತಾರೆ. ಅವರು ಅಸ್ತಿತ್ವದಲ್ಲಿರುವ ಪ್ರತಿಯೊಬ್ಬ ಮತದಾರರಿಗೆ ನಮೂನೆಗಳನ್ನು ವಿತರಿಸುವುದು ಮತ್ತು 2002–2004ರಲ್ಲಿ ನಡೆದ ಕೊನೆಯ ಎಸ್‌ಐಆರ್‌ನಲ್ಲಿ ತಮ್ಮ ಹೆಸರು ಅಥವಾ ಅವರ ಸಂಬಂಧಿಕರ ಹೆಸರಿನೊಂದಿಗೆ ಲಿಂಕ್ ಮಾಡಲು ಮತದಾರರಿಗೆ ಸಹಾಯ ಮಾಡುವಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಕೊರಗ ಸಮುದಾಯದ ಮನೆಯಲ್ಲಿ ಶಾಸಕ ಗಂಟಿಹೊಳೆ ಗ್ರಾಮ ವಾಸ್ತವ್ಯ

ಬೈಂದೂರು: ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕ ಗುರುರಾಜ ಗಂಟಿಹೊಳೆ ಅವರು ಅತ್ಯಂತ ಹಿಂದುಳಿದ ಕೊರಗ ಸಮುದಾಯದ ಮನೆಯಲ್ಲಿ ರಾತ್ರಿ ತಂಗುವ ಮೂಲಕ ಅರ್ಥಪೂರ್ಣ ಗ್ರಾಮ ವಾಸ್ತವ್ಯ ನಡೆಸಿದ್ದಾರೆ.

ಆಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹರ್ಕೂರು ಗ್ರಾಮದ ಮದುಕೊಡ್ಲು ಎಂಬಲ್ಲಿನ ಕೊರಗ ಸಮುದಾಯದ ಸುರೇಂದ್ರ ಎಂಬುವವರ ಮನೆಯಲ್ಲಿ ಶಾಸಕರು ವಾಸ್ತವ್ಯ ಹೂಡಿದ್ದರು. ಮನೆಯವರ ಜತೆ ಕುಳಿತು ಆತ್ಮೀಯವಾಗಿ ಭೋಜನ ಸವಿದ ಅವರು, ಸಾಮಾನ್ಯರಲ್ಲಿ ಸಾಮಾನ್ಯರಂತೆ ರಾತ್ರಿ ವಿಶ್ರಾಂತಿ ಪಡೆದರು. ಈ ಸಂದರ್ಭದಲ್ಲಿ ಮಹಿಳೆಯರಿಗೆ ಬಾಗಿನ ನೀಡಿ ಗೌರವ ಸಲ್ಲಿಸಿದ್ದು ವಿಶೇಷವಾಗಿತ್ತು.

ಗ್ರಾಮ ವಾಸ್ತವ್ಯದ ಸಂದರ್ಭದಲ್ಲಿ ಬೈಂದೂರು ಮಂಡಲ ಅಧ್ಯಕ್ಷೆ ಅನಿತಾ ಆರ್.ಕೆ., ತಾ.ಪಂ. ಮಾಜಿ ಅಧ್ಯಕ್ಷೆ ಇಂದಿರಾ ಶೆಟ್ಟಿ, ಪಂಚಾಯಿತಿ ಸದಸ್ಯರಾದ ಸುಬ್ಬಣ್ಣ ಶೆಟ್ಟಿ, ಪ್ರಸನ್ನ ಶೆಟ್ಟಿ ಹರ್ಕೂರು ಹಾಗೂ ಸಮುದಾಯದ ಪ್ರಮುಖರು ಉಪಸ್ಥಿತರಿದ್ದರು. ಶಾಸಕರ ಈ ಸರಳ ನಡೆ ಮತ್ತು ಶೋಷಿತ ಸಮುದಾಯದವರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನಕ್ಕೆ ಕ್ಷೇತ್ರದಾದ್ಯಂತ ಸಾರ್ವಜನಿಕರಿಂದ ಭಾರೀ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಶಾಸಕ ಗುರುರಾಜ ಗಂಟಿಹೊಳೆ ಅವರು ಹರ್ಕೂರು ಗ್ರಾಮದ ಹಿಂದುಳಿದ ಕೊರಗ ಸಮುದಾಯದವರ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು.

ಸ್ಥಳೀಯರ ಸಮಸ್ಯೆಗಳ ಆಲಿಕೆ

ಬರಿ ವಾಸ್ತವ್ಯಕ್ಕೆ ಸೀಮಿತವಾಗದೆ, ಸಮುದಾಯದ ಮುಖಂಡರ ಜತೆ ಸುದೀರ್ಘ ಸಂವಾದ ನಡೆಸಿದ ಗುರುರಾಜ ಗಂಟಿಹೊಳೆ ಅವರು ಸ್ಥಳೀಯ ಸಮಸ್ಯೆಗಳನ್ನು ಆಲಿಸಿದರು. ಕೊರಗ ಸಮುದಾಯವು ಹಿಂದೂ ಸಮಾಜದ ಅವಿಭಾಜ್ಯ ಅಂಗ. ಕಲೆ, ಸಾಹಿತ್ಯ ಮತ್ತು ಪರಂಪರೆಯ ಉಳಿವಿನಲ್ಲಿ ಈ ಸಮುದಾಯದ ಪಾತ್ರ ದೊಡ್ಡದಿದೆ. ಅವರ ನೋವು-ನಲಿವುಗಳಿಗೆ ಸ್ಪಂದಿಸುವುದು ನಮ್ಮ ಆದ್ಯ ಕರ್ತವ್ಯ ಎಂದು ಹೇಳಿದರು.

ಯುದ್ಧಕ್ಕೆ ಸಿದ್ಧವಾದ ರಾಯ

ಈ ಹಿಂದೆ ರಿಲೀಸ್ ಆದ ಟಾಕ್ಸಿಕ್ ಟೀಸರ್ ಬಗ್ಗೆ ಪರ ವಿರೋಧದ ಮಾತುಗಳು ಕೇಳಿಬರುತ್ತಿರುವಾಗಲೇ ಈಗ ಚಿತ್ರದ ಮತ್ತೊಂದು ಹೈವೋಲ್ಟೇಜ್ ಟೀಸರ್ ರಿಲೀಸ್ ಆಗಿದೆ. ಈ ಟೀಸರ್ ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಮಿಲಿಯನ್‌ಗಟ್ಟಲೇ ವೀಕ್ಷಣೆ ಕಂಡಿದೆ. ಕನ್ನಡ, ತೆಲುಗು, ತಮಿಳು ಸೇರಿದಂತೆ ಪಂಚಭಾಷೆಗಳಲ್ಲಿಯೂ ಟಾಕ್ಸಿಕ್ ಟೀಸರ್ ಬಿಡುಗಡೆ ಮಾಡಲಾಗಿದೆ. ಈ ಸಲ ಯುದ್ದನೇ ಬೇರೆ.. ಎಂಬ ಡೈಲಾಗ್‌ನಿಂದ ಟೀಸರ್ ಆರಂಭವಾಗುತ್ತದೆ. ಅದೇ ವೇಳಗೆ ಸ್ಟೈಲಿಶ್ ಲುಕ್‌ನಲ್ಲಿ ಎಂಟ್ರಿಕೊಡುವ ಯಶ್, ಐಷಾರಾಮಿ ವಿಂಟೇಜ್ ಕಾರುಗಳು ಗಮನಸೆಳೆಯುತ್ತವೆ. ಈ ಬಾರಿ ಸೋಲುವ ಮಾತೇ ಇಲ್ಲ..ಎಂಬ ಮಾಸ್ ಡೈಲಾಗ್ ಮನಸೂರೆಗೊಳ್ಳುತ್ತದೆ.

ಡಬಲ್ ಶೇಡ್‌ನಲ್ಲಿ ಯಶ್: ಈ ಚಿತ್ರದಲ್ಲಿ ಯಶ್ ಡಬಲ್ ಶೇಡ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಮೊದಲ ಟೀಸರ್‌ನಲ್ಲಿ ರಾಯನನ್ನು ಪರಿಚಯಿಸಲಾಗಿತ್ತು. ಈಗ ಈ ಟೀಸರ್‌ನಲ್ಲಿ ರಾಯನ ಮಗನ ದರ್ಶನವಾಗಿದೆ. ಯಶ್ ಒಂದು ಶೇಡ್‌ನಲ್ಲಿ ಗಡ್ಡ ಬಿಟ್ಟು ರಗಡ್ ಆಗಿ ಕಾಣಿಸಿಕೊಂಡಿದ್ದರೆ, ಮತ್ತೊಂದು ಲುಕ್‌ನಲ್ಲಿ ಯಂಗ್ ಆಗಿ ಕಂಗೊಳಿಸಿದ್ದಾರೆ. ರಾಕಿಬಾಯ್ ಹೊಸ ಲುಕ್ ನೋಡಿ ಅಭಿಮಾನಿಗಳು ಬಹುಪರಾಕ್ ಎಂದಿದ್ದಾರೆ. ಐ ಎಮ್ ಹೋಂ ಡ್ಯಾಡಿ ಎಂಬ ಡೈಲಾಗ್ ಪಂಚಿಂಗ್ ಆಗಿದೆ.

ಅದ್ದೂರಿ ಮೇಕಿಂಗ್: ಟಾಕ್ಸಿಕ್ ಭೂಗತ ಲೋಕದ ಕಥೆಯನ್ನು ಒಳಗೊಂಡಿದೆ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗಿದೆ. ನಿರ್ದೇಶಕಿ ಗೀತು ಮೋಹನ್ ದಾಸ್, ಟಾಕ್ಸಿಕ್ ಚಿತ್ರವನ್ನು ರಗಡ್ ಆಗಿ ಕಲ್ಟ್ ಶೈಲಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಚಿತ್ರದಲ್ಲಿ ರಕ್ತ ಚರಿತ್ರೆಯೂ ಇದೆ ಎಂಬುದು ಸದ್ಯ ಬಿಡುಗಡೆಯಾಗಿರುವ ಟೀಸರ್‌ನಲ್ಲಿ ತಿಳಿಯುತ್ತದೆ. ಟಾಕ್ಸಿಕ್ ಹಾಲಿವುಡ್ ಶೈಲಿಯಲ್ಲಿಯೇ ಮೂಡಿಬಂದಿದ್ದು, ಅದ್ದೂರಿ ಸೆಟ್‌ಗಳ ಮೇಕಿಂಗ್ ಎಲ್ಲವೂ ಗಮನಸೆಳೆಯುತ್ತವೆ. ಗೀತು ಮೋಹನ್ ನಿರ್ದೇಶನದ ಈ ಚಿತ್ರವನ್ನು ಕೆವಿಎನ್ ಪ್ರೊಡಕ್ಷನ್ಸ್ ಅದ್ದೂರಿಯಾಗಿ ನಿರ್ಮಾಣ ಮಾಡಿದೆ. ಯಶ್ ಕೂಡ ನಿರ್ಮಾಣದಲ್ಲಿ ಕೈಜೋಡಿಸಿದ್ದಾರೆ. ಟಾಕ್ಸಿಕ್ ಪ್ಯಾನ್ ವರ್ಲ್ಡ್ ಚಿತ್ರವಾಗಿ ಮೂಡಿಬರುತ್ತಿದೆ. ಮಾರ್ಚ್ 19ರಂದು ವಿಶ್ವಾದ್ಯಂತ ತೆರೆಗೆ ಬರಲಿದೆ.

ಅದ್ದೂರಿಯಾಗಿದೆ ಅಶೋಕನ ಟ್ರೇಲರ್

ಸತೀಶ್ ನೀನಾಸಂ ಅಭಿನಯದ ಬಹು ನಿರೀಕ್ಷಿತ ಸಿನಿಮಾ ದಿ ರೈಸ್ ಆಫ್ ಅಶೋಕ ಬಿಡುಗಡೆಯ ಹೊಸ್ತಿಲಲ್ಲಿದೆ. ಮುಂದಿನ ವಾರ ಹಲವು ಭಾಷೆಗಳಲ್ಲಿ ಅಶೋಕನ ದರ್ಶನವಾಗಲಿದೆ. ಸದ್ಯ ದಿ ರೈಸ್ ಆಫ್ ಅಶೋಕನ ಟ್ರೇಲರ್ ರಿಲೀಸ್ ಆಗಿದ್ದು, ನೀನಾಸಂ ಸತೀಶ್ ಕಿಚ್ಚು ಹಚ್ಚಿದ್ದಾರೆ. ಗ್ರಾಮೀಣ ಹಿನ್ನೆಲೆಯಲ್ಲಿ ಸಾಗುವ ಈ ಚಿತ್ರದಲ್ಲಿ ಮಾಸ್ ಕ್ಲಾಸ್ ಎಲ್ಲಾ ಅಂಶಗಳು ಬೆರೆತಿವೆ. ರೆಟ್ರೋ ಲುಕ್ ನಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ಸಂಘರ್ಷದ ಕಥೆಯ ಜತೆಗೆ, ತಂದೆ ಮಗನ ಬಾಂಧವ್ಯ ಕಥನ ಗಮನಸೆಳೆಯುತ್ತದೆ. ಜತೆಗೆ ನವಿರಾದ ಪ್ರೇಮಕಥೆಯೂ ಬೆರೆತಿದೆ.

ರವಿಚಂದ್ರನ್, ದುನಿಯಾ ವಿಜಯ್, ವಸಿಷ್ಠ ಸಿಂಹ, ಲೂಸ್ ಮಾದ ಯೋಗಿ ಟ್ರೇಲರ್ ನೋಡಿ ಮೆಚ್ಚಿಕೊಂಡಾಡಿದ್ದಾರೆ. ಸತೀಶ್ ಚಿತ್ರದ ಟ್ರೇಲರ್, ಹಾಡು ಯಾವುದು ಕಾಣಿಸಲಿಲ್ಲ. ನಿನ್ನ ಕಣ್ಣಲ್ಲಿ ನೀರು ಕಾಣಿಸಿತು. ಅದು ಹೊರಗಡೆ ಬರಲಿಲ್ಲ. ನೀನು ಅಲ್ಲೇ ಗೆದ್ದಾಗಿದೆ. ಪ್ರೇಕ್ಷಕರು ಚಿತ್ರಮಂದಿರಗಳಿಗೆ ಬಂದು ಸಿನಿಮಾ ನೋಡಿ ಗೆಲ್ಲಿಸಬೇಕು ಎಂದು ರವಿಚಂದ್ರನ್ ಹೇಳಿದರು. ನಮ್ಮ ದಿ ರೈಸ್ ಆಫ್ ಅಶೋಕ ಸಿನಿಮಾವನ್ನು ಇದೇ ತಿಂಗಳ 27 ರಂದು ಪ್ರೇಕ್ಷಕರ ಮುಂದೆ ಇಡುತ್ತಿದ್ದೇವೆ. ಸಿನಿಮಾ ಮಾಡುವಾಗ ಎಲ್ಲರೂ ಇವನಿಗೆ ಕೆಜಿಎಫ್, ಕಾಂತಾರ ಹುಚ್ಚು ಹಿಡಿದಿದೆ ಎಂದು ಮಾತನಾಡಿ ಕೊಂಡರು. ನನಗೆ ಕೆಜಿಎಫ್, ಕಾಂತಾರ ಹುಚ್ಚು ಹಿಡಿದಿಲ್ಲ, ನನ್ನ ಸಿನಿಮಾದ ಹುಚ್ಚು ಅದು. ನಮ್ಮ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ. ಪರಭಾಷೆಯಲ್ಲಿಯೂ ನಮ ಚಿತ್ರಕ್ಕೆ ಬೇಡಿಕೆ ಇದ್ದು, ತೆಲುಗು, ತಮಿಳಿನಲ್ಲಿ ಇನ್ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ ಎಂದು ನೀನಾಸಂ ಸತೀಶ್ ತಿಳಿಸಿದರು. ದಿ ರೈಸ್ ಆಫ್ ಅಶೋಕದಲ್ಲಿ ಸತೀಶ್‌ಗೆ ಜೋಡಿಯಾಗಿ ಸಪ್ತಮಿ ಗೌಡ ನಟಿಸಿದ್ದಾರೆ. ಬಿ.ಸುರೇಶ್, ರವಿಶಂಕರ್, ಗೋಪಾಲಕೃಷ್ಣ ದೇಶಪಾಂಡೆ, ಸಂಪತ್ ಮೈತ್ರೇಯಾ, ಯಶ್ ಶೆಟ್ಟಿ, ಡ್ರಾಗನ್ ಮಂಜು, ವಿಕ್ರಮ್ ವೇದ ಖ್ಯಾತಿಯ ಹರೀಶ್ ಪೆರಾಡಿ, ಜಗಪ್ಪ ತಾರಾಬಳಗದಲ್ಲಿದ್ದಾರೆ. ವೃದ್ಧಿ ಕ್ರಿಯೇಷನ್ ಹಾಗೂ ಸತೀಶ್ ಪಿಕ್ಚರ್ಸ್ ಹೌಸ್ ಪ್ರೊಡಕ್ಷನ್ ನಲ್ಲಿ ಚಿತ್ರ ನಿರ್ಮಾಣವಾಗಿದೆ.

ಶಂಕರಾಭರಣದಲ್ಲಿ ಶೈನ್ ಶೆಟ್ಟಿ

ಬಿಗ್‌ಬಾಸ್ ಖ್ಯಾತಿಯ ಶೈನ್ ಶೆಟ್ಟಿ, ಹೊಸ ಚಿತ್ರದ ಮೂಲಕ ತೆರೆಯಲ್ಲಿ ಮಿಂಚಲು ಸಿದ್ಧವಾಗುತ್ತಿದ್ದಾರೆ. ಅದಕ್ಕಾಗಿಯೇ ಈ ಬಾರಿ ಶಂಕರಾಭರಣ ಬಸ್ ಏರಿ ಬರುತ್ತಿದ್ದಾರೆ. ಕರಾವಳಿ ತೀರದಲ್ಲಿ ಸಾಗುವ ಈ ಸಿನಿಮಾದಲ್ಲಿ ಬಸ್ ಕೂಡ ಮುಖ್ಯ ಪಾತ್ರವಾಗಿದ್ದು, ಶೈನ್ ಶೆಟ್ಟಿ ಡ್ರೈವರ್ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಬಸ್ ಚಾಲಕನೊಬ್ಬ ತನಗೆ ತಿಳಿಯದ, ಪರಿಚಯವೂ ಇಲ್ಲದ ದೂರದ ಹಳ್ಳಿಯ ಹೊಸ ಮಾರ್ಗಕ್ಕೆ ನಿಯೋಜನೆಗೊಂಡಾಗ ಏನೆಲ್ಲ ಆಗುತ್ತದೆ ಎಂಬುದೇ ಈ ಚಿತ್ರದ ಕಥಾವಸ್ತು. ಅದನ್ನು ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ಕಟ್ಟಿಕೊಟ್ಟಿದ್ದಾರೆ. ಈ ಹಿಂದೆ ಮಿಥ್ಯ ಚಿತ್ರವನ್ನು ನಿರ್ದೇಶನ ಮಾಡಿದ್ದ ಸುಮಂತ್ ಈ ಚಿತ್ರಕ್ಕೆ ಕತೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ರಂಗಸ್ಥಳ ಸ್ಟುಡಿಯೊಸ್ ನಲ್ಲಿ ಚಿತ್ರ ನಿರ್ಮಾಣವಾಗಿದ್ದು, ದಿವಾಕರ್ ಶೆಟ್ಟಿ ಮತ್ತು ಶೈನ್ ಶೆಟ್ಟಿ ಒಟ್ಟಾಗಿ ನಿರ್ಮಾಣ ಮಾಡುತ್ತಿದ್ದಾರೆ. ಶಂಕರಾಭರಣ ಚಿತ್ರೀಕರಣ ಮುಗಿಸಿದ್ದು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಸದ್ಯ ಚಿತ್ರತಂಡ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಮಾಡಿದ್ದು ಸಿನಿಮಾದ ಬಗ್ಗೆ ಕುತೂಹಲ ಕೆರಳುವಂತೆ ಮಾಡಿದೆ. ಚರಣ್ ರಾಜ್ ಸಂಗೀತ ನಿರ್ದೇಶನ, ಉದಿತ್ ಖುರಾನಾ ಛಾಯಾಗ್ರಹಣ ಈ ಚಿತ್ರವಾಗಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಶಂಕರಾಭರಣ ಶೀಘ್ರದಲ್ಲಿಯೇ ತೆರೆಗೆ ಬರಲಿದೆ.

ತಂದೆ ಮಗನ ಬಾಂಧವ್ಯ ಕಥನ

ತಂದೆಯ ಮೇಲಿನ ಪ್ರೀತಿಗೆ, ತಂದೆಯ ಗೌರವ ಕಾಪಾಡಲು ಮಕ್ಕಳು ಹೇಗೆಲ್ಲಾ ತ್ಯಾಗಕ್ಕೆ ಮುಂದಾಗುತ್ತಾರೆ ಎಂಬುದನ್ನು ಆಲ್ಫಾ ಚಿತ್ರದಲ್ಲಿ ಎಲ್ಲರ ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ. ಅಪ್ಪನ ತಂಟೆಗೆ ಬಂದವರ ಮೇಲೆ ಮಗ ಹೇಗೆ ಪ್ರತೀಕಾರ ತೆಗೆದುಕೊಳ್ಳುತ್ತಾನೆ ಎಂಬುದನ್ನು ಇಲ್ಲಿ ಕಮರ್ಷಿಯಲ್ ಅಂಶಗಳನ್ನು ಬೆರೆಸಿ ತೆರೆಗೆ ತರಲಾಗಿದೆ. ಅಷ್ಟಕ್ಕೂ ಅಪ್ಪನಿಗೆ ಅವಮಾನ ಮಾಡಿದವರು ಯಾರು, ಮಗ ತಂದೆಯನ್ನು ಇಷ್ಟಪಡಲು ಕಾರಣ ಏನು ಎಂಬುದನ್ನು ಸಿನಿಮಾದ ನೋಡಿಯೇ ತಿಳಿಯಬೇಕು. ತಂದೆ ಮಗನ ಬಾಂಧವ್ಯದ ಕಥೆ ಹೊತ್ತ ಹಲವು ಸಿನಿಮಾಗಳು ತೆರೆಗೆ ಬಂದಿವೆ. ಆದರೆ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನವಾಗಿ ಇಲ್ಲಿ ತೋರಿಸಲಾಗಿದೆ. ಹೊಸತನದ ಕಥೆ ಹೆಣೆದು ಅದನ್ನು ತೆರೆಯಲ್ಲಿ ಎಲ್ಲರಿಗೂ ಮೆಚ್ಚುಗೆಯಾಗುವಂತೆ ನಿರೂಪಿಸುವಲ್ಲಿ ನಿರ್ದೇಶಕ ವಿಜಯ್ ಗೆದ್ದಿದ್ದಾರೆ. ಚಿತ್ರದ ನಿರೂಪಣೆ ಪ್ರೇಕ್ಷಕರನ್ನು ಸೆಳೆಯುತ್ತದೆ. ಸೀಟಿನ ತುದಿಯಲ್ಲಿ ಹಿಡಿದು ಕೂರಿಸುತ್ತದೆ. ನಾಯಕ ನಟ ಹೇಮಂತ್ ಮೊದಲ ಚಿತ್ರದಲ್ಲೇ ಭರವಸೆ ಮೂಡಿಸಿದ್ದಾರೆ. ಸಿನಿಮಾದ ಕಥೆಗೆ ತಕ್ಕಂತೆ ಮಾಡಿಕೊಂಡಿರುವ ಅವರ ತಯಾರಿಯನ್ನು ಮೆಚ್ಚಲೇಬೇಕು. ಹೇಮಂತ್, ಆ್ಯಕ್ಷನ್ ನಲ್ಲಿಯೂ ಇಷ್ಟವಾಗುತ್ತಾರೆ. ಅವರ ಡೈಲಾಗ್ ಡೆಲಿವರಿಯೂ ಅದ್ಭುತವಾಗಿದೆ. ಇನ್ನು ಗೋಪಿಕಾ ಸುರೇಶ್ ಮತ್ತು ಅಯನಾ ನಾಯಕಯರಾಗಿ ಕಂಗೊಳಿದ್ದು, ಮೆಚ್ಚುವ ಅಭಿನಯ ತೋರಿದ್ದಾರೆ. ಅಚ್ಯುತ್ ಕುಮಾರ್, ಮಾನಸಿ ಸುಧೀರ್, ರಮೇಶ್ ಇಂದಿರಾ, ಕಾರ್ತಿಕ್ ಮಹೇಶ್, ರಾಘು ಶಿವಮೊಗ್ಗ ಹೀಗೆ ಎಲ್ಲರೂ ತಮ್ಮ ಪಾತ್ರಗಳಿಗೆ ಜೀವತುಂಬಿದ್ದರೆ. ಚಿತ್ರದ ಸಂಗೀತಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಚಿತ್ರದಲ್ಲಿನ ಡೈಲಾಗ್ ಪಂಚಿಂಗ್ ಆಗಿದ್ದು ಸಿನಿಮಾ ನೋಡಿ ಹೊರಬಂದ ಮೇಲೂ ಸಂಭಾಷಣೆ ಮನದಲ್ಲಿ ಉಳಿಯುತ್ತವೆ. ಒಟ್ಟಾರೆ ಆಲ್ಫಾ ಚಿತ್ರವನ್ನು ಎಲ್ಲರೂ ಒಟ್ಟಾಗಿ ಕುಳಿತು ನೋಡಿ ಆನಂದಿಸಬಹುದು.

ಚಿತ್ರ: ಆಲ್ಫಾ
ನಿರ್ದೇಶನ: ವಿಜಯ್
ನಿರ್ಮಾಣ: ಆನಂದ ಕುಮಾರ್
ತಾರಾಗಣ: ಹೇಮಂತ್, ಗೋಪಿಕಾ, ಅಯನಾ, ಅಚ್ಯುತ್ ಕುಮಾರ್, ಕಾರ್ತಿಕ್ ಮಹೇಶ್ ಮುಂತಾದವರು.
ರೇಟಿಂಗ್: 3.5

ಹಾಸ್ಯ-ಲಾಸ್ಯ

ಸತ್ಯವೇ ನಮ್ಮ ತಾಯಿ-ತಂದೆ!

ಸುಳ್ಳು ಹೇಳುವ ಚಾಳಿ ಮಗನಲ್ಲಿ ಮಿತಿಮೀರಿತ್ತು. ಅದನ್ನು ಕಂಟ್ರೋಲ್ ಮಾಡೋದು ಗೊತ್ತಾಗದೆ ಅಪ್ಪ ಕಂಗಾಲಾಗಿದ್ದ. ಹೇಳಿ-ಕೇಳಿ ಇದು ಕೃತಕ ಬುದ್ಧಿಮತ್ತೆಯ (ಎಐ) ಕಾಲ. ಹೀಗಾಗಿ, ಸುಳ್ಳು ಹೇಳಿದರೆ ಕೆನ್ನೆಗೆ ರಪ್ಪನೆ ಬಾರಿಸುವ 'ಎಐ' ರೋಬೋಟ್ ಒಂದನ್ನು ಅಪ್ಪ ಖರೀದಿಸಿ ಮನೆಗೆ ತಂದ. 'ಆಷಾಢದಲ್ಲಿ ಅಧಿಕಮಾಸ' ಎಂಬ ಮಾತಿನಂತೆ ಗ್ರಹಚಾರಕ್ಕೆ ಆತನ ಮಗ ಅಂದು ರಾತ್ರಿ 12 ಗಂಟೆಗೆ ಮನೆಗೆ ಹಿಂದಿರುಗಬೇಕೇ?!! ಸರಿ ವಿಚಾರಣೆ ಶುರುವಾಯಿತು.

ಅಪ್ಪ: ಭಡವಾ ರಾಸ್ಕಲ್, ಯಾಕೋ ಇಷ್ಟು ಲೇಟು?

ಮಗ: ಫ್ರೆಂಡ್ಸ್ ಜತೆ 'ಕಂಬೈನ್ಡ್ ಸ್ಟಡಿ' ಮಾಡ್ತಾ ಇದ್ದೆ ಕಣಪ್ಪಾ.

ಈ ಮಾತು ಕೇಳುತ್ತಿದ್ದಂತೆ ರೋಬೋಟ್ ಮಗನ ಕೆನ್ನೆಗೆ ಬಾರಿಸಿತು...

ಮಗ: ತಪ್ಪಾಯ್ತಪ್ಪಾ... ಸೆಕೆಂಡ್ ಷೋ ಸಿನಿಮಾ ನೋಡೋಕ್ಕೆ ಹೋಗಿದ್ದೆ.

ಅಪ್ಪ: ಓಹೋ! ಯಾವುದು ಸಿನಿಮಾ?

ಮಗ: ಸತಿ ಸಕ್ಕೂಬಾಯಿ.

ಈ ಮಾತಿಗೂ ರೋಬೋಟ್ ಮುಲಾಜಿಲ್ಲದೆ ಮಗನ ಕೆನ್ನೆಗೆ ಬಾರಿಸಿತು...

ಮಗ: ಅಯ್ಯೋ ಮತ್ತೆ ತಪ್ಪಾಯ್ತಪ್ಪಾ, 'ಜವಾನಿ ಕಿ ಕಹಾನಿ' ಅನ್ನೋ 'ವಯಸ್ಕರ ಚಿತ್ರ' ಕಣಪ್ಪಾ.

ಅಪ್ಪ: ಬಡ್ಡಿಮಗನೇ... ಹೈಸ್ಕೂಲಲ್ಲಿ ಓದುವಾಗ ನಾನೇ ಅಂಥ ಸಿನಿಮಾ ನೋಡಿಲ್ಲ ಗೊತ್ತಾ?

ಈ ಮಾತು ಕೇಳುತ್ತಿದ್ದಂತೆ ರೋಬೋಟ್ ಅಪ್ಪನ ಕೆನ್ನೆಗೂ ರಪರಪನೆ ಬಾರಿಸಿತು...

ಅಮ್ಮ: ಅಹಾಹಾ! ಇಬ್ಬರೂ ಸರಿಯಾಗಿದ್ದೀರಿ. ಈ ಕುಮಾರ ಕಂಠೀರವ ಸುಳ್ಳು ಹೇಳದೆ ಇನ್ನೇನು ಮಾಡ್ತಾನೆ, ಎಷ್ಟೆಂದರೂ ನಿಮ್ಮ ಮಗ ಅಲ್ವಾ ಅವನು?

ಈ ಮಾತು ಕೇಳುತ್ತಿದ್ದಂತೆ ರೋಬೋಟ್ ಅಮ್ಮನ ಕೆನ್ನೆಗೂ ಬಾರಿಸಿತು....!!

ವಿಶ್ವವಾಣಿ ಬೆಂಗಳೂರು 21-02-2026 ಶನಿವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಇಂದು ವಿಶ್ವ ಮಾತೃಭಾಷಾ ದಿನ

ಕರುಳುಬಳ್ಳಿಯ ನಂಟು



• ಡಾ. ಮೈತ್ರಿ ಭಟ್, ವಿಟ್ಲ

ತಾಯ್ತನಕ್ಕೂ ತಾಯ್ನುಡಿಗೂ ನೇರವಾದ ನಂಟಿದೆ. ಮಗುವು ಭಾಷೆಯನ್ನು ಕಲಿಯುವುದೇ ತನ್ನ ತಾಯಿಯ ಒಡನಾಟದ ಮೂಲಕ. ಆದರೆ ಭಾಷಾ ಬಹುತ್ವದ ಆಧುನಿಕ ಕಾಲದಲ್ಲಿ ತಾಯ್ನುಡಿಯೊಂದಿಗಿನ ನಮ್ಮ ನಂಟನ್ನು, ಅದರ ಸ್ವರೂಪವನ್ನು ಸ್ಪಷ್ಟಪಡಿಸಿಕೊಳ್ಳಬೇಕಾದ ಅನಿವಾರ್ಯತೆಯೂ ನಮ್ಮ ಕಣ್ಣಮುಂದಿದೆ. ಭಾಷೆಗಾಗಿ ಬಾಂಗ್ಲಾದೇಶದ ಹಲವು ವಿದ್ಯಾರ್ಥಿಗಳು ಹೋರಾಟ ನಡೆಸಿ ಪೊಲೀಸರ ಗುಂಡಿಗೆ ಜೀವ ತೆತ್ತ ದಿನ ಫೆಬ್ರುವರಿ 21. 1999ರಲ್ಲಿ ಯುನೆಸ್ಕೋ ಈ ದಿನವನ್ನು 'ವಿಶ್ವ ತಾಯ್ನುಡಿ ದಿನ'ವೆಂದು ಘೋಷಿಸಿತು. 'ಜಗತ್ತಿನ ಜನರೆಲ್ಲರೂ ಬಳಸುವ ಎಲ್ಲ ಭಾಷೆಗಳನ್ನು ಉಳಿಸಿಕೊಳ್ಳುವುದು, ಕಾಪಾಡಿಕೊಳ್ಳುವುದು ನಮ್ಮ ಜವಾಬ್ದಾರಿ' ಎನ್ನುವುದೇ ಈ ದಿನಾಚರಣೆಯ ಉದ್ದೇಶವಾಗಿದೆ.

ತಾಯ್ನುಡಿಯ ಬಗ್ಗೆ ಒಲವು

ಯಾವುದೇ ಭಾಷೆಯು ಜೀವಂತವಾಗಿರಲು ಮಾತು ಮತ್ತು ಬರಹ ಅವಶ್ಯಕ. ಮಣ್ಣು ಮತ್ತು ಭಾಷೆಗೆ ಭಾವುಕತೆ ಬಹು ಬೇಗನೆ ಅಂಟಿಕೊಂಡುಬಿಡುತ್ತದೆ. ಸಾಮಾನ್ಯವಾಗಿ ನಾವು ನಮ್ಮ ತಾಯ್ನುಡಿಯ ಬಗ್ಗೆ ಅಪಾರವಾದ ಒಲವನ್ನು ಹೊಂದಿರುತ್ತೇವೆ. ನಮ್ಮ ಪಾರಂಪರಿಕ ಸಂಪತ್ತನ್ನು ಉಳಿಸಿಕೊಳ್ಳಲು ಭಾಷೆ ಯಷ್ಟು ಪರಿಣಾಮಕಾರಿಯಾದ ಉಪಕರಣ ಮತ್ತೊಂದಿಲ್ಲ. ಹೀಗಿರುವಾಗ ಶಿಕ್ಷಣದಲ್ಲಿ ತಾಯ್ನುಡಿಗೆ ಪ್ರಾಮುಖ್ಯವಿರಬೇಕಾದುದು ಅತ್ಯಗತ್ಯ. ಜತೆಗೆ ಮಾತೃಭಾಷಾ ಶಿಕ್ಷಣವು ವಿಷಯವನ್ನು ಮನಸ್ಸಿಗೆ ನಾಟಿಸಲು, ಸೃಜನಶೀಲತೆಯನ್ನು ಅರಳಿಸಲು ಸಹಕಾರಿ.

ಹಿಂದೆ ಬಳಕೆಯಲ್ಲಿದ್ದ ಅದೆಷ್ಟೋ ಭಾಷೆಗಳು ಇಂದು ಜಗತ್ತಿನಿಂದಲೇ ಕಣ್ಮರೆಯಾಗಿ ಹೋಗಿವೆ. ತಜ್ಞರ ಪ್ರಕಾರ, ಪ್ರತಿವಾರವೂ ಸುಮಾರು ಎರಡು ಭಾಷೆಗಳು ಕಣ್ಮರೆಯಾಗುತ್ತಿವೆ. ಪ್ರತಿದಿನವೂ ವಿಶ್ವದ ಎಷ್ಟೋ ಭಾಷೆಗಳು ಅಳಿವಿನಂಚಿಗೆ ಸಾಗುತ್ತಿವೆ. ಇದು ಜಗತ್ತು ಕಿರಿದಾದುರ ಪರಿಣಾಮವೂ ಹೌದು. ಹೀಗೆ ನುಡಿಯ ಮರಣ ಒಂದು ಸಮುದಾಯದ ಅದುವರೆಗಿನ ಬದುಕು, ಸಾಧನೆಗಳ ಕುರುಹನ್ನೇ ನಿರ್ನಾಮವಾಗಿಸುತ್ತದೆ.

ಅನ್ಯಭಾಷಾ ಸಂಸರ್ಗ

ಯಾವುದೇ ಭಾಷೆಯಾಗಲೀ ಅಥವಾ ಸಾಹಿತ್ಯವಾಗಲೀ ಬೆಳೆಯಲು ಅನ್ಯಭಾಷಾ ಸಂಸರ್ಗ ಅಗತ್ಯ. ಜನರ ನುಡಿಗಳಲ್ಲಿ ಅನ್ಯಭಾಷಾ ಪದಗಳು ಅಪ್ರಜ್ಞಾಪೂರ್ವಕವಾಗಿ ನುಸುಳುತ್ತವೆ. ಕೊನೆಗೊಮ್ಮೆ ಅವು ಅನ್ಯಭಾಷಾ ಪದಗಳು ಎಂಬ ಸಂದೇಹಕ್ಕೂ ಎಡೆ ಇಲ್ಲದಂತೆ ನಮ್ಮ ಬದುಕಿನ ಭಾಗವಾಗಿಬಿಡುತ್ತವೆ. ಹೀಗೆ ನಮ್ಮ ಮಾತೃಭಾಷೆಯ ಒಳಗೆ ನಮಗೇ ತಿಳಿಯದಂತೆ ನಿತ್ಯವೂ ಪರಿವರ್ತನೆಗಳಾಗಿವೆ ಹಾಗೂ ಆಗುತ್ತಲೇ ಇರುತ್ತವೆ. ಅನ್ಯಭಾಷೆಯನ್ನು ಆಶ್ರಯಿಸುವುದರ ಮೂಲಕ ಭಾಷೆಯೊಂದು ತನ್ನ ಒಡಲನ್ನು ತುಂಬಿಕೊಳ್ಳುತ್ತದೆ. ಹೊಸತನ್ನು ಸೇರಿಸಿಕೊಂಡು ಬೆಳೆಯುವುದು ಯಾವುದೇ ಜೀವಂತ ಭಾಷೆಯ ಲಕ್ಷಣವೂ ಹೌದು. ಈ ಭಾಷೆ ಎನ್ನುವುದು ಕೇವಲ ಆಂತರಿಕ ಆಲೋಚನೆಗಳ ಬಾಹ್ಯ ಅಭಿವ್ಯಕ್ತಿ ಮತ್ತು ಸಂವಹನದ ಮಾಧ್ಯಮ ಮಾತ್ರ ಅಲ್ಲ; ಸ್ಥಳೀಯ ಭಾಷೆಯು ಸ್ಥಳೀಯ ಗುಂಪುಗಳಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನು ಒಳಗೊಂಡ ಸಾಂಸ್ಕೃತಿಕ ಚಹರೆಯೂ ಹೌದು. ಭಾಷೆಯು ಸಂಸ್ಕೃತಿಯ ಭಾಗವೂ ಹೌದು, ಸಂಸ್ಕೃತಿಯ ವಾಹಕವೂ ಹೌದು. ಕೇವಲ ಆಹಾರ, ವಸ್ತ್ರ, ಜೀವನಕ್ರಮ, ಸಂಪ್ರದಾಯಗಳು ಮಾತ್ರ ಸಂಸ್ಕೃತಿಯ ಭಾಗವಲ್ಲ; ಇವೆಲ್ಲವನ್ನೂ ದಾಖಲುಗೊಳಿಸುವ ಭಾಷೆಯು ಸಂಸ್ಕೃತಿಯ ಅವಿಭಾಜ್ಯ ಅಂಗ. ಹೀಗೆ ಭಾಷೆಯು ಸಂಸ್ಕೃತಿಯ ಭಾಗ ಎಂಬುದು ಎಷ್ಟು ಸತ್ಯವೋ ಸಂಸ್ಕೃತಿಯು ಭಾಷೆಯ ಮೂಲಕ ಹರಡುತ್ತದೆ ಎಂಬುದೂ ಅಷ್ಟೇ ನಿಜ. ಎಡ್ವರ್ಡ್ ಬರ್ನೆಟ್ ಟೇಲರ್ ಅವರು ಸಂಸ್ಕೃತಿಯನ್ನು ವ್ಯಾಖ್ಯಾನಿಸುತ್ತಾ 'ಸಂಸ್ಕೃತಿಯು ಮಾನವ ಜೀವನ ಮತ್ತು ಅಭಿಪ್ರಾಯ, ನಡವಳಿಕೆಯ ವಿಶಾಲ ವ್ಯಾಪ್ತಿಯನ್ನು ಹೊಂದಿದ್ದು, ಭಾಷೆ ಅದರ ಪ್ರಮುಖ ಹಾಗೂ ಸ್ಪಷ್ಟ ಭಾಗವಾಗಿದೆ' ಎಂದಿದ್ದಾರೆ.

ಅವಿನಾಭಾವ ಸಂಬಂಧ

ಸಮಾಜ ಮತ್ತು ಭಾಷೆಯ ನಡುವೆ ಒಂದು ಅವಿನಾಭಾವ ಸಂಬಂಧವಿದೆ. ಏಕೆಂದರೆ ಭಾಷೆಯು ಇತಿಹಾಸದಲ್ಲಿ ದಾಖಲಾಗಿದ್ದರೂ, ಅದರ ನಿರ್ವಹಣೆ ಸಾಧ್ಯವಾಗುವುದು ಭಾಷೆಯನ್ನು ಬಳಸುವ ಮತ್ತು ಅರ್ಥ ಮಾಡಿಕೊಳ್ಳುವ ಜನರಿಂದ ಮಾತ್ರ. ಕಲಿಯುವಿಕೆ ಮತ್ತು ಕಲಿಸುವಿಕೆಯ ಮೂಲಕ ಭಾಷೆಯು ಸಂಸ್ಕೃತಿಯಾಗಿ ಪಸರಿಸುತ್ತದೆ. ಮನೆಯಲ್ಲಿ ಪೋಷಕರ ಮೂಲಕ ತಮ್ಮ ಭಾವನೆ, ಬಯಕೆಗಳು ಮೊದಲಾದ ಮೂಲ ಅವಶ್ಯಕತೆಯ ಹಂಚಿಕೆಯ ಕಾರಣಕ್ಕಾಗಿ ಮಕ್ಕಳು ಭಾಷೆಯನ್ನು ಕಲಿತರೆ, ಶಾಲೆಯಲ್ಲಿ ಅದು ಔಪಚಾರಿಕ ಶಿಕ್ಷಣದ ರೂಪದಲ್ಲಿ ತೆರೆದುಕೊಳ್ಳುತ್ತದೆ.

ಭಾಷಾ ಬಳಕೆಯು ಸಮುದಾಯದ ಮಾಹಿತಿ ಪ್ರಸರಣಕ್ಕೆ ಸಹಕಾರಿ. ಬರವಣಿಗೆಯು ಇದಕ್ಕೆ ಪೂರಕ. ಸಾಂಸ್ಕೃತಿಕ ಬದಲಾವಣೆ ಹಾಗೂ ಭಾಷೆಯ ನಡುವೆ ಸಂಬಂಧವಿದೆ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಪ್ರಾಂತೀಯ ಭಾಷೆಗಳನ್ನು ಹೊಂದಿರುವ ನಮ್ಮಲ್ಲಿ ಪ್ರಾಂತೀಯ ಭಾಷೆಗಳು ಕಡೆಗಣನೆಯಾಗುತ್ತಿವೆ. ಹಳ್ಳಿಗಳಲ್ಲೂ ಇತರ ಭಾಷೆಗಳ ಪ್ರಭಾವ ಹೆಚ್ಚಾಗಿದೆ. ಹಾಗೆಂದು ಭಾಷೆಯ ಉಳಿವಿಗಾಗಿ ಭಾಷಾ ಅಭಿರುಚಿಯನ್ನು ಬೆಳೆಸುವತ್ತ ಗಮನಹರಿಸಬೇಕೇ ಹೊರತು ಕಾನೂನು, ನಿಯಮ, ಬಲವಂತದ ಹೇರಿಕೆಯ ಮೂಲಕ ಅಲ್ಲ.

ಭಾಷಾಭಿಮಾನ ಬೇಕು

ಪ್ರಾಚೀನ ಆಲಂಕಾರಿಕ ದಂಡಿಯು 'ಭಾಷೆಯೆಂಬ ಬೆಳಕು ಬೆಳಗದಿರುತ್ತಿದ್ದರೆ ಲೋಕವೆಲ್ಲ ಕತ್ತಲೆಯಲ್ಲಿ ಮುಳುಗಿರುತ್ತಿತ್ತು' ಎಂದು ಭಾಷೆಯ ಪ್ರಾಮುಖ್ಯವನ್ನು ಸಾರಿದ್ದಾನೆ. ಭಾಷೆ ಯಾವುದೇ ಇರಲಿ, ಅದು ನೆಲ, ಜಲ, ಜನ, ಬದುಕು, ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತಗಳನ್ನು ಒಳಗೊಂಡ ಜೀವಂತಿಕೆ. ಭಾಷೆಯ ಪ್ರಭಾವಶಾಲಿ ಚಲನೆ ಸಾಧ್ಯವಾಗುವುದು ಮಾಧ್ಯಮಗಳು ಹಾಗೂ ಶಿಕ್ಷಣದಲ್ಲಿ. ಆದುದರಿಂದ ಮಕ್ಕಳಲ್ಲಿ ಭಾಷಾ ಅಭಿಮಾನ ಮತ್ತು ಪ್ರೀತಿಯನ್ನು ಕಲಿಸೋಣ. ನಮ್ಮ ಭಾಷೆ, ಸಂಸ್ಕೃತಿಯ ಬಗ್ಗೆ ಅಭಿಮಾನ, ಒಲವು, ಗೌರವವನ್ನು ಮೂಡಿಸೋಣ. ಹಾಗೆಂದು ಕಡ್ಡಾಯಗೊಳಿಸುವ ಮೂಲಕ ಭಾಷೆಯನ್ನು ಕಲಿಸುತ್ತೇವೆ ಅಥವಾ ಉಳಿಸುತ್ತೇವೆ ಅಂದುಕೊಂಡರೆ ಅದು ನಮ್ಮ ಮೂರ್ಖತನವಾದೀತು. ಅಲ್ಲಿ ಭಾಷೆಯ ಬಗೆಗೆ ಯಾವುದೇ ರೀತಿಯ ಅಭಿಮಾನವಾಗಲೀ ಪ್ರೀತಿಯಾಗಲೀ ಇರಲಾರದು. ಭಾಷಾ ಕಲಿಕೆಯ ಮನೋಭಾವವನ್ನು ಬೆಳೆಸುವುದೇ ಭಾಷೆಯ ಉಳಿವಿಗೆ ಭದ್ರ ಬುನಾದಿ. ಬಲವಂತದ ಹೇರಿಕೆ ಎಂದಿದ್ದರೂ ಅಪಾಯಕಾರಿಯೇ. ಒಂದು ಪ್ರದೇಶದಲ್ಲಿ ವಿವಿಧ ಭಾಷೆಗಳನ್ನಾಡುವ ಜನರು ಜತೆಗಿದ್ದಾಗ ಸೌಹಾರ್ದ ಯುತ ಜೀವನವನ್ನು ನಡೆಸಲು ಸ್ಥಳೀಯ ಭಾಷೆ ಯನ್ನು ಕಲಿಯುವುದು ಅನುಕೂಲಕರ. ಆದರೆ ಕಲಿಯ ಬೇಕೇ, ಬೇಡವೇ ಅನ್ನುವುದು ವೈಯಕ್ತಿಕ ವಿಚಾರ.

ಒಟ್ಟಿನಲ್ಲಿ 'ತಾಯ್ನುಡಿ' ಅಥವಾ 'ಮಾತೃಭಾಷೆ' ಎನ್ನುವುದು, ಭಾಷೆ ಮತ್ತು ಭಾಷಿಕರ ನಡುವಿನ ಸಂಬಂಧವು ತಾಯಿ ಮತ್ತು ಮಗುವಿನ ಸಂಬಂಧದಷ್ಟೇ ಜೀವಂತವಾದುದು ಹಾಗೂ ಸೃಷ್ಟಿಶೀಲವಾದುದು ಎಂಬುದನ್ನು ಸೂಚಿಸುತ್ತದೆ. ಆದುದರಿಂದ ಭಾಷೆಯು ಕೇವಲ ಸಂವಹನದ ಮಾಧ್ಯಮವಲ್ಲ; ಅದು ಪರಸ್ಪರ ಸಾಂಸ್ಕೃತಿಕ ಸಂಬಂಧವನ್ನು ಬೆಸೆಯುವ ಅರಿವಿನ ವಿಸ್ತಾರವೂ ಹೌದು. ಈ ಭಾಷೆ ಎನ್ನುವುದು ಸಮಾಜ ವಿಜ್ಞಾನಿಗಳು ಭಾವಿಸುವಂತೆ ನಮ್ಮ ಅಸ್ಮಿತೆ ಹೌದಾದರೆ, ನಾವೇ ಭಾಷೆಯನ್ನು ಆಯ್ದುಕೊಂಡರೂ ಅಥವಾ ಭಾಷೆಯೇ ನಮ್ಮನ್ನು ಆಯ್ದುಕೊಂಡರೂ ಒಂದಂತೂ ನಿಜ; ಬದುಕಿನ ಭಾಗವಾಗದ ಹೊರತು ಯಾವ ಭಾಷೆಯೂ ನಮ್ಮದಾಗುವುದಿಲ್ಲ!

ಬೆಳ್ಳಿಪರದೆಯ ಅಕ್ಷರಯಾನ ಸಿನಿಮಾ ಸಾಹಿತ್ಯದ ಏಳುಬೀಳು

• ಲಕ್ಷ್ಮೀಕಾಂತ್ ಎಲ್.ವಿ., ತುಮಕೂರು

ಕನ್ನಡ ಸಿನಿಮಾರಂಗಕ್ಕೆ ಸಾಹಿತ್ಯವೇ ಬೆನ್ನೆಲುಬು. ಆರಂಭದ ಕಾಲಘಟ್ಟದಲ್ಲಿ ಸಿನಿಮಾ ಎಂದರೆ ಅದು ಕೇವಲ ಚಲಿಸುವ ಚಿತ್ರವಾಗಿರಲಿಲ್ಲ, ಜತೆಗೆ ಅದೊಂದು ದೃಶ್ಯಕಾವ್ಯವಾಗಿತ್ತು. ಅಂದಿನ ಸಿನಿಮಾ ಸಾಹಿತ್ಯವು ಕೇವಲ ಸಂಭಾಷಣೆ ಅಥವಾ ಹಾಡುಗಳಿಗೆ ಸೀಮಿತವಾಗಿರದೆ, ಬದುಕಿನ ಮೌಲ್ಯಗಳನ್ನು ಎತ್ತಿಹಿಡಿಯುವ ಶಕ್ತಿಯಾಗಿತ್ತು. ಬಿಎಂಶ್ರೀ, ಕುವೆಂಪು, ಬೇಂದ್ರೆಯವರಂಥ ದಿಗ್ಗಜರ ಪ್ರಭಾವದ ಕಾಲದಲ್ಲಿ ಬೆಳೆದುಬಂದ ಚಿತ್ರಸಾಹಿತ್ಯವು ಇಂದು ಜಾಗತೀಕರಣ ಮತ್ತು ತಂತ್ರಜ್ಞಾನದ ಅಬ್ಬರದಲ್ಲಿ ತನ್ನ ಸ್ವರೂಪವನ್ನು ಬದಲಿಸಿಕೊಂಡಿದೆ. ಈ ಪಯಣದಲ್ಲಿ ಸಾಹಿತ್ಯವು ಕಂಡ ಸುವರ್ಣಯುಗ ಮತ್ತು ಇಂದಿನ ಸವಾಲುಗಳ ವಿಶ್ಲೇಷಣೆ ಅತ್ಯಗತ್ಯ.

ಸಾಹಿತ್ಯಿಕ ವೈಭವದ ಸುವರ್ಣಕಾಲ

ಕನ್ನಡ ಚಿತ್ರರಂಗದ ಆರಂಭಿಕ ದಶಕಗಳಲ್ಲಿ ಸಾಹಿತ್ಯವು ಅತ್ಯಂತ ಉನ್ನತ ಮಟ್ಟದಲ್ಲಿತ್ತು. ಜಿ.ವಿ. ಅಯ್ಯರ್, ಹುಣಸೂರು ಕೃಷ್ಣಮೂರ್ತಿ, ಚಿ. ಉದಯಶಂಕರ್ ಮುಂತಾದವರು ಬರೆದ ಸಾಹಿತ್ಯವು ಪ್ರತಿಯೊಂದು ಮನೆಯ ಅಂಗಳ ವನ್ನು ತಲುಪಿತ್ತು. ಅಂದಿನ ಹಾಡುಗಳಲ್ಲಿ ಶಬ್ದಗಳ ನಡುವೆ ಮೌನವಿತ್ತು, ಭಾವನೆಗಳ ಆಳವಿತ್ತು. 'ಬಾಳ ಬಂಗಾರ ನೀನು', 'ಆಡಿಸಿ ನೋಡು ಬೀಳಿಸಿ ನೋಡು' ಮುಂತಾದ ಹಾಡುಗಳ ಸಾಲುಗಳು ಕೇವಲ ಸಾಹಿತ್ಯವಾಗಿರದೆ, ಬದುಕಿನ

ತತ್ವಗಳಾಗಿದ್ದವು. ಸಾಮಾಜಿಕ ಕಳಕಳಿ, ಸಂಸ್ಕಾರ ಮತ್ತು ಭಾಷೆಯ ಶುದ್ಧತೆಗೆ ಅಂದು ಹೆಚ್ಚಿನ ಆದ್ಯತೆ ನೀಡಲಾಗುತ್ತಿತ್ತು. ಸಾಹಿತ್ಯವು ಚಿತ್ರದ ಯಶಸ್ಸನ್ನು ನಿರ್ಧರಿಸುವ ಪ್ರಮುಖ ಅಂಶವಾಗಿತ್ತು.

ವಾಣಿಜ್ಯೀಕರಣದ ಪೆಟ್ಟು

ಕಾಲ ಉರುಳಿದಂತೆ ಸಿನಿಮಾಗಳು ಕೇವಲ ಕಲೆಯಾಗಿ ಉಳಿಯದೆ ದೊಡ್ಡ ಉದ್ಯಮವಾಗಿ ಮಾರ್ಪಟ್ಟವು. 90ರ ದಶಕದ ನಂತರ, ಮಾರುಕಟ್ಟೆಯ ಒತ್ತಡಕ್ಕೆ ಮಣಿದು ಸಿನಿಮಾ ಸಾಹಿತ್ಯವು ತನ್ನ ಗಂಭೀರತೆಯನ್ನು ಕಳೆದುಕೊಳ್ಳಲಾರಂಭಿಸಿತು. ಸಾಹಿತ್ಯದಲ್ಲಿ ಅರ್ಥಕ್ಕಿಂತ ಶಬ್ದ ಮತ್ತು ಲಯಕ್ಕೆ ಹೆಚ್ಚಿನ ಪ್ರಾಮುಖ್ಯ ಸಿಕ್ಕಿತು. ಪ್ರಾಸಬದ್ಧವಾಗಿ ಬರೆಯುವ ಭರದಲ್ಲಿ ಭಾಷೆಯ ಸೌಂದರ್ಯಕ್ಕೆ ಪೆಟ್ಟು ಬಿದ್ದಿತು. ಹಾಡುಗಳು ಕೇವಲ ಕ್ಲಬ್‌ಗಳಲ್ಲಿ ಅಥವಾ ಪಾರ್ಟಿಗಳಲ್ಲಿ ಕುಣಿಯುವಾಗ ಬಳಸುವ ಸಾಧನಗಳಾದವು. ಈ ಹಂತದಲ್ಲಿ ಸಿನಿಮಾ ಸಾಹಿತ್ಯವು ಸಾಮಾಜಿಕ ಜವಾಬ್ದಾರಿಯಿಂದ ತುಸು ದೂರ ಸರಿದು, ಕೇವಲ ಮನರಂಜನೆಯ ಸರಕಾಯಿತು ಎಂಬುದು ಕಹಿಸತ್ಯ.

ತಾಂತ್ರಿಕ ಅಬ್ಬರ, ಭಾವನೆಗಳ ಬಡತನ

ಇಂದಿನ ಡಿಜಿಟಲ್ ಯುಗದಲ್ಲಿ ಸಿನಿಮಾ ಸಾಹಿತ್ಯವು ಮತ್ತೊಂದು ಆಯಾಮವನ್ನು ಪಡೆದಿದೆ. ಸಾಮಾಜಿಕ ಜಾಲತಾಣಗಳ ಪ್ರಭಾವದಿಂದಾಗಿ ರೀಲ್ಸ್ ಸಂಸ್ಕೃತಿ ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ. ಅಬ್ಬರದ ಮ್ಯೂಸಿಕ್ ಬೀಟ್‌ಗಳ ನಡುವೆ ಸಾಹಿತ್ಯವು ಅಡಗಿಹೋಗುತ್ತಿದೆ. ಶಬ್ದಗಳ ಆಳಕ್ಕಿಂತ ಕಿವಿಗಡಚಿಕ್ಕುವ ಶಬ್ದಕ್ಕೆ ಪ್ರಾಶಸ್ತ್ಯ ಸಿಗುತ್ತಿದೆ. ಈ ತಾಂತ್ರಿಕ ಪ್ರಗತಿಯು ನಮಗೆ ಅದ್ಭುತ ಶ್ರವಣ ಅನುಭವ ನೀಡಿದ್ದರೂ, ಸಾಹಿತ್ಯದ ಮೂಲ ಆಶಯವಾದ ಭಾವನೆಗಳನ್ನು ಕೊಲ್ಲುತ್ತಿದೆ. ಸಂಭಾಷಣೆಗಳಲ್ಲಿ ಸಹಜತೆ ಮಾಯವಾಗಿ, ಕೃತಕವಾದ ಪಂಚ್ ಡೈಲಾಗುಗಳ ಅಬ್ಬರ ಹೆಚ್ಚಾಗಿದೆ, ಇದು ಸಾಹಿತ್ಯಿಕ ಮೌಲ್ಯದ ಪತನಕ್ಕೆ ಸಾಕ್ಷಿಯಾಗಿದೆ.

ವರ್ತಮಾನದ ಹೊಸ ಅಲೆ

ಇಷ್ಟೆಲ್ಲಾ ಏಳುಬೀಳುಗಳ ನಡುವೆಯೂ ಹೊಸ ತಲೆಮಾರಿನ ಕೆಲವು ನಿರ್ದೇಶಕರು ಮತ್ತು ಸಾಹಿತಿಗಳು ಸಿನಿಮಾ ಸಾಹಿತ್ಯಕ್ಕೆ ಹೊಸ ಜೀವ ನೀಡುತ್ತಿದ್ದಾರೆ. ಜಯಂತ್ ಕಾಯ್ಕಿಣಿ, ವಿ ನಾಗೇಂದ್ರ ಪ್ರಸಾದ್, ಕವಿರಾಜ್ ಅವರ ಸರಳ-ಸುಂದರ ಸಾಲುಗಳು, ಯೋಗರಾಜ್ ಭಟ್ ಅವರ ಆಡುಭಾಷೆಯ ಸೊಗಡು ಮತ್ತು ಹೊಸಬರ ಪ್ರಯೋಗಶೀಲ ಬರಹಗಳು ಕನ್ನಡಕ್ಕೆ ಹೊಸ ಕಳೆಯನ್ನು ತಂದಿವೆ. ಈಗಿನ ಪ್ರೇಕ್ಷಕರು ಕೇವಲ ಅಬ್ಬರವನ್ನಷ್ಟೇ ಅಲ್ಲದೆ, ಅರ್ಥಪೂರ್ಣವಾದ ಸಾಹಿತ್ಯವನ್ನೂ ಇಷ್ಟಪಡುತ್ತಿದ್ದಾರೆ ಎಂಬುದಕ್ಕೆ ಇತ್ತೀಚಿನ ಕೆಲವು ಯಶಸ್ವಿ ಚಿತ್ರಗಳೇ ಸಾಕ್ಷಿ. ಸಾಹಿತ್ಯವು ಕೇವಲ ಗ್ರಾಂಥಿಕ ಭಾಷೆಯಾಗದೆ, ಜನಸಾಮಾನ್ಯರ ನೋವು-ನಲಿವಿಗೆ ಸ್ಪಂದಿಸುವ ದನಿಯಾಗುತ್ತಿರುವುದು ಆಶಾದಾಯಕ ಬೆಳವಣಿಗೆ.

ಸವಾಲು, ಭವಿಷ್ಯದ ಹಾದಿ

ಸಿನಿಮಾ ಸಾಹಿತ್ಯದ ಇಂದಿನ ಅತಿದೊಡ್ಡ ಸವಾಲೆಂದರೆ ಅದು ಆಯಸ್ಸು. ಅಂದಿನ ಹಾಡುಗಳು ದಶಕಗಳ ಕಾಲ ಜನರ ಮನದಲ್ಲಿ ಉಳಿಯುತ್ತಿದ್ದವು, ಆದರೆ ಇಂದಿನ ಸಾಹಿತ್ಯವು ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಮರೆತುಹೋಗುತ್ತಿದೆ. ಇದಕ್ಕೆ ಕಾರಣ ಮೌಲ್ಯಗಳ ಕೊರತೆ ಮತ್ತು ಅತಿಯಾದ ವೇಗ. ಭವಿಷ್ಯದಲ್ಲಿ ಸಿನಿಮಾ ಸಾಹಿತ್ಯವು ಉಳಿಯಬೇಕಾದರೆ, ಅದು ಕಾಲಕ್ಕೆ ತಕ್ಕಂತೆ ಬದಲಾಗುತ್ತಲೇ ತನ್ನ ಮೂಲ ಮೌಲ್ಯಗಳನ್ನು ಜತೆಗಿಟ್ಟುಕೊಳ್ಳಬೇಕು.

ಕೃತಕ ಬುದ್ಧಿಮತ್ತೆಯಂಥ ತಂತ್ರಜ್ಞಾನದ ಕಾಲದಲ್ಲಿ ಮನುಷ್ಯಸಹಜವಾದ ಸಂವೇದನೆ ಮತ್ತು ಅನುಭವದ ಬರಹಗಳಿಗೆ ಮಾತ್ರ ನಿಜವಾದ ಬೆಲೆ ಇರಲಿದೆ.

ಸಿನಿಮಾ ಸಾಹಿತ್ಯದ ಏಳುಬೀಳುಗಳು ಸಮಾಜದ ಮಾನಸಿಕ ಸ್ಥಿತಿಯ ಪ್ರತಿಬಿಂಬವಿದ್ದಂತೆ. ಸಮಾಜದ ಅಭಿರುಚಿ ಬದಲಾದಂತೆ ಸಾಹಿತ್ಯದ ಶೈಲಿಯೂ ಬದಲಾಗಿದೆ. ಆದರೆ, ಯಾವುದೇ ಭಾಷೆಯ ಅಸ್ತಿತ್ವವಿರುವುದು ಅದರ ಸಾಹಿತ್ಯದ ಶಕ್ತಿಯಲ್ಲಿ. ಕನ್ನಡ ಸಿನಿಮಾ ರಂಗವು ಮತ್ತೆ ಸಾಹಿತ್ಯಿಕವಾಗಿ ಶ್ರೀಮಂತವಾಗಬೇಕಾದರೆ, ನಿರ್ದೇಶಕರು ಮತ್ತು ಸಾಹಿತಿಗಳ ನಡುವೆ ಗಾಢವಾದ ಬಾಂಧವ್ಯವಿರಬೇಕು. ಬೆಳ್ಳಿಪರದೆಯ ಮೇಲಿನ ಅಕ್ಷರಗಳು ಕೇವಲ ಬಣ್ಣಗಳಾಗದೆ, ಬದುಕನ್ನು ಬೆಳಗುವ ದೀಪಗಳಾಗಲಿ ಎಂಬುದು ಪ್ರತಿಯೊಬ್ಬ ಚಲನಚಿತ್ರ ಪ್ರೇಮಿಯ ಆಶಯ.

ಹನಿಗವನ

ತಿರುಪತಿ ಲಡ್ಡು!

ಒಂದು ಕಾಲಕ್ಕೆ ತಿರುಪತಿ ಲಡ್ಡು
ತಿಂದರೆ ಸಾರ್ಥಕ ಬದುಕಿದ್ದು
ಇಂದು ಇದರ ಕಥೆ ಬೇರೆ
ಎರೆದಿದ್ದಾರೆ ಕಲುಷಿತ ತುಪ್ಪದ ಧಾರೆ
ಭಕ್ತರ ನಂಬಿಕೆಗೆ
ಬಿದ್ದಿದೆ ಗುದ್ದು!
ಮಾನವನ ದುರಾಸೆಯ ಪರಾಕಾಷ್ಠೆ
ತಿರುಪತಿ ಲಡ್ಡು ಪ್ರಸಾದವನ್ನೂ
ಬಿಟ್ಟಿಲ್ಲ- ಇವನ ಕುಚೇಷ್ಟೆ
ದೈವಪ್ರೀತಿ, ಪಾಪಭೀತಿ ಇಲ್ಲದಿವನ
ಗುರಿಯೊಂದೆ ದುಡ್ಡು ಮಾಡಬೇಕು
ಅಷ್ಟೇ..

• ಎಚ್. ಪ್ರಹ್ಲಾದ ರಾವ್, ಬೆಂಗಳೂರು

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಅವನಿಗೆ ಸರ ತರಲೇನು ಗಡಿಬಿಡಿ (4)
3. ಆಗೋ, ಅಲ್ಲಿರುವುದು ಕಣ್ಣಿಗೆ ಕಾಣದ ಎಂದರ್ಥ (4)
7. ಮಹಾಭಾರತದಲ್ಲಿ ಕೌರವರ ರಾಜಧಾನಿಯಾಗಿದ್ದ ನಗರ (5)
9. ಎರಡಕ್ಷರದಲ್ಲಿ ಎಳ್ಳು (2)
11. ಪುತ್ರ ಅಥವಾ ಸುತ (2)
13. ನಗುನಗುತ್ತಾ ತಂದ ಒಡವೆ (2)
14. ಎಸೆಯಬೇಕಾದ, ಬೇಡವಾದ ವಸ್ತು (2)
16. ಇದು ಬರೀ ಒಣಹೆಮ್ಮೆ (5)
19. ಕರ ಮುಗಿದಾಗ ಕಂಡ ಭರಣಿ (4)
20. ಮಗನ ಸಾವಿನಿಂದ ಉಂಟಾದ ನೋವು (4)

ಮೇಲಿಂದ ಕೆಳಕ್ಕೆ

1. ಅವನ ಕೀಳುದೆಸೆ ಅತಿಯಾಗಿದೆ (4)
2. ಅತಿಯಾದ ಆಕರ್ಷಣೆ, ಮೋಹ (3)
4. ಸಾಮಾನ್ಯವಾಗಿ ದೇವಾಲಯದ ಮಹಾದ್ವಾರದ ಮೇಲಿರುವ ಶಿಖರ (3)
5. ರಂಗ ಹೋಗಿರುವ ಯುದ್ಧಭೂಮಿ (4)
6. ತಲೆಕೆಳಗಾಗಿರುವ ನೀರು ಹರಿಯುವ ಕಾಲುವೆ (2)
8. ಕುಬೇರನ ವಿಮಾನದ ಹೆಸರು (3)
10. ಸುವಾಸನೆಯುಕ್ತ ಒಂದು ಸಂಬಾರ ಪದಾರ್ಥ (3)
11. ಕಮರುವುದನ್ನು ಕಂಡಾಗ ಉಂಟಾದ ಕರುಣೆ (3)
12. ಚಿನ್ನಕ್ಕೆ ಮತ್ತೊಂದು ಪದವಿದು (3)
13. ಮನುಷ್ಯರು ಇರುವ ಜಗತ್ತು (4)
15. ನೆರವು ನೀಡಲು ಇರುವವನು (4)
16. ಮನದ ಚಿಂತೆ, ವ್ಯಸನವೂ ಆದೀತು (3)
17. ಗೋಡೆಗೆ ಇನ್ನೊಂದು ಹೆಸರಾದೀತು (2)
18. ಆಗಸದಲ್ಲಿ ಹೊಳೆಯುವ ತಾರೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಅವಸರ 3.ಅಗೋಚರ
7.ಹಸ್ತಿನಾಪುರ 9.ತಿಲ
11.ಮಗ 13.ನಗ 14.ಕಸ
16.ದುರಭಿಮಾನ
19.ಕರಂಡಕ 20.ಪುತ್ರಶೋಕ

ಮೇಲಿಂದ ಕೆಳಕ್ಕೆ
1.ಅವನತಿ 2.ಸಮ್ಮೋಹ 4.ಗೋಪುರ
5.ರಣರಂಗ 6.ಲೆನಾ 8.ಪುಷ್ಪಕ
10.ಲವಂಗ 11.ಮರುಕ 12.ಬಂಗಾರ
13.ನರಲೋಕ 15.ಸಹಾಯಕ
16.ದುಗುಡ 17.ಭಿತ್ತಿ 18.ನಕ್ಷತ್ರ

ಮೃತ್ಯುವನ್ನೇ ಗೆದ್ದ ಮಾರ್ಕಂಡೇಯನ ಅಚಲ ಭಕ್ತಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಹಿಂದೆ ಮೃಕಂಡು ಎಂಬ ಮಹರ್ಷಿಗಳಿದ್ದರು. ಅವರಿಗೆ ಬಹಳ ಕಾಲದವರೆಗೆ ಮಕ್ಕಳಿರಲಿಲ್ಲ. ಕಠಿಣ ತಪಸ್ಸಿನ ನಂತರ ಪರಶಿವನು ಅವರಿಗೆ ದರ್ಶನ ನೀಡಿ ಒಂದು ಆಯ್ಕೆಯನ್ನು ನೀಡಿದನು: 'ನಿನಗೆ ನೂರು ವರ್ಷ ಬದುಕುವ ಸಾಮಾನ್ಯ ಮಗ ಬೇಕೇ? ಅಥವಾ ಕೇವಲ 16 ವರ್ಷ ಬದುಕುವ ಅಸಾಧಾರಣ ಜ್ಞಾನಿ ಬೇಕೇ?' ಎಂದು ಕೇಳಿದನು. ಮಹರ್ಷಿಗಳು ಜ್ಞಾನವಂತ ಮಗನನ್ನೇ ಆರಿಸಿಕೊಂಡರು. ಹಾಗೆ ಜನಿಸಿದವನೇ ಮಾರ್ಕಂಡೇಯ.

ಮಾರ್ಕಂಡೇಯನು ಬಾಲ್ಯದಿಂದಲೇ ಪರಮ ಶಿವಭಕ್ತನಾಗಿದ್ದನು. ಅವನ ಮುಖದಲ್ಲಿ ದೈವಿಕ ತೇಜಸ್ಸಿತ್ತು. ಆದರೆ ಅವನು 16ನೇ ವರ್ಷಕ್ಕೆ ಕಾಲಿಡುತ್ತಿದ್ದಂತೆ, ಅವನ ತಂದೆ-ತಾಯಿಯ ಮುಖದಲ್ಲಿ ಕಳವಳ ಹೆಚ್ಚಾಯಿತು. ಅವರ ಕಣ್ಣೀರಿಗೆ ಕಾರಣವೇನೆಂದು ಮಾರ್ಕಂಡೇಯ ಕೇಳಿದಾಗ, ಅವನ ಅಲ್ಪಾಯುಷ್ಯದ ರಹಸ್ಯ ಬಯಲಾಯಿತು. ಆದರೆ ಮಾರ್ಕಂಡೇಯ ಅಂಜಲಿಲ್ಲ. ಅವನು ತನ್ನ ಹೆತ್ತವರಿಗೆ ಧೈರ್ಯ ಹೇಳಿ, 'ಜನ್ಮ ನೀಡಿದವನು ಆ ಪರಶಿವನೇ ಆಗಿರುವಾಗ, ಮರಣದ ಭಯವೇಕೆ?' ಎಂದು ಕೇಳಿದನು.

ಮಾರ್ಕಂಡೇಯನ 16ನೇ ವರ್ಷದ ಕೊನೆಯ ದಿನ ಬಂದಿತು. ಅವನು ಸಮುದ್ರದ ತೀರದಲ್ಲಿ ಒಂದು ಮರಳಿನ ಶಿವಲಿಂಗವನ್ನು ಮಾಡಿ, ಅದರ ಮುಂದೆ ಕುಳಿತು ತನ್ಮಯತೆಯಿಂದ ಧ್ಯಾನಿಸಲು ಆರಂಭಿಸಿದನು. ಅಷ್ಟರಲ್ಲಿ, ಕಾಲನ ದೂತರು ಅವನ ಪ್ರಾಣವನ್ನು ಕೊಂಡೊಯ್ಯಲು ಬಂದರು. ಆದರೆ ಮಾರ್ಕಂಡೇಯನ ಸುತ್ತಲಿದ್ದ ಶಿವಶಕ್ತಿಯ ಪ್ರಭಾವದಿಂದ ಅವರು ಹತ್ತಿರ ಸುಳಿಯಲು ಸಾಧ್ಯವಾಗಲಿಲ್ಲ. ಕೊನೆಗೆ ಸಾಕ್ಷಾತ್ ಯಮಧರ್ಮರಾಜನೇ ತನ್ನ ಮಹಿಷನನ್ನೇರಿ ಬಂದನು. ಯಮನು ತನ್ನ ಕಾಲಪಾಶವನ್ನು ಎಸೆದಾಗ, ಮಾರ್ಕಂಡೇಯನು ಭಯದಿಂದ ಶಿವಲಿಂಗವನ್ನು ಗಟ್ಟಿಯಾಗಿ ಅಪ್ಪಿಕೊಂಡನು. ಅಂದು ಅವನ ಅಂತರಾಳದಿಂದ ಹೊರಹೊಮ್ಮಿದ ಶಕ್ತಿಯುತ ಸ್ತೋತ್ರವೇ ಮಹಾ ಮೃತ್ಯುಂಜಯ ಮಂತ್ರ. ಅದು ಹೀಗಿದೆ:

ಓಂ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಮ್ ।
ಉರ್ವಾರುಕಮಿವ ಬಂಧನಾನ್
ಮೃತ್ಯೋರ್ಮುಕ್ಷೀಯ ಮಾಮೃತಾತ್ ॥

ಯಮನ ಪಾಶವು ಮಾರ್ಕಂಡೇಯ ಮತ್ತು ಶಿವಲಿಂಗ ಎರಡನ್ನೂ ಸುತ್ತಿಕೊಂಡಿತು. ತನ್ನ ಭಕ್ತನಿಗೆ ಸಂಕಷ್ಟ ಬಂದಾಗ ಕೈಬಿಡದ ಮಹಾದೇವನು ತಕ್ಷಣವೇ ಲಿಂಗದಿಂದ ಪ್ರಕಟನಾದನು. ಉಗ್ರರೂಪ ತಾಳಿದ ಶಿವನು ಯಮನನ್ನು ತಡೆದು, 'ಮಾರ್ಕಂಡೇಯನು ನನ್ನ ರಕ್ಷಣೆಯಲ್ಲಿದ್ದಾನೆ, ಅವನಿಗೆ ಸಾವಿಲ್ಲ' ಎಂದು ಘೋಷಿಸಿದನು. ಅಂದಿನಿಂದ ಮಾರ್ಕಂಡೇಯನು 'ಸಪ್ತ ಚಿರಂಜೀವಿಗಳ' ಜತೆಗೆ ಒಬ್ಬ 'ಹೆಚ್ಚುವರಿ' ಅಥವಾ 'ವಿಶೇಷ' ಚಿರಂಜೀವಿ ಎನಿಸಿಕೊಂಡನು.

ಮಹಾ ಮೃತ್ಯುಂಜಯ ಮಂತ್ರವು ಕೇವಲ ಒಂದು ಪ್ರಾರ್ಥನೆಯಲ್ಲ, ಅದೊಂದು ದೈವಿಕ ರಕ್ಷಾಕವಚ. ಬದುಕಿನಲ್ಲಿ ಎದುರಾಗುವ ಸಾವು, ರೋಗ ಅಥವಾ ಸಂಕಷ್ಟಗಳ ಭಯವನ್ನು ಇದು ದೂರಮಾಡುತ್ತದೆ. ಹೇಗೆ ಒಂದು ಸೌತೆಕಾಯಿಯು ಹಣ್ಣಾದ ನಂತರ ಬಳ್ಳಿಯಿಂದ ತಾನಾಗಿಯೇ ಸುಲಭವಾಗಿ ಬೇರ್ಪಡುತ್ತದೆಯೋ (ಉರ್ವಾರುಕಮಿವ ಬಂಧನಾನ್), ಹಾಗೆಯೇ ಈ ಮಂತ್ರವು ನಮ್ಮನ್ನು ಅಜ್ಞಾನ ಮತ್ತು ಸಂಸಾರದ ಬಂಧನದಿಂದ ನೋವಿಲ್ಲದೆ ಬಿಡುಗಡೆ ಮಾಡಿ ಜ್ಞಾನದತ್ತ ಕೊಂಡೊಯ್ಯುತ್ತದೆ. ಸಂಕಷ್ಟದ

ಸಮಯದಲ್ಲಿ ಮನುಷ್ಯನು ಮಾನಸಿಕವಾಗಿ ಕುಗ್ಗಿದಾಗ, ಈ ಮಂತ್ರದ ಪಠಣವು ಅಂತರಾಳದಲ್ಲಿ ಅದಮ್ಯವಾದ ಧೈರ್ಯವನ್ನು ತುಂಬುತ್ತದೆ. ಈ ಮಂತ್ರವನ್ನು ಪಠಿಸುವಾಗ ಪ್ರತಿಯೊಂದು ಪದದ ಅರ್ಥವನ್ನು ಮನಸ್ಸಿನಲ್ಲಿ ಸ್ಮರಿಸಿದರೆ, ಅದು ನಮ್ಮ ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ.

ಮಾರ್ಕಂಡೇಯ ಪುರಾಣವು 18 ಮಹಾಪುರಾಣಗಳಲ್ಲಿ ಒಂದಾಗಿದ್ದು, ಮಾರ್ಕಂಡೇಯ ಮಹರ್ಷಿಗಳ ಹೆಸರಿನಲ್ಲೇ ಇದೆ. ಇದರಲ್ಲಿ ಅವರ ಜೀವನ ಮತ್ತು ಅವರು ಪಡೆದ ಜ್ಞಾನದ ಬಗ್ಗೆ ವಿವರವಾದ ಉಲ್ಲೇಖವಿದೆ. ಶಿವನ ಮಹಿಮೆಯನ್ನು ಸಾರುವ ಶಿವ ಪುರಾಣದಲ್ಲಿ, ಭಕ್ತ ಮಾರ್ಕಂಡೇಯನನ್ನು ಮೃತ್ಯುವಿನಿಂದ ಶಿವನು ಹೇಗೆ ರಕ್ಷಿಸಿದನು ಎಂಬ ಘಟನೆಯನ್ನು 'ಮೃತ್ಯುಂಜಯ' ರೂಪದ ವರ್ಣನೆಯಲ್ಲಿ ನೀಡಲಾಗಿದೆ. ಲಿಂಗ ಪುರಾಣದಲ್ಲಿಯೂ ಶಿವಲಿಂಗದ ಮಹತ್ವವನ್ನು ವಿವರಿಸುವಾಗ ಈ ಕಥೆಯನ್ನು ಉಲ್ಲೇಖಿಸಲಾಗಿದೆ.

ಪುರಾಣಗಳ ಪ್ರಕಾರ, ಮಾರ್ಕಂಡೇಯನು ಇಂದಿಗೂ ಅದೃಶ್ಯ ರೂಪದಲ್ಲಿ ಬದುಕಿರುವ ಚಿರಂಜೀವಿಗಳಲ್ಲಿ ಒಬ್ಬನು ಎಂದು ನಂಬಲಾಗುತ್ತದೆ. ಮಹಾ ಮೃತ್ಯುಂಜಯ ಮಂತ್ರವು ಮೊದಲಿಗೆ ಋಗ್ವೇದದಲ್ಲಿ ಕಂಡುಬರುತ್ತದೆ. ಇದನ್ನು 'ರುದ್ರ ಮಂತ್ರ' ಎಂದೂ ಕರೆಯುತ್ತಾರೆ. ಮಾರ್ಕಂಡೇಯನು ಈ ಮಂತ್ರವನ್ನು ನಿರಂತರವಾಗಿ ಜಪಿಸಿ ಮೃತ್ಯುವನ್ನು ಗೆದ್ದಿದ್ದರಿಂದ, ಇದಕ್ಕೆ ಮೃತ್ಯುಂಜಯ ಮಂತ್ರ ಎಂಬ ಹೆಸರು ಅನ್ವರ್ಥವಾಯಿತು. ಜೀವನದಲ್ಲಿ ನಮಗೆ ಮುಂದೇನು ಎಂದು ತಿಳಿಯದಿದ್ದಾಗ ಭಗವಂತನಿಗೆ ನಮ್ಮನ್ನು ಸಮರ್ಪಿಸಿಕೊಂಡರೆ ಅವನೇ ನಮಗೆ ದಾರಿಯನ್ನು ತೋರುತ್ತಾನೆ. ಅವನಿಗೆ ಶರಣಾದವರು ಎಂದಿಗೂ ಸೋತಿದ್ದಿಲ್ಲ. ಸಾವಿನ ಭಯಕ್ಕಿಂತ ಭಕ್ತಿಯ ಶಕ್ತಿ ದೊಡ್ಡದು ಎಂಬುದನ್ನು ಮರೆಯದಿರೋಣ...

ನೀವೂ ಬರೆಯಬಹುದು | ನಮ್ಮ ವಿಳಾಸ | ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಒಂದ್ ಕಪ್ ಮಾತು

ರೋಹಿತ್ ದಾಖಲೆ ಮುರಿದ ಸಿಕಂದರ್

ಕೊಲಂಬೊ: ಇಲ್ಲಿನ ಆರ್. ಪ್ರೇಮದಾಸ ಕ್ರೀಡಾಂಗಣ ದಲ್ಲಿ ಗುರುವಾರ ನಡೆದಿದ್ದ ಟಿ20 ವಿಶ್ವಕಪ್ ಗ್ರೂಪ್ ಹಂತದ ಕೊನೆಯ ಪಂದ್ಯ ದಲ್ಲಿ ಜಿಂಬಾಬ್ವೆ ತಂಡ ಶ್ರೀಲಂಕಾವನ್ನು 6 ವಿಕೆಟ್‌ಗಳ ಅಂತರದಿಂದ ಮಣಿಸಿ ಭರ್ಜರಿ ಜಯ ಸಾಧಿಸಿತ್ತು. ಪಂದ್ಯದಲ್ಲಿ ಜಿಂಬಾಬ್ವೆ ನಾಯಕ ಸಿಕಂದರ್ ರಜಾ ಕೇವಲ 26 ಎಸೆತ ಗಳಲ್ಲಿ 45 ರನ್ ಗಳಿಸಿ ಮಿಂಚಿದರು. ಅದೇ ವೇಳೆ ಅವರು ರೋಹಿತ್ ಶರ್ಮ ಅವರ ದಾಖಲೆಯೊಂದನ್ನು ಮುರಿದರು. 39 ವರ್ಷದ ರಜಾ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆಯುವ ಮೂಲಕ ಟಿ20 ವಿಶ್ವಕಪ್‌ನಲ್ಲಿ ಪ್ರಶಸ್ತಿ ಗೆದ್ದ ಅತ್ಯಂತ ಹಿರಿಯ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಆಫ್ಘಾನ್ ಕೋಚ್ ಭಾವುಕ ವಿದಾಯ

ಚೆನ್ನೈ: ಟಿ20 ವಿಶ್ವಕಪ್‌ನಲ್ಲಿ ಅಫಘಾನಿಸ್ತಾನ ತಂಡದ ಪ್ರಯಾಣ ಕೊನೆಗೊಂಡಿದ್ದು, ಅದರ ಜೊತೆಗೆ, ತಂಡದ ಹೆಡ್ ಕೋಚ್ ಜೊನಾಥನ್ ಟ್ರಾಟ್ ಅವರ ಪ್ರಯಾಣವೂ ಕೊನೆಗೊಂಡಿದೆ. ಹೆಡ್ ಕೋಚ್ ಆಗಿ ತಮ್ಮ ಅಂತಿಮ ಪಂದ್ಯದ ನಂತರ ಟ್ರಾಟ್ ಭಾವುಕರಾ ಗಿದ್ದರು. ಪತ್ರಿಕಾಗೋಷ್ಠಿಯಲ್ಲಿ ಟ್ರಾಟ್ ಕಣ್ಣೀರು ಹಾಕಿದರು. 'ಪ್ರಸ್ತುತ ಆಫ್ಘಾನ್ ತಂಡವು ಯಾವುದೇ ಪ್ರಮುಖ ತಂಡವನ್ನು ಅಚ್ಚರಿಗೊ ಳಿಸುವ ಸಾಮರ್ಥ್ಯವನ್ನು ಹೊಂದಿದೆ' ಎಂದಿದ್ದಾರೆ. ಈ ವೇಳೆ ಅವರ ಧ್ವನಿಯು ಮೃದುವಾಗಿತ್ತು. ಐರ್ಲೆಂಡ್‌ನ ತಮ್ಮ ಮೊದಲ ಕ್ರಿಕೆಟ್ ಪ್ರವಾಸವನ್ನು ನೆನಪಿಸಿಕೊಂಡು ಭಾವುಕರಾದರು. ಆ ಪ್ರವಾಸದಲ್ಲಿ ಅವರು ನೋಡಿದ ವಿಷಯಗಳನ್ನು ಮೆಲಕು ಹಾಕಿದರು.

ಇಂಡೋ-ಪಾಕ್ ದಾಖಲೆ ಡಿಜಿಟಲ್ ವೀಕ್ಷಣೆ

ಕೊಲಂಬೊ: ಫೆಬ್ರವರಿ 15ರಂದು ಇಲ್ಲಿ ನಡೆದ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ವಿಶ್ವಕಪ್ ಪಂದ್ಯ ಡಿಜಿಟಲ್ ಜಗತ್ತಿನಲ್ಲಿ ಹೊಸ ದಾಖಲೆಯನ್ನೇ ಬರೆದಿದೆ. ಈ ಪಂದ್ಯವು ಟಿ20 ವಿಶ್ವಕಪ್ ಇತಿಹಾಸದಲ್ಲೇ ಅತಿ ಹೆಚ್ಚು ವೀಕ್ಷಿಸಲ್ಪಟ್ಟ ಪಂದ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಭಾರತದಲ್ಲಿ ಐಸಿಸಿ ಟಿ20 ವಿಶ್ವಕಪ್ 2026 ಟೂರ್ನಿಯ ಅಧಿಕೃತ ಪ್ರಸಾರಕ ರಾಗಿರುವ ಜಿಯೋ ಸ್ಟಾರ್ ಒಟಿಟಿಯಲ್ಲಿ ಪ್ರಸಾರವಾದ ಈ ಪಂದ್ಯವನ್ನು ಬರೋಬ್ಬರಿ 16 ಮಿಲಿಯನ್(16.3 ಕೋಟಿ) ಮಂದಿ ವೀಕ್ಷಿಸಿದ್ದಾರೆ. ಟಿ20 ವಿಶ್ವಕಪ್ ಇತಿಹಾ ಸದಲ್ಲೇ ಬೇರೆ ಯಾವ ಪಂದ್ಯವನ್ನೂ ಇಷ್ಟು ದೊಡ್ಡ ಪ್ರಮಾಣದಲ್ಲಿ ವೀಕ್ಷಿಸಿದ ಉದಾಹರಣೆಯಿಲ್ಲ. ಈ ಹಿಂದಿನ ದಾಖಲೆಗಳ ಪ್ರಕಾರ 2024ರ ಟಿ20 ವಿಶ್ವಕಪ್‌ನಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ನಡೆದ ಪಂದ್ಯವು ಈವರೆಗಿನ ದಾಖಲೆಯಾಗಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿ ವೀಕ್ಷಕರ ಸಂಖ್ಯೆಯಲ್ಲಿ ಶೇ.56 ರಷ್ಟು ಏರಿಕೆಯಾಗಿದೆ. ಎಲ್ಲಾ ಪರದೆಗಳಲ್ಲೂ ಸೇರಿಸಿ ಒಟ್ಟು 20 ಬಿಲಿಯನ್ (2000 ಕೋಟಿ) ನಿಮಿಷಗಳ ವೀಕ್ಷಣಾ ಸಮಯ ಈ ಪಂದ್ಯಕ್ಕೆ ಲಭಿಸಿದೆ.

ಚಾಹರ್-ಇಶಾನಿ ವಿಚ್ಛೇದನ ನಿರ್ಧಾರ

ದೆಹಲಿ: ಭಾರತ ತಂಡದ ಸ್ಪಿನ್ನರ್ ರಾಹುಲ್ ಚಾಹರ್ ಮತ್ತು ಇಶಾನಿ ಜೋಹರ್ ವೈವಾಹಿಕ ಬದುಕಿನಿಂದ ಈಗ ಬೇರ್ಪಟ್ಟಿದ್ದಾರೆ. ಸುಮಾರು ನಾಲ್ಕು ವರ್ಷಗಳ ದಾಂಪತ್ಯದ ನಂತರ, ರಾಹುಲ್ ಇಶಾನಿಯಿಂದ ವಿಚ್ಛೇದನ ಪಡೆದಿದ್ದಾರೆ. ಇಬ್ಬರೂ ಪರಸ್ಪರ ವಿಚ್ಛೇದನಕ್ಕೆ ಒಪ್ಪಿಕೊಂಡಿದ್ದಾರೆ. ರಾಹುಲ್ ಸ್ವತಃ ಈ ಮಾಹಿತಿಯನ್ನು ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡುವ ಮೂಲಕ ಹಂಚಿಕೊಂಡಿದ್ದಾರೆ. 'ನಾನು ತುಂಬಾ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿಕೊಂಡೆ. ಆ ಸಮಯದಲ್ಲಿ, ನನ್ನನ್ನು, ನನ್ನ ಮೌಲ್ಯವನ್ನು ಮತ್ತು ನನ್ನ ಜೀವನದ ದಿಕ್ಕನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಿಲ್ಲ' ಎಂದು ಬರೆದಿದ್ದಾರೆ. ರಾಹುಲ್ ಮತ್ತು ಇಶಾನಿ ಮಾರ್ಚ್ 2022ರಲ್ಲಿ ವಿವಾಹವಾದರು, ಆಗ ರಾಹುಲ್ ಕೇವಲ 22 ವರ್ಷ ವಯಸ್ಸಿನವರಾಗಿದ್ದರು.

ಇಂದಿನಿಂದ ಮಾರ್ಚ್ 1ರ ವರೆಗೆ ಟಿ20 ವಿಶ್ವಕಪ್ 2ನೇ ಹಂತದ ಹಣಾಹಣಿ | ಮೊದಲ ದಿನ ಒಂದೇ ಪಂದ್ಯ

ಸೂಪರ್-8: ಇಂದು ನ್ಯೂಜಿಲೆಂಡ್-ಪಾಕಿಸ್ತಾನ ಕದನ

ಕೊಲಂಬೊ: ಟಿ20 ವಿಶ್ವಕಪ್‌ನಲ್ಲಿ ಇಂದಿನಿಂದ 2ನೇ ಹಂತದ ಪಂದ್ಯಗಳು ಆರಂಭವಾಗಲಿದ್ದು, ಇಲ್ಲಿನ ಪ್ರೇಮದಾಸ ಕ್ರೀಡಾಂಗಣದಲ್ಲಿ ನ್ಯೂಜಿಲೆಂಡ್ ತಂಡವು ಪಾಕಿಸ್ತಾನವನ್ನು ಎದುರಿಸಲಿದೆ.

ಎ ಬಣದಿಂದ ಪ್ರಥಮ ಸ್ಥಾನಿಯಾಗಿ ಭಾರತ ತಂಡ ಮತ್ತು ದ್ವಿತೀಯ ಸ್ಥಾನಿಯಾಗಿ ಪಾಕಿಸ್ತಾನ ಸೂಪರ್ 8 ಹಂತಕ್ಕೇರಿವೆ. ಅದೇ ರೀತಿಯ ಬಿ ಗುಂಪಿನಿಂದ ಕ್ರಮವಾಗಿ ಶ್ರೀಲಂಕಾ, ಜಿಂಬಾಬ್ವೆ, ಸಿ ಗುಂಪಿನಿಂದ ವೆಸ್ಟ್ ಇಂಡೀಸ್, ಇಂಗ್ಲೆಂಡ್, ಡಿ ಗುಂಪಿನಿಂದ ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್‌ಗಳು ಮೊದಲೆರಡು ಸ್ಥಾನಗಳನ್ನು ಲೀಗ್ ಹಂತವನ್ನು ತಲುಪಿ ಸೂಪರ್ 8 ಹಂತಕ್ಕೇರಿ ನಿಂತಿವೆ.

ಇದೀಗ ಸೂಪರ್ 8 ಹಂತಕ್ಕೇರಿದ 8 ತಂಡಗಳನ್ನು 2 ಬಣಗಳಲ್ಲಿ ವಿಂಗಡಿಸಲಾಗಿದೆ. ಎಕ್ಸ್ ಬಣದಲ್ಲಿ ಭಾರತ, ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ ಮತ್ತು ಜಿಂಬಾಬ್ವೆ ತಂಡಗಳಿವೆ. ಅದೇ ರೀತಿ ವೈ ಬಣದಲ್ಲಿ ಇಂಗ್ಲೆಂಡ್, ನ್ಯೂಜಿಲೆಂಡ್, ಪಾಕಿಸ್ತಾನ ಮತ್ತು ಶ್ರೀಲಂಕಾ ತಂಡಗಳು ಇರಲಿವೆ. ಪ್ರತಿಯೊಂದು ತಂಡವೂ ತನ್ನ ಬಣದಲ್ಲಿರುವ ಉಳಿದ ಮೂರು ತಂಡಗಳ ವಿರುದ್ಧ ಆಡಬೇಕಿದೆ. ಅಂದರೆ ಸೂಪರ್-8 ಹಂತದಲ್ಲಿ ಪ್ರತಿಯೊಂದು ತಂಡಕ್ಕೂ 3 ಪಂದ್ಯಗಳು ಇರಲಿವೆ. ಬಣದಲ್ಲಿ ಮೊದಲೆರಡು ಸ್ಥಾನ ಪಡೆದವರು ಸೆಮಿಫೈನಲ್ ಪ್ರವೇಶಿಸಲಿದ್ದಾರೆ.

ಗುಂಪು ಹಂತದಲ್ಲಿ 4 ಪಂದ್ಯಗಳನ್ನು ಆಡಿರುವ ನ್ಯೂಜಿಲೆಂಡ್ ತಂಡವು ತನ್ನ ನಾಲ್ಕು ಪಂದ್ಯಗಳ ಪೈಕಿ ಮೂರು ಪಂದ್ಯಗಳನ್ನೂ ಗೆದ್ದಿತ್ತು. ಲೀಗ್ ಹಂತದ ಮೊದಲ ಪಂದ್ಯದಲ್ಲಿ ಅದು ಫೆ.8ರಂದು ಅಫಘಾನಿಸ್ತಾನದ ವಿರುದ್ಧ 5 ವಿಕೆಟ್‌ಗಳಿಂದ ಜಯ ಸಾಧಿಸಿತ್ತು. ಕಿವೀಸ್ ತನ್ನ ಎರಡನೇ ಪಂದ್ಯದಲ್ಲಿ ಯುಎಇ ವಿರುದ್ಧ 10 ವಿಕೆಟ್‌ಗಳ ಜಯ ದಾಖಲಿಸಿತ್ತು.

ಮೂರನೇ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು ದ.ಆಫ್ರಿಕಾವನ್ನು ಎದುರಿಸಲಿದ್ದು, ಆ ಪಂದ್ಯದಲ್ಲಿ ದ.ಆಫ್ರಿಕಾ 7 ವಿಕೆಟ್‌ಗಳಿಂದ ಗೆಲುವನ್ನು ಸಾಧಿಸಿ ಕಿವೀಸ್‌ಗೆ ಮುಖಭಂಗ ಮಾಡಿತ್ತು. ಫೆ.14ರಂದು ನಡೆದಿದ್ದ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು ಕೆನಡಾ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿ ಸೂಪರ್-8 ಪ್ರವೇಶಿಸಿತ್ತು.

ಪಾಕಿಸ್ತಾನ ಕೂಡಾ ಲೀಗ್ ಹಂತದ 4 ಪಂದ್ಯಗಳ ಪೈಕಿ 3 ರಲ್ಲಿ ಗೆದ್ದಿತ್ತು. ಫೆ.7ರಂದು ನಡೆದಿದ್ದ ಪಂದ್ಯದಲ್ಲಿ ಪಾಕ್ ತಂಡವು ನೆದರ್ಲೆಂಡ್ ವಿರುದ್ಧ 3 ವಿಕೆಟ್‌ಗಳಿಂದ ಗೆಲ್ಲುವ ಮೂಲಕ ಈ ಸಲದ ವಿಶ್ವಕಪ್‌ನಲ್ಲಿ ಶುಭಾರಂಭ ಮಾಡಿತ್ತು. ಫೆ.10ರಂದು ಪಾಕಿಸ್ತಾನವು ಅಮೆರಿಕ ವಿರುದ್ಧ 32 ರನ್‌ಗಳಿಂದ ಜಯ ಸಾಧಿಸಿತ್ತು. ಆದರೆ ತನ್ನ 3ನೇ ಪಂದ್ಯದಲ್ಲಿ ಭಾರತದ ವಿರುದ್ಧ ಅದು ಮಂಡಿಯೂರಿತ್ತು. 4ನೇ ಪಂದ್ಯದಲ್ಲಿ ನಮೀಬಿಯಾವನ್ನು 102 ರನ್‌ಗಳ ಭರ್ಜರಿ ಅಂತರದಲ್ಲಿ ಸೋಲಿಸುವ ಮೂಲಕ ಪಾಕ್ ಈ ಸಲದ ವಿಶ್ವಕಪ್‌ನ ಸೂಪರ್-8 ಹಂತ ಪ್ರವೇಶಿಸಿತ್ತು.

ತಲಾ 3 ಪಂದ್ಯಗಳನ್ನು ಗೆದ್ದಿರುವ ಎರಡೂ ತಂಡಗಳು ಸಮಬಲ ಹೊಂದಿದಂತಿವೆ. ಮೊದಲ ಸೂಪರ್-8 ಪಂದ್ಯದಲ್ಲಿ ಗೆದ್ದರೂ ಇಲ್ಲವೇ ಸೋತರೂ ಮುಂದೆ ಎರಡೂ ತಂಡಗಳಿಗೂ ತಲಾ 2 ಪಂದ್ಯಗಳಿರುತ್ತವೆ. ಹಾಗಾಗಿ ಮೂರೂ ಪಂದ್ಯಗಳ ಪೈಕಿ ಕನಿಷ್ಟ 2 ಪಂದ್ಯಗಳನ್ನಾದರೂ ಗೆದ್ದರೆ ಸೆಮಿ ಫೈನಲ್ ಪ್ರವೇಶ ಸಿಗಬಹುದು. ಅಂಕಗಳು ಸಮನಾದರೆ ರನ್‌ರೇಟ್ ಪ್ರಮುಖ ಪಾತ್ರ ವಹಿಸಲಿವೆ.

ನ್ಯೂಜಿಲೆಂಡ್ ತಂಡದ ಆಟಗಾರರ ಪೈಕಿ ಟಿಮ್ ಸೀಫರ್ಟ್, ಡೆವೋನ್ ಕಾನ್ವೆ, ಡೇರಿಲ್ ಮಿಚೆಲ್ ಮುಂತಾದವರು ಈಗಾಗಲೇ ನಡೆದ ಗ್ರೂಪ್ ಪಂದ್ಯದಲ್ಲಿ ತಮ್ಮ ಬ್ಯಾಟಿಂಗ್ ಬಲದಿಂದ ತಂಡಕ್ಕೆ ನೆರವಾಗಿದ್ದಾರೆ. ಅದೇ ರೀತಿ ಲಾಕಿ ಫರ್ಗುಸನ್, ಗ್ಲೆನ್ ಫಿಲಿಪ್ಸ್ ಮುಂತಾದವರು ಬೌಲಿಂಗ್‌ನಲ್ಲೂ ತಮ್ಮ ಪರಾಕ್ರಮ ಮೆರೆದಿದ್ದಾರೆ.

ಪಾಕಿಸ್ತಾನ ತಂಡದಲ್ಲಿ ಬಾಬರ್ ಅಜಮ್, ಸಲ್ಮಾನ್ ಆಲಿ ಮತ್ತು ಮೊಹಮ್ಮದ್ ನವಾಜ್ ಮುಂತಾದವರು ಬ್ಯಾಟಿಂಗ್‌ನಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಅದೇ ರೀತಿ ಆಲ್‌ರೌಂಡರ್‌ಗಳಾದ ಮುಹಮ್ಮದ್ ರಿಜ್ವಾನ್, ಶಾದಾನ್ ಖಾನ್ ಕೂಡಾ ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚಿದ್ದಾರೆ. ಬೌಲಿಂಗ್‌ನಲ್ಲಿ ಮೊಹಮ್ಮದ್ ವಾಸಿಮ್, ಹ್ಯಾರಿಸ್ ರೌಫ್ ಮುಂತಾದವರೂ ಈ ಸಲ ತಂಡಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ.

ಹಾಗಾಗಿ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ನಡುವಿನ ಕದನ ತೀವ್ರ ಪೈಪೋಟಿಯಿಂದ ಕೂಡಿರಲಿದೆ ಎಂಬುದು ಕ್ರಿಕೆಟ್‌ಪ್ರೇಮಿಗಳ ನಿರೀಕ್ಷೆಯಾಗಿದೆ.

ಸಂಭಾವ್ಯ ನ್ಯೂಜಿಲೆಂಡ್ ತಂಡ

ಮಿಚೆಲ್ ಸ್ಯಾಂಟ್ನರ್ (ನಾಯಕ), ಫಿನ್ ಅಲೆನ್, ಮಿಚೆಲ್ ಬ್ರೇಸ್‌ವೆಲ್, ಮಾರ್ಕ್ ಚಾಪ್ಮನ್, ಡೆವೊನ್ ಕಾನ್‌ವೇ, ಜೇಕಬ್ ಡಫಿ, ಲಾಕಿ ಫರ್ಗ್ಯೂಸನ್, ಡೇರಲ್ ಮಿಚೆಲ್, ಆಡಂ ಮಿಲ್ನೆ, ಜೇಮ್ಸ್ ನೀಶಮ್, ಗ್ಲೆನ್ ಫಿಲಿಫ್ಸ್, ರಚಿನ್ ರವೀಂದ್ರ, ಟಿಮ್ ಸೀಫರ್ಟ್, ಇಶ್ ಸೋಧಿ.

ಸಂಭಾವ್ಯ ಪಾಕ್ ತಂಡ

ಸಲ್ಮಾನ್ ಅಲಿ ಅಘಾ (ನಾಯಕ), ಅಬ್ರಾರ್ ಅಹ್ಮದ್, ಬಾಬರ್ ಆಝಂ, ಫಹೀಮ್ ಅಶ್ರಫ್, ಫಖರ್ ಝಮಾನ್, ಖ್ವಾಜಾ, ಮೊಹಮ್ಮದ್ ನವಾಝ್, ಮೊಹಮ್ಮದ್ ಸಲ್ಮಾನ್ ಮಿರ್ಝಾ, ನಸೀಮ್ ಶಾ, ಸಾಹಿಬ್ ಝಾದ ಫರ್ಹಾನ್ (ವಿಕೆಟ್ ಕೀಪರ್), ಸೈಮ್ ಅಯ್ಯೂಬ್, ಶಾಹೀನ್ ಶಾ ಅಫ್ರಿದಿ, ಉಸ್ಮಾನ್ ತಾರಿಖ್, ಶಾದಾಬ್ ಖಾನ್.

ಸೂಪರ್-8 ಹಂತದ ವೇಳಾಪಟ್ಟಿ

ದಿನಾಂಕ	ಪಂದ್ಯ
ಇಂದು	ನ್ಯೂಜಿಲೆಂಡ್-ಪಾಕಿಸ್ತಾನ
ಫೆ.22	ಲಂಕಾ-ಇಂಗ್ಲೆಂಡ್
ಫೆ.22	ಭಾರತ-ದಕ್ಷಿಣ ಆಫ್ರಿಕಾ
ಫೆ.23	ವೆಸ್ಟ್ ಇಂಡೀಸ್-ಜಿಂಬಾಬ್ವೆ
ಫೆ.24	ಇಂಗ್ಲೆಂಡ್-ಪಾಕಿಸ್ತಾನ
ಫೆ.25	ಶ್ರೀಲಂಕಾ-ನ್ಯೂಜಿಲೆಂಡ್
ಫೆ.26	ದ.ಆಫ್ರಿಕಾ-ವೆಸ್ಟ್ ಇಂಡೀಸ್
ಫೆ.26	ಭಾರತ-ಜಿಂಬಾಬ್ವೆ
ಫೆ.27	ಇಂಗ್ಲೆಂಡ್-ನ್ಯೂಜಿಲೆಂಡ್
ಫೆ.28	ಶ್ರೀಲಂಕಾ-ಪಾಕಿಸ್ತಾನ
ಮಾ.1	ದಕ್ಷಿಣ ಆಫ್ರಿಕಾ-ಜಿಂಬಾಬ್ವೆ
ಮಾ.1	ಭಾರತ-ವೆಸ್ಟ್ ಇಂಡೀಸ್

ಒಮಾನ್‌ಗೆ ಹೀನಾಯ ಸೋಲು | ಆ್ಯಡಂ ಜಂಪಾಗೆ 4 ವಿಕೆಟ್

ಒಮಾನ್ ವಿರುದ್ಧ ಭರ್ಜರಿ ಜಯ ಆಸ್ಟ್ರೇಲಿಯಾದ ಅಭಿಯಾನ ಅಂತ್ಯ

ಪಲ್ಲೆಕೆಲೆ: ಇಲ್ಲಿ ಶುಕ್ರವಾರ ನಡೆದ ಟಿ20 ವಿಶ್ವಕಪ್‌ನ ಗ್ರೂಪ್ ಹಂತದ ಅಂತಿಮ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಒಮಾನ್ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಮೊದಲು ಬ್ಯಾಟ್ ಮಾಡಿದ್ದ ಒಮಾನ್ 16.2 ಓವರ್‌ಗಳಲ್ಲಿ 104 ರನ್‌ಗೆ ಆಲೌಟ್ ಆಯಿತು.

105 ರನ್‌ಗಳ ಗೆಲುವಿನ ಗುರಿ ಪಡೆದ ಆಸ್ಟ್ರೇಲಿಯಾ ಕೇವಲ 9.4 ಓವರ್‌ಗಳಲ್ಲಿ 108 ರನ್ ಗಳಿಸಿ ಸುಲಭ ಜಯ ಸಾಧಿಸಿತು. ಆಸೀಸ್ ಪರ ಆರಂಭಿಕ ಆಟಗಾರ ಟ್ರಾವಿಸ್ ಹೆಡ್ 19 ಬಾಲ್‌ಗಳಲ್ಲಿ 32 ರನ್ ಗಳಿಸಿ ಶಕೀಲ್ ಅಹಮ್ಮದ್ ಬೌಲಿಂಗ್‌ನಲ್ಲಿ ಔಟ್ ಆದರು. 33 ಬಾಲ್‌ಗಳಿಂದ 64 ರನ್ ಗಳಿಸಿದ ಮಿಚೈಲ್ ಮಾರ್ಷ್ ಅಜೇಯರಾಗಿ ಉಳಿದರು. ಅವರ ಇನ್ನಿಂಗ್ಸ್‌ನಲ್ಲಿ 4 ಸಿಕ್ಸರ್ ಮತ್ತು 7 ಬೌಂಡರಿಗಳಿದ್ದವು. ಜೋಶ್ ಇಂಗ್ಲಿಸ್ 6 ಬಾಲ್‌ಗಳಲ್ಲಿ 12 ರನ್ ಗಳಿಸಿ ಅಜೇಯರಾಗಿ ಉಳಿದರು.

ಟಾಸ್ ಗೆದ್ದ ಆಸ್ಟ್ರೇಲಿಯಾ ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿತು. ಬ್ಯಾಟಿಂಗ್‌ಗೆ ಇಳಿದ ಒಮಾನ್ ಉತ್ತಮ ಆರಂಭ ಪಡೆಯಲಿಲ್ಲ. ಮೊದಲ ಬಾಲ್‌ನಲ್ಲೇ ಆರಂಭಿಕ ಆಟಗಾರ ಅಮೀರ್ ಕಲೀಮ್ ಔಟ್ ಆದರು. ಆ ಬಳಿಕ ಅವರ ಜಾಗಕ್ಕೆ ಬಂದ ಕರಣ್ ಸೋನಾವಾಲೆ ಮತ್ತೋರ್ವ ಆರಂಭಿಕ ಆಟಗಾರ ಜತೀಂದರ್ ಸಿಂಗ್ ಜತೆ ಸೇರಿ ಮೂರನೇ ವಿಕೆಟ್‌ಗೆ 24 ರನ್ ಸೇರಿಸಿದರು. ಸೋನಾವಾಲೆ 11 ಬಾಲ್‌ಗಳನ್ನು ಎದುರಿಸಿ 12 ರನ್ ಪಡೆದರು. ಆ ಬಳಿಕ ಅಹಮ್ಮದ್ ಮಿರ್ಜಾ ಕ್ರೀಸ್‌ಗೆ ಬಂದು ಜತಿಂದರ್ ಸಿಂಗ್ ಜತೆ ಸ್ವಲ್ಪ ಹೊತ್ತು ಜತೆಯಾಟ ಪ್ರದರ್ಶಿಸಿದರು. ಆದರೆ ತಂಡದ ಮೊತ್ತ 39 ರನ್ ಆದಾಗ ಜತಿಂದರ್ ಸಿಂಗ್ ವಿಕೆಟ್ ಕಳೆದುಕೊಂಡರು. ಅಹಮ್ಮದ್ ಮಿರ್ಜಾ 13 ಬಾಲ್‌ಗಳಿಂದ 16 ರನ್ ಗಳಿಸಿ ಆ್ಯಡಂ ಜಂಪಾ ಅವರಿಗೆ ವಿಕೆಟ್ ಒಪ್ಪಿಸಿದರು. ಕ್ರೀಸ್‌ಗೆ ನಂತರ ಬಂದ ವಾಸಿಮ್ ಅಲಿ ಸ್ವಲ್ಪ ಹೊತ್ತು ಕ್ರೀಸ್‌ನಲ್ಲಿ ತಳವೂರಿ ಒಮಾನ್ ತಂಡಕ್ಕಾಗಿ ಆಧಾರಸ್ತಂಭವಾದರು. ಆದರೆ 33 ಬಾಲ್‌ನಲ್ಲಿ 32 ರನ್ ಗಳಿಸಿದ್ದ ವೇಳೆ ಗ್ಲೆನ್ ಮ್ಯಾಕ್ಸ್‌ವೆಲ್‌ಗೆ ವಿಕೆಟ್ ಒಪ್ಪಿಸಿದರು. ಮೊಹಮ್ಮದ್ ನದೀಂ ಕೇವಲ 2 ಬಾಲ್ ಎದುರಿಸಿ 3 ರನ್ ಗಳಿಸಲಷ್ಟೇ ಶಕ್ತರಾದರು. ಒಮಾನ್ ಪರವಾಗಿ ತಂಡದ ವಿಕೆಟ್ ಕೀಪರ್ ವಿನಾಯಕ ಶುಕ್ಲಾ ಕೇವಲ 9 ರನ್ ಗಳಿಸಿದರೆ, ಜಿತೇನ್ ರಾಮನಂದಿ 3 ಬಾಲ್‌ಗಳಲ್ಲಿ 1 ರನ್ ಅಷ್ಟೇ ಗಳಿಸಿದರು. ಶಕೀಲ್ ಅಹ್ಮದ್ 7 ಬಾಲ್‌ಗಳಿಂದ 3 ರನ್ ಗಳಿಸಿದರೆ, ಶಫೀಕ್ ಜಾನ್ ಕೇವಲ 4 ರನ್ ಗಳಿಸಿ ಆ್ಯಡಂ ಜಂಪಾಗೆ ವಿಕೆಟ್ ಒಪ್ಪಿಸಿದರು. ಒಮಾನ್ ಪರವಾಗಿ ಜಯ್ ಒಡೇದ್ರ 4 ರನ್ ಗಳಿಸಿ ಅಜೇಯರಾಗುಳಿದರು. ಆಸ್ಟ್ರೇಲಿಯಾ ಪರ 21 ರನ್ ನೀಡಿ 4 ವಿಕೆಟ್ ಪಡೆದ ಆ್ಯಡಂ ಜಂಪಾ ಯಶಸ್ವಿ ಬೌಲರ್ ಎನಿಸಿದರು. ಕ್ಸೇವಿಯರ್ ಬಾರ್ಟ್ಲೆಟ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ 2 ವಿಕೆಟ್ ಪಡೆದರೆ, ಸ್ಟೊಯಿನಿಸ್, ನಾಥನ್ ಎಲ್ಲಿಸ್ ತಲಾ ಒಂದು ವಿಕೆಟ್ ಪಡೆದರು.

ಮಿಚೈಲ್ ಮಾರ್ಷ್ ಅಜೇಯ ಅರ್ಧಶತಕ

ಆಸೀಸ್ ಪರ 4 ವಿಕೆಟ್ ಪಡೆದ ಆ್ಯಡಂ ಜಂಪಾ

ಮುಂದಿನ ತಿಂಗಳಿನಲ್ಲಿ ಪಂದ್ಯಾವಳಿ | ಐಪಿಎಲ್ ಫ್ರಾಂಚೈಸಿಯ ನಿರ್ಧಾರ

ಹಂಡ್ರೆಡ್ ಲೀಗ್: ಪಾಕ್ ಕ್ರಿಕೆಟಿಗರಿಗೆ ಕೊಕ್

ಲಂಡನ್: ಮುಂದಿನ ತಿಂಗಳು ನಡೆಯಲಿರುವ ದಿ ಹಂಡ್ರೆಡ್ ಕ್ರಿಕೆಟ್ ಲೀಗ್‌ನ ಆಟಗಾರರ ಹರಾಜಿನಲ್ಲಿ ಪಾಕಿಸ್ತಾನಿ ಕ್ರಿಕೆಟಿಗರನ್ನು ಭಾರತದ ನಾಲ್ಕು ಫ್ರಾಂಚೈಸಿಗಳು ಖರೀದಿಸುವ ಸಾಧ್ಯತೆ ಕಡಿಮೆ ಎಂದು ವರದಿಯಾಗಿದೆ.

ಮುಂದಿನ ಋತುವಿನಿಂದ ಸ್ಪರ್ಧೆಯಲ್ಲಿರುವ ಎಂಟು ತಂಡಗಳಲ್ಲಿ ಅರ್ಧದಷ್ಟು ತಂಡಗಳು ಐಪಿಎಲ್ ಫ್ರಾಂಚೈಸಿಗಳ ಒಡೆತನದಲ್ಲಿವೆ. 2009ರಿಂದ ಐಪಿಎಲ್‌ನಲ್ಲಿ ಪಾಕಿಸ್ತಾನಿ ಆಟಗಾರರು ಭಾಗವಹಿಸಿಲ್ಲ, ಹೀಗಾಗಿ ಐಪಿಎಲ್‌ಗೆ ಸಂಬಂಧಿಸಿದ ನಾಲ್ಕು ತಂಡಗಳು ಪಾಕಿಸ್ತಾನದ ಆಟಗಾರರನ್ನು ನೇಮಕ ಮಾಡಿಕೊಳ್ಳುವ ನಿರೀಕ್ಷೆಯಿಲ್ಲ.

ಮ್ಯಾಂಚೆಸ್ಟರ್ ಸೂಪರ್ ಜೈಂಟ್ಸ್, ಎಂಐ ಲಂಡನ್, ಸದರ್ನ್ ಬ್ರೇವ್ ಮತ್ತು ಸನ್ ರೈಸರ್ಸ್ ಲೀಡ್ಸ್ ತಂಡಗಳು ಭಾರತದಲ್ಲಿನ ರಾಜಕೀಯ ಪರಿಣಾಮಗಳ ಬಗ್ಗೆ ಎಚ್ಚರದಿಂದಿವೆ ಎಂದು ತಿಳಿದುಬಂದಿದೆ. ಎರಡೂ ದೇಶಗಳ ನಡುವೆ ನಡೆಯುತ್ತಿರುವ ಉದ್ವಿಗ್ನತೆಯಿಂದಾಗಿ ಈ ತಂಡಗಳೂ ಐಪಿಎಲ್ ಮಾಲೀಕತ್ವ ಹೊಂದಿರುವ ಇತರ ಲೀಗ್‌ಗಳಲ್ಲಿ ಕಂಡುಬರುವ ಮಾದರಿಗಳನ್ನು ಪ್ರತಿಬಿಂಬಿಸುತ್ತವೆ. ಅಂತಾರಾಷ್ಟ್ರೀಯ ಲೀಗ್ ಟಿ20, ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ, ಭಾರತೀಯ ಒಡೆತನದ ಫ್ರಾಂಚೈಸಿಗಳು ಪಾಕಿಸ್ತಾನಿ ಆಟಗಾರರನ್ನು ಸಹಿ ಮಾಡುವುದನ್ನು ನಿರಂತರವಾಗಿ ತಪ್ಪಿಸುತ್ತಿವೆ. ಕೆಲವು ಪಾಕಿಸ್ತಾನಿ ಆಟಗಾರರು ಈ ಹಿಂದೆ ಭಾರತೀಯ ಮಾಲೀಕತ್ವದ ಫ್ರಾಂಚೈಸಿಯನ್ನು ಪ್ರತಿನಿಧಿಸಿದ್ದಾರೆ. ಅಜಮ್ ಖಾನ್ ಕೆರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಬಾರ್ಬಡೋಸ್ ರಾಯಲ್ಸ್ (ರಾಜಸ್ಥಾನ ರಾಯಲ್ಸ್ ಒಡೆತನದಲ್ಲಿದೆ) ಪರ ಆಡಿದ್ದರೆ, ಫಾತಿಮಾ ಸನಾ ಅದರ ಮಹಿಳಾ ತಂಡವನ್ನು ಪ್ರತಿನಿಧಿಸಿದ್ದಾರೆ. ಯಾಸಿರ್ ಶಾ, ಶಾದಾಬ್ ಖಾನ್ ಮತ್ತು ಮೊಹಮ್ಮದ್ ಹಸ್ನೈನ್ ಸೇರಿದಂತೆ ಇತರರು ಈ ಹಿಂದೆ ಕೋಲ್ಕತ್ತಾ ನೈಟ್ ರೈಡರ್ಸ್ ಅನ್ನು ಸಹ ಹೊಂದಿರುವ ರೆಡ್ ಚಿಲ್ಲೀಸ್ ಎಂಟರ್‌ಟೈನ್‌ಮೆಂಟ್ ಒಕ್ಕೂಟದ ಒಡೆತನದ ಮತ್ತೊಂದು ಸಿಪಿಎಲ್ ತಂಡವಾದ ಟ್ರಿನ್‌ಬಾಗೊ ನೈಟ್ ರೈಡರ್ಸ್ ಪರ ಆಡಿದ್ದಾರೆ.

ಸಂಜು ಸ್ಯಾಮ್ಸನ್‌ಗೆ ತಂಡದಲ್ಲಿ ಅವಕಾಶ ಬೇಡ : ಮಾಜಿ ಕ್ರಿಕೆಟಿಗ ಆಕಾಶ ಚೋಪ್ರಾ

ಅಭಿಷೇಕ್‌ಗೆ ಇನ್ನೂ ಅವಕಾಶ ಕೊಡಿ

ದೆಹಲಿ: ಅಭಿಷೇಕ್ ಶರ್ಮಾ ಒಬ್ಬ ಎಕ್ಸ್ ಫ್ಯಾಕ್ಟರ್ ಆಟಗಾರ, ಹಾಗಾಗಿ ಅಂತಹ ಆಟಗಾರರಿಗೆ ಹೆಚ್ಚಿನ ಅವಕಾಶಗಳನ್ನು ನೀಡಬೇಕು ಎಂದು ಮಾಜಿ ಕ್ರಿಕೆಟಿಗ ಚೋಪ್ರಾ, ಹೇಳಿದ್ದಾರೆ. ಸಂಜು ಸ್ಯಾಮ್ಸನ್‌ರನ್ನು ತಂಡಕ್ಕೆ ಸೇರಿಸಿಕೊಳ್ಳಬೇಕೆಂಬ ವಾದವನ್ನು ಅವರು ತಳ್ಳಿಹಾಕಿದ್ದಾರೆ.

ಸತತ ವೈಫಲ್ಯಗಳ ನಡುವೆಯೂ ಅಭಿಷೇಕ್‌ನನ್ನು ಕೈಬಿಡಬಾರದು ಎಂದು ಚೋಪ್ರಾ ಹೇಳಿದ್ದಾರೆ. 'ಕೆಟ್ಟ ಸಮಯ ಯಾರಿಗೂ ಬರಬಹುದು. ನ್ಯೂಜಿಲೆಂಡ್ ವಿರುದ್ಧದ ಸರಣಿಯಲ್ಲೂ ಆತ ಎರಡು ಬಾರಿ ಡಕೌಟ್ ಆಗಿದ್ದ, ಆದರೆ ನಂತರ ಅದ್ಭುತವಾಗಿ ಕಮ್‌ಬ್ಯಾಕ್ ಮಾಡಿದ್ದ' ಎಂದು ಚೋಪ್ರಾ ಸ್ಪಷ್ಟಪಡಿಸಿದ್ದಾರೆ. 'ಇಂತಹ ಆಟಗಾರರನ್ನು ಬೇಗನೆ ತಂಡದಿಂದ ಕೈಬಿಡಬಾರದು. ಅಭಿಷೇಕ್ ಫಾರ್ಮ್‌ಗೆ ಬಂದರೆ ಪಂದ್ಯದ ಗತಿಯನ್ನೇ ಬದಲಿಸುವ ಸಾಮರ್ಥ್ಯ ಹೊಂದಿದ್ದಾನೆ' ಎಂದು ಆಕಾಶ್ ಚೋಪ್ರಾ ಅಭಿಪ್ರಾಯಪಟ್ಟಿದ್ದಾರೆ. ಅಭಿಷೇಕ್ ಶರ್ಮಾ ಬದಲಿಗೆ ಸಂಜು ಸ್ಯಾಮ್ಸನ್‌ರನ್ನು ತಂಡಕ್ಕೆ ಕರೆತರಬೇಕು ಎಂಬ ವಾದವನ್ನು ಕೂಡ ಆಕಾಶ್ ಚೋಪ್ರಾ ಒಪ್ಪಿಲ್ಲ. ಸಂಜು ಸ್ಯಾಮ್ಸನ್ ಕೂಡ ಉತ್ತಮ ಫಾರ್ಮ್‌ನಲ್ಲಿ ಇಲ್ಲ ಎನ್ನುವುದು ಅವರ ವಾದವಾಗಿದೆ. 'ಸಂಜು ಸ್ಯಾಮ್ಸನ್ ಅಂತಹ ಅದ್ಭುತ ಫಾರ್ಮ್ ನಲ್ಲಿಲ್ಲ. ಒಂದು ವೇಳೆ ಸಂಜು ತಂಡಕ್ಕೆ ಬಂದರೆ, ಮಾರ್ಕೊ ಯಾನ್ಸನ್‌ರಂತಹ ಬೌಲರ್‌ಗಳನ್ನು ದಂಡಿಸುತ್ತಾರೆ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ' ಎಂದು ಚೋಪ್ರಾ ಹೇಳಿದ್ದಾರೆ.

ಟಿ20 ವಿಶ್ವಕಪ್ ಟೂರ್ನಿಗೂ ಮುನ್ನ ನಡೆದ ನ್ಯೂಜಿಲೆಂಡ್ ಸರಣಿಯಲ್ಲಿ ಸಂಜು 5 ಇನ್ನಿಂಗ್ಸ್‌ಗಳಿಂದ ಗಳಿಸಿದ್ದು ಕೇವಲ 46 ರನ್ ಮಾತ್ರ ಎಂದು ಚೋಪ್ರಾ ನೆನಪಿಸಿದ್ದಾರೆ. ಈ ವಿಶ್ವಕಪ್‌ನಲ್ಲಿ ನಮೀಬಿಯಾ ವಿರುದ್ಧ ಆಡಿದ ಏಕೈಕ ಪಂದ್ಯದಲ್ಲಿ ಸಂಜು 8 ಎಸೆತಗಳಲ್ಲಿ 22 ರನ್ ಗಳಿಸಿದ್ದರು.

ಫೆ.24ರಂದು ಪ್ರಶಸ್ತಿ ಸುತ್ತಿನ ಹಣಾಹಣಿ | ಕರ್ನಾಟಕಕ್ಕೆ ಜಮ್ಮು-ಕಾಶ್ಮೀರ ಎದುರಾಳಿ

ರಣಜಿ ಫೈನಲ್‌ಗೆ ಹುಬ್ಬಳ್ಳಿಯಲ್ಲಿ ಭರದ ಸಿದ್ಧತೆ

ಹುಬ್ಬಳ್ಳಿ: ರಣಜಿ ಫೈನಲ್ ಪಂದ್ಯವನ್ನು ಸವಿಯುವ ಸುವರ್ಣಾವಕಾಶ ಈ ಬಾರಿ ಹುಬ್ಬಳ್ಳಿಯ ಕ್ರೀಡಾಭಿಮಾನಿಗಳಿಗೆ ಒಲಿದು ಬಂದಿದೆ. ಇದೇ ಮೊದಲ ಬಾರಿಗೆ ಫೈನಲ್ ಪಂದ್ಯಕ್ಕೆ ಹುಬ್ಬಳ್ಳಿ ನಗರವು ಆತಿಥ್ಯ ವಹಿಸುತ್ತಿದ್ದು, ಫೆ.24ರಂದು ಪ್ರಶಸ್ತಿ ಸುತ್ತಿನ ಹಣಾಹಣಿಗೆ ಕರ್ನಾಟಕ ಮತ್ತು ಜಮ್ಮು-ಕಾಶ್ಮೀರ ಸಿದ್ಧವಾಗಿವೆ.

ಇಲ್ಲಿನ ರಾಜನಗರದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮೈದಾನದಲ್ಲಿ ರಣಜಿ ಫೈನಲ್ ಪಂದ್ಯ ನಡೆಯಲಿದ್ದು, ಸಿದ್ಧತೆಗಳು ಭರದಿಂದ ಸಾಗಿವೆ. ಮೈದಾನಕ್ಕೆ ಕೆಎಸ್‌ಸಿಎ ಆಡಳಿತ ಸಮಿತಿ ಸದಸ್ಯರು ಭೇಟಿ ನೀಡಿ ಪಿಚ್ ಹಾಗೂ ಸೌಲಭ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಬಿಸಿಸಿಐನ ಪಿಚ್ ಕ್ಯುರೇಟರ್ ನಗರಕ್ಕೆ ಬಂದಿದ್ದು, ಮೈದಾನ ಪರಿಶೀಲಿಸಿ ವರದಿ ನೀಡಿದ್ದಾರೆ. ಕರ್ನಾಟಕ ತಂಡ ಫೆ.22ರಂದು ಹುಬ್ಬಳ್ಳಿ ನಗರಕ್ಕೆ ಆಗಮಿಸಲಿದ್ದು, ಎರಡು ದಿನ ಅಭ್ಯಾಸ ನಡೆಸಲಿದ್ದಾರೆ. ಅದಕ್ಕಾಗಿ ಬೇಕಾದ ವಿಕೆಟ್, ಫಿಚ್, ಗ್ರೌಂಡ್ ಸಿದ್ಧತೆ ನಡೆದಿದೆ ಎಂದು ಕೆಎಸ್‌ಸಿಎ ತಿಳಿಸಿದೆ.

ಬೆಂಗಳೂರಿನ ಪದಾಧಿಕಾರಿಗಳ ಸೂಚನೆಯಂತೆ ಡ್ರೆಸ್ಸಿಂಗ್ ರೂಂ, ಡೈನಿಂಗ್, ವಿಐಪಿಗಳು, ಬಿಸಿಸಿಐ ಹಾಗೂ ಕೆಎಸ್‌ಸಿಎ ಪದಾಧಿಕಾರಿಗಳು, ಅಂಪೈರ್‌ಗಳು, ಥರ್ಡ್ ಅಂಪೈರ್, ಕಾಮೆಂಟರಿ ಬಾಕ್ಸ್ ಹಾಗೂ ನೇರ ಪ್ರಸಾರದ ವ್ಯವಸ್ಥೆಗಳ ಸಿದ್ಧತೆ ಇದೀಗ ನಡೆಯುತ್ತಿದೆ. ಈಗಾಗಲೇ ಇದೇ ಸ್ಟೇಡಿಯಂನಲ್ಲಿ 2012ರಿಂದ ಮೊದಲ ರಣಜಿ ಟ್ರೋಫಿಯಿಂದ ಆರಂಭವಾಗಿ 7-8 ಪಂದ್ಯಗಳು ನಡೆದಿವೆ. ರಣಜಿ ಫೈನಲ್ ಪಂದ್ಯಾವಳಿ ಈ ಸಲ ಮೊದಲ ಬಾರಿಗೆ ನಡೆಯುತ್ತಿರುವುದು ವಿಶೇಷವಾಗಿದೆ.

ರಾಹುಲ್ ಆಕರ್ಷಣೆ

ಪ್ರಸ್ತುತ ರಣಜಿ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ಕನ್ನಡಿಗ ಕೆ.ಎಲ್. ರಾಹುಲ್ ಅವರನ್ನು ಹುಬ್ಬಳ್ಳಿಯ ಕ್ರಿಕೆಟ್ ಅಭಿಮಾನಿಗಳು ಕಣ್ತುಂಬಿಕೊಳ್ಳಲಿದ್ದಾರೆ. ಅದೇ ರೀತಿ ನಾಯಕ ದೇವದತ್ತ ಪಡಿಕ್ಕಲ್, ಮಾಯಾಂಕ್ ಅಗರ್ವಾಲ್, ಕರುಣ್ ನಾಯರ್ ಹಾಗು ಸ್ಮರಣ್ ರವಿಚಂದ್ರನ್ ಈ ಬಾರಿ ಕನ್ನಡ ಕ್ರಿಕೆಟ್ ಪ್ರೇಮಿಗಳ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಹುಬ್ಬಳ್ಳಿಯಲ್ಲಿ ನಡೆದಿರುವ ಪಂದ್ಯಗಳು

ಹುಬ್ಬಳ್ಳಿಯಲ್ಲಿ 2025 ನವೆಂಬರ್ 16ರಿಂದ 19ರ ವರೆಗೆ ನಡೆದ ಚಂಡೀಗಢ ಎದುರಿನ ಪಂದ್ಯದಲ್ಲಿ ಕರ್ನಾಟಕ ತಂಡ ಇನ್ನಿಂಗ್ಸ್ ಜಯಗಳಿಸಿತ್ತು. 2025ರ ಜನವರಿ 5ರಿಂದ 8ರವರೆಗೆ ನಡೆದ ಪಂಜಾಬ್ ಎದುರಿನ ಪಂದ್ಯದಲ್ಲಿ ಕರ್ನಾಟಕ ಏಳು ವಿಕೆಟ್‌ನಿಂದ ಗೆದ್ದಿತ್ತು. ಫೆ.16ರಿಂದ 18ರ ವರೆಗೆ ನಡೆದ ಚಂಡೀಗಢ ಎದುರಿನ ಪಂದ್ಯ ಡ್ರಾನಲ್ಲಿ ಅಂತ್ಯವಾಗಿತ್ತು. 2013-14ರಲ್ಲಿ ಭಾರತ-ಎ ಹಾಗೂ ವೆಸ್ಟ್ ಇಂಡಿಸ್-ಎ ತಂಡಗಳು ಇದೇ ಮೈದಾನದಲ್ಲಿ ಮುಖಾಮುಖಿಯಾಗಿದ್ದವು. ಭಾರತ ಎ-ಶ್ರೀಲಂಕಾ ಎ ತಂಡಗಳು 2019-20 ಹಾಗೂ ಭಾರತ ಎ- ನ್ಯೂಜಿಲೆಂಡ್ ತಂಡಗಳು 2022-23ರಲ್ಲಿ ಎದುರಾಗಿದ್ದವು. ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ತಮಿಳುನಾಡು ಎದುರಿನ ಪಂದ್ಯಕ್ಕೂ ಸಹ ಇದೇ ಹುಬ್ಬಳ್ಳಿ ಕ್ರೀಡಾಂಗಣ ಆತಿಥ್ಯ ವಹಿಸಿತ್ತು.

ಮಹಿಳಾ ಏಷ್ಯಾ ಕಪ್ ರೈಸಿಂಗ್ ಸ್ಟಾರ್ಸ್ ಸೆಮಿ ಫೈನಲ್

ಲಂಕಾ ವಿರುದ್ಧ 5 ವಿಕೆಟ್ ಜಯ ಫೈನಲ್‌ಗೆ ಭಾರತ ಎ ತಂಡ

ಬ್ಯಾಂಕಾಕ್: ಇಲ್ಲಿನ ಟೆರ್ಡ್‌ಥೈ ಕ್ರಿಕೆಟ್ ಮೈದಾನದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಶ್ರೀಲಂಕಾ-ಎ ವಿರುದ್ಧ ಐದು ವಿಕೆಟ್‌ಗಳ ಜಯ ಸಾಧಿಸುವ ಮೂಲಕ ಭಾರತ-ಎ ತಂಡ ಎಸಿಸಿ ಮಹಿಳಾ ಏಷ್ಯಾ ಕಪ್ ರೈಸಿಂಗ್ ಸ್ಟಾರ್ಸ್‌ನ ಫೈನಲ್ ಪ್ರವೇಶಿಸಿತು. ಫೈನಲ್‌ನಲ್ಲಿ ಬಾಂಗ್ಲಾದೇಶ ಮತ್ತು ಪಾಕಿಸ್ತಾನ ನಡುವಿನ ಎರಡನೇ ಸೆಮಿಫೈನಲ್‌ನ ವಿಜೇತರನ್ನು ಭಾರತ ಎದುರಿಸಲಿದೆ. ಫೈನಲ್ ಪಂದ್ಯ ಫೆಬ್ರವರಿ 22 ರಂದು ನಡೆಯಲಿದೆ.

ನಿರ್ಣಾಯಕ ಪಂದ್ಯದಲ್ಲಿ ಆಲ್‌ರೌಂಡ್ ಪ್ರದರ್ಶನ ನೀಡಿದ ನಾಯಕಿ ರಾಧಾ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಅವರು 19 ರನ್‌ಗೆ ನಾಲ್ಕು ವಿಕೆಟ್ ಜತೆಗೆ 18 ಎಸೆತಗಳಲ್ಲಿ ಅಜೇಯ 31 ರನ್ ಗಳಿಸಿ ಅಮೋಘ ಪ್ರದರ್ಶನ ತೋರಿದ್ದರು. ಉಳಿದಂತೆ ತನುಜಾ ಕನ್ವರ್ ಮತ್ತು ಪ್ರೇಮಾ ರಾವತ್ ತಲಾ ಎರಡು ವಿಕೆಟ್ ಪಡೆದರು.

ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಶ್ರೀಲಂಕಾ-ಎ ತಂಡವು 118 ರನ್‌ಗಳಿಗೆ ಆಲೌಟ್ ಆಯಿತು. ಗುರಿ ಬೆನ್ನಟ್ಟಿದ ಭಾರತ 13.3 ಓವರ್‌ಗಳಲ್ಲಿ 5 ವಿಕೆಟ್‌ಗೆ 119 ರನ್ ಬಾರಿಸಿ ಗೆಲುವು ತನ್ನದಾಗಿಸಿಕೊಂಡಿತು. ಕನ್ನಡತಿ ವೃಂದಾ ದಿನೇಶ್ 42, ಅನುಷ್ಕಾ ಶರ್ಮಾ 27 ಮತ್ತು ರಾಧಾ ಯಾದವ್ ಅಜೇಯ 31 ರನ್ ಬಾರಿಸಿದರು. ಲಂಕಾ ಪರ ಬೌಲಿಂಗ್‌ನಲ್ಲಿ ಶಶಿನಿ ಗಿಮ್ಹಾನಿ 2 ವಿಕೆಟ್ ಕಿತ್ತರು. ಲಂಕಾ ಪರ ಬ್ಯಾಟಿಂಗ್‌ನಲ್ಲಿ ಆರಂಭಿಕ ಆಟಗಾರ್ತಿ ಸಂಜನಾ ಕವಿಂದಿ (31) ಮತ್ತು ಶಶಿನಿ ಗಿಮ್ಹಾನಿ (22) ಬಾರಿಸಿದ್ದು ಬಿಟ್ಟರೆ ಉಳಿದವರೆಲ್ಲರೂ ವಿಫಲರಾದರು. ತಂಡದ ಪರ 7 ಮಂದಿ ಬ್ಯಾಟರ್‌ಗಳು ಒಂದಂಕಿಗೆ ಸೀಮಿತರಾದರು.